ಸೋಮವಾರ, ಸೆಪ್ಟೆಂಬರ್ 15, 2025| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಆಕ್ರೋಶ

ಏಷ್ಯಾಕಪ್ ಕ್ರಿಕೆಟ್ ಟೂರ್ನಿಯಲ್ಲಿ ಭಾರತ–ಪಾಕಿಸ್ತಾನ ನಡುವಿನ ಪಂದ್ಯ ವಿರೋಧಿಸಿ ಶಿವಸೇನಾ (ಉದ್ಧವ್ ಬಣ) ಕಾರ್ಯಕರ್ತೆಯೊಬ್ಬರು ಕ್ರಿಕೆಟ್ ಬ್ಯಾಟ್ ಮುರಿದರು



ಮಡಕೆಗೆ ಸಿಂಗಾರ

ಸೂರತ್‌ನ ಕಲಾವಿದೆಯೊಬ್ಬರು ನವರಾತ್ರಿ ಹಬ್ಬದಲ್ಲಿ ಪೂಜೆಗೆ ಬಳಸುವ ಮಣ್ಣಿನ ಮಡಕೆಗಳಿಗೆ ಅಲಂಕಾರ ಮಾಡಿದರು





ಸಮಾಜ ಕಲ್ಯಾಣ ಇಲಾಖೆ | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ನಗರಾಭಿವೃದ್ಧಿ ಇಲಾಖೆ | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ
ಕಾರ್ಮಿಕ ಇಲಾಖೆ | ಶಾಲಾ ಶಿಕ್ಷಣ ಮತ್ತು ಸಾಕ್ಷರತೆ ಇಲಾಖೆ | ಉನ್ನತ ಶಿಕ್ಷಣ ಇಲಾಖೆ | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ | ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ಗ್ರೇಟರ್ ಬೆಂಗಳೂರು ಪ್ರಾಧಿಕಾರ | ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ | ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್ | ಕರ್ನಾಟಕ ಹಾಲು ಮಹಾಮಂಡಳಿ

ಪ್ರೌಢಶಾಲೆಯಿಂದಲೇ ಕೌಶಲ ತರಬೇತಿ

ಈ ವರ್ಷದಿಂದ ಜಾರಿ • ಮೊದಲ ಹಂತದಲ್ಲಿ 250 ಶಿಕ್ಷಣ ಸಂಸ್ಥೆಗಳ ಆಯ್ಕೆ • ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಕಡ್ಡಾಯ

• ಎ.ಎಂ.ಸುರೇಶ

ಬೆಂಗಳೂರು: ಪ್ರೌಢಶಾಲಾ ಹಂತದಿಂದಲೇ ವಿದ್ಯಾರ್ಥಿಗಳಿಗೆ ಕೌಶಲ ತರಬೇತಿ ನೀಡಲು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ನಿರ್ಧರಿಸಿದ್ದು, ಈ ಸಂಬಂಧ 'ಶಾಲೆಯಲ್ಲೇ ಕೌಶಲ' ಎಂಬ ಕಾರ್ಯಕ್ರಮ ರೂಪಿಸಿದೆ.

ಮೊದಲ ಹಂತದಲ್ಲಿ 200 ಸರ್ಕಾರಿ ಪ್ರೌಢಶಾಲೆಗಳು ಹಾಗೂ 50 ಪದವಿ ಪೂರ್ವ ಕಾಲೇಜುಗಳನ್ನು ಗುರುತಿಸಿದ್ದು, ಒಟ್ಟು 7,500 ವಿದ್ಯಾರ್ಥಿಗಳಿಗೆ ಉನ್ನತೀಕರಿಸಿದ 150 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳ (ಐಟಿಐ) ಮೂಲಕ ತರಬೇತಿ ನೀಡಲಾಗುತ್ತದೆ. ಮುಂದಿನ ವರ್ಷ ಇನ್ನಷ್ಟು ಶಾಲಾ–ಕಾಲೇಜುಗಳಿಗೆ ಈ ಕಾರ್ಯಕ್ರಮ ವಿಸ್ತರಿಸಲಾಗುತ್ತದೆ.

ಈಗಾಗಲೇ ಶಾಲಾ–ಕಾಲೇಜುಗಳನ್ನು ಗುರುತಿಸಿ, ಅಲ್ಲಿನ ವಿದ್ಯಾರ್ಥಿಗಳಿಗೆ ಯಾವ ಐಟಿಐನಲ್ಲಿ ತರಬೇತಿ ನೀಡಬೇಕು ಎಂಬುದನ್ನು ಅಂತಿಮಗೊಳಿಸಲಾಗಿದೆ. ಇದಕ್ಕೆ ತಗಲುವ ವೆಚ್ಚವನ್ನು ಶಿಕ್ಷಣ ಇಲಾಖೆ ಭರಿಸಲಿದ್ದು, ತರಬೇತಿ ನೀಡುವ ಕೆಲಸವನ್ನು ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಮಾಡಲಿದೆ ಎಂದು ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕಿ ಕೆ.ವಿದ್ಯಾ ಕುಮಾರಿ 'ಪ್ರಜಾವಾಣಿ'ಗೆ ತಿಳಿಸಿದರು.

ವಾರದಲ್ಲಿ ಮೂರು ದಿನ, ನಿತ್ಯ ಎರಡು ಗಂಟೆ ಕಾಲ ಆಯಾ ಶಾಲೆಗಳೊಂದಿಗೆ ಮ್ಯಾಪಿಂಗ್ ಮಾಡಲಾದ ಐಟಿಐಗಳ ತರಬೇತುದಾರರು ಶಾಲೆಗಳಿಗೆ ತೆರಳಿ ತಾಂತ್ರಿಕ ತರಬೇತಿ ನೀಡುತ್ತಾರೆ. ಇದಕ್ಕಾಗಿ 30 ವಿದ್ಯಾರ್ಥಿಗಳಿಗೆ ಒಬ್ಬರಂತೆ 250 ತರಬೇತುದಾರರನ್ನು ಗುರುತಿಸಲಾಗಿದೆ. ಪ್ರಾಯೋಗಿಕ ತರಬೇತಿಯನ್ನು ಶಾಲೆಗಳಿಗೆ 10 ಕಿ.ಮೀ.ಅಂತರದಲ್ಲಿರುವ ಐಟಿಐಗಳಲ್ಲೇ ಶನಿವಾರ ನಾಲ್ಕು ಗಂಟೆ ನೀಡಲಾಗುತ್ತದೆ.

ಈ ಕಾರ್ಯಕ್ರಮದಡಿ ವಿದ್ಯಾರ್ಥಿಗಳಿಗೆ ಇಂಟರ್ನ್‌ಶಿಪ್ ಕಡ್ಡಾಯವಾಗಲಿದೆ. ಪ್ರೌಢಶಾಲಾ ಹಂತದಲ್ಲಿ 8, 9ನೇ ತರಗತಿ ಹಾಗೂ ಕಾಲೇಜು ಹಂತದಲ್ಲಿ ಮೊದಲ ಪಿಯುಸಿ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಲಿದ್ದಾರೆ. ಹೆಚ್ಚು ಮಕ್ಕಳು ದಾಖಲಾತಿ ಇರುವ ಶಾಲಾ–ಕಾಲೇಜುಗಳನ್ನು ಆಯ್ಕೆ ಮಾಡಲಾಗಿದೆ. ತರಬೇತಿಗಾಗಿ ಈ ವರ್ಷ ₹5.25 ಕೋಟಿ ವೆಚ್ಚವಾಗಲಿದೆ ಎಂದು ಅಂದಾಜು ಮಾಡಿದ್ದು, ಇದನ್ನು ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದ ಅಡಿ ಭರಿಸಲಾಗುತ್ತದೆ.

ಮುಖ್ಯಾಂಶಗಳು

- ವಾರದಲ್ಲಿ ನಾಲ್ಕು ದಿನ ಒಟ್ಟು ಹತ್ತು ಗಂಟೆ ಕಾಲ ತರಬೇತಿ
- ಶೈಕ್ಷಣಿಕ ಸಾಲಿನಲ್ಲಿ ಒಟ್ಟು 300 ಗಂಟೆ ಬೋಧನಾ ಅವಧಿ ನಿಗದಿ
- ಪ್ರತಿ ವಿದ್ಯಾರ್ಥಿಗೆ ಉಪಾಹಾರ, ಪ್ರಯಾಣ ಭತ್ಯೆಗೆ ₹750 ವೆಚ್ಚ

ತರಬೇತಿಗೆ ಬೇಕಾದ ಸಿದ್ಧತೆಗಳು ಆಗಿದ್ದು 15ರಿಂದ 20 ದಿನಗಳಲ್ಲಿ ಶುರು ಮಾಡುತ್ತೇವೆ. ನಮ್ಮಲ್ಲಿರುವ ಸಿಬ್ಬಂದಿ ಸಾಕಾಗದಿದ್ದರೆ ಅತಿಥಿ ಉಪನ್ಯಾಸಕರನ್ನು ನೇಮಕ ಮಾಡಿಕೊಳ್ಳುತ್ತೇವೆ

ರಾಗಪ್ರಿಯ, ಆಯುಕ್ತರು, ಕೌಶಲ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ

ಜೂನಿಯರ್ ಟೆಕ್ನಿಷಿಯನ್ ಕೋರ್ಸ್

ವಿದ್ಯಾರ್ಥಿಗಳಿಗೆ ವಿವಿಧ ಕೌಶಲಗಳ ಬಗ್ಗೆ ತಿಳಿಸಿಕೊಡುವ ಇದಕ್ಕೆ ಜೂನಿಯರ್ ಟೆಕ್ನಿಷಿಯನ್ ಕೋರ್ಸ್ ಎಂದು ಹೆಸರಿಡಲಾಗಿದೆ. ಆಟೊಮೊಬೈಲ್, ಆಟೊ ಮಿಷನ್, ಪ್ಲಂಬಿಂಗ್, ಎಲೆಕ್ಟ್ರಿಕ್ ವಾಹನಗಳ ನಿರ್ವಹಣೆ–ರಿಪೇರಿ, ಇಂಟರ್‌ನೆಟ್, ಬೇಸಿಕ್ ಕಂಪ್ಯೂಟರ್ ಇತ್ಯಾದಿಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ.

ಈ ಕಾರ್ಯಕ್ರಮದ ವಿನ್ಯಾಸ ಹಾಗೂ ಮಹತ್ವದ ಬಗ್ಗೆ ಪೋಷಕರಿಗೂ ಅರಿವು ಮೂಡಿಸಲಾಗುತ್ತದೆ. ಸಾಂಪ್ರದಾಯಿಕ ಶಿಕ್ಷಣದ ಜೊತೆಯಲ್ಲೇ ವಿವಿಧ ಕೌಶಲಗಳ ಬಗ್ಗೆ ಥಿಯರಿ ಮತ್ತು ಪ್ರಾಯೋಗಿಕವಾಗಿ ಹೇಗೆ ಕಲಿಸಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳಿಗೆ ಮುಂದೆ ಉದ್ಯೋಗ ಆಯ್ಕೆ ಮಾಡಿಕೊಳ್ಳಲು, ಭವಿಷ್ಯ ರೂಪಿಸಿಕೊಳ್ಳಲು ಯಾವ ರೀತಿ ನೆರವಾಗಲಿದೆ ಎಂದು ಪೋಷಕರಿಗೆ ಮನವರಿಕೆ ಮಾಡಲಾಗುತ್ತದೆ.

ಕಾರ್ಯಕ್ರಮದ ಉದ್ದೇಶವೇನು?

- ವಿದ್ಯಾರ್ಥಿಗಳಿಗೆ ಕಲಿಕೆಯ ಹಂತದಲ್ಲೇ ಕೌಶಲ ಶಿಕ್ಷಣ ನೀಡುವುದು
- ಉದ್ಯಮದ ಕೌಶಲಗಳನ್ನು ವೃದ್ಧಿಸುವ ಮೂಲಕ ಉತ್ತಮ ಉದ್ಯೋಗ ಅವಕಾಶ ಕಲ್ಪಿಸುವುದು
- ಥಿಯರಿಯೊಂದಿಗೆ ಪ್ರಾಯೋಗಿಕ ಕಲಿಕೆಗೂ ಉತ್ತೇಜನ
- ವಿದ್ಯಾರ್ಥಿಗಳಿಗೆ ಮುಂದಿನ ವೃತ್ತಿಗಳ ಆಯ್ಕೆಗೆ ನೆರವಾಗುವುದು

ಸುದ್ದಿ 2 ನಿಮಿಷ

ಸಂವಿಧಾನದಿಂದ ಜಾತ್ಯತೀತ ಪದ ತೆಗೆದುಹಾಕಲಾಗದು: ನ್ಯಾ.ಮಾಥುರ್

ಮಂಗಳೂರು: 'ಜಾತ್ಯತೀತ ಪದವನ್ನು ಸಂವಿಧಾನದಿಂದ ತೆಗೆಯಲಾಗದು' ಎಂದು ಅಲಹಾಬಾದ್ ಹೈಕೋರ್ಟ್‌ನ ವಿಶ್ರಾಂತ ಮುಖ್ಯ ನ್ಯಾಯಮೂರ್ತಿ ಗೋವಿಂದ ಮಾಥುರ್ ಅಭಿಪ್ರಾಯಪಟ್ಟರು.

ಸಮದರ್ಶಿ ವೇದಿಕೆ, 'ಹೊಸತು' ಪತ್ರಿಕೆ ಮತ್ತು ಎಂ.ಎಸ್ ಕೃಷ್ಣ ಸ್ಮಾರಕ ಟ್ರಸ್ಟ್ ಇಲ್ಲಿ ಭಾನುವಾರ ಆಯೋಜಿಸಿದ್ದ ಬಿ.ವಿ. ಕಕ್ಕಿಲ್ಲಾಯ ಪ್ರೇರಿತ ಉಪನ್ಯಾಸ ಕಾರ್ಯಕ್ರಮದಲ್ಲಿ 'ಸಾಮಾಜಿಕ ಮತ್ತು ಸಾಂವಿಧಾನಿಕ ನೈತಿಕತೆಗಳ ಸಮತೋಲನ' ಕುರಿತು ಮಾತನಾಡಿ, ಸಭಿಕರೊಬ್ಬರ ಪ್ರಶ್ನೆಗೆ ಉತ್ತರಿಸಿದರು.

'ಜಾತ್ಯತೀತ ಪರಿಕಲ್ಪನೆ ಭಾರತದ ಸಂವಿಧಾನದ ಒಂದು ಭಾಗ. ಬಹುಸಂಖ್ಯಾತರಿಂದ ಬೇಡಿಕೆ ಎಂಬ ಕಾರಣಕ್ಕೆ ತೆಗೆದುಹಾಕಲು ಸಾಧ್ಯವಿಲ್ಲ. ಎಲ್ಲವನ್ನೂ ನ್ಯಾಯಾಂಗದ ಹೆಗಲಿಗೆ ಹೊರಿಸಿ ಸುಮ್ಮನಿರುವ ಬದಲು ಜಾಗೃತ ಸಮಾಜ ಈ ಬಗ್ಗೆ ಎಚ್ಚರದಿಂದ ಇರಬೇಕು' ಎಂದು ಮಾಥುರ್ ಹೇಳಿದರು.

'ಸಂವಿಧಾನದ ಆಶಯಗಳನ್ನು ಬುಡಮೇಲು ಮಾಡುವ ಯಾವ ಪ್ರಕ್ರಿಯೆಗಳಿಗೂ ಆಸ್ಪದ ನೀಡಬಾರದು. ಸಾಮಾಜಿಕ ಮತ್ತು ರಾಜಕೀಯ ಗುಂಪುಗಳು, ಸಣ್ಣ ಸಣ್ಣ ಕಾರ್ಯಕ್ರಮಗಳಲ್ಲಿ ಒಂದಾಗುವ ಜನಸಮುದಾಯ ಈ ಬಗ್ಗೆ ಯೋಚಿಸಿ, ಕಾರ್ಯತತ್ಪರರಾಗಬೇಕು' ಎಂದರು.

'ಸಾಮಾಜಿಕವಾಗಿ ಭಿನ್ನಮತ ಈಗ ದೇಶದಲ್ಲಿ ಉಚ್ಛ್ರಾಯ ಹಂತ ತಲುಪಿದೆ. ದಕ್ಷಿಣ ಭಾರತದಲ್ಲಿ ಅದರ ತೀವ್ರತೆ ಉತ್ತರ ಭಾರತದಷ್ಟು ಇಲ್ಲ' ಎಂದು ಮೂಲತಃ ರಾಜಸ್ಥಾನದ ಮಾಥುರ್ ಹೇಳಿದರು.

ಕೊಚ್ಚಿಹೋದ ತಾತ್ಕಾಲಿಕ ರಸ್ತೆ



ಸಿಂಧನೂರು (ರಾಯಚೂರು ಜಿಲ್ಲೆ): ತಾಲ್ಲೂಕಿನ ಬೂತಲದಿನ್ನಿ–ಕಲ್ಲೂರು ಗ್ರಾಮಗಳ ನಡುವೆ ಹಳ್ಳದ ಪಕ್ಕದ ತಾತ್ಕಾಲಿಕ ರಸ್ತೆ ಮಳೆಯಿಂದ ಕೊಚ್ಚಿಹೋಗಿದ್ದು, ಸಂಚಾರಕ್ಕೆ ತೀವ್ರ ತೊಂದರೆಯಾಯಿತು.

₹ 18 ಕೋಟಿ ವೆಚ್ಚದಲ್ಲಿ ಜೇವರ್ಗಿ–ಚಾಮರಾಜನಗರ ರಾಷ್ಟ್ರೀಯ ಹೆದ್ದಾರಿ-150ಎ ವ್ಯಾಪ್ತಿಯಲ್ಲಿ ಸಿಂಧನೂರು–ಮಸ್ಕಿ ಮಧ್ಯದಲ್ಲಿ ಏಳು ಸೇತುವೆಗಳ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿವೆ.

ಬೂತಲದಿನ್ನಿ ಮತ್ತು ಕಲ್ಲೂರು ಗ್ರಾಮಗಳ ನಡುವಿನ ಹಳ್ಳಕ್ಕೆ ಸೇತುವೆ ನಿರ್ಮಾಣ ಕಾಮಗಾರಿ ಕುಂಟುತ್ತ ಸಾಗಿದೆ. ವಾಹನಗಳ ಸಂಚಾರಕ್ಕಾಗಿ ಪಕ್ಕದಲ್ಲಿ ತಾತ್ಕಾಲಿಕ ರಸ್ತೆ ನಿರ್ಮಿಸಲಾಗಿತ್ತು.

ಮಳೆಯಿಂದ ತಿಂಗಳ ಹಿಂದೆಯಷ್ಟೇ ಕೊಚ್ಚಿ ಹೋಗಿತ್ತು. ಆಗ ಹಳ್ಳಕ್ಕೆ ರಿಂಗ್ ಹಾಕಿ, ಮೇಲೆ ಕಂಕರ್ ಮತ್ತು ಮರಂ ಹಾಕಿ ರಸ್ತೆ ನಿರ್ಮಿಸಲಾಗಿತ್ತು. ಇದೀಗ ಮತ್ತೆ ಕೊಚ್ಚಿ ಹೋಗಿದೆ.

ಬೀದರ್ ವರದಿ: ಬೀದರ್ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಭಾನುವಾರ ಜೋರು ಮಳೆ ಸುರಿದಿದೆ.

ಚಿಟಿಕೆ ಸುದ್ದಿ

'ಜಾತಿ ಸಮೀಕ್ಷೆ: ಬದಲಾವಣೆ, ತಿದ್ದುಪಡಿಗೆ ಅವಕಾಶ'

ಹಾವೇರಿ: 'ರಾಜ್ಯದಲ್ಲಿ ಸೆಪ್ಟೆಂಬರ್ 22ರಿಂದ ಅಕ್ಟೋಬರ್ 7ರವರೆಗೆ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ನಡೆಯಲಿದೆ. ಸಮೀಕ್ಷೆ ಮುಗಿದ ಬಳಿಕವೂ ಬದಲಾವಣೆ ಅಥವಾ ತಿದ್ದುಪಡಿ ಇದ್ದರೆ, ಅದಕ್ಕೆ ಅವಕಾಶವಿದೆ' ಎಂದು ಸಚಿವ ಸತೀಶ ಜಾರಕಿಹೊಳಿ ತಿಳಿಸಿದರು.



ಸತೀಶ ಜಾರಕಿಹೊಳಿ

'ಆಯಾ ಜಾತಿಯವರಿಗೆ ಮನವರಿಕೆ ಮಾಡುತ್ತೇವೆ. ಎಲ್ಲರೂ ತಮ್ಮ ಜಾತಿಯನ್ನು ಸರಿಯಾಗಿ ನಮೂದಿಸುವಂತೆ ವಿನಂತಿಸುತ್ತೇವೆ' ಎಂದು ಅವರು ಭಾನುವಾರ ಸುದ್ದಿಗಾರರಿಗೆ ತಿಳಿಸಿದರು.

'ರಾಜ್ಯದಲ್ಲಿ 11 ವರ್ಷಗಳಿಂದ ಜಾತಿಸಮೀಕ್ಷೆ ಆಗಿಲ್ಲ.ಜಾತಿ ಸಮೀಕ್ಷೆ ವಿಚಾರದಲ್ಲಿ ನಮ್ಮದೂ ಲೋಪವಿದೆ. ಸದ್ಯದ ಪರಿಸ್ಥಿತಿಗೆ ತಕ್ಕಂತೆ ಹೊಸದಾಗಿ ಸಮೀಕ್ಷೆ ಮಾಡುತ್ತೇವೆ' ಎಂದು ತಿಳಿಸಿದರು.

ಹದಗೆಟ್ಟ ರಸ್ತೆಯಲ್ಲೇ ಭತ್ತ ನಾಟಿ



ಹದಗೆಟ್ಟ ರಸ್ತೆಯಲ್ಲಿ ಭತ್ತ ನಾಟಿ ಮಾಡಿದ ಯುವಕರು

ಯಡ್ರಾಮಿ (ಕಲಬುರಗಿ ಜಿಲ್ಲೆ): ಜೇವರ್ಗಿ ಮತಕ್ಷೇತ್ರ ವ್ಯಾಪ್ತಿಯ ಯಡ್ರಾಮಿ ತಾಲ್ಲೂಕಿನ ವಡಗೇರಾ ಗ್ರಾಮದ ಮುಖ್ಯ ರಸ್ತೆ ಹಾಳಾಗಿದ್ದು, ಹಲವು ಸಲ ಗಮನಕ್ಕೆ ತಂದರೂ ಸ್ಥಳೀಯ ಶಾಸಕ ಡಾ. ಅಜಯ್ ಸಿಂಗ್ ದುರಸ್ತಿಗೆ ಕ್ರಮ ವಹಿಸಿಲ್ಲ ಎಂದು ಆರೋಪಿಸಿದ ಗ್ರಾಮದ ಯುವಕರು ರಸ್ತೆಯ ಹೊಂಡದಲ್ಲೇ ಭತ್ತದ ಸಸಿ ನೆಟ್ಟು ಆಕ್ರೋಶ ವ್ಯಕ್ತಪಡಿಸಿದರು.

'ಈ ಮಾರ್ಗದಿಂದ ಕೆಂಭಾವಿ, ಮಲ್ಲಾ, ಸಿಂದಗಿ, ಶಹಾಪುರ, ಸುರಪುರ, ವಿಜಯಪುರ, ಬೆಂಗಳೂರಿನಂತಹ ದೊಡ್ಡ ನಗರಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯಾಗಿದೆ. ಹಲವು ವರ್ಷಗಳಿಂದ ಇಲ್ಲಿ ರಸ್ತೆ ಅಭಿವೃದ್ಧಿ ಮಾಡದ ಕಾರಣ ರಸ್ತೆ ಉದ್ದಕ್ಕೂ ಗುಂಡಿಗಳು ಬಿದ್ದು ರಸ್ತೆ ಹದಗೆಟ್ಟಿದ್ದು ವಾಹನ ಸವಾರರು ಹೈರಾಣಾಗುತ್ತಿದ್ದಾರೆ' ಎಂದು ಪ್ರತಿಭಟನಕಾರರು ಹೇಳಿದರು.

ಯಡ್ರಾಮಿಯಿಂದ ವಡಗೇರಾ ಮಾರ್ಗದಿಂದ ಮಲ್ಲಾ ಗ್ರಾಮಕ್ಕೆ ತೆರಳಲು ಸುಮಾರು 20 ಕಿಮೀ ರಸ್ತೆ ಅಭಿವೃದ್ಧಿ ಪಡಿಸಬೇಕಿದೆ. ಕಾಲ್ನಡಿಗೆಗೂ ಸೂಕ್ತವಿಲ್ಲದ ಈ ರಸ್ತೆಯಲ್ಲಿ ಹೇಗೆ ಸಂಚಾರ ನಡೆಸುವುದು ಎಂದು ಪ್ರಶ್ನಿಸಿದರು.

ನಾನೂ ಸಚಿವ ಸ್ಥಾನದ ಆಕಾಂಕ್ಷಿ: ಅಜಯ್ ಸಿಂಗ್

ಕಲಬುರಗಿ: 'ನಾನೂ ಸಚಿವ ಸ್ಥಾನದ ಆಕಾಂಕ್ಷಿ. ಹೈಕಮಾಂಡ್ ಗಮನಕ್ಕೂ ತಂದಿದ್ದೇನೆ. 2018ರಲ್ಲೂ ಆಕಾಂಕ್ಷಿಯಾಗಿದ್ದೆ' ಎಂದು ಜೇವರ್ಗಿ ಶಾಸಕ ಡಾ. ಅಜಯ್ ಸಿಂಗ್ ತಿಳಿಸಿದರು.



ಅಜಯ್ ಸಿಂಗ್

'ತಂದೆ ಧರ್ಮಸಿಂಗ್ ಅವರು ಕಠಿಣ ಪರಿಸ್ಥಿತಿಯಲ್ಲಿಯೂ ಪಕ್ಷ ಬಿಟ್ಟು ಹೋಗಲಿಲ್ಲ. ತಂದೆಯವರಂತೆ ನಾನೂ ಪಕ್ಷ ನಿಷ್ಠನಾಗಿದ್ದೇನೆ' ಎಂದು ಭಾನುವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

'ಕೆಕೆಆರ್‌ಡಿಬಿ ಅಧ್ಯಕ್ಷನಾಗಿ ಈ ಭಾಗದ ಅಭಿವೃದ್ಧಿಗೆ ಕೆಲಸ ಮಾಡುತ್ತಿದ್ದೇನೆ. ನನ್ನ ಕೆಲಸವನ್ನು ಹೈಕಮಾಂಡ್ ಗಮನಿಸುವ ವಿಶ್ವಾಸವಿದೆ' ಎಂದರು.

ಕೃಷಿ ಮೇಳ: ಒಂದೇ ದಿನ 7 ಲಕ್ಷ ಜನ

ಪ್ರಜಾವಾಣಿ ವಾರ್ತೆ

ಧಾರವಾಡ: ಇಲ್ಲಿನ ಕೃಷಿ ವಿಶ್ವವಿದ್ಯಾಲಯದಲ್ಲಿ ಆರಂಭಗೊಂಡಿರುವ ಕೃಷಿ ಮೇಳದ ಎರಡನೇ ದಿನ ಭಾನುವಾರ 7.74 ಲಕ್ಷ ಜನರು ಭೇಟಿ ನೀಡಿದರು. ಮೊದಲ ದಿನ 3.65 ಲಕ್ಷ ಜನ ಭೇಟಿ ನೀಡಿದ್ದರು.

'7 ಲಕ್ಷಕ್ಕೂ ಹೆಚ್ಚು ಜನರು ಬಂದಿರುವುದನ್ನು ಎಐ ಕ್ಯಾಮೆರಾ, ಕ್ಯುಆರ್ ಕೋಡ್ ಮತ್ತು ಸ್ಥಳೀಯ ನೋಂದಣಿ ಆಧರಿಸಿ ಲೆಕ್ಕ ಹಾಕಲಾಗಿದೆ. ಮೂರನೇ ದಿನ ಇನ್ನೂ ಹೆಚ್ಚು ಜನ ಬರುವ ನಿರೀಕ್ಷೆ ಇದೆ' ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಪಿ.ಎಲ್.ಪಾಟೀಲ 'ಪ್ರಜಾವಾಣಿ'ಗೆ ತಿಳಿಸಿದರು.

ವಿಶ್ವವಿದ್ಯಾಲಯದ ನಾಲ್ಕು ದಿಕ್ಕುಗಳ ಪ್ರವೇಶದ್ವಾರದಿಂದ ಜನರಿಗೆ ಪ್ರವೇಶ ಕಲ್ಪಿಸಲಾಗಿದ್ದು, ಎಲ್ಲೆಡೆ ಜನಸಾಗರ ಕಂಡುಬಂತು. ಬಹುತೇಕ ರೈತರು ಕೃಷಿ ಸಂಬಂಧಿಸಿದ ಪರಿಕರಗಳನ್ನು ಖರೀದಿಸಿದರು. ಕೆಲವರು ಜಾನುವಾರುಗಳ ಪ್ರದರ್ಶನ ಮಳಿಗೆಗೆ ಭೇಟಿ ನೀಡಿ, ವಿವಿಧ ತಳಿಗಳ ಮಾಹಿತಿ ಪಡೆದರು.

'ಕಿತ್ತೂರು ಮತ್ತು ಕಲ್ಯಾಣ ಕರ್ನಾಟಕದ ವಿವಿಧ ಜಿಲ್ಲೆಗಳಿಂದ ರೈತರು ಅಪಾರ ಸಂಖ್ಯೆಯಲ್ಲಿ ಮೇಳಕ್ಕೆ ಬರುತ್ತಿದ್ದಾರೆ. ನಗರ ಪ್ರದೇಶದ ನಿವಾಸಿಗಳೂ ಕುತೂಹಲದಿಂದ ಮೇಳಕ್ಕೆ ಭೇಟಿ ನೀಡುತ್ತಿದ್ದಾರೆ. ಹೀಗಾಗಿ ಜನದಟ್ಟಣೆ ಹೆಚ್ಚುತ್ತಿದೆ. ಸಮಸ್ಯೆ ಆಗದಂತೆ ಎಚ್ಚರ ವಹಿಸಿದ್ದೇವೆ' ಎಂದು ಆಯೋಜಕರು ತಿಳಿಸಿದರು.



ಧಾರವಾಡದ ಕೃಷಿ ಮೇಳದಲ್ಲಿ ಭಾನುವಾರ ಕಂಡು ಬಂದ ಜನಸಾಗರ —ಪ್ರಜಾವಾಣಿ ಚಿತ್ರ: ಗೋವಿಂದರಾಜ ಜವಳಿ

ಯತ್ನಾಳ ವಿರುದ್ಧ ತುಮಕೂರಿನಲ್ಲೂ ಎಫ್‌ಐಆರ್

ತುಮಕೂರು: ಮಂಡ್ಯದ ಮದ್ದೂರಿನ ನಂತರ ತುಮಕೂರಿನಲ್ಲೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ವಿರುದ್ಧ ಪ್ರಕರಣ ದಾಖಲಾಗಿದೆ.



ಬಸನಗೌಡ ಪಾಟೀಲ

ಶನಿವಾರ ನಡೆದ ಹಿಂದೂ ಮಹಾ ಗಣಪತಿ ಶೋಭಾಯಾತ್ರೆಯಲ್ಲಿ ಯತ್ನಾಳ ಮಾತನಾಡಿದ್ದರು.

'ಪ್ರಚೋದನಕಾರಿ ಭಾಷಣ ಮಾಡಿದ್ದಾರೆ. ಅನ್ಯ ಕೋಮಿನ ಭಾವನೆಗಳಿಗೆ ಧಕ್ಕೆಯಾಗುವ ರೀತಿಯಲ್ಲಿ ಮಾತನಾಡಿದ್ದಾರೆ' ಎಂದು ಪೊಲೀಸ್ ಸಿಬ್ಬಂದಿ ಎಸ್.ಆರ್.ರಘು ದೂರು ನೀಡಿದ್ದರು.

'ಮದ್ದೂರಿನಲ್ಲಿ ನನ್ನ ವಿರುದ್ಧ 70ನೇ ಪ್ರಕರಣ ದಾಖಲಿಸಿದ್ದಾರೆ. ತುಮಕೂರಿನಲ್ಲಿ 71ನೇ ಪ್ರಕರಣ ದಾಖಲಾಗಬಹುದು' ಎಂದು ಯತ್ನಾಳ ಶನಿವಾರ ಭಾಷಣದಲ್ಲಿಯೇ ಹೇಳಿದ್ದರು.

ದಿಂಗಾಲೇಶ್ವರ ಸ್ವಾಮೀಜಿ ಒಪ್ಪಿಸಲಿ: ಎಸ್.ಎಂ.ಜಾಮದಾರ ಸವಾಲು

'ಪಂಚಾಚಾರ್ಯರು ಬಸವ ತತ್ವ ಒಪ್ಪಿಕೊಳ್ಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವಣ್ಣ ಮತ್ತು ಬಸವಣ್ಣನ ತತ್ವಗಳನ್ನು ಒಪ್ಪುತ್ತೇವೆ ಎಂದು ಪಂಚಾಚಾರ್ಯರು ಒಪ್ಪಿದರೆ, ಅವರೊಂದಿಗಿನ ವಿರೋಧ ಬಿಟ್ಟು ಒಂದಾಗುತ್ತೇವೆ. ಅವರೆಲ್ಲರನ್ನೂ ಒಪ್ಪಿಸುವ ಹೊಣೆಯನ್ನು ದಿಂಗಾಲೇಶ್ವರ ಸ್ವಾಮೀಜಿ ಹೊರುತ್ತಾರೆಯೇ' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ಸವಾಲು ಹಾಕಿದ್ದಾರೆ.

ದಿಂಗಾಲೇಶ್ವರ ಸ್ವಾಮೀಜಿ ಅವರು ಶನಿವಾರ ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪಿಸಿದ ವಿಚಾರಗಳಿಗೆ ಪ್ರತಿಕ್ರಿಯೆ ನೀಡಿರುವ ಜಾಮದಾರ ಅವರು, 'ಪಂಚಾಚಾರ್ಯರು ಬಸವಣ್ಣನನ್ನು ಒಪ್ಪುವುದಿಲ್ಲ ಎನ್ನುವುದು ಸತ್ಯ. ಬಸವಣ್ಣನವರ ಫೋಟೊ ಕೆಳಗೆ ಕೂಡ ಹೋಗುವುದಿಲ್ಲ ಎನ್ನುವುದು ಸತ್ಯ. ಅವರು ತಪ್ಪು ಮಾಡಿದ್ದಾರೆ ಎಂದು ಹೇಳಿದ್ದನ್ನು ನಾವು ಸ್ವಾಗತಿಸುತ್ತೇವೆ' ಎಂದಿದ್ದಾರೆ.

'ದಿಂಗಾಲೇಶ್ವರರು ಅಖಿಲ ಭಾರತ ವೀರಶೈವ ಮಹಾಸಭಾದ ಮೂವರನ್ನು ಮಹಾಭಾರತದ ಯುಧಿಷ್ಠಿರ, ಅರ್ಜುನ ಮತ್ತು ಭೀಮನಿಗೆ ಹೋಲಿಸಿದ್ದಾರೆ. ಈ ಮೂವರೂ ಉಳಿದ ಇಬ್ಬರು ಪಾಂಡವರೊಂದಿಗೆ ತಮ್ಮ ಕಣ್ಣ ಮುಂದೆಯೇ ತಮ್ಮ ಪತ್ನಿ ದ್ರೌಪದಿಯನ್ನು ಕೌರವ ದುಶ್ಯಾಸನರು ಬೆತ್ತಲೆಗೊಳಿಸುತ್ತಿದ್ದಾಗ ಏನು ಮಾಡುತ್ತಿದ್ದರು' ಎಂದು ಪ್ರಶ್ನಿಸಿದ್ದಾರೆ.

'ವೀರಶೈವ ಮಹಾಸಭಾದವರನ್ನು ಪಾಂಡವರಿಗೆ ಹೋಲಿಸಿದ ಉಪಮೆಯಲ್ಲಿ, ದ್ರೌಪದಿಯ ಸ್ಥಳದಲ್ಲಿ ಬಸವಣ್ಣನವರನ್ನು ಇರಿಸಬೇಕು. ಪಂಚಾಚಾರ್ಯರು ತಮ್ಮ ಪ್ರತಿಯೊಂದು ಮೆರವಣಿಗೆಯಲ್ಲಿ ಬಸವಣ್ಣನವರ ಚಿತ್ರ, ಬ್ಯಾನರ್, ಫ್ಲೆಕ್ಸ್‌ಗಳನ್ನು ಕಿತ್ತು ಅವಮಾನ ಮಾಡುವಾಗ, ವೀರಶೈವ ಮಹಾಸಭಾದ ಈ ಯುಧಿಷ್ಠಿರ, ಅರ್ಜುನ ಮತ್ತು ಬಲಭೀಮ ಪೊಲೀಸ್ ಅಧಿಕಾರಿ ಏನು ಮಾಡುತ್ತಿದ್ದರು? ಗಾಢ ನಿದ್ರೆಯಲ್ಲಿದ್ದರೆ ಅಥವಾ ಬಸವಣ್ಣನ ಮೇಲೆ ಆ ಮೂವರಿಗೂ ದ್ವೇಷ ಇತ್ತೇ ಎಂಬುದನ್ನು ದಿಂಗಾಲೇಶ್ವರ ಸ್ವಾಮೀಜಿ ಉತ್ತರಿಸಬೇಕು' ಎಂದಿದ್ದಾರೆ.

'ಬಸವ ಕಲ್ಯಾಣದಲ್ಲಿ ಇದೇ 22 ರಿಂದ ರಂಭಾಪುರಿ ಸ್ವಾಮೀಜಿ ಆಯೋಜಿಸಿರುವ ಬೃಹತ್ 'ದರ್ಬಾರ್'ನ ಸ್ವಾಗತ ಸಮಿತಿಯ ಅಧ್ಯಕ್ಷ, ಈ ಅರ್ಜುನನೇ ಆಗಿದ್ದಾರೆ. ಇದರ ಅರ್ಥವೇನು? ಒಂದೆಡೆ ಬಸವಣ್ಣನವರ ಲಿಂಗಾಯತ ಮತ್ತು ಪಂಚಾಚಾರ್ಯರ ವೀರಶೈವ ಎರಡೂ ಒಂದೇ ಎನ್ನುತ್ತಾ, ಮತ್ತೊಂದೆಡೆ ವೀರಶೈವರನ್ನು ಮಾತ್ರ ನಿಮ್ಮ ಪಾಂಡವರು ಬೆಳೆಸುತ್ತಿಲ್ಲವೇ' ಎಂದು ಪ್ರಶ್ನೆ ಹಾಕಿದ್ದಾರೆ.

'ಕಡೆಯದಾಗಿ, ದಿಂಗಾಲೇಶ್ವರರು ನನ್ನನ್ನು 'ಇಂಗ್ಲಿಷ್ ಸಂಸ್ಕೃತಿಯವನು' ಎಂದಿದ್ದಾರೆ. ನಾನು ನಿಜವಾಗಿಯೂ 'ಇಂಗ್ಲಿಷ್' ಸಂಸ್ಕೃತಿಯವನಾಗಿದ್ದರೆ, ದಿಂಗಾಲೇಶ್ವರ ಸ್ವಾಮಿಗಳಂಥವರ ಜತೆಗೆ ವಾದಕ್ಕಿಳಿಯುವ ಅಗತ್ಯವೇ ಇರುತ್ತಿರಲಿಲ್ಲ' ಎಂದಿದ್ದಾರೆ.

'ವೀರಶೈವ– ಲಿಂಗಾಯತ ಗೊಂದಲ ನಿಲ್ಲಿಸಿ'

ಬೆಂಗಳೂರು: 'ವೀರಶೈವ ಲಿಂಗಾಯತರ ಧರ್ಮ ಮತ್ತು ಜಾತಿಯ ವಿಚಾರದಲ್ಲಿ ವೀರಶೈವ– ಲಿಂಗಾಯತ ಮಹಾಸಭಾವು ಅನಗತ್ಯ ಗೊಂದಲ ಮೂಡಿಸುತ್ತಿದೆ' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

ನಗರದಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಒಂದು ಕಡೆ ಹೊಸ ಧರ್ಮ ಎನ್ನುತ್ತಾರೆ. ಒಂದೆಡೆ ವೀರಶೈವ ಧರ್ಮ, ಇನ್ನೊಂದೆಡೆ ಲಿಂಗಾಯತ ಧರ್ಮ, ಮತ್ತೊಂದೆಡೆ ವೀರಶೈವ ಲಿಂಗಾಯತ ಧರ್ಮ ಎನ್ನುತ್ತಾರೆ. ಕಾಂಗ್ರೆಸ್ ನಾಯಕರೇ ತುಂಬಿರುವ ಮಹಾಸಭಾವು ಇಂತಹ ಗೊಂದಲ ಸೃಷ್ಟಿಸುತ್ತಿದೆ. ಜನರು ಯಾವುದು ಸರಿ ಎಂದು ತಿಳಿಯಬೇಕು' ಎಂದು ಪ್ರಶ್ನಿಸಿದರು.

'ಸಂವಿಧಾನಬದ್ಧವಾಗಿ, ಕಾನೂನುಬದ್ಧವಾಗಿ ಇರುವ ಧರ್ಮದ ಹೆಸರನ್ನಷ್ಟೇ ಬರೆಯಿಸಬೇಕು. ಜನರು ತಾವು ಯಾರು ಎಂಬುದನ್ನು ಅವರೇ ನಿರ್ಧರಿಸುತ್ತಾರೆ. ನೀವು ಅನಗತ್ಯವಾಗಿ ಗೊಂದಲ ಸೃಷ್ಟಿಸುವುದನ್ನು ನಿಲ್ಲಿಸಿ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

'17ರ ನಿರ್ಣಯಕ್ಕೆ ಬದ್ಧರಾಗಿ'

ಹುಬ್ಬಳ್ಳಿ: 'ಸಾಮಾಜಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯಲ್ಲಿ ಪಂಚಮಸಾಲಿ ಸಮಾಜದವರು ಜಾತಿ, ಧರ್ಮದ ಕಾಲಂನಲ್ಲಿ ಏನು ನಮೂದಿಸಬೇಕು ಎಂದು ಸೆ. 17ರಂದು ಬೆಂಗಳೂರಿನಲ್ಲಿ ಸಭೆ ನಡೆಸಿ ನಿರ್ಧರಿಸಲಾಗುವುದು' ಎಂದು ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ ಹೇಳಿದರು.



ವಚನಾನಂದ ಸ್ವಾಮೀಜಿ

'14 ಜಿಲ್ಲೆಗಳಲ್ಲಿ ಪ್ರವಾಸ ಮಾಡಿ, ಭಕ್ತರು, ಮುಖಂಡರು, ಶಿಕ್ಷಣ ತಜ್ಞರ ಜತೆ ಚರ್ಚಿಸಿದ್ದೇವೆ. ಲಿಂಗಾಯತರಲ್ಲಿ ಶೇ 80ರಷ್ಟು ಪಂಚಮಸಾಲಿ ಸಮಾಜದವರು ಇದ್ದಾರೆ. ಹರಿಹರ, ಕೂಡಲಸಂಗಮ, ಜಮಖಂಡಿಯಲ್ಲಿ ಪೀಠಗಳಿವೆ. ಈ ಪೀಠಗಳ ಮಠಾಧೀಶರು, ಪಂಚಮಸಾಲಿ ಸಂಘದ ಈ ನಿರ್ಣಯವನ್ನು ಸಮಾಜದವರು ಕೇಳಬೇಕು' ಎಂದು ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಬಸವ ಸಂಸ್ಕೃತಿ ಯಾತ್ರೆ ಸ್ವಾಗತಾರ್ಹ. ಅದರಲ್ಲಿ ಸ್ವಾಮೀಜಿಗಳು ಬಸವಣ್ಣನವರ ವಿಚಾರ, ತತ್ವ, ಸಿದ್ಧಾಂತ ತಿಳಿಸಬೇಕು. ಸಮಾಜವನ್ನು ಒಡೆಯುವ ಹೇಳಿಕೆ ನೀಡಬಾರದು' ಎಂದು ಹೇಳಿದರು.

'ವಚನಾನಂದ ಸ್ವಾಮೀಜಿ ಅವರನ್ನು ಪಂಚಮಸಾಲಿ ಪೀಠಕ್ಕೆ ತಂದಿದ್ದು ನಾನು' ಎಂಬ ದಿಂಗಾಲೇಶ್ವರ ಸ್ವಾಮೀಜಿ ಹೇಳಿಕೆಗೆ ಪ್ರತಿಕ್ರಿಯಿಸಿ, 'ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೊಡಿಸುವಂತೆ ಕೋರಲು ನಮ್ಮ ಮಠಕ್ಕೆ ಬಂದಿದ್ದರು. ಅವರ ಹೇಳಿಕೆಗೆ ಮಹತ್ವ ಕೊಡುವ ಅಗತ್ಯ ಇಲ್ಲ' ಎಂದು ತಿಳಿಸಿದರು.

'ಹುಬ್ಬಳ್ಳಿಯಲ್ಲಿ ಸೆ.19ರಂದು ನಡೆಯುವುದು ವೀರಶೈವ ಲಿಂಗಾಯತ ಏಕತೆ ಸಮಾವೇಶವಲ್ಲ, ಬೇಡ ಜಂಗಮ ಸಮಾವೇಶ. ಪಂಚಮಸಾಲಿ ಸಮಾಜದವರು ಹೋಗಬಾರದು' ಎಂದು ಕೋರಿದರು.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	123.58	10,065	16,503
ಹಾರಂಗಿ	2,859	2,858.57	1,624	1,600
ಕಬಿನಿ	2,284.00	2,281.80	3,948	9,650
ಹೇಮಾವತಿ	2,922	2,921.15	4,610	6,460
ಲಿಂಗನಮಕ್ಕಿ	1,819	1,817.30	5,898	9,486
ಸೂಪಾ (ಮೀ)	564	560.03	1,825.93	4,624.15
ಮಾಣಿ	595	594.08	423	652
ತುಂಗಭದ್ರಾ	1,633	1,626.06	13,024	12,666
ಮಲಪ್ರಭಾ	2,079.50	2,079.50	1,094	1,094
ಘಟಪ್ರಭಾ	2,175	2,174.70	1,922	3,372
ಭದ್ರಾ *	186	185.2	5,324	4,121
ಆಲಮಟ್ಟಿ (ಮೀ)	519.6	519.60	18,301	18,301
ನಾರಾಯಣಪುರ (ಮೀ)	492.25	492.25	25,000	29,780

* ನೆಲಮಟ್ಟದಿಂದ

'ಬಿಜೆಪಿ: 14 ಕೋಟಿ ಸದಸ್ಯತ್ವ'

ವಿಶಾಖಪಟ್ಟಣ (ಪಿಟಿಐ): ಬಿಜೆಪಿ ಪ್ರಸ್ತುತ 14 ಕೋಟಿ ಸದಸ್ಯರನ್ನು ಹೊಂದಿದ್ದು, ವಿಶ್ವದ ಅತಿ ದೊಡ್ಡ ರಾಜಕೀಯ ಪಕ್ಷವಾಗಿ ಹೊರಹೊಮ್ಮಿದೆ ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ಭಾನುವಾರ ಹೇಳಿದರು.



ಜೆ.ಪಿ. ನಡ್ಡಾ

ಪಕ್ಷದ ರ‍್ಯಾಲಿಯಲ್ಲಿ ಮಾತನಾಡಿದ ಅವರು, 'ಇವರಲ್ಲಿ ಎರಡು ಕೋಟಿ ಸಕ್ರಿಯ ಸದಸ್ಯರಿದ್ದಾರೆ. ದೇಶದಾದ್ಯಂತ 240 ಲೋಕಸಭಾ ಸದಸ್ಯರು, 1500 ಶಾಸಕರು ಮತ್ತು 170 ವಿಧಾನಪರಿಷತ್ ಸದಸ್ಯರನ್ನು ಬಿಜೆಪಿ ಹೊಂದಿದೆ' ಎಂದು ತಿಳಿಸಿದರು.

'20 ರಾಜ್ಯಗಳಲ್ಲಿ ಎನ್‌ಡಿಎ ಮೈತ್ರಿಕೂಟ ಮತ್ತು 13 ರಾಜ್ಯಗಳಲ್ಲಿ ಬಿಜೆಪಿ ಸರ್ಕಾರಗಳಿವೆ. ಅತೀ ಹೆಚ್ಚು ಜನಪ್ರತಿನಿಧಿಗಳನ್ನು ಹೊಂದಿರುವ ಪಕ್ಷ ನಮ್ಮದು' ಎಂದರು.

ಧರ್ಮಸ್ಥಳ ಪ್ರಕರಣ: ಕೆಲ ದೂರುಗಳ ಕುರಿತು ಸಮಗ್ರ ತನಿಖೆಗೆ ಸಿದ್ಧತೆ

ಎಸ್‌ಐಟಿ ಮುಂದೆ 30ಕ್ಕೂ ಹೆಚ್ಚು ದೂರು

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ ಮೃತದೇಹಗಳನ್ನು ಹೂತು ಹಾಕಲಾಗಿದೆ ಎಂಬ ಆರೋಪ ಕುರಿತು ತನಿಖೆ ನಡೆಸುತ್ತಿರುವ ಎಸ್‌ಐಟಿಗೆ, ಇದುವರೆಗೆ 30ಕ್ಕೂ ಹೆಚ್ಚು ದೂರುಗಳು ಸಲ್ಲಿಕೆಯಾಗಿವೆ. ಅವುಗಳಲ್ಲಿ ಅರ್ಹ ದೂರುಗಳ ಬಗ್ಗೆ ಸಮಗ್ರ ತನಿಖೆ ನಡೆಸಲು ಎಸ್‌ಐಟಿ ಮುಂದಾಗಿದೆ.

ನಾಪತ್ತೆ ಪ್ರಕರಣಗಳು, ಅಸಹಜ ಸಾವುಗಳು, ಶಂಕಿತ ಕೊಲೆ ಪ್ರಕರಣಗಳು, ಮೃತದೇಹಗಳನ್ನು ಗ್ರಾಮ ಪಂಚಾಯಿತಿ ಹಾಗೂ ಹಾಗೂ ಪೊಲೀಸರ ಸಹಕಾರದಿಂದ ಅಕ್ರಮವಾಗಿ ವಿಲೇವಾರಿ ಮಾಡಿದ ಆರೋಪಗಳಿಗೆ ಸಂಬಂಧಿಸಿದ ದೂರುಗಳು ಇವುಗಳಲ್ಲಿ ಸೇರಿವೆ.

'ಧರ್ಮಸ್ಥಳ ಕ್ಷೇತ್ರದ ಹೆಸರು ಕೆಡಿಸಲು ಸಂಚು ರೂಪಿಸಲಾಗಿದೆ. ಇದಕ್ಕೆ ವಿದೇಶದಿಂದ ಹಣಕಾಸು ಪೂರೈಕೆ ಆಗಿದೆ' ಎಂದು ಆರೋಪಿಸಿ ಕೆಲವರು ದೂರು ನೀಡಿದ್ದರು.

ಪ್ರಕರಣದ ತನಿಖೆಯ ಪ್ರಗತಿ ಹಾಗೂ ಸಲ್ಲಿಕೆಯಾಗಿರುವ ದೂರುಗಳ ವಿಲೇವಾರಿ ಕುರಿತು ಎಸ್‌ಐಟಿ ಮುಖ್ಯಸ್ಥ ಪ್ರಣವ್ ಮೊಹಾಂತಿ ಬೆಳ್ತಂಗಡಿಯ ಕಚೇರಿಯಲ್ಲಿ ಭಾನುವಾರ ತಂಡದ ಎಸ್ಪಿಗಳಾದ ಜಿತೇಂದ್ರ ಕುಮಾರ್ ದಯಾಮ, ಸಿ.ಎ. ಸೈಮನ್ ಮತ್ತಿತರ ಅಧಿಕಾರಿಗಳ ಜೊತೆ ಸಮಾಲೋಚಿಸಿದರು.

ಕೆಲ ದೂರುಗಳ ಬಗ್ಗೆ ಈಗಾಗಲೇ ತನಿಖಾಧಿಕಾರಿಗಳು ಪ್ರಾಥಮಿಕ ಮಾಹಿತಿ ಕಲೆ ಹಾಕಿದ್ದಾರೆ. ಅವುಗಳಲ್ಲಿ ಯಾವುವು ತನಿಖೆಗೆ ಯೋಗ್ಯವಾಗಿವೆ, ಯಾವ ದೂರುಗಳಿಗೆ ಹಿಂಬರಹ ನೀಡಿ ಮುಕ್ತಾಯಗೊಳಿಸಬಹುದು ಎಂಬ ಬಗ್ಗೆಯೂ ಮೊಹಾಂತಿಯವರು ಅಧಿಕಾರಿಗಳ ಜೊತೆ ಚರ್ಚಿಸಿದರು ಎಂದು ಗೊತ್ತಾಗಿದೆ.

'ನಮಗೆ 30ಕ್ಕೂ ಹೆಚ್ಚು ದೂರುಗಳು ಬಂದಿದ್ದು, ಪರಿಶೀಲಿಸಲಾಗುತ್ತಿದೆ. ತನಿಖೆ ಅಗತ್ಯ ಇಲ್ಲದ ದೂರುಗಳಿದ್ದರೆ, ಹಿಂಬರಹ ನೀಡಿ ಇತ್ಯರ್ಥಪಡಿಸಬೇಕಿದೆ. ಕೆಲ ದೂರುಗಳಲ್ಲಿ ಸಮಗ್ರ ತನಿಖೆಯ ಅಗತ್ಯ ಕಂಡು ಬಂದಿದ್ದು, ಇನ್ನಷ್ಟು ಮಾಹಿತಿ ಕಲೆಹಾಕುವ ಅಗತ್ಯವಿದೆ' ಎಂದು ಮೂಲಗಳು ತಿಳಿಸಿವೆ.

ಮತ್ತೆ ಶೋಧ?

ಸಾಕ್ಷಿ ದೂರುದಾರ ತಂದೊಪ್ಪಿಸಿದ್ದ ಬುರುಡೆಯನ್ನು ಬಂಗ್ಲೆಗುಡ್ಡೆಯ ಕಾಡಿನಿಂದ ಹೊರ ತೆಗೆಯಲಾಗಿತ್ತು. 'ಆ ಬುರುಡೆ ಸಿಕ್ಕ ಜಾಗದ ಮಹಜರಿಗೆ ತೆರಳಿದಾಗ ಇನ್ನಷ್ಟು ಮೃತದೇಹಗಳ ಅವಶೇಷಗಳು ಕಂಡುಬಂದಿದ್ದವು' ಎಂಬುದಾಗಿ ಸಾಕ್ಷಿ ದೂರುದಾರನಿಗೆ ಬುರುಡೆ ಇದ್ದ ಜಾಗವನ್ನು ತೋರಿಸಿದ್ದ ವಿಠಲ ಗೌಡ ಹೇಳಿಕೆ ನೀಡಿದ್ದರು.

'ಈ ಬಗ್ಗೆ ವಿಡಿಯೊವೊಂದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ಆ ಜಾಗದ ಮಹಜರಿನ ವೇಳೆ ಎಸ್‌ಐಟಿ ಅಧಿಕಾರಿಗಳೂ ಅವುಗಳನ್ನು ನೋಡಿದ್ದಾರೆ. ಆ ಜಾಗದಲ್ಲಿ ಮತ್ತಷ್ಟು ಶೋಧ ನಡೆಸುವ ಸಾಧ್ಯತೆ ಇದ್ದು, ಇದಕ್ಕೆ ಸಿದ್ಧತೆ ನಡೆದಿದೆ' ಎಂದು ಮೂಲಗಳು ತಿಳಿಸಿವೆ.

ಮಧ್ಯಂತರ ವರದಿ ನೀಡಲಿ

'ಧರ್ಮಸ್ಥಳ ಪ್ರಕರಣದಲ್ಲಿ ಷಡ್ಯಂತ್ರ ಮಾಡಿದವರನ್ನು ಮುಟ್ಟದಂತೆ ಎಸ್‌ಐಟಿ ಮೇಲೆ ರಾಜಕೀಯ ಒತ್ತಡ ಇದೆ. ನಿರೀಕ್ಷೆಗೆ ತಕ್ಕಂತೆ ಎಸ್‌ಐಟಿ ತನಿಖೆ ನಡೆಯುತ್ತಿಲ್ಲ' ಎಂದು ಸಂಸದ ಬಸವರಾಜ ಬೊಮ್ಮಾಯಿ ಆರೋಪಿಸಿದರು.

'ಮಾಸ್ಕ್ ಮ್ಯಾನ್‌ನ ದೂರು ಹುಸಿಯಾದ ನಂತರ ಬೇರೆ ಬೇರೆ ದೂರುಗಳು ದಾಖಲಾಗುತ್ತಿವೆ. ಎಸ್‌ಐಟಿಗೆ ಉತ್ತರದಾಯಿತ್ವ ಮತ್ತು ಜವಾಬ್ದಾರಿ ಇದೆ. ಇದುವರೆಗೆ ಆಗಿರುವ ತನಿಖೆ ಬಗ್ಗೆ ಎಸ್‌ಐಟಿಯು ಮಧ್ಯಂತರ ವರದಿ ನೀಡಬೇಕು' ಎಂದು ಅವರು ಒತ್ತಾಯಿಸಿದರು.



ಧಾರವಾಡದಲ್ಲಿ ಭಾನುವಾರ ಸಿತಾರ್ ನವಾಜ್ ಉಸ್ತಾದ್ ಬಾಲೆಖಾನ್ ಮೆಮೋರಿಯಲ್ ಫೌಂಡೇಷನ್ ವತಿಯಿಂದ ನಡೆದ ಸಂಗೀತೋತ್ಸವದಲ್ಲಿ ಹಿಂದೂಸ್ತಾನಿ ಗಾಯಕ ಸೋಮನಾಥ ಮರಡೂರ ಅವರಿಗೆ 'ಇನ್ಫೋಸಿಸ್ ಸಿತಾರ್ ನವಾಜ್ ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಪ್ರಶಸ್ತಿ' ಮತ್ತು ಪುಣೆಯ ತಬಲಾವಾದಕ ಮುಖೇಶ ಶ್ರೀಪತರಾವ್ ಜಾಧವ ಅವರಿಗೆ 'ಉಸ್ತಾದ್ ಬಾಲೇಖಾನ್ ಮೆಮೋರಿಯಲ್ ಸಹಕಲಾವಿದ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಉಸ್ತಾದ್ ಶಫಿಕ್‌ಖಾನ್, ಹಫೀಜ್ ಬಾಲೇಖಾನ್, ಡಾ.ಸೌಭಾಗ್ಯಾ ಕುಲಕರ್ಣಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

'ಎಸ್ಕಾಂ ನೌಕರರ ಬಲ: ಸಂಘಟನೆಗೂ ಶಕ್ತಿ'

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ಕೆಪಿಟಿಸಿಎಲ್ ಮತ್ತು ವಿವಿಧ ಎಸ್ಕಾಂಗಳ ವೀರಶೈವ ಲಿಂಗಾಯತರ ವೇದಿಕೆ ಸಂಘಟನೆಯು ಸಾಕಷ್ಟು ನೌಕರರ ಬಲದಿಂದಾಗಿ ಬಲಿಷ್ಠವಾಗಿದೆ' ಎಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ, ಎಸ್ಕಾಂಗಳ ವೀರಶೈವ ಲಿಂಗಾಯತರ ವೇದಿಕೆಯ ರಾಜ್ಯ ಘಟಕದ ಅಧ್ಯಕ್ಷ ಬಿ.ರು.ಪ್ರಕಾಶ ಹೇಳಿದರು.

ಲಿಂಗಾಯತರಿಗೆ ಸೂಕ್ತ ಪ್ರಾತಿನಿಧ್ಯ ದೊರೆಯುತ್ತಿರಲಿಲ್ಲ ಎಂಬ ಕಾರಣಕ್ಕಾಗಿ ಈ ವೇದಿಕೆಯು ಅಸ್ತಿತ್ವಕ್ಕೆ ಬಂದಿದೆ ಎಂದು ಭಾನುವಾರ ವೇದಿಕೆಯ 3ನೇ ರಾಜ್ಯಮಟ್ಟದ ಸಮಾವೇಶದಲ್ಲಿ ಅವರು ಹೇಳಿದರು.



ಸಮಾವೇಶದಲ್ಲಿ ಪಾಲ್ಗೊಂಡಿದ್ದ ಪದಾಧಿಕಾರಿಗಳು —ಪ್ರಜಾವಾಣಿ ಚಿತ್ರ

'ಕೇವಲ ವಾಟ್ಸ್‌ಆ್ಯಪ್ ಗ್ರೂಪ್ ಆಗಿದ್ದ ವೇದಿಕೆಯು ಅನೇಕ ಮುಖಂಡರ ಶ್ರಮದಿಂದಾಗಿ ಈಗ ಸಂಘಟನೆಯ ರೂಪವನ್ನು ಪಡೆದುಕೊಂಡಿದೆ' ಎಂದು ಅಭಿಪ್ರಾಯಪಟ್ಟರು.

ಹೂವಿನಹಡಗಲಿಯ ಗವಿಸಿದ್ಧೇಶ್ವರ ಶಾಖಾಮಠದ ಹಿರಿಶಾಂತವೀರ ಸ್ವಾಮೀಜಿ ಅವರು ಮಾತನಾಡಿದರು. ರಾಜ್ಯದ ವಿವಿಧೆಡೆಯಿಂದ ಆಗಮಿಸಿದ್ದ ವೇದಿಕೆಯ ಸದಸ್ಯರು ಪಾಲ್ಗೊಂಡಿದ್ದರು.

ಸೋಮವಾರ, ಸೆಪ್ಟೆಂಬರ್ 15, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 256 | ಪುಟ 14
prajavani.net prajavani www.prajavani.net



ಚಿಣ್ಣರ ಸಂಭ್ರಮ
ಮಂಗಳೂರಿನ ಕಲ್ಕೂರ ಪ್ರತಿಷ್ಠಾನ ಕದ್ರಿ ಮಂಜುನಾಥ ದೇವಸ್ಥಾನದಲ್ಲಿ ಭಾನುವಾರ ಏರ್ಪಡಿಸಿದ್ದ ಕೃಷ್ಣವೇಷ ಸ್ಪರ್ಧೆಯಲ್ಲಿ ಗಮನಸೆಳೆದ ಚಿಣ್ಣರು

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಲೀ ವಿನ್ನರ್, ಲಕ್ಷ್ಯ ರನ್ನರ್
ಭಾನುವಾರ ಹಾಂಗ್‌ಕಾಂಗ್ ಓಪನ್ ಬ್ಯಾಡ್ಮಿಂಟನ್‌ನಲ್ಲಿ ರನ್ನರ್ ಅಪ್ ಆದ ಭಾರತದ ಲಕ್ಷ್ಯ ಸೇನ್ (ಎಡ) ಮತ್ತು ವಿಜೇತ ಚೀನಾದ ಲೀ ಶಿಫೆಂಗ್

ವೈದ್ಯಕೀಯ ಕಾಲೇಜು: 600 ಹೆಚ್ಚುವರಿ ಸೀಟು 5 | ‘ಪಾಕ್ ಜೊತೆ ಕ್ರಿಕೆಟ್ ದೇಶದ್ರೋಹ’ 9

ಸಿ.ಎಂ ಮೇಲೆ ಮುಗಿಬಿದ್ದ ಬಿಜೆಪಿಗರು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ, ‘ಹಿಂದೂ ಧರ್ಮದಲ್ಲಿ ಸಮಾನತೆ ಇದ್ದಿದ್ದರೆ ಬೇರೆ ಧರ್ಮಕ್ಕೆ ಮತಾಂತರ ಏಕಾಗುತ್ತಿದ್ದರು?’ ಎಂಬ ಪ್ರಶ್ನೆಗೆ ರಾಜ್ಯ ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ವಿವರ 5

ಐ.ಟಿ. ಪೋರ್ಟಲ್‌ನಲ್ಲಿ ಸಮಸ್ಯೆ, ಹಲವರ ಅಳಲು

ಬೆಂಗಳೂರು: ಆದಾಯ ತೆರಿಗೆ ವಿವರ ಸಲ್ಲಿಸಲು ಸೋಮವಾರ (ಸೆಪ್ಟೆಂಬರ್ 15) ಕಡೆಯ ದಿನ. ಕಡೆಯ ದಿನದ ನಂತರ ಐ.ಟಿ ವಿವರ ಸಲ್ಲಿಸುವವರು ದಂಡ ಪಾವತಿ ಮಾಡಬೇಕಾಗುತ್ತದೆ.

ವಿವರ 8



7.76 ಲಕ್ಷ ಕಾರ್ಡ್‌ಗಳಿಗೆ ಕುತ್ತು

ಶಂಕಾಸ್ಪದ ಕಾರ್ಡ್‌ಗಳ ರದ್ದತಿಗೆ ಕೇಂದ್ರ ಸೂಚನೆ • ಕ್ರಮಕ್ಕೆ ಮುಂದಾದ ಸರ್ಕಾರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕರ್ನಾಟಕದಲ್ಲಿ 7.76 ಲಕ್ಷ ಶಂಕಾಸ್ಪದ ಪಡಿತರ ಚೀಟಿಗಳಿವೆ ಎಂದು ಗುರುತಿಸಿರುವ ಕೇಂದ್ರ ಸರ್ಕಾರ, ಅಂತಹ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸುವಂತೆ ಸೂಚನೆ ನೀಡಿದೆ. ಕೇಂದ್ರದ ಸೂಚನೆಯಂತೆ ಅನರ್ಹ ಪಡಿತರ ಚೀಟಿಗಳನ್ನು ರದ್ದುಪಡಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಸರ್ಕಾರದ ಮಾನದಂಡಗಳ ಅನುಸಾರ ₹1.20 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಇರುವವರು ಬಿಪಿಎಲ್ ಪಡಿತರಚೀಟಿ ಹೊಂದಲು ಅನರ್ಹರು. ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ವರದಿ ಪ್ರಕಾರ ಕರ್ನಾಟಕದಲ್ಲಿ ಅಂತಹ 5.80 ಲಕ್ಷ ಫಲಾನುಭವಿಗಳಿದ್ದಾರೆ. ಆದರೆ, ರಾಜ್ಯ ಸರ್ಕಾರದ ‘ಕುಟುಂಬ ತಂತ್ರಾಂಶ’ ಗುರುತಿಸಿರುವ ಪ್ರಕಾರ ಅಂತಹ ಫಲಾನುಭವಿಗಳ ಸಂಖ್ಯೆ 10.09 ಲಕ್ಷ ಎಂದು ಆಹಾರ ಇಲಾಖೆ ತಿಳಿಸಿದೆ.

8

ಇಂದು ನಿರ್ಧಾರ



ರಾಜ್ಯದಲ್ಲಿ 7.76 ಲಕ್ಷ ಶಂಕಾಸ್ಪದ ಪಡಿತರಚೀಟಿಗಳಿರುವ ಬಗ್ಗೆ ಕೇಂದ್ರ ಸರ್ಕಾರದಿಂದ ಪಟ್ಟಿ ಬಂದಿದೆ. ಕೇಂದ್ರದ ಮಾನದಂಡದಂತೆ ನಾವು ಕ್ರಮ ತೆಗೆದುಕೊಳ್ಳಲೇಬೇಕಿದೆ. ಈ ಬಗ್ಗೆ ಚರ್ಚಿಸಲು ಸೋಮವಾರ (ಸೆ.15) ಸಭೆ ನಡೆಸಲಿದ್ದೇವೆ. ಏನು ಮಾಡಬೇಕೆಂದು ಸಭೆಯಲ್ಲಿ ತೀರ್ಮಾನ ಮಾಡುತ್ತೇವೆ. ಸ್ವಲ್ಪ ಕಷ್ಟವಿದೆ. ಯೋಚನೆ ಮಾಡಿ ಮಾಡಬೇಕಿದೆ. ರಾಜ್ಯ ಸರ್ಕಾರ ಗುರುತಿಸಿದ ಅನರ್ಹ ಪಡಿತರಚೀಟಿಗಳನ್ನು ರದ್ದುಪಡಿಸುವ ಬಗ್ಗೆಯೂ ಯೋಚನೆ ಮಾಡುತ್ತಿದ್ದೇವೆ.

ಕೆ.ಎಚ್. ಮುನಿಯಪ್ಪ,
ಆಹಾರ ಸಚಿವ

ತಿಳಿವಳಿಕೆ ನೋಟಿಸ್‌ನಲ್ಲಿ ಏನಿದೆ?

ಕೇಂದ್ರದ ಸೂಚನೆಯಂತೆ ಕ್ರಮ ತೆಗೆದುಕೊಳ್ಳಲು ನಿರ್ಧರಿಸಿರುವ ಆಹಾರ ಇಲಾಖೆ, ₹1.20 ಲಕ್ಷಕ್ಕಿಂತ ಹೆಚ್ಚು ವಾರ್ಷಿಕ ಆದಾಯ ಇರುವವರಿಗೆ ತಿಳಿವಳಿಕೆ ನೋಟಿಸ್ ನೀಡುತ್ತಿದೆ. ‘ತಂತ್ರಾಂಶದಲ್ಲಿ ನಮೂದಾಗಿರುವ ಸಿಬಿಡಿಟಿ ವರದಿಯಲ್ಲಿ ವಾರ್ಷಿಕ ಆದಾಯ ₹1.20 ಲಕ್ಷಕ್ಕಿಂತ ಹೆಚ್ಚು ಕಂಡುಬಂದಿದೆ. ಸರ್ಕಾರದ ಮಾನದಂಡಗಳ ಅನುಸಾರ ಬಿಪಿಎಲ್ ಪಡಿತರಚೀಟಿ ಹೊಂದಲು ಅನರ್ಹರಾಗಿದ್ದು, ಬಿಪಿಎಲ್ ಪಡಿತರ ಚೀಟಿಯನ್ನು ಎಪಿಎಲ್ ಪಡಿತರ ಚೀಟಿಯಾಗಿ ಪರಿವರ್ತಿಸಬೇಕು. ಈ ನೋಟಿಸ್‌ಗೆ ಆಕ್ಷೇಪಣೆ ಇದ್ದರೆ ಕುಟುಂಬದ ಎಲ್ಲ ಸದಸ್ಯರ ಆಧಾರ್ ಕಾರ್ಡ್, ಪಾನ್ ಕಾರ್ಡ್ ಪ್ರತಿಯೊಂದಿಗೆ ಏಳು ದಿನಗಳ ಒಳಗೆ ಕಚೇರಿಗೆ ಸಲ್ಲಿಸಬೇಕು. ತಪ್ಪಿದರೆ 'ಕರ್ನಾಟಕ ಪಡಿತರ ಚೀಟಿಗಳ ಅನಧಿಕೃತ ಸ್ವಾಧೀನ ತಡೆಗಟ್ಟುವಿಕೆ ಆದೇಶ-1977’ ಹಾಗೂ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಈ ನೋಟಿಸ್‌ನಲ್ಲಿ ತಹಶೀಲ್ದಾರ್ ಎಚ್ಚರಿಕೆ ನೀಡಿದ್ದಾರೆ.



ರಾಜ್ಯದಲ್ಲಿ ಪಡಿತರ ಚೀಟಿ ಚಿತ್ರಣ

1,53,60,161
ರಾಜ್ಯದಲ್ಲಿರುವ ಒಟ್ಟು ಪಡಿತರ ಚೀಟಿ

5,41,44,507
ರಾಜ್ಯದಲ್ಲಿರುವ ಪಡಿತರ ಚೀಟಿಗಳಲ್ಲಿರುವ ಒಟ್ಟು ಸದಸ್ಯರು

4,01,93,130
ರಾಜ್ಯಕ್ಕೆ ಕೇಂದ್ರ ನಿಗದಿಪಡಿಸಿರುವ ಫಲಾನುಭವಿಗಳ ಗರಿಷ್ಠ ಮಿತಿ

ಸಂಭ್ರಮ


ಎಪಿ/ಪಿಟಿಐ ಚಿತ್ರ



ದುಬೈನಲ್ಲಿ ಭಾನುವಾರ ರಾತ್ರಿ ನಡೆದ ಏಷ್ಯಾ ಕಪ್ ಟಿ20 ಕ್ರಿಕೆಟ್ ಪಂದ್ಯದಲ್ಲಿ ಪಾಕಿಸ್ತಾನದ ಸಾಹಿಬ್‌ಝಾದಾ ಫರ್ಹಾನ್ ಅವರ ವಿಕೆಟ್ ಗಳಿಸಿದ ಭಾರತದ ಬೌಲರ್ ಕುಲದೀಪ್ ಯಾದವ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು

ಚಿನಕುರುಳಿ

ಪ್ರಕಾಶ್ ಶೆಟ್ಟಿ



‘ಸಹಜೀವನ ಬಳಿಕ ಮದುವೆಗೆ ನಿರಾಕರಿಸಿದರೆ ಅಪರಾಧವಲ್ಲ’

ಪ್ರಯಾಗರಾಜ್ (ಉತ್ತರ ಪ್ರದೇಶ) (ಪಿಟಿಐ): ಸಹಜೀವನದಲ್ಲಿದ್ದು ನಾಲ್ಕು ವರ್ಷ ಒಪ್ಪಿತ ದೈಹಿಕ ಸಂಬಂಧ ಹೊಂದಿದ ಬಳಿಕ ಮದುವೆಯಾಗುವುದಕ್ಕೆ ಪುರುಷನೊಬ್ಬ ನಿರಾಕರಿಸಿದಲ್ಲಿ ಅದು ಗಂಭೀರ ಅಪರಾಧವಾಗುವುದಿಲ್ಲ ಎಂದು ಅಲಹಾಬಾದ್ ಹೈಕೋರ್ಟ್ ಹೇಳಿದೆ.



‘ಸರಿ–ತಪ್ಪುಗಳನ್ನು ನಿರ್ಧರಿಸಬಲ್ಲ ಸಾಮರ್ಥ್ಯವಿರುವ ವಯಸ್ಕರಿಬ್ಬರು ಹಲವು ವರ್ಷ ಸಹಜೀವನ ನಡೆಸುತ್ತಿದ್ದರೆ, ಅವರು ಅಂತಹ ಸಂಬಂಧವನ್ನು ಸ್ವ ಇಚ್ಛೆಯಿಂದ ಆಯ್ಕೆ ಮಾಡಿಕೊಂಡಿರುತ್ತಾರೆ ಹಾಗೂ ಅದರಿಂದಾಗುವ ಪರಿಣಾಮಗಳ ಕುರಿತು ಅವರಿಗೆ ಅರಿವು ಇರುತ್ತದೆ ಎಂದೇ ಊಹಿಸಬೇಕಾಗುತ್ತದೆ’ ಎಂದು ನ್ಯಾಯಮೂರ್ತಿ ಅರುಣಕುಮಾರ್ ಸಿಂಗ್ ದೇಶವಾಲ್ ಅವರು ಇದ್ದ ಪೀಠ ಹೇಳಿದೆ.

ಸಹಜೀವನ ಸಂಗಾತಿಯಾಗಿದ್ದ ಪುರುಷನ ವಿರುದ್ಧ ಅತ್ಯಾಚಾರ ಆರೋಪ ಹೊರಿಸಿ ಮಹಿಳೆ ಸಲ್ಲಿಸಿದ್ದ ಮೇಲ್ಮನವಿ ತಿರಸ್ಕರಿಸಿದ ವೇಳೆ, ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

9


ದೇಶದ ಸೇನೆಗೆ ಬೆಂಬಲ ನೀಡದ ಕಾಂಗ್ರೆಸ್: ಪ್ರಧಾನಿ

ಮಂಗಲ್‌ದೋಯಿ (ಅಸ್ಸಾಂ): ‘ದೇಶದ ಸೇನೆಯನ್ನು ಬೆಂಬಲಿಸುವ ಬದಲಿಗೆ ಕಾಂಗ್ರೆಸ್ ಪಕ್ಷವು ಪಾಕಿಸ್ತಾನ ಬೆಳೆಸಿದ ಭಯೋತ್ಪಾದಕರನ್ನು ಬೆಂಬಲಿಸುತ್ತಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು.

ಅಸ್ಸಾಂನ ದರ್‍ರಾಂಗ್ ಜಿಲ್ಲೆಯ ಮಂಗಲ್‌ದೋಯಿಯಲ್ಲಿ ಭಾನುವಾರ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ‘ದೇಶದ ಅತ್ಯಂತ ಹಳೆಯ ಪಕ್ಷವು ನುಸುಳುಕೋರರು ಮತ್ತು ದೇಶ ವಿರೋಧಿ ಶಕ್ತಿಗಳನ್ನು ರಕ್ಷಿಸುತ್ತಿದೆ’ ಎಂದು ಆರೋಪಿಸಿದರು.

‘ನುಸುಳುಕೋರರ ಮೂಲಕ ದೇಶದ ಜನಸಂಖ್ಯಾ ಸ್ವರೂಪವನ್ನು ಬದಲಿಸಲು ಮತ್ತು ಭೂಮಿಯನ್ನು ಕಬಳಿಸಲು ಪಿತೂರಿ ನಡೆದಿದೆ. ಇದು ರಾಷ್ಟ್ರೀಯ ಭದ್ರತೆಗೆ ಗಂಭೀರ ಬೆದರಿಕೆ ಒಡ್ಡುತ್ತಿದೆ’ ಎಂದರು.

9




ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್

ಜೈಸ್ಮಿನ್, ಮೀನಾಕ್ಷಿ ‘ಗೋಲ್ಡನ್ ಪಂಚ್’

ಲಿವರ್‌ಪೂಲ್ (ಪಿಟಿಐ): ಭಾರತದ ಜೈಸ್ಮಿನ್ ಲಾಂಬೊರಿಯಾ (57 ಕೆ.ಜಿ) ಮತ್ತು ಮೀನಾಕ್ಷಿ ಹೂಡಾ (48 ಕೆ.ಜಿ) ಅವರು ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಸ್ವರ್ಣಪದಕ ಜಯಿಸಿ ಚಾರಿತ್ರಿಕ ಸಾಧನೆ ಮಾಡಿದರು.

- 57 ಕೆ.ಜಿ. ವಿಭಾಗದ ಫೈನಲ್‌ನಲ್ಲಿ ಜೈಸ್ಮಿನ್ ಲಾಂಬೊರಿಯಾ 4-1ರಿಂದ ಪೋಲೆಂಡ್‌ನ ಜೂಲಿಯಾ ಎಸ್ಝೆರೆಮೆತಾ ವಿರುದ್ಧ ಜಯಿಸಿದರು
- 48 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಮೀನಾಕ್ಷಿ ಹೂಡಾ ಅವರು ತಾಂತ್ರಿಕ ಉತ್ಕೃಷ್ಟತೆ ಆಧಾರದಲ್ಲಿ ಕಜಾಕಸ್ತಾನದ ನಾಝಿಂ ಕೈಝೈಬೆ ವಿರುದ್ಧ ಗೆದ್ದರು
- 80+ ಕೆ.ಜಿ. ವಿಭಾಗದಲ್ಲಿ; ನೂಪುರ್ ಶೆರಾನ್ ಬೆಳ್ಳಿ ಗಳಿಸಿದರು
- 80 ಕೆ.ಜಿ ವಿಭಾಗದಲ್ಲಿ; ಪೂಜಾರಾಣಿ ಕಂಚು ಪಡೆದರು
- ಈ ಮೊದಲು ಭಾರತದ ಮೇರಿ ಕೋಮ್ (2002, 2005, 2006, 2008, 2010 ಮತ್ತು 2018), ನಿಖತ್ ಜರೀನ್ (2022 ಮತ್ತು 2023), ಸರಿತಾದೇವಿ (2006), ಜೆನ್ನಿ ಆರ್.ಎಲ್ (2006), ಕೆ.ಸಿ. ಲೇಖಾ (2006), ನೀತು ಗಂಗಾಸ್ (2023), ಲವ್ಲಿನಾ ಬೊರ್ಗೊಹೈನ್ (2023), ಸವಿತಿ ಬೂರಾ (2023) ವಿಶ್ವ ಬಾಕ್ಸಿಂಗ್‌ನಲ್ಲಿ ಚಿನ್ನ ಗೆದ್ದಿದ್ದರು.



ಜೈಸ್ಮಿನ್ ಲಾಂಬೊರಿಯಾ ಚಿತ್ರ: ಬಿಎಫ್ಐ ವೆಬ್‌ಸೈಟ್



ಮೀನಾಕ್ಷಿ ಹೂಡಾ ಚಿತ್ರ: ಬಿಎಫ್ಐ ವೆಬ್‌ಸೈಟ್



Toyota Mobility Service — Conversion | Fleet | Leasing
TOYOTA U TRUST — Buy | Sell | Exchange • Used car
TOYOTA FINANCIAL SERVICES

Ravindu Toyota — Bangalore: [K R Puram, Magadi Rd, Marathahalli, Rajajinagar, Victoria Rd, Yeshwantpur]: 8058245555; Kolar: 9606090040; Tumkur: 9379189796

Nandi Toyota — Bangalore: [Banashankari, Banaswadi, Bannerghatta, Bommanahalli, Whitefield]: 7022340713; Hosur Road: 7353628633; Kanakapura Rd: 9916627733; Queens Rd: 9741310066

Viva Toyota — Bangalore: [Hebbal, Vidyaranyapura]: 9900027736; [Airport Rd, Kogilu]: 9900030617; Mysore Rd: 9900030620

Bharat Toyota — Bangalore: [Domlur]: 9741357683, 08047950000

Shakti Toyota — Hassan, Channarayapatna, Chikkamagalure, Kadur: 9980532064; Shivamogga, Sagara: 9686652728

Shodha Toyota — Bagalkot: 8147599463; Belgaum: Shahapur: 8147599461; Poona-Bangalore Road: 7899305505, 7760963774; Bijapur: 9606484983; Davangere: 9008952277; Hubli: 7204818810, 8123047553

Palace Toyota — Hunsur: 9663709743; Kushalnagar: 8971524206; Madikeri: 7022671919; Mandya: 9538874907; Mysore: Hootagalli: 9538874906; Krishnamurthy Puram: 9538874923

United Toyota — Mangalore: [Bunt's Hostel, Padil & Puttur], Kundapur, Udupi, Puttur, Uttara Kannada: 9686687581

Karuna Toyota — Gulbarga: 7829990004; Raichur: 7829992909

BJS Toyota — Hospet: 7829927943; Bellary: 7829927957; Koppal: 7829927968; Chitradurga: 7829927933; Gangavathi: 7829927943

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆ ಸಾಧ್ಯತೆ.


ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ: ಉದ್ಘಾಟನೆ:ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಎಚ್.ಸಿ. ಮಹದೇವಪ್ಪ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಬೆಳಿಗ್ಗೆ 11

ಸಂಸ್ಥಾಪಕರ ದಿನಾಚರಣೆ, 'ಸರ್ ಎಂ.ವಿ. ಸ್ಮಾರಕ ಪ್ರಶಸ್ತಿ' ಪ್ರದಾನ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿ: ಅಶ್ವಿನಿ ವೈಷ್ಣವ್, ಪ್ರಶಸ್ತಿ ಸ್ವೀಕರಿಸುವವರು: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ಎಂ.ಜಿ. ಬಾಲಕೃಷ್ಣ, ಆಯೋಜನೆ: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ, ಸ್ಥಳ: ಸರ್ ಎಂ.ವಿ. ಸಭಾಂಗಣ, ಎಫ್‌ಕೆಸಿಸಿಐ, ಕೆ.ಜಿ. ರಸ್ತೆ, ಸಂಜೆ 4

ಎಂಜಿನಿಯರ್ಸ್ ದಿನಾಚರಣೆ: ಅತಿಥಿಗಳು: ಡಿ.ಕೆ. ಶಿವಕುಮಾರ್, ರಿಜ್ವಾನ್ ಅರ್ಷದ್, ವಿ.ಬಿ. ಸಿಂಗ್, ಆಯೋಜನೆ ಮತ್ತು ಸ್ಥಳ: ದಿ ಇನ್‌ಸ್ಟಿಟ್ಯೂಷನ್ ಆಫ್ ಎಂಜಿನಿಯರ್ಸ್ (ಇಂಡಿಯಾ), ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಸಂಜೆ 5.30

ಭಾರತರತ್ನ ಸರ್ ಎಂ. ವಿಶ್ವೇಶ್ವರಯ್ಯ ಜನ್ಮದಿನಾಚರಣೆ: ಭಾಗವಹಿಸುವವರು: ಗಜಾನನ ಶರ್ಮಾ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

ಆರ್ಕಿಡ್ ಟ್ರಾವಲ್ ಅಂಡ್ ಟೂರ್ಸ್
Orchid
ನಿಮ್ಮ ಪ್ರವಾಸ ನಮ್ಮೊಂದಿಗೆ
ನಂ. 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು
Website : www.orchidtours.net
ನಾಡಹಬ್ಬ ದಸರಾ ಪ್ರಯುಕ್ತ ರಿಯಾಯಿತಿ ದರದಲ್ಲಿ ಪ್ರವಾಸಗಳು

11 ದಿನಗಳ
ಸಿಂಗಾಪುರ್-ಮಲೇಶೀಯಾ-ಥೈಲ್ಯಾಂಡ್
ಸಿಂಗಾಪುರ್: ಯೂನಿವರ್ಸಲ್ ಸ್ಟುಡಿಯೋ, ಸೆಂಟೋಸಾ ಐಲ್ಯಾಂಡ್, ವಿಂಗ್ಸ್ ಆಫ್ ಟೈಮ್, ಕೇಬಲ್ ಕಾರ್, ಸಿಂಗಾಪುರ್ ಸಿಟಿ ಟೂರ್, ಸೀ ಅಕ್ವೇರಿಯಂ, ಗಾರ್ಡನ್ಸ್ ಬೈ ದ ಬೇ
ಮಲೇಷಿಯಾ: ಕೌಲಾಲಂಪುರ್ ಸಿಟಿ ಟೂರ್, ಪುತ್ರಜಯ, ಜಂಟಿಂಗ್ ಹೈ ಲ್ಯಾಂಡ್,
ಥೈಲ್ಯಾಂಡ್: ಪಟ್ಟಾಯ, ಕೋರಲ್ ಐಲ್ಯಾಂಡ್, ಅಲ್ಕಝರ್ ಶೋ, ನೋಂಗ್ ನುಚ್ ವಿಲೇಜ್, ಬ್ಯಾಂಕಾಕ್ ಸಿಟಿ ಟೂರ್, ಸಫಾರಿ ವರ್ಲ್ಡ್
ಪ್ರವಾಸದ ದರ : ರೂ. 49,900/-*
(ಒಬ್ಬರಿಗೆ ಒಂದು ದೇಶಕ್ಕೆ)
9900080793 / 9900080794
6 ದಿನಗಳ
ಬ್ಯೂಟಿಫುಲ್ ಬಾಲಿ (Indonesia Special)
ಡೆನ್ ಪಸರ್, ಉಬುದ್, ತನಾಹ್ ಲಾಟ್, ಬೆರಾಟನ್ ಲೇಕ್, ಉಲಾನ್ ದಾನು, ಬೈಸಾಕಿ, ತಮನ್ ಆಯುನ್, ಬೆದು ಗುಲ್, ಬನಾನಾ ಬೋಟ್ ರೈಡ್, ತಂಜುಮಗ್ ಬೆನೋವಾ ಬೀಚ್, ಉಲು ವಾಟು ದೇವಸ್ಥಾನ, ತೀರ್ಥ ಎಂಪುಲ್, ತೀರ್ಥ ಗಂಗಾ, ಕಿಂಗ್ ಪ್ಯಾಲೇಸ್, ಬ್ಯಾಟ್ ಕೇವ್ಸ್ ಟೆಂಪಲ್, ಗೋ ಗಜ ಕೇವ್ಸ್ ಗರುಡ ವಿಷ್ಣು ಕಲ್ಚರಲ್ ಪಾರ್ಕ್,
ಪ್ರವಾಸ ದರ : ರೂ. 54,900/-*
(ವಿಮಾನ ದರ ಪ್ರತ್ಯೇಕ)
9900093613 / 9900093615

ನಮ್ಮ ಇತರೆ ಪ್ರವಾಸಗಳು



11 ದಿನಗಳ ಕಾಂಬೋಡಿಯಾ - ವಿಯೆಟ್ನಾಮ್
6 ದಿನಗಳ ಶ್ರೀಲಂಕಾ-ರಾಮಾಯಣ ಸ್ಪೆಷಲ್
7 ದಿನಗಳ ನಾರ್ಥ್ ಈಸ್ಟ್ ಸ್ಪೆಷಲ್ ಟೂರ್
9 ದಿನಗಳ ಗುಜರಾತ್ ವಿಶೇಷ ಟೂರ್
4 ದಿನಗಳ ಪೂರಿ ಜಗನ್ನಾಥ ಟೂರ್
3 ದಿನಗಳ ಅಹೋಬಲಂ - ನವಾನರಸಿಂಹ ಟೂರ್



*ನಿಬಂಧನೆಗಳಿಗೆ ಒಳಪಟ್ಟಿರುತ್ತದೆ
99000 99252

ರಸ್ತೆಯ ಮೇಲೆ ಹರಿಯುವ ಕೊಳಚೆ ನೀರು

ಜಿಕೆವಿಕೆ ಬಡಾವಣೆಯಿಂದ ಯಲಹಂಕ ರಸ್ತೆಯಲ್ಲಿ ಅವಾಂತರ

• ಡಿ.ಸುರೇಶ್

ಯಲಹಂಕ: ಬ್ಯಾಟರಾಯನಪುರ ಕ್ಷೇತ್ರದ ಜಕ್ಕೂರಿನ ಜಿಕೆವಿಕೆ ಬಡಾವಣೆಯಿಂದ ಯಲಹಂಕ ಹಾಗೂ ನಗರದ ಕಡೆಗೆ ಸಂಪರ್ಕ ಕಲ್ಪಿಸುವ ರೈಲ್ವೆ ಸಮಾನಾಂತರ ರಸ್ತೆಯ ಮೇಲೆ ಅಪಾರ್ಟ್‌ಮೆಂಟ್‌ಗಳ ಕೊಳಚೆನೀರು ಹರಿಯುತ್ತಿದೆ.

ಇದೇ ರಸ್ತೆಯ ಎರಡೂ ಬದಿಗಳಲ್ಲಿ ಅನಧಿಕೃತವಾಗಿ ತ್ಯಾಜ್ಯ ವಿಲೇವಾರಿ ಮಾಡುತ್ತಿರುವ ಪರಿಣಾಮ, ಸಾರ್ವಜನಿಕರು ತೊಂದರೆ ಅನುಭವಿಸಬೇಕಾಗಿದೆ.

ಈ ರಸ್ತೆಯು ಜಕ್ಕೂರು ಸೇರಿದಂತೆ ಸುತ್ತಮುತ್ತಲ ಬಡಾವಣೆಗಳ ಮೂಲಕ ಯಲಹಂಕ ಮತ್ತು ನಗರದ ಕಡೆಗೆ ಸಂಪರ್ಕ ಕಲ್ಪಿಸುತ್ತದೆ. ಮಾರ್ಗದಲ್ಲಿ ಪ್ರತಿನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಜಿಕೆವಿಕೆ ಬಡಾವಣೆಯ ಮೂಲಕ ತೆರಳುವ ಮಾರ್ಗದ ಆರಂಭದ ತಿರುವಿನ ಬಳಿ ಜಕ್ಕೂರು ಪ್ಲಾಂಟೇಶನ್ ಪ್ರದೇಶದಲ್ಲಿರುವ ಅಪಾರ್ಟ್‌ಮೆಂಟ್‌ಗಳ ಮೂಲಕ ಹರಿದು ಬರುವ ಕೊಳಚೆನೀರು, ರಸ್ತೆಯ ಪಕ್ಕದ ಗುಂಡಿಯಲ್ಲಿ ಸಂಗ್ರಹವಾಗಿ ನಂತರ ರಸ್ತೆಯ ಮೇಲೆ ಹರಿಯುತ್ತಿದೆ. ಇದರಿಂದ ಕೊಳಚೆ ನೀರಿನ ಮೇಲೆ ವಾಹನಗಳನ್ನು ಚಲಾಯಿಸಿಕೊಂಡು ಹೋಗಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಹೆಚ್ಚಿನ ಮಳೆ ಸುರಿದ ಸಂದರ್ಭದಲ್ಲಿ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸುತ್ತಿದ್ದು, ಈ ಪ್ರದೇಶದಲ್ಲಿ ದುರ್ವಾಸನೆ ಬೀರುತ್ತಿರುವುದರ ಜೊತೆಗೆ ಸೊಳ್ಳೆಗಳ ಕಾಟವೂ ಹೆಚ್ಚಾಗಿದೆ. ಈ ರಸ್ತೆಯಲ್ಲಿ ಸಂಚರಿಸುವ ವಾಹನ ಸವಾರರು, ಪಾದಚಾರಿಗಳು ಹಾಗೂ ವಾಯುವಿಹಾರಿಗಳು ಕಿರಿಕಿರಿ ಅನುಭವಿಸಬೇಕಾಗಿದೆ ಎಂದು ಸ್ಥಳೀಯರು ಹಾಗೂ ಈ ರಸ್ತೆಯಲ್ಲಿ ಪ್ರತಿನಿತ್ಯ ಸಂಚರಿಸುವ ವಾಹನ ಸವಾರರು ದೂರಿದರು.

'ಈ ರಸ್ತೆಯು ತೀರಾ ಕಿರಿದಾಗಿದ್ದು, ರಾತ್ರಿ ವೇಳೆಯಲ್ಲಿ ರಸ್ತೆಯ ಎರಡೂ ಕಡೆಗಳಲ್ಲಿ ಅಲ್ಲಲ್ಲಿ ವಾಹನಗಳಲ್ಲಿ ಹಳೆಯ ಕಟ್ಟಡಗಳ ಸಾಮಗ್ರಿಗಳು ಹಾಗೂ ಮನೆಗಳ ತ್ಯಾಜ್ಯವನ್ನು ತಂದು ಸುರಿಯಲಾಗುತ್ತಿದೆ. ಇದನ್ನು ತಿನ್ನಲು ಬರುವ ನಾಯಿಗಳು ತ್ಯಾಜ್ಯವನ್ನು ರಸ್ತೆಯ ಮೇಲೆಲ್ಲಾ ಹರಡುತ್ತಿವೆ. ಇದರಿಂದ ವಾಹನಗಳ ಹಾಗೂ ಪಾದಚಾರಿಗಳ ಸಂಚಾರಕ್ಕೆ ಅಡಚಣೆಯಾಗುತ್ತಿದೆ' ಎಂದು ಜಿಕೆವಿಕೆ ಬಡಾವಣೆಯ ನಿವಾಸಿ ರವಿಕುಮಾರ್ ಹೇಳಿದರು.

'ಅಧಿಕಾರಿಗಳು, ಅನಧಿಕೃತವಾಗಿ ತ್ಯಾಜ್ಯ ವಿಲೇವಾರಿ ಮಾಡುವವರು ಹಾಗೂ ಅಪಾರ್ಟ್‌ಮೆಂಟ್‌ಗಳಿಂದ ರಸ್ತೆಗೆ ಕೊಳಚೆನೀರು ಹರಿಸುತ್ತಿರುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಮೂಲಕ ಸಮಸ್ಯೆಯನ್ನು ಬಗೆಹರಿಸಬೇಕು. ಅಲ್ಲದೆ ಈ ರಸ್ತೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸಿ.ಸಿ. ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಬೇಕು' ಎಂದು ಅವರು ಒತ್ತಾಯಿಸಿದರು.

'ಬಡಾವಣೆಯಲ್ಲಿ ಬೀಡಾಡಿ ನಾಯಿಗಳ ಕಾಟ ಹೆಚ್ಚಾಗಿದ್ದು, ರಸ್ತೆಗಳಲ್ಲಿ ಗುಂಪುಗುಂಪಾಗಿ ಸೇರುವ ನಾಯಿಗಳು, ಕಿತ್ತಾಡಿಕೊಂಡು ಈ ಮಾರ್ಗದಲ್ಲಿ ಸಂಚರಿಸುವ ವಾಹನ ಸವಾರರು ಹಾಗೂ ಪಾದಚಾರಿಗಳ ಮೇಲೆ ದಾಳಿಮಾಡಲು ಬರುತ್ತವೆ' ಎಂದು ಸ್ಥಳೀಯ ನಿವಾಸಿ ವಿ.ನಾಗರಾಜಪ್ಪ ಆಗ್ರಹಿಸಿದರು.

ಪ್ರಸ್ತಾವ ಸಲ್ಲಿಕೆ

ಮನೆ ತ್ಯಾಜ್ಯ, ಕಟ್ಟಡ ತ್ಯಾಜ್ಯ ಹಾಕುವವರನ್ನು ನಿಯಂತ್ರಿಸಲು ರಸ್ತೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸಲು ಈ ಹಿಂದೆ ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಲಾಗಿತ್ತು. ಈಗ ಬೆಂಗಳೂರು ಉತ್ತರ, ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು ಬಿಎಸ್‌ಡಬ್ಲ್ಯುಎಲ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕ ತೀರ್ಥಪ್ರಸಾದ್ ತಿಳಿಸಿದರು.


ರಸ್ತೆಯ ಮೇಲೆ ಹರಿಯುತ್ತಿರುವ ಕೊಳಚೆ ನೀರು

ನೋಟಿಸ್ ನೀಡಲಾಗುವುದು

'ರಸ್ತೆಯ ಮೇಲೆ ಕೊಳಚೆನೀರು ಹರಿಯುತ್ತಿರುವ ಬಗ್ಗೆ ನಮ್ಮ ಗಮನಕ್ಕೆ ಬಂದಿಲ್ಲ. ಅಲ್ಲದೆ ಸಮಸ್ಯೆಯ ಕುರಿತು ಇದುವರೆಗೂ ಯಾವುದೇ ದೂರು ಸಹ ಸಲ್ಲಿಕೆ ಆಗಿಲ್ಲ. ಶೀಘ್ರದಲ್ಲೇ ಸ್ಥಳ ಪರಿಶೀಲನೆ ನಡೆಸಿ, ಕೊಳಚೆನೀರು ಹರಿಸುತ್ತಿರುವುದು ಕಂಡುಬಂದರೆ ಸಂಬಂಧಪಟ್ಟವರಿಗೆ ನೋಟಿಸ್ ನೀಡಿ, ಸಮಸ್ಯೆ ಬಗೆಹರಿಸಲಾಗುವುದು' ಎಂದು ಜಲಮಂಡಳಿ ಸಹಕಾರ ನಗರ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಾಜಶೇಖರ್ ಮೇಟಿ ಹೇಳಿದರು.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256

'ರಸ್ತೆ ವಿಭಜಕ ತೆರವುಗೊಳಿಸಿ'



ನಂಜಪ್ಪ ವೃತ್ತದಿಂದ ತಿಂಡ್ಲುಗೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ವಿಭಜಕವಿದೆ. ಈ ರಸ್ತೆಯಲ್ಲಿ ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ರಾತ್ರಿ ಹೊತ್ತಿನಲ್ಲಿ ಸಂಚರಿಸುವ ವಾಹನ ಸವಾರರಿಗೆ ಈ ವಿಭಜಕ ಗೋಚರಿಸುವುದಿಲ್ಲ. ಇದರಿಂದ ಹಲವಾರು ಅಪಘಾತಗಳು ಸಂಭವಿಸಿದ್ದು, ಅನೇಕರು ಗಾಯಗಳನ್ನು ಮಾಡಿಕೊಂಡಿದ್ದಾರೆ. ಈ ರಸ್ತೆಯಲ್ಲಿ ವಿಭಜಕ ಅಳವಡಿಸಿರುವುದು ಸರಿಯಾಗಿಲ್ಲ. ವಿಭಜಕ ಗೋಚರವಾಗುವಂತೆ ಕ್ರಮ ಕೈಗೊಳ್ಳಬೇಕು.

ಜೋಶಿ ಪೌಲ್, ತಿಂಡ್ಲು



'ರಸ್ತೆ ದುರಸ್ತಿಗೆ ಆಗ್ರಹ'

ಎಂಎಲ್‌ಎ ಲೇಔಟ್‌ನಿಂದ ಕಮ್ಮನಹಳ್ಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಗುಂಡಿಮಯವಾಗಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗಿದೆ. ಇದೇ ರಸ್ತೆ ಪ್ರಿನ್ಸ್ ಆ್ಯಂಡ್ ಪ್ರಿನ್ಸೆಸ್ ಅಪಾರ್ಟ್‌ಮೆಂಟ್ ಬಳಿ ರಾಜ ಕಾಲುವೆಯ ಹತ್ತಿರ ತುಂಬಾ ಕಿರಿದಾಗಿದೆ. ಮಳೆ ಬಂದರೆ ರಸ್ತೆ ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಇದರಿಂದ ಸ್ಥಳೀಯ ನಿವಾಸಿಗಳ ಓಡಾಟಕ್ಕೂ ಸಮಸ್ಯೆ ಆಗಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ನಂದೀಶ್ ಬಿ., ಎಂಎಲ್‌ಎ ಲೇಔಟ್

'ಅಗೆದ ರಸ್ತೆ ಸರಿಪಡಿಸಿ'

ಎಚ್‌ಎಸ್‌ಆರ್ ಲೇಔಟ್‌ನ ಆರನೇ ಸೆಕ್ಟರ್‌ಗೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಗೆದು ಹಾಗೆಯೇ ಬಿಡಲಾಗಿದೆ. ಇದರಿಂದ ವಾಹನ ಸಂಚಾರಕ್ಕೆ ಅನನುಕೂಲವಾಗಿದೆ. ರಸ್ತೆಯನ್ನು ಅಗೆದು ಮಣ್ಣಿನ ರಾಶಿಯನ್ನು ಅಲ್ಲಲ್ಲಿ ಹಾಕಿದ್ದು, ನಿತ್ಯ ದೂಳಿನ ಮಜ್ಜನವಾಗುತ್ತಿದೆ. ಇದರಿಂದ ಸ್ಥಳೀಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರುತ್ತಿದೆ. ಬೆಂಗಳೂರು ಜಲಮಂಡಳಿಯ ಸಿಬ್ಬಂದಿ ಕೊಳವೆ ಜೋಡಿಸಲು ಅಗೆದಿರುವ ರಸ್ತೆಯನ್ನು ಕೂಡಲೇ ಮುಚ್ಚಿ, ಸಾರ್ವಜನಿಕ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಎಚ್. ವಿ. ಶ್ರೀಧರ್, ಎಚ್‌ಎಸ್‌ಆರ್ ಲೇಔಟ್



ವಿದ್ಯಾರ್ಥಿನಿಯರಿಗೆ ಸ್ವಚ್ಛತಾ ಕಿಟ್

ಆನೇಕಲ್: ತಾಲ್ಲೂಕಿನ ಸರ್ಜಾಪುರ ಸರ್ಕಾರಿ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ರಾಜಲಾಂಛನ ಸಂಸ್ಥೆ ಮತ್ತು ದುರ್ಗಾ ಫೌಂಡೇಷನ್, ಕರ್ತವ್ಯ ಫೌಂಡೇಷನ್ ವತಿಯಿಂದ ಆರೋಗ್ಯ ಮತ್ತು ಸ್ವಚ್ಛತಾ ಕಿಟ್ ವಿತರಿಸಲಾಯಿತು.

ಡಿವೈಎಸ್ಪಿ ಎಲ್.ವೈ.ರಾಜೇಶ್ , ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿನಿಯರಿಗೆ ಸ್ವಚ್ಛತೆ ಮತ್ತು ಭದ್ರತೆಯ ಬಗ್ಗೆ ಜಾಗೃತಿ ಮೂಡಿಸಬೇಕು. ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳು ಕ್ರಿಯಾ ಯೋಜನೆ ರೂಪಿಸಬೇಕು ಎಂದರು.

ನಿಧನ ವಾರ್ತೆ

ಲಿಂಗರಾಜ ಕುರ್ತಕೋಟಿ



ಬೆಂಗಳೂರು: ಕೆನರಾ ಬ್ಯಾಂಕ್‌ನ ನಿವೃತ್ತ ವಲಯ ಪ್ರಬಂಧಕ ಲಿಂಗರಾಜ ಕುರ್ತಕೋಟಿ (90) ಸ್ವಗೃಹದಲ್ಲಿ ಭಾನುವಾರ ನಿಧನರಾದರು.

ಅವರಿಗೆ ಪುತ್ರ, ನಾಲ್ವರು ಪುತ್ರಿಯರು ಇದ್ದಾರೆ. ಮೃತರ ಅಂತ್ಯಕ್ರಿಯೆ ಚಾಮರಾಜ ಪೇಟೆಯ ಚಿತಾಗಾರದಲ್ಲಿ ನಡೆಯಿತು ಎಂದು ಕುಟುಂಬದವರು ತಿಳಿಸಿದ್ದಾರೆ.


'Bharat Ratna'
Sir M. Visvesvaraya
Founder
ಸರ್ ಎಂ.ವಿ. ಸ್ಮಾರಕ ಪ್ರಶಸ್ತಿ ಸಮಾರಂಭ
SIR M V MEMORIAL AWARD CEREMONY
Monday
15th September 2025
Sir M V Auditorium
FKCCI, K.G. Road, Bengaluru
F.K.C.C.I BANGALORE
Estd. 1916
RECIPIENT

'Bharat Ratna'
SIR M VISVESVARAYA MEMORIAL AWARD 2025
Dr. C N MANJUNATH
Member of Parliament, Lok Sabha
Cardiologist & Former Director of Jayadeva Institute of Cardiovascular Sciences and Research, Bengaluru
With the divine presence of

Parama Pujya Jagadguru
Sri Sri Sri
Dr. Nirmalanandanatha Mahaswamiji
Pontiff of Sri Adichunchanagiri Mahasamsthana Math
Chief Guest

Sri Ashwini Vaishnaw
Hon'ble Minister for Railways, Electronics & Information Technology, Information & Broadcasting
Government of India
Presided by

Sri M G Balakrishna
President, FKCCI

Uma Reddy
President - Elect

T Sairam Prasad
Sr. Vice President - Elect

Ramesh Chandra Lahoti
Imm. Past President

K Ramaswamy
Past President & Chairman
Sir M V Award Jury Committee
ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆ
FEDERATION OF KARNATAKA CHAMBERS OF COMMERCE AND INDUSTRY
Federation House, K.G. Road, Bengaluru - 560 009 | T: 080 22262355/56 | www.fkcci.org

ಯಕ್ಷಗಾನದ ಸಮಗ್ರ ದಾಖಲೀಕರಣ ಆಗಲಿ

ಕೊಂಡದಕುಳಿ ರಾಮಚಂದ್ರ ಹೆಗಡೆಗೆ ಸನ್ಮಾನ– ಬಳ್ಕೂರು ಕೃಷ್ಣಯಾಜಿ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಕ್ಷಗಾನ ಕಲೆಯನ್ನು ಮುಂದಿನ ಪೀಳಿಗೆಗೂ ತಲುಪಿಸಬೇಕೆಂದರೆ ಈಗಿನಿಂದಲೇ ಸಂಪೂರ್ಣ ದಾಖಲೀಕರಣ ಮಾಡುವುದು ಒಳ್ಳೆಯದು ಎಂದು ಕಲಾವಿದ ಬಳ್ಕೂರು ಕೃಷ್ಣಯಾಜಿ ಸಲಹೆ ನೀಡಿದರು.

ನಗರದಲ್ಲಿ ಭಾನುವಾರ ಕೊಂಡದಕುಳಿ ರಾಮಚಂದ್ರ ಹೆಗಡೆ ಅವರ ಜೀವನಗಾಥೆಯ ಪುಸ್ತಕ 'ಯಕ್ಷಚಂದ್ರ' ಜನಾರ್ಪಣೆ ಸಮಾರಂಭದಲ್ಲಿ ಅವರು ಮಾತನಾಡಿದರು.

ಯುವ ಪೀಳಿಗೆಯಲ್ಲಿ ಯಕ್ಷಗಾನದ ಆಸಕ್ತಿ ಕಡಿಮೆಯಾಗುತ್ತಿದೆ. ಮುಂದಿನ ಪೀಳಿಗೆಯ ಹೊತ್ತಿಗೆ ಇದು ಇನ್ನೂ ಕ್ಷೀಣಿಸಬಹುದು. ಈ ಕಾರಣದಿಂದ ಯಕ್ಷಗಾನ ಪ್ರದರ್ಶನಗಳ ಜತೆಗೆ ಕಲೆ, ಕಲಾವಿದರ ಕುರಿತು ವೇಷ ಸಹಿತವಾಗಿ ದಾಖಲು ಮಾಡುವುದು ಸೂಕ್ತ ಎಂದು ಹೇಳಿದರು.

ಶಿಕ್ಷಣ ತಜ್ಞ ಕೆ.ಈ. ರಾಧಾಕೃಷ್ಣ ಮಾತನಾಡಿ, 'ಕೊಂಡದಕುಳಿ ಅನೇಕ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ಕಲೆ ಎಂದಿಗೂ ನಿಂತ ನೀರಾಗಬಾರದು. ಹರಿಯುವ ನೀರಿನಂತೆ ಮುಂದಿನ ಪೀಳಿಗೆಗೆ ತಲುಪಲು ಹೊಸ ಪ್ರಯೋಗಗಳನ್ನು ಆಧುನಿಕತೆ ಹಾಗೂ ಸಂಪ್ರದಾಯದ ಜತೆಯಲ್ಲಿ ಮಾಡಬೇಕು' ಎಂದು ಸಲಹೆ ನೀಡಿದರು.

ಸನ್ಮಾನ ಸ್ವೀಕರಿಸಿದ ಕೊಂಡದಕುಳಿ ರಾಮಚಂದ್ರ ಹೆಗಡೆ ಮಾತನಾಡಿ, 'ಯಕ್ಷಗಾನದ ಕುರಿತು ಹಿರಿಯ ಕಲಾವಿದರು ಹೇಳಿದ್ದೆಲ್ಲ ಸತ್ಯ ಎಂದು ಹೇಳಲಾಗದು. ಎಲ್ಲವನ್ನೂ ವಿಮರ್ಶೆ ಮಾಡುತ್ತಲೇ ಅರಿವನ್ನು ವಿಸ್ತರಿಸಿಕೊಳ್ಳಬೇಕು. ಕಿರಿಯರಿಗೂ ಸರಿಯಾಗಿ ಮಾರ್ಗದರ್ಶನ ಮಾಡಬೇಕು' ಎಂದು ನುಡಿದರು.

ಪತ್ರಕರ್ತ ಕೆ.ರವಿಶಂಕರ್ ಭಟ್, ಲೇಖಕ ರಾಘವೇಂದ್ರ ಭಟ್, ಕಲಾವಿದರಾದ ಮೋಹನ್ ಹೆಗಡೆ, ಶ್ರೀಪಾದ್ ಹೆಗಡೆ, ದೀಪಕ್ ಶೆಟ್ಟಿ ಸತ್ಯವತಿ, ಉದ್ಯಮಿ ಅಜಿತ್ ಹೆಗ್ಡೆ ಶಾನಾಡಿ ಹಾಜರಿದ್ದರು. ಬಳಿಕ ಶರಸೇತು ಬಂಧನ ಯಕ್ಷಗಾನ ಪ್ರದರ್ಶನ ನಡೆಯಿತು.


'ಯಕ್ಷಚಂದ್ರ' ಪುಸ್ತಕ ಜನಾರ್ಪಣೆ ಮತ್ತು 'ಶರಸೇತು ಬಂಧನ' ಯಕ್ಷಗಾನ ಪ್ರದರ್ಶನದ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದ ಕೊಂಡದಕುಳಿ ರಾಮಚಂದ್ರ ಹೆಗಡೆ, ಪತ್ನಿ ಚೇತನಾ ಹೆಗಡೆ, ಪುತ್ರಿ ಅಶ್ವಿನಿ ಅವರನ್ನು ಗೌರವಿಸಲಾಯಿತು

'ಸಮೀಕ್ಷೆ ಹೆಸರಲ್ಲಿ ಹಿಂದೂ ಒಗ್ಗಟ್ಟಿಗೆ ಸರ್ಕಾರ ಕೊಳ್ಳಿ'

ಪ್ರಜಾವಾಣಿ ವಾರ್ತೆ

ವಿಜಯಪುರ (ದೇವನಹಳ್ಳಿ): ರಾಜ್ಯದಲ್ಲಿ ಸಾಮಾಜಿಕ, ಆರ್ಥಿಕ ಸಮೀಕ್ಷೆ ನೆಪದಲ್ಲಿ ಕಾಂಗ್ರೆಸ್ ಸರ್ಕಾರ ಹಿಂದೂ ಸಮಾಜದ ಒಗ್ಗಟ್ಟು ಒಡೆಯುವ ಕೆಲಸದಲ್ಲಿ ತೊಡಗಿದೆ ಎಂದು ವಿಶ್ವ ಹಿಂದೂ ಪರಿಷದ್ ಜಿಲ್ಲಾ ಕಾರ್ಯದರ್ಶಿ ರವಿಕುಮಾರ್ ಆರೋಪಿಸಿದರು.

ಹಿಂದೂ ಜಾತಿಗಳ ಹೆಸರಿನ ಜೊತೆಗೆ ಕ್ರಿಶ್ಚಿಯನ್ ಹೆಸರು ಸೇರಿಸುವ ಹುನ್ನಾರ ನಡೆದಿದೆ. ಹಿಂದೂ ಸಮಾಜದ ಜಾತಿಗಳು ಒಂದಾಗಿರಲು ಬಿಡುತ್ತಿಲ್ಲ. ಇದು ಧರ್ಮಕ್ಕೆ ಮಾಡುತ್ತಿರುವ ಅಪಚಾರ ಎಂದು ಸುದ್ದಿಗೋಷ್ಠಿಯಲ್ಲಿ ದೂರಿದರು.

ರಾಷ್ಟ್ರಪತಿ ಮಧ್ಯಪ್ರವೇಶಿಸಿ ರಾಜ್ಯದ ಕಾಂಗ್ರೆಸ್ ಸರ್ಕಾರಕ್ಕೆ ತಿಳಿವಳಿಕೆ ನೀಡಬೇಕು ಎಂದು ಆಗ್ರಹಿಸಿದರು.




'ಸಹಕಾರ ರತ್ನ' ಪ್ರಶಸ್ತಿ ಪಡೆದ ಕೆ.ಎಂ.ನಾಗರಾಜ್ ಅವರನ್ನು ಅಶೋಕನಗರ ಸಹಕಾರ ಬ್ಯಾಂಕ್ ನಿಯಮಿತದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಎಚ್.ಕೆ.ಪಾಟೀಲ, ಎಲ್.ಎ. ರವಿಸುಬ್ರಹ್ಮಣ್ಯ ಸನ್ಮಾನಿಸಿದರು. ಎಚ್.ಎಂ.ರೇವಣ್ಣ ಉಪಸ್ಥಿತರಿದ್ದರು

ಸಾಲ ಸಿಗದಿರುವುದೇ ಆರ್ಥಿಕ ಮುಗ್ಗಟ್ಟಿಗೆ ಕಾರಣ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಕೃತ ಬ್ಯಾಂಕ್‌ಗಳು ಬೀದಿಬದಿ ವ್ಯಾಪಾರಿಗಳಿಗೆ, ಸಣ್ಣ ಉದ್ಯಮ ನಡೆಸುವರಿಗೆ ಸಾಲ ಸೌಲಭ್ಯ ನೀಡದ ಕಾರಣ ರಾಷ್ಟ್ರದಲ್ಲಿ ನಿರುದ್ಯೋಗ, ಬಡತನ, ಆರ್ಥಿಕ ಮುಗ್ಗಟ್ಟು ಬೇರೂರಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವ ಎಚ್.ಕೆ. ಪಾಟೀಲ ಹೇಳಿದರು.


ಅಶೋಕನಗರ ಸಹಕಾರ ಬ್ಯಾಂಕಿನ ಸುವರ್ಣ ಮಹೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಉತ್ತಮ ಸಹಕಾರ ಬ್ಯಾಂಕ್‌ಗಳ ಹೊಸ ಶಾಖೆಗಳನ್ನು ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕ್ ಮತ್ತು ಕೇಂದ್ರ ಸರ್ಕಾರ ಅಡ್ಡಿಪಡಿಸಿದ್ದವು. ಸಹಕಾರ ಸಂಘಗಳ ಬ್ಯಾಂಕ್, ಪಟ್ಟಣ ಬ್ಯಾಂಕ್‌ಗಳನ್ನು ತೆರೆಯಲು ಅನುಮತಿ ನೀಡದೆ ಮುಚ್ಚಿಸಲು ಮುಂದಾಗಿದ್ದವು. ಈಗ ರಿಸರ್ವ್ ಬ್ಯಾಂಕ್‌ಗೆ ಜ್ಞಾನೋದಯವಾಗಿ ಶಾಖೆಗಳನ್ನು ತೆರೆಯಲು ಅನುಮತಿ ನೀಡಿರುವುದು ಆರೋಗ್ಯಕರ ಬೆಳವಣಿಗೆ ಎಂದು ತಿಳಿಸಿದರು.

ಪಟ್ಟಣ ಸಹಕಾರ ಬ್ಯಾಂಕ್‌ಗಳಲ್ಲಿಯೂ ಬೀದಿ ಬದಿಯ ವ್ಯಾಪಾರಿಗಳು, ಸಣ್ಣ ಉದ್ಯಮದಾರಿಗೆ ಸಾಲ ಸೌಲಭ್ಯ ನೀಡಿದ್ದರೆ, ಬೃಹದಾಕಾರವಾಗಿ ಬೆಳೆಯುತ್ತಿದ್ದವು ಎಂದರು.

ಕರ್ನಾಟಕ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಎಚ್.ಎಂ. ರೇವಣ್ಣ 'ಸುವರ್ಣ ಕಿರಣ' ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಶಾಸಕ ಎಲ್.ಎ. ರವಿಸುಬ್ರಹ್ಮಣ್ಯ, ಅಶೋಕನಗರ ಸಹಕಾರ ಬ್ಯಾಂಕ್ ಅಧ್ಯಕ್ಷ ಕೆ.ಎಂ. ನಾಗರಾಜ್, ಬ್ಯಾಂಕ್ ಉಪಾಧ್ಯಕ್ಷ ಪಿ.ಆರ್. ಚಂದ್ರಶೇಖರ್, ಕಾರ್ಯದರ್ಶಿ ಎಸ್.ಟಿ.ಮಂಗಳ ಉಪಸ್ಥಿತರಿದ್ದರು.





ಮೇಲ್ವಿಚಾರಣೆ: ವೃಕ್ಷ ತಪಾಸಕರ ನೇಮಕ

ನಿಖರ ಮಾಹಿತಿಗೆ ಆ್ಯಪ್, ಜಿಬಿಎ ಅರಣ್ಯ ವಿಭಾಗದಿಂದ ಕ್ರಮ

ಅಂಕಿ ಅಂಶಗಳು
- **20** ಲಕ್ಷ ಬೆಂಗಳೂರಿನಲ್ಲಿರುವ ಮರಗಳ ಅಂದಾಜು
- **10** ಮಂದಿ ವೃಕ್ಷ ತಪಾಸಕರ ನೇಮಕ
- **55** ಅರಣ್ಯ ಇಲಾಖೆ ಸಿಬ್ಬಂದಿ ಸಂಖ್ಯೆ
- **38** ಸಿಬ್ಬಂದಿ ಕೊರತೆ

• ಉಮೇಶ ಭಟ್ಟ ಪಿ.ಎಚ್



ಬೆಂಗಳೂರು: ನಗರದಲ್ಲಿ ಅಪಾಯಕಾರಿ ಸ್ಥಿತಿಯಲ್ಲಿರುವ ಮರಗಳನ್ನು ಗುರುತಿಸಿ ಅನಾಹುತಕ್ಕೂ ಮುನ್ನ ತೆರವುಗೊಳಿಸಲು ಮೊದಲ ಬಾರಿಗೆ ವೃಕ್ಷ ತಪಾಸಕರನ್ನು ನೇಮಕ ಮಾಡಲಾಗುತ್ತಿದೆ.

ಮಳೆ- ಗಾಳಿಯಿಂದಾಗಿ ನಗರದಲ್ಲಿ ಆಗಾಗ ಮರ- ಕೊಂಬೆಗಳು ಉರುಳುವ ಸನ್ನಿವೇಶವನ್ನು ಕಾಣುತ್ತೇವೆ. ಇಂತಹ ಮರಗಳನ್ನು ವೈಜ್ಞಾನಿಕ ನೆಲೆಯಲ್ಲಿ ಗುರುತಿಸಿ ಪರ್ಯಾಯ ಕ್ರಮಗಳನ್ನು ಕೈಗೊಳ್ಳಲು ವೃಕ್ಷ ತಪಾಸಕರು ನೆರವಾಗಲಿದ್ದಾರೆ.

‘ಜಿಬಿಎ ವ್ಯಾಪ್ತಿಯಲ್ಲಿ 55 ಮಂದಿ ಅರಣ್ಯ ಸಿಬ್ಬಂದಿ ಇರಬೇಕಿತ್ತು. ಸದ್ಯ ಇರುವುದು 18 ಮಂದಿ ಮಾತ್ರ. ಅವರಿಂದಲೇ ಇಡೀ ನಗರದಲ್ಲಿ ಮರಗಳ ಮಾಹಿತಿ ಸಂಗ್ರಹ, ನಿರ್ವಹಣೆ ಕಷ್ಟ ಎನ್ನುವ ಕಾರಣದಿಂದ ಮಾಸಿಕ ₹30 ಸಾವಿರ ವೇತನದೊಂದಿಗೆ, 2 ತಿಂಗಳ ಅವಧಿಗೆ 10 ವೃಕ್ಷ ತಪಾಸಕರ ನೇಮಕಕ್ಕೆ ಅನುಮತಿ ದೊರೆತಿದೆ. ಮುಂದೆ ಅಗತ್ಯ ನೋಡಿಕೊಂಡು ಅವಧಿ ವಿಸ್ತರಣೆ ಹಾಗೂ ಇನ್ನಷ್ಟು ವೃಕ್ಷ ತಪಾಸಕರನ್ನು ನೇಮಿಸಿಕೊಳ್ಳಲಾಗುತ್ತದೆ’ ಎಂದು ಅರಣ್ಯ ಅಧಿಕಾರಿಗಳು ಹೇಳಿದರು.

ಬೆಂಗಳೂರಿನಲ್ಲಿ ಶತಮಾನದಷ್ಟು ಹಳೆಯ ಮರಗಳು ಇವೆ. ಕೆಲವು ಮರಗಳು ಗಟ್ಟಿಯಾಗಿದ್ದರೂ ಪೊಟರೆಗಳು, ಬಿರುಕು ಇರುವ ಮಾಹಿತಿಯನ್ನು ವೃಕ್ಷ ತಪಾಸಕರು ಸಂಗ್ರಹಿಸಲಿದ್ದಾರೆ. ಮರಗಳ ಜಾತಿ, ಅಂದಾಜು ವಯಸ್ಸಿನ ವಿವರಗಳನ್ನು ಪಡೆಯಲಿದ್ದಾರೆ.

ಮರಗಳ ಮಾಹಿತಿಯನ್ನು ಸಂಗ್ರಹಿಸಲು ದೂರ ಸಂವೇದಿ ಅನ್ವಯಿಕ ಕೇಂದ್ರದ ಸಹಕಾರದೊಂದಿಗೆ ಪ್ರತ್ಯೇಕ ಆ್ಯಪ್ ಅನ್ನು ಅರಣ್ಯ ವಿಭಾಗವು ಅಣಿಗೊಳಿಸುತ್ತಿದೆ. ಒಂದೆರಡು ತಿಂಗಳಲ್ಲಿ ಇದು ಬಳಕೆಗೆ ಲಭ್ಯವಾಗಲಿದೆ. ತಮ್ಮ ನೆರೆಯ ಮರದ ಕುರಿತು ಮಾಹಿತಿಯನ್ನು ಇದರಲ್ಲಿ ನೀಡಲು ಜನರಿಗೆ ಅವಕಾಶ ಕಲ್ಪಿಸಲಾಗುತ್ತದೆ. ಅನಾಹುತಕಾರಿ ಮರದ ಮಾಹಿತಿ ಇದ್ದರೆ ವೃಕ್ಷ ತಪಾಸಕರು ಪರೀಕ್ಷೆ ನಡೆಸಿದ ಬಳಿಕ ಪರ್ಯಾಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ರಾಜ್ಯದ ನಗರ, ಪಟ್ಟಣಗಳಲ್ಲೂ ಸದ್ಯ ಅರಣ್ಯ ಇಲಾಖೆ ಇಲ್ಲವೇ ಸ್ಥಳೀಯ ಸಂಸ್ಥೆಗಳಿಗೆ ಬರುವ ದೂರು ಆಧರಿಸಿ ಅಪಾಯಕಾರಿ ಮರಗಳನ್ನು ನಿಗದಿತ ಕಾಲಮಿತಿ ಒಳಗೆ ತೆರವುಗೊಳಿಸಲಾಗುತ್ತಿದೆ. ರಾಜಧಾನಿಯಲ್ಲಿ ಮರಗಳ ಕುರಿತು ಶೈಕ್ಷಣಿಕ ಹಾಗೂ ನಿಖರ ಜ್ಞಾನ ಇರುವ ವೃಕ್ಷ ತಪಾಸಕರನ್ನು ನೇಮಿಸಿ ಮರಗಳ ರಕ್ಷಣೆಯಲ್ಲೂ ವೃತ್ತಿಪರತೆ ಕಂಡುಕೊಳ್ಳಲು ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ 1976ರ ಅಡಿಯಲ್ಲಿ ಈ ವ್ಯವಸ್ಥೆ ಮಾಡಲಾಗುತ್ತಿದೆ.

ಹೇಗಿರಲಿದೆ ಕಾರ್ಯ ?

ಬಿ.ಎಸ್ಸಿ ಅರಣ್ಯಶಾಸ್ತ್ರ ಇಲ್ಲವೇ ಸಸ್ಯಶಾಸ್ತ್ರದಲ್ಲಿ ಪದವಿ ಪಡೆದವರು, ಜೈವಿಕ ವಿಜ್ಞಾನದಲ್ಲಿ ಪದವಿ ಪಡೆದವರು ವೃಕ್ಷ ತಪಾಸಕರಾಗಿ ಅರಣ್ಯ ಇಲಾಖೆ ಸೇರಲಿದ್ದಾರೆ. ಮೊದಲ ಹಂತದಲ್ಲಿ ಬೆಂಗಳೂರಿನ ಪ್ರಮುಖ ರಸ್ತೆಗಳಿಗೆ ತೆರಳಿ ಮರಗಳ ಸಮೀಕ್ಷೆ ನಡೆಸಲಿದ್ದಾರೆ.

ಬೀಳುವ ಹಂತದಲ್ಲಿರುವ ಮರಗಳು, ಕೊಂಬೆಗಳ ಮಾಹಿತಿಯನ್ನು ಕಲೆಹಾಕಿ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ವರದಿ ನೀಡಲಿದ್ದಾರೆ. ಇದಾದ ಬಳಿಕ ಅಪಾಯಕಾರಿ ಸ್ಥಿತಿಯಲ್ಲಿರುವ ಮರಗಳು ಇಲ್ಲವೇ ರೆಂಬೆಗಳನ್ನು ಕಾಲಮಿತಿ ಒಳಗೆ ತೆಗೆಯಲಾಗುತ್ತದೆ.

> ವೃಕ್ಷ ತಪಾಸಕರನ್ನು ನೇಮಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ. ತಜ್ಞರ ಸಮಿತಿ ಅರ್ಹರನ್ನು ಆಯ್ಕೆ ಮಾಡಲಿದ್ದು, ತರಬೇತಿ ನಂತರ ನಿಯೋಜಿಸಲಾಗುತ್ತದೆ.
> **ಸುದರ್ಶನ್,** ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಂಗಳೂರು

ಚಿಟಿಕೆ ಸುದ್ದಿ

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವ ವಿದ್ಯಾಲಯದ ಜ್ಞಾನಭಾರತಿ ಆವರಣ ದಲ್ಲಿರುವ ಸ್ನಾತಕೋತ್ತರ ವಿಭಾಗ, ರಾಮನಗರ ಸ್ನಾತಕೋತ್ತರ ಕೇಂದ್ರ ಹಾಗೂ ಸಂಯೋಜಿತ ಕಾಲೇಜುಗಳಲ್ಲಿ 2025–26ನೇ ಶೈಕ್ಷಣಿಕ ಸಾಲಿಗೆ ಸ್ನಾತಕೋತ್ತರ ಪದವಿ ಕೋರ್ಸ್‌ಗಳ ಖಾಲಿ ಇರುವ ಸೀಟುಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಇದೇ 15ರವರೆಗೆ ದಂಡ ಶುಲ್ಕವಿಲ್ಲದೇ ಅರ್ಜಿ ಸಲ್ಲಿಸಬಹುದು. 16ರಂದು ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಮಾಹಿತಿಗೆ: https://bangaloreuniversity.karnataka.gov.in. ವೆಬ್‌ಸೈಟ್‌ಗೆ ಭೇಟಿ ನೀಡಬಹುದು ಎಂದು ಪ್ರಕಟಣೆ ತಿಳಿಸಿದೆ.

ಎಂ.ವಿ ಸೀ.ಪ್ರಶಸ್ತಿಗೆ ಕಪ್ಪಣ್ಣ ಆಯ್ಕೆ

ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2025ನೇ ಸಾಲಿನ ‘ಸಾವಿತ್ರಮ್ಮ- ಪ್ರೊ.ಎಂ.ವಿ. ಸೀ ಸಾಂಸ್ಕೃತಿಕ ಸಂಘಟಕ ಪ್ರಶಸ್ತಿ’ಗೆ ರಂಗಕರ್ಮಿ ಶ್ರೀನಿವಾಸ್ ಜಿ.ಕಪ್ಪಣ್ಣ ಆಯ್ಕೆಯಾಗಿದ್ದಾರೆ.


ಶ್ರೀನಿವಾಸ್ ಜಿ.ಕಪ್ಪಣ್ಣ

ಪ್ರಶಸ್ತಿಯು ₹30 ಸಾವಿರ ನಗದು, ಸ್ಮರಣಿಕೆ ಒಳಗೊಂಡಿದ್ದು, ಸೆ.16ರಂದು ಸಂಜೆ 5 ಗಂಟೆಗೆ ಎನ್.ಆರ್. ಕಾಲೊನಿ ಯಲ್ಲಿರುವ ಬಿ.ಎಂ.ಶ್ರೀ ಪ್ರತಿಷ್ಠಾನದ ಎಂ.ವಿ.ಸೀ ಸಭಾಂಗಣದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವ್ ಸಿಂಘ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಬಿ.ಎಂ. ಶ್ರೀ ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಉಚಿತ ಆಯುರ್ವೇದ ಶಿಬಿರ

ಬೆಂಗಳೂರು: ಯಲಹಂಕ ತಾಲ್ಲೂಕಿನ ಬಾಗಲೂರಿನ ಅಚ್ಯುತ ಆಯುರ್ವೇದ ವೈದ್ಯಕೀಯ ಕಾಲೇಜು, ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ವತಿಯಿಂದ ‘ಜನರಿಗಾಗಿ ಆಯುರ್ವೇದ ಮತ್ತು ಪೃಥ್ವಿಯ ಕಲ್ಯಾಣಕ್ಕಾಗಿ ಆಯುರ್ವೇದ’ ವಿಷಯದೊಂದಿಗೆ ಸೆ.16ರಂದು ಬೈಕ್ ರ‍್ಯಾಲಿ ಏರ್ಪಡಿಸಲಾಗಿದೆ.

ಬಾಗಲೂರು ಬಸ್ ನಿಲ್ದಾಣದಿಂದ ಮಧ್ಯಾಹ್ನ 2.30ಕ್ಕೆ ರ‍್ಯಾಲಿ ಆರಂಭವಾಗ ಲಿದ್ದು, ಸಾರ್ವಜನಿಕರು ಭಾಗವಹಿಸ ಬಹುದು. ಬೆಳಿಗ್ಗೆ 9.30ರಿಂದ ಸಂಜೆ 4.30ರವರೆಗೆ ಉಚಿತ ಆಯುರ್ವೇದ ಶಿಬಿರ ಆಯೋಜಿಸಲಾಗಿದೆ ಎಂದು ಕೇಂದ್ರದ ಪ್ರಕಟಣೆ ತಿಳಿಸಿದೆ.

ರಂಗೋಲಿ ಬಿಡಿಸಿ ಜಾಗೃತಿ

ಬೆಂಗಳೂರು: ಬೆಂಗಳೂರು ಕೇಂದ್ರ ನಗರ ಪಾಲಿಕೆ ವ್ಯಾಪ್ತಿಯ ಚಿಕ್ಕಪೇಟೆ ಉಪ ವಿಭಾಗದ ಸಿದ್ದಾಪುರ ವಾರ್ಡ್‌ನಲ್ಲಿ ಬ್ಲ್ಯಾಕ್‌ಸ್ಪಾಟ್ ಆಗಿರುವ ಟಿಪ್ಪು ಪಾಯಿಂಟ್‌ನಲ್ಲಿ ಭಾನುವಾರ ಸ್ವಚ್ಛಗೊಳಿಸಿ ರಂಗೋಲಿ ಬಿಡಿಸಲಾಯಿತು.

ಜನರು ಮತ್ತೆ ಕಸ ತಂದು ಹಾಕಬಾರದು ಎಂಬ ಕಾರಣಕ್ಕೆ ಚಿಕ್ಕಪೇಟೆ ವಿಭಾಗದ ಕಾರ್ಯಪಾಲಕ ಎಂಜಿನಿಯರ್ ನೇತೃತ್ವದಲ್ಲಿ ಪೌರಕಾರ್ಮಿಕರು ಈ ಕಾರ್ಯ ಮಾಡಿದರು. ಮತ್ತೆ ತ್ಯಾಜ್ಯ ಹಾಕದಂತೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಲಾಯಿತು. ಕಸ ತಂದು ಹಾಕಿದರೆ ದಂಡ ವಿಧಿಸುವ ಬಗ್ಗೆ ಎಚ್ಚರಿಕೆಯನ್ನೂ ನೀಡಲಾಯಿತು.

ಸಾಲಬಾಧೆ ಮತ್ತು ಕೌಟುಂಬಿಕ ಕಲಹದಿಂದ ಬೇಸತ್ತು ಎಸಗಿದ ಕೃತ್ಯ

ಮಕ್ಕಳನ್ನು ಕೊಂದು ತಂದೆ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಹೊಸಕೋಟೆ: ಸಾಲಬಾಧೆ ಮತ್ತು ಕೌಟುಂಬಿಕ ಕಲಹದಿಂದ ಬೇಸತ್ತು ಕುಟುಂಬವೊಂದು ಸಾಮೂಹಿಕ ಆತ್ಮಹತ್ಯೆ ಮಾಡಿಕೊಂಡಿದೆ. ತಂದೆ ಹಾಗೂ ಇಬ್ಬರು ಮಕ್ಕಳು ಮೃತಪಟ್ಟಿದ್ದು, ತಾಯಿ ಮಾತ್ರ ಬದುಕುಳಿದಿದ್ದಾಳೆ.

ತಾಲ್ಲೂಕಿನ ಗೊಣಕನಹಳ್ಳಿಯ ಶಿವು (32) ಹಾಗೂ ಮಂಜುಳಾ ಮಕ್ಕಳೊಂದಿಗೆ ಸಾಮೂಹಿಕ ಆತ್ಮಹತ್ಯೆಗೆ ನಿರ್ಧರಿಸಿದ್ದರು. ದಂಪತಿ ಶನಿವಾರ ರಾತ್ರಿ ಮನೆಯಲ್ಲಿ ತಮ್ಮ ಮಕ್ಕಳಾದ ಚಂದ್ರಕಲಾ(11) ಮತ್ತು ಉದಯ್ ಸೂರ್ಯ(7) ಅವರ ಕುತ್ತಿಗೆಗೆ ದುಪಟ್ಟಾದಿಂದ (ವೇಲ್) ಬಿಗಿದು, ನಂತರ ನೀರು ತುಂಬಿದ್ದ ಬಕೆಟ್‌ನಲ್ಲಿ ಮುಳುಗಿಸಿ ಕೊಲೆ ಮಾಡಿದ್ದಾರೆ.

ಮಕ್ಕಳನ್ನು ಕೊಂದ ನಂತರ ಶಿವು ದುಪಟ್ಟಾದಿಂದ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಪತ್ನಿ ಮಂಜುಳಾ ಮಾತ್ರ ಬದುಕಿ ಉಳಿದಿದ್ದಾರೆ. ಅವರನ್ನು ಹೊಸಕೋಟೆ ಪೊಲೀಸರು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಖಾಸಗಿ ಕಂಪನಿವೊಂದರಲ್ಲಿ ಕೆಲಸ ಮಾಡುತ್ತಿದ್ದ ಗೊಣಕನ ಹಳ್ಳಿಯ ಶಿವು ಮತ್ತು ಮಂಜುಳಾ ಪ್ರೀತಿಸಿ ಮದುವೆಯಾಗಿದ್ದರು. ಇಬ್ಬರ ಜಾತಿ ಬೇರೆಯಾದ ಕಾರಣ ಪೋಷಕರು ಮದುವೆಗೆ ವಿರೋಧಿಸಿದ್ದರು.

ರಸ್ತೆ ಅಪಘಾತದಲ್ಲಿ ಕಾಲು ಮುರಿದುಕೊಂಡು ಆಸ್ಪತ್ರೆಗೆ ಸೇರಿದ್ದ ಶಿವು ಆರ್ಥಿಕ ಸಂಕಷ್ಟಕ್ಕೆ ಸಿಲುಕಿ ವಿಪರೀತ ಸಾಲ ಮಾಡಿಕೊಂಡಿದ್ದ. ಕುಡಿತದ ಚಟಕ್ಕೆ ಬಲಿಯಾಗಿದ್ದ. ಇದರಿಂದ ದಂಪತಿ ಆಗಾಗ ಜಗಳವಾಡುತ್ತಿದ್ದರು. ಸಾಯುವ ಮುನ್ನ ತನ್ನ ತಂದೆ, ತಾಯಿಗೆ ಕರೆ ಮಾಡಿ ಬರುವುದಾಗಿ ಮಂಜುಳಾ ಹೊರಗೆ ಹೋಗಿದ್ದರು. ಅಷ್ಟರಲ್ಲಿ ಸ್ಥಳೀಯರು ಪೊಲೀಸರಿಗೆ ವಿಷಯ ಮುಟ್ಟಿಸಿದ್ದರು. ಸ್ಥಳಕ್ಕೆ ಬಂದ ಪೊಲೀಸರು ಮಂಜುಳಾ ಅವರನ್ನು ಬಂಧಿಸಿದರು ಎಂದು ಡಿವೈಎಸ್‌ಪಿ ಮಲ್ಲೇಶ್ ತಿಳಿಸಿದ್ದಾರೆ.

ಮಂಜುಳಾ ಆತ್ಮಹತ್ಯೆಗೆ ಯತ್ನಿಸಿದ್ದರು. ಬಟ್ಟೆ ತುಂಡಾಗಿ ಹರಿದು ಬಿದ್ದ ಕಾರಣ ಬದುಕಿ ಉಳಿದಿದ್ದರು ಎಂದೂ ಹೇಳಲಾಗುತ್ತಿದೆ. ಪೊಲೀಸರು ಮಹಿಳೆಯನ್ನು ಪ್ರಶ್ನಿಸುತ್ತಿದ್ದಾರೆ.

‘ಪತಿ ಕೆಲಸಕ್ಕೆ ಹೋಗದೆ ಮನೆಯಲ್ಲೇ ಇದ್ದ. ಅವರಿವರ ಮನೆ ಕೆಲಸ ಮಾಡಿ ನಾನೇ ಸಂಸಾರ ದೂಗಿಸುತ್ತಿದ್ದೆ. ಆದರೆ, ಈಚೆಗೆ ಶೀಲದ ಬಗ್ಗೆ ಪತಿ ಅನುಮಾನಪಡಲು ಶುರು ಮಾಡಿದ್ದ. ಸಾಲ ಹೆಚ್ಚಾಗಿ ಹಣವಿಲ್ಲದ ಕಾರಣ ಎರಡು ಮೂರು ತಿಂಗಳುಗಳ ಹಿಂದೆಯೇ ಸಾಯಲು ನಿರ್ಧಾರ ಮಾಡಿದ್ದ. ಆದರೆ, ತಾನು ಸತ್ತರೆ ಮಕ್ಕಳು ತಬ್ಬಲಿ ಆಗುತ್ತಾರೆ ಎಂದು ಸಾಮೂಹಿಕವಾಗಿ ಸಾಯುವ ನಿರ್ಧಾರ ಮಾಡಿದ್ದೆವು’ ಎಂದು ಮಂಜುಳಾ ಪೊಲೀಸರ ಮುಂದೆ ಹೇಳಿಕೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಅಪರಾಧ ಸುದ್ದಿ

ವಾರ್ಡನ್, ಆರು ವಿದ್ಯಾರ್ಥಿಗಳ ಬಂಧನ

ಶಾಲಾ ಬಾಲಕನಿಗೆ ಲೈಂಗಿಕ ಕಿರುಕುಳ ಹಾಗೂ ರ‍್ಯಾಗಿಂಗ್ ಮಾಡಿದ ಆರೋಪದ ಮೇಲೆ ಎಲೆಕ್ಟ್ರಾನಿಕ್ಸ್ ಸಿಟಿ ಸಮೀಪದ ಇಂಟರ್‌ನ್ಯಾಷನಲ್ ಸ್ಕೂಲ್‌ನ ಹಾಸ್ಟೆಲ್ ವಾರ್ಡನ್ ಹಾಗೂ ಆರು ವಿದ್ಯಾರ್ಥಿಗಳನ್ನು ಬಂಧಿಸಲಾಗಿದೆ.

ಪ್ರಕರಣ ಸಂಬಂಧ ವಿಚಾರಣೆಗೆ ಹಾಜರಾಗುವಂತೆ ಸಂಸ್ಥೆಯ ಪ್ರಾಂಶುಪಾಲರಿಗೆ ಸೂಚಿಸಲಾಗಿದೆ.

ಮಗನ ಮೇಲೆ ದೈಹಿಕ ಮತ್ತು ಮಾನಸಿಕ ದೌರ್ಜನ್ಯ ನಡೆದ ಬಗ್ಗೆ ಸಂತ್ರಸ್ತನ ಪೋಷಕರು ನೀಡಿದ ದೂರಿನ ಮೇರೆಗೆ ಬನ್ನೇರುಘಟ್ಟ ಠಾಣೆ ಪೊಲೀಸರು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಶಾಲೆಯ ಆರು ಹಿರಿಯ ವಿದ್ಯಾರ್ಥಿಗಳು 15 ವರ್ಷದ ಬಾಲಕನನ್ನು ಗುರಿಯಾಗಿಸಿಕೊಂಡು ಸೆಪ್ಟೆಂಬರ್‌ನಲ್ಲಿ ನಾಲ್ಕು ದಿನ ಕಿರುಕುಳ ನೀಡಿದ್ದಾರೆ. ವಿವಸ್ತ್ರಗೊಳಿಸಿ ನೃತ್ಯ ಮಾಡುವಂತೆ ಒತ್ತಾಯಿಸಿದ್ದಾರೆ. ಅಲ್ಲದೆ ಹಲ್ಲೆ ನಡೆಸಿದ್ದಾರೆ. ಇದರಿಂದ ಬಾಲಕ ಮಾನಸಿಕ ಆಘಾತಕ್ಕೆ ಒಳಗಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ತವ್ಯಕ್ಕೆ ಅಡ್ಡಿ: ಐವರ ವಿರುದ್ಧ ಎಫ್‌ಐಆರ್

ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಡಿ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ, ಮಾಜಿ ಶಾಸಕ ಪಿ.ರಾಜೀವ್ ಸೇರಿ ಐವರ ವಿರುದ್ಧ ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪೊಲೀಸ್ ಸಬ್‌ಇನ್‌ಸ್ಪೆಕ್ಟರ್ ಜಿ.ಮಾರುತಿ ದೂರಿನ ಮೇರೆಗೆ ಪಿ.ರಾಜೀವ್, ಎಸ್.ಹರೀಶ್, ಸಿ.ಎಂ.ಶಿವಕುಮಾರ್, ರವಿ ಪವಾರ್, ವಿಶ್ವನಾಥ್ ಹಾಗೂ ಇತರರ ವಿರುದ್ಧ ಪ್ರಕರಣ ದಾಖಲಾಗಿದೆ.

ಸೆಪ್ಟೆಂಬರ್ 10ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಒಳ ಮೀಸಲಾತಿಗೆ ಆಗ್ರಹಿಸಿ ಬೃಹತ್ ಪ್ರತಿಭಟನೆ ನಡೆದಿತ್ತು. ಪ್ರತಿಭಟನಕಾರರು ವಿಧಾನಸೌಧಕ್ಕೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಸಾರ್ವಜನಿಕರ ವಾಹನ ಸಂಚಾರಕ್ಕೂ ಅಡ್ಡಿಯುಂಟಾಗಿತ್ತು. ಈ ವೇಳೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಲಾಗಿದೆ ಎಂದು ಆರೋಪಿಸಲಾಗಿದೆ.

ಚಾಲಕನ ಮೇಲೆ ಹಲ್ಲೆ

ಡ್ರಾಪ್ ಕೇಳುವ ನೆಪದಲ್ಲಿ ಆಟೊ ಚಾಲಕನನ್ನು ತಡೆದು ದರೋಡೆಗೆ ಯತ್ನಿಸಿದ ಘಟನೆ ತಡರಾತ್ರಿ ಕೋಣನಕುಂಟೆ ವ್ಯಾಪ್ತಿಯಲ್ಲಿ ವರದಿಯಾಗಿದೆ.

ಶನಿವಾರ ರಾತ್ರಿ 12:30ರ ಸುಮಾರಿಗೆ ಡ್ರಾಪ್ ಕೇಳುವ ನೆಪದಲ್ಲಿ 3–4 ಕಿಡಿಗೇಡಿಗಳು ಗಂಗಾಧರ್ ಅವರ ಆಟೊ ತಡೆದಿದ್ದಾರೆ. ಬಳಿಕ ದರೋಡೆಗೆ ಯತ್ನಿಸಿ ಮಚ್ಚು ಬೀಸಿದ್ದಾರೆ. ಎಚ್ಚೆತ್ತ ಗಂಗಾಧರ್ ಸ್ಥಳದಿಂದ ಪರಾರಿಯಾಗಿದ್ದಾರೆ. ಆದರೂ ಅವರ ತಲೆಗೆ ಗಾಯಗಳಾಗಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

3ನೇ ನೋಟಿಸ್ ನೀಡಲು ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳಲ್ಲಿ ಕಿಡಿಗೇಡಿಗಳು ಅಶ್ಲೀಲ ಹಾಗೂ ಅವಾಚ್ಯ ಪದ ಗಳಿಂದ ನಿಂದಿಸಿದ ಪ್ರಕರಣ ಸಂಬಂಧ ತನಿಖೆ ನಡೆಸು ತ್ತಿರುವ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು, ನಟ ದರ್ಶನ್ ಅವರ ಪತ್ನಿ ವಿಜಯಲಕ್ಷ್ಮಿ ಅವರಿಗೆ ಮೂರನೇ ಬಾರಿಗೆ ನೋಟಿಸ್ ಜಾರಿ ಮಾಡಿ, ವಿವರಣೆ ಪಡೆಯಲು ನಿರ್ಧರಿಸಿದ್ದಾರೆ.


ವಿಜಯಲಕ್ಷ್ಮಿ

ಜಾಲತಾಣಗಳಲ್ಲಿ ವಿಜಯಲಕ್ಷ್ಮಿ ಬಗ್ಗೆ ಅಶ್ಲೀಲವಾಗಿ ಪೋಸ್ಟ್‌ಗಳನ್ನು ಹಾಕಿದ್ದರು. ಈ ಸಂಬಂಧ ಸಾಮಾಜಿಕ ಹೋರಾಟಗಾರ ಬಿ.ಆರ್. ಭಾಸ್ಕರ್ ಪ್ರಸಾದ್ ಎಂಬುವರು ಕಿಡಿಗೇಡಿಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವಂತೆ ಪೊಲೀಸರನ್ನು ಕೋರಿದ್ದರು. ರಾಜ್ಯ ಮಹಿಳಾ ಆಯೋಗಕ್ಕೂ ದೂರು ಕೊಟ್ಟಿದ್ದರು.

ಮಹಿಳಾ ಆಯೋಗದ ಸೂಚನೆ ಮೇರೆಗೆ ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡ ಚನ್ನಮ್ಮನಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು, ಭಾಸ್ಕರ್ ಪ್ರಸಾದ್ ಅವರಿಗೆ ನೋಟಿಸ್ ಜಾರಿ ಗೊಳಿಸಿ, ಪ್ರಕರಣಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಸಾಕ್ಷ್ಯಾಧಾರ ಒದಗಿಸುವಂತೆ ಸೂಚಿಸಿದ್ದರು.

ಪ್ರಕರಣ ಸಂಬಂಧ ವಿಜಯಲಕ್ಷ್ಮಿ ಅವರ ವಿವರಣೆ ಪಡೆಯಲು, ಹೇಳಿಕೆ ದಾಖಲಿಸಲು ಎರಡು ಬಾರಿ ನೋಟಿಸ್ ಕಳುಹಿಸಲಾಗಿತ್ತು. ಆದರೆ, ಈವರೆಗೂ ನೋಟಿಸ್‌ಗೆ ವಿಜಯಲಕ್ಷ್ಮಿ ಅವರಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಹೀಗಾಗಿ, ಮೂರನೇ ಬಾರಿಗೆ ನೋಟಿಸ್ ಕಳುಹಿ ಸಲು ಸಿದ್ಧತೆ ನಡೆಸಿದ್ದಾರೆ. ಮೂರನೇ ನೋಟಿಸ್‌ಗೂ ಅವರು ಯಾವುದೇ ಪ್ರತಿಕ್ರಿಯೆ ನೀಡದಿದ್ದರೆ ಪ್ರಕರಣವನ್ನು ಮುಕ್ತಾಯಗೊಳಿಸಿ, ನ್ಯಾಯಾಲಯಕ್ಕೆ ಸಿ ರಿಪೋರ್ಟ್ ಸಲ್ಲಿಸಲಿದ್ದಾರೆ.

ವಿಜಯಲಕ್ಷ್ಮಿ ಅವರಿಗೆ 6 ‘ಎಕ್ಸ್’ ಖಾತೆ ಗಳಿಂದ ಅಸಭ್ಯ ಪೋಸ್ಟ್‌ಗಳನ್ನು ಹಾಕಲಾಗಿತ್ತು. ಆ ಖಾತೆಗಳು ಎರಡು ವರ್ಷಗಳ ಹಿಂದೆಯೇ ಡಿಲಿಟ್ ಆಗಿವೆ. ಈ ಎಲ್ಲಾ ಮಾಹಿತಿ ಸಂಗ್ರಹಿಸಿ, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಸುದ್ದಿ 2 ನಿಮಿಷ

ಕೆ.ಆರ್. ಮಾರುಕಟ್ಟೆ ಸ್ವಚ್ಛತೆಗೆ ನೀಲನಕ್ಷೆ ಸಿದ್ಧಪಡಿಸಲು ಸೂಚನೆ

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆಯ ಸುತ್ತಮುತ್ತಲಿನ ಪ್ರದೇಶದ ಸ್ವಚ್ಛತೆ ಕಾಪಾಡಲು ನೀಲನಕ್ಷೆ ಸಿದ್ಧಪಡಿಸಬೇಕು ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ರಾಜೇಂದ್ರ ಚೋಳನ್ ಅವರು ಅಧಿಕಾರಿ ಗಳಿಗೆ ಸೂಚನೆ ನೀಡಿದರು.

ಕೆ.ಆರ್. ಮಾರುಕಟ್ಟೆಗೆ ಭಾನುವಾರ ಭೇಟಿ ನೀಡಿ ಪರಿಶೀಲಿಸಿದ ಚೋಳನ್, ‘ಇಲ್ಲಿ ಹೆಚ್ಚು ಹಸಿ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಅದನ್ನು ವೈಜ್ಞಾನಿಕವಾಗಿ ವಿಲೇವಾರಿಗೆ ಸಮಗ್ರ ಯೋಜನೆ ರೂಪಿಸಿ ನೀಲನಕ್ಷೆ ಸಿದ್ಧಪಡಿಸಿ ಅನುಷ್ಠಾನಗೊಳಿಸಲು ಕ್ರಮವಹಿಸಬೇಕು’ ಎಂದರು.

ನಿತ್ಯ ಸುಮಾರು 70 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದೆ. ಮೂರು ಪಾಳಿಗಳಲ್ಲಿ ತ್ಯಾಜ್ಯ ವಿಲೇವಾರಿ ಮಾಡಲಾಗುತ್ತಿದೆ. ಎಲ್ಲಿಯೂ ತ್ಯಾಜ್ಯ ಬಿಸಾಡದಂತೆ ನೋಡಿಕೊಳ್ಳಬೇಕು. ತ್ಯಾಜ್ಯ ಸಂಗ್ರಹಿಸುವ ಸ್ಥಳವೂ ಸ್ವಚ್ಛ ವಾಗಿರಬೇಕು. ಪಾದಚಾರಿ ಮಾರ್ಗಗಳನ್ನು ಅತಿಕ್ರಮಣ ಮಾಡಿಕೊಂಡು ವ್ಯಾಪಾರ ಮಾಡುತ್ತಿರುವವ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದರು.

ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚಿಸಲು ಕೇಂದ್ರ ನಗರ ಪಾಲಿಕೆಯ ಎಂಜಿನಿಯರ್‌ಗಳು, ಕಂದಾಯ ಅಧಿಕಾರಿಗಳು, ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ ಅಧಿಕಾರಿಗಳ ಜೊತೆ ಕೂಡಲೇ ಸಭೆ ಏರ್ಪಡಿಸಲು ಮುಖ್ಯ ಎಂಜಿನಿಯರ್‌ಗೆ ಸೂಚನೆ ನೀಡಿದರು. ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು.

ಆಯುಕ್ತರ ಅನಿರೀಕ್ಷಿತ ಭೇಟಿ ಪೌರಕಾರ್ಮಿಕರ ಗೈರು ಪತ್ತೆ



ಬೆಂಗಳೂರು: ಬೆಂಗಳೂರು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ಭಾನುವಾರ ಬೆಳಿಗ್ಗೆ ಅನಿರೀಕ್ಷಿತವಾಗಿ ಸರ್ವಜ್ಞ ನಗರ ಕ್ಷೇತ್ರದ ಬಾಣಸವಾಡಿಯ ಬಿಎಸ್‌ಎನ್‌ಎಲ್ ಮಸ್ಟರಿಂಗ್ ಪಾಯಿಂಟ್‌ಗೆ ಭೇಟಿ ನೀಡಿದರು. ಸ್ವಚ್ಛತಾ ಕಾರ್ಯದಲ್ಲಿ ಇರಬೇಕಿದ್ದ ಪೌರಕಾರ್ಮಿಕರಲ್ಲಿ ಕೆಲವರು ಗೈರಾಗಿರುವುದು, ಮೇಲ್ವಿಚಾರಕರಾಗಿ ಬೇರೆಯವರು ಇರುವುದನ್ನು ಪತ್ತೆಹಚ್ಚಿದರು.

ಪಾಳಿ ಪ್ರಕಾರ ಸ್ಥಳದಲ್ಲಿ ಮೇಲ್ವಿಚಾರಕರಾಗಿ ಬಾಲಾಜಿ ಇರ ಬೇಕಿತ್ತು. ಆದರೆ, ಅವರ ಬದಲು ಕೆ. ಸುರೇಶ್ ಕುಮಾರ್ ಇರುವುದನ್ನು ಗಮನಿಸಿದ ಆಯುಕ್ತರು ಪೌರಕಾರ್ಮಿಕರ ಹಾಜರಾತಿಯನ್ನು ತೆಗೆದು ಕೊಳ್ಳುವಂತೆ ಸೂಚಿಸಿದರು. 48 ಪೌರಕಾರ್ಮಿಕರಲ್ಲಿ 15 ಜನರು ಬಂದಿಲ್ಲ ಎಂದು ಮೇಲ್ವಿಚಾರಕ ತಿಳಿಸಿದರು. ಆದರೆ, ಹಾಜರಿ ದ್ದವರ ಲ್ಲಿ 6 ಜನರ ಹೆಸರನ್ನೂ ಗೈರು ಎಂದು ಹೇಳಿದ್ದರು. ಬಾಲಾಜಿ ಮತ್ತು ಕೆ.ಸುರೇಶ್ ಕುಮಾರ್ ಮೇಲೆ ತಕ್ಷಣ ಕ್ರಮ ಕೈಗೊಳ್ಳಲು ಆಯುಕ್ತರು ಸೂಚನೆ ನೀಡಿದರು. ತಪಾಸಣೆ ವೇಳೆ ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್, ಘನತ್ಯಾಜ್ಯ ನಿರ್ವಹಣೆಯ ಎಂಜಿನಿಯರ್, ಅಧಿಕಾರಿಗಳು ಉಪಸ್ಥಿತರಿದ್ದರು.

ಬಿಹಾರದ ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅವಾಚ್ಯ ಪದಗಳಿಂದ ನಿಂದಿಸಿದ್ದನ್ನು ಪ್ರಶ್ನಿಸಿದ ಕಾರ್ಮಿಕನ ಮೇಲೆ ಹಲ್ಲೆ ನಡೆಸಿದ ಪರಿಣಾಮ ಆತ ಸಾವಿಗೀಡಾಗಿರುವ ಘಟನೆ ಪುಟ್ಟೇನಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಬಿಹಾರದ ಬೇಗುಸರಾಯ್ ಕಾರ್ಮಿಕ ಭೀಮ್ ಕುಮಾರ್ (25) ಮೃತರು. ಮೃತನ ಸ್ನೇಹಿತರ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿ, ಆರೋಪಿ ಸಲ್ಮಾನ್‌ಗಾಗಿ ಹುಡುಕಾಟ ನಡೆಸುತ್ತಿದ್ದಾರೆ.

‘ಅರೆಕೆರೆ ಬಳಿ ಕಟ್ಟಡ ನಿರ್ಮಾಣ ಕಾಮಗಾರಿಗಾಗಿ ಬಂದಿದ್ದ ಭೀಮ್ ಸ್ನೇಹಿತರೊಂದಿಗೆ ಮೈಕೋ ಲೇಔಟ್ ವ್ಯಾಪ್ತಿಯಲ್ಲಿ ವಾಸವಿದ್ದ. ಸೆ.7ರಂದು ಭೀಮ್ ಮತ್ತು ಸ್ನೇಹಿತರು ಅರೆಕೆರೆ ಬಳಿ ಪಾನಿಪುರಿ ತಿನ್ನುತ್ತಾ ನಿಂತಿದ್ದ ವೇಳೆ ಅಲ್ಲಿಯೇ ಇದ್ದ ಸಲ್ಮಾನ್ ಎಂಬಾತ ಅವಾಚ್ಯ ಪದಗಳಿಂದ ನಿಂದಿಸಿದ್ದಾನೆ. ಇದನ್ನು ಪ್ರಶ್ನಿಸಿದ್ದಕ್ಕೆ ಇಬ್ಬರ ನಡುವೆ ಸಣ್ಣ ಗಲಾಟೆಯಾಗಿತ್ತು. ಇದಾದ ನಂತರ ಸ್ನೇಹಿತ ಧೀರಜ್‌ನೊಂದಿಗೆ ಭೀಮ್ ಮನೆಯತ್ತ ಹೊರಟಿದ್ದ ವೇಳೆ ಹಿಂಬಾಲಿಸಿಕೊಂಡು ಬಂದ ಆರೋಪಿ, ಇಬ್ಬರ ಮುಖಕ್ಕೂ ಕೈನಿಂದ ಪಂಚ್ ಮಾಡಿ ಪರಾರಿಯಾಗಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಈ ವೇಳೆ ಪ್ರಜ್ಞೆ ತಪ್ಪಿ ಬಿದ್ದಿದ್ದ ಭೀಮ್‌ನನ್ನು ಸ್ನೇಹಿತ ಧೀರಜ್ ಮನೆಗೆ ಕರೆತಂದು ಮಲಗಿಸಿದ್ದ. ಮೂರು ದಿನಗಳ ಕಾಲ ಅರೆಪ್ರಜ್ಞಾವಸ್ಥೆಯಲ್ಲಿದ್ದ. ಸೆಪ್ಟೆಂಬರ್ 10ರಂದು ಸ್ನೇಹಿತರು ಎಬ್ಬಿಸಲು ಯತ್ನಿಸಿದಾಗ ಮೃತಪಟ್ಟಿರುವುದು ಗೊತ್ತಾಗಿದೆ. ನಂತರ ಮೈಕೋ ಲೇಔಟ್ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಕೃತ್ಯ ನಡೆದ ಸ್ಥಳದ ಆಧಾರದಲ್ಲಿ ಪುಟ್ಟೇನಹಳ್ಳಿ ಠಾಣೆಗೆ ಪ್ರಕರಣ ವರ್ಗಾವಣೆಯಾಗಿದ್ದು, ತಲೆಮರೆಸಿ ಕೊಂಡಿದ್ದ ಆರೋಪಿಯನ್ನು ಬಂಧಿಸ ಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರತ್ಯೇಕ ಅಪಘಾತ: ಟೆಕಿ ಸೇರಿ ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಜ್ಞಾನಭಾರತಿ ಹಾಗೂ ಚಿಕ್ಕಬಾಣಾವಾರ ಠಾಣಾ ವ್ಯಾಪ್ತಿಯಲ್ಲಿ ಘಟನೆ
- ಮರಕ್ಕೆ ಡಿಕ್ಕಿ ಹೊಡೆದ ರಭಸಕ್ಕೆ ಸವಾರನ ಹೆಲ್ಮೆಟ್ ಪುಡಿಪುಡಿ

ಬೆಂಗಳೂರು: ಜ್ಞಾನಭಾರತಿ ಹಾಗೂ ಚಿಕ್ಕಬಾಣಾವಾರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಸೇರಿ ಇಬ್ಬರು ಮೃತಪಟ್ಟಿದ್ದಾರೆ.

ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ಮರಕ್ಕೆ ದ್ವಿಚಕ್ರವಾಹನ ಡಿಕ್ಕಿ ಹೊಡೆದ ಪರಿಣಾಮ ಪಾಪರೆಡ್ಡಿ ಪಾಳ್ಯದ ನಿವಾಸಿ ಸ್ವರೂಪ್ (26) ಮೃತಪಟ್ಟಿದ್ದಾರೆ.

ಖಾಸಗಿ ಕಂಪನಿಯ ಸಾಫ್ಟ್‌ವೇರ್ ಎಂಜಿನಿಯರ್ ಸ್ವರೂಪ್ ಶನಿವಾರ ರಾತ್ರಿ 11.45ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಮನೆಗೆ ಬೈಕ್‌ನಲ್ಲಿ ತೆರಳುತ್ತಿದ್ದರು. ಜ್ಞಾನಭಾರತಿ ಆವರಣದ ಜಂಕ್ಷನ್‌ನಲ್ಲಿರುವ ಹಂಪ್ಸ್ ಬಳಿ ಬೈಕ್ ನಿಯಂತ್ರಣ ತಪ್ಪಿ ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು, ತೀವ್ರವಾಗಿ ಗಾಯಗೊಂಡರು. ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಅವರು ಕೊನೆಯುಸಿರೆಳೆದರು.

ಅಪಘಾತದ ಸಂದರ್ಭದಲ್ಲಿ ಸ್ವರೂಪ್, ಹೆಲ್ಮೆಟ್ ಧರಿಸಿದ್ದರು. ಆದರೆ, ಮರಕ್ಕೆ ಬೈಕ್ ಡಿಕ್ಕಿ ಹೊಡೆದ ರಭಸಕ್ಕೆ ಹೆಲ್ಮೆಟ್ ನಜ್ಜುಗುಜ್ಜಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ಜ್ಞಾನಭಾರತಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮರಣೋತ್ತರ ಪರೀಕ್ಷೆಯ ನಂತರ ಮೃತದೇಹವನ್ನು ಕುಟುಂಬದವರಿಗೆ ಹಸ್ತಾಂತರಿಸಲಾಗಿದೆ. ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ಮೆಕ್ಯಾನಿಕ್ ಸಾವು: ಸಿಲುವೆಪುರ ರಸ್ತೆಯಲ್ಲಿ ಹಾಲೋಬ್ರಿಕ್ಸ್‌ಗೆ ಬೈಕ್ ಡಿಕ್ಕಿ ಹೊಡೆದು ಸಂಭವಿಸಿದ ಅಪಘಾತದಲ್ಲಿ ನಿಬಿನ್ ಜಾಕೋಬ್ (29) ಮೃತಪಟ್ಟಿದ್ದಾರೆ.

ಜಾಲಹಳ್ಳಿಯ ಶಾರದಾಂಬಾ ನಗರ ನಿವಾಸಿ ನಿಬಿನ್ ಜಾಕೋಬ್, ಕಾರು ಮೆಕ್ಯಾನಿಕ್ ಆಗಿದ್ದರು. ಸ್ನೇಹಿತ ಸುಶೀಲ್‌ಕುಮಾರ್‌ನನ್ನು ಬಾಗಲಗುಂಟೆಯ ಎಂಇಐ ಬಡಾವಣೆಯಲ್ಲಿನ ಮನೆಗೆ ಬಿಡಲು ಬೈಕ್‌ನಲ್ಲಿ ಹೋಗುತ್ತಿದ್ದಾಗ ಈ ದುರ್ಘಟನೆ ನಡೆದಿದೆ.

ಅಜಾಗರೂಕತೆಯಿಂದ ಅತಿ ವೇಗವಾಗಿ ಬೈಕ್ ಚಾಲನೆ ಮಾಡುತ್ತಿದ್ದ ನಿಬಿನ್ ಜಾಕೋಬ್, ರಸ್ತೆ ಬದಿಯ ನಿರ್ಮಾಣ ಹಂತದ ಕಟ್ಟಡದ ಮುಂಭಾಗದಲ್ಲಿ ಹಾಕಿದ್ದ ಹಾಲೋಬ್ರಿಕ್ಸ್‌ಗೆ ಡಿಕ್ಕಿ ಹೊಡೆದರು. ನಂತರ ನಿಬಿನ್ ಮತ್ತು ಹಿಂಬದಿ ಸವಾರ ಸುಶೀಲ್‌ಕುಮಾರ್, ಬೈಕ್‌ನಿಂದ ಕೆಳಗೆ ಬಿದ್ದು ಗಾಯಗೊಂಡಿದ್ದರು. ಸ್ಥಳೀಯರು ಅವರಿಬ್ಬರನ್ನೂ ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ, ನಿಬಿನ್ ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ. ಚಿಕ್ಕಬಾಣಾವರ ಸಂಚಾರ ಠಾಣೆಯಲ್ಲಿ ದೂರು ದಾಖಲಾಗಿದೆ.

ಇನ್‌ಸ್ಪೆಕ್ಟರ್ ವಿರುದ್ಧದ ಭ್ರಷ್ಟಾಚಾರ, ಅವ್ಯವಹಾರ ಆರೋಪ ಸುಳ್ಳು

ಆಂತರಿಕ ತನಿಖೆಯಲ್ಲಿ ಸಾಬೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತಹಳ್ಳಿ ಠಾಣಾ ವ್ಯಾಪ್ತಿಯಲ್ಲಿ ಅಕ್ರಮ ಚಟುವಟಿಕೆಗಳಿಗೆ ಅವಕಾಶ ನೀಡಲಾಗಿದೆ ಎಂಬ ಆರೋಪದಲ್ಲಿ ಸತ್ಯಾಂಶವಿಲ್ಲ ಎಂಬ ವಿಚಾರ ಇಲಾಖೆಯ ಆಂತರಿಕ ತನಿಖೆಯಲ್ಲಿ ದೃಢಪಟ್ಟಿದೆ.

ಅಮೃತಹಳ್ಳಿ ಠಾಣೆ ಇನ್‌ಸ್ಪೆಕ್ಟರ್ ವಿರುದ್ಧ ಭ್ರಷ್ಟಾಚಾರ ಹಾಗೂ ಅವ್ಯವಹಾರ ಆರೋಪ ಸಂಬಂಧ ಅಮೃತಹಳ್ಳಿ ಪ್ರದೇಶದ ಸಮಾಜ ಚಿಂತಕರು ಹೆಸರಿನಲ್ಲಿ ಮುಖ್ಯಮಂತ್ರಿಗೆ ದೂರು ಸಲ್ಲಿಕೆಯಾಗಿತ್ತು.

ಈ ದೂರಿನ ಅನ್ವಯ ಯಲಹಂಕ ಉಪವಿಭಾಗದ ಎಸಿಪಿ ನಡೆಸಿದ ಆಂತರಿಕ ತನಿಖೆಯಲ್ಲಿ, ಇನ್‌ಸ್ಪೆಕ್ಟರ್ ಅಂಬರೀಶ್ ವಿರುದ್ಧ ನೀಡಿದ ದೂರಿನಲ್ಲಿ ಸತ್ಯಾಂಶವಿಲ್ಲ. ದುರುದ್ದೇಶಪೂರಕವಾಗಿ ಅನಾಮಧೇಯರ ಹೆಸರಿನಲ್ಲಿ ದೂರು ನೀಡಿರುವುದು ಕಂಡು ಬಂದಿದೆ ಎಂದು ಇಲಾಖೆಯ ಉನ್ನತ ಮೂಲಗಳು ತಿಳಿಸಿವೆ.

ತನಿಖೆ ಪೂರ್ಣಗೊಳಿಸಿರುವ ಎಸಿಪಿ ಅವರು, ಈಶಾನ್ಯ ವಿಭಾಗದ ಡಿಸಿಪಿಗೆ ವರದಿ ಸಲ್ಲಿಸಿದ್ದಾರೆ.

‘ಇನ್‌ಸ್ಪೆಕ್ಟರ್ ವಿರುದ್ಧ ದೂರು ನೀಡಿದವರು ಪೂರಕ ದಾಖಲೆಗಳನ್ನು ಸಲ್ಲಿಸಿಲ್ಲ. ಜತೆಗೆ, ಅವರ ಹೆಸರು ಹಾಗೂ ವಿಳಾಸ ನೀಡಿಲ್ಲ. ಹೀಗಾಗಿ, ಸರ್ಕಾರದ ಸುತ್ತೋಲೆಯಂತೆ ದೂರು ಅರ್ಜಿ ಮುಕ್ತಾಯಗೊಳಿಸುವಂತೆ’ ಡಿಸಿಪಿಗೆ ಎಸಿಪಿ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಡ್ರಗ್ಸ್ ದಂಧೆಕೋರರ ಪಿತೂರಿ

ಎರಡು ವರ್ಷಗಳ ಅವಧಿಯಲ್ಲಿ ಠಾಣಾ ವ್ಯಾಪ್ತಿಯಲ್ಲಿ ವಿದೇಶಿ ಡ್ರಗ್ ಪೆಡ್ಲರ್‌ಗಳು ಸೇರಿ 44 ಮಂದಿಯನ್ನು ಬಂಧಿಸಲಾಗಿದೆ. ₹4.29 ಕೋಟಿಗೂ ಅಧಿಕ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಲಾಗಿದೆ.

ಈ ಪೈಕಿ ಅರ್ಧ ಕ್ವಿಂಟಲ್ ಗಾಂಜಾ, ಎಂಡಿಎಂಎ ಸೇರಿ ಇತರ ಡ್ರಗ್ಸ್ ಕೂಡ ಸೇರಿದೆ. ಡ್ರಗ್ಸ್ ದಂಧೆ ವಿರುದ್ಧದ ಕಾರ್ಯಾಚರಣೆ ನಡೆಯುತ್ತಿದ್ದರಿಂದ ದಂಧೆಕೋರರೇ ಅಧಿಕಾರಿ ವಿರುದ್ಧ ಅನಾಮಧೇಯರ ಹೆಸರಿನಲ್ಲಿ ಸುಳ್ಳು ದೂರು ನೀಡಿರುವ ಸಾಧ್ಯತೆಯಿದೆ. ದೂರಿನ ಹಿಂದೆ ಯಾರ ಕೈವಾಡವಿದೆ ಎಂಬುದು ಸೇರಿದಂತೆ ಇನ್ನಿತರ ವಿಚಾರಗಳ ಬಗ್ಗೆಯೂ ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಚಿತ್ರಾವಳಿ



ಕಬ್ಬನ್ ಉದ್ಯಾನದ ಆವರಣದಲ್ಲಿರುವ ಕೇಂದ್ರ ಗ್ರಂಥಾಲಯದಲ್ಲಿ ಬೆಂಗಳೂರು ಬುಕ್ಕೀಸ್ ಭಾನುವಾರ ಆಯೋಜಿಸಿದ್ದ ಮೌನವಾಗಿ ಪುಸ್ತಕ ಓದುವಿಕೆ ಕಾರ್ಯಕ್ರಮದಲ್ಲಿ ಹಲವರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್



ಉಡುಪಿಯ ಶ್ರೀಕೃಷ್ಣ ಮಠದಲ್ಲಿ ನಡೆದ ಸಮಾರಂಭದಲ್ಲಿ ನಗರದ ಮಾರತ್‌ಹಳ್ಳಿಯ ವಾಗ್ದೇವಿ ವಿಲಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಕೆ. ಹರೀಶ್ ಅವರಿಗೆ ‘ಶ್ರೀಕೃಷ್ಣ ಗೀತಾನುಗ್ರಹ’ ಪ್ರಶಸ್ತಿಯನ್ನು ಸುಗುಣೇಂದ್ರತೀರ್ಥ ಶ್ರೀಪಾದರು, ಸುಶೀಂದ್ರತೀರ್ಥ ಶ್ರೀಪಾದರು ಪ್ರದಾನ ಮಾಡಿದರು

ಕಾವೇರಿ ನೀರು: ಇಂದಿನಿಂದ ವ್ಯತ್ಯಯ

ಬೆಂಗಳೂರು: ಬೆಂಗಳೂರು ಜಲಮಂಡಳಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಂಡಿರುವುದರಿಂದ ಸೆ.15, 16 ಮತ್ತು 17ರಂದು ಕಾವೇರಿ ನೀರು ಪೂರೈಕೆ ಹಾಗೂ ಸಂಚಾರಿ ಟ್ಯಾಂಕರ್‌ಗಳ ಮೂಲಕ ನೀರು ಸರಬರಾಜು ಸ್ಥಗಿತಗೊಳ್ಳಲಿದೆ.

ವಿವಿಧ ಹಂತಗಳ ಜಲರೇಚಕ ಯಂತ್ರಾಗಾರ ಸ್ಥಗಿತಗೊಳ್ಳುವುದರಿಂದ ಬೆಂಗಳೂರು ನಗರದಾದ್ಯಂತ ಕಾವೇರಿ ನೀರು ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ತುರ್ತು ಸಂದರ್ಭದಲ್ಲಿ ಮಾತ್ರ ಸಂಚಾರಿ ಕಾವೇರಿ ಯೋಜನೆಯ ಟ್ಯಾಂಕರ್‌ಗಳನ್ನು ನೀರು ಸರಬರಾಜಿಗಾಗಿ ಬಳಸಿಕೊಳ್ಳಲಾಗುವುದು ಎಂದು ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

ಈ ವೇಳೆ ಟ್ಯಾಂಕರ್ ಸೇವೆಯೂ ಸಿಗದೇ ಇರುವುದರಿಂದ ಕಾವೇರಿ ನೀರು ಸರಬರಾಜಾಗುವ ಪ್ರದೇಶಗಳ ನಾಗರಿಕರು ಮುಂಜಾಗ್ರತೆಯಾಗಿ ನೀರಿನ ಸಂಗ್ರಹಣೆ ಸೇರಿದಂತೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಸೂಚಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

JOB OPPORTUNITIES

Graphic Designers
WANTED MALE Graphic Designer (Corel Draw Photoshop Illustrator) Pvt Ltd Company around Rajajinagar Contact: 9108458798/ 9845579620

HRD & Admin
WANTED FEMALE Office Assistant Any Degree Knowing Tally, Fluent In English, Kannada, Hindi Around Rajajinagar Contact: 9108458798/ 9845579620

BUILDERS ESSENTIAL

Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

BUSINESS

Business to Business

Business
PROPERTY COLLATERALS/ JD's/ Take Overs/ Finance for big Projects, Problem solving. Dr.Swamy Naidu- Vamshadhara Projects And Services. 9342247637.

Business Offers

Finance
AVAIL MSME LOANS EASILY Business Owners can now Avail MSME Loans Upto 1 crore against GST/UDYAM Certificates UNSECURED LOANS Available for both Existing Businesses& Startups Contact-7204995189

ಪೌರಕಾರ್ಮಿಕರ ಬೇಡಿಕೆ: ಸಿ.ಎಂ ಸ್ಪಂದನೆ

ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಸಿದ್ದರಾಮಯ್ಯ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರಕಾರ್ಮಿಕರ ಹುದ್ದೆ ಭರ್ತಿ ಸೇರಿದಂತೆ ಹಲವು ಬೇಡಿಕೆಗಳ ಕುರಿತು ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದರು.

ಪೌರಕಾರ್ಮಿಕರ ವಿವಿಧ ಬೇಡಿಕೆಗಳಿಗೆ ಸಂಬಂಧಿಸಿದಂತೆ ಪೌರಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳೊಂದಿಗೆ ಇತ್ತೀಚೆಗೆ ಸಭೆ ನಡೆಸಿದರು.

ಮುಖ್ಯಾಂಶಗಳು

- ಹಲವು ಬೇಡಿಕೆ ಮುಂದಿಟ್ಟ ಪೌರ ಕಾರ್ಮಿಕರು
- ಸೂಪರ್ ನ್ಯೂಮರರಿ ಹುದ್ದೆಗಳ ರದ್ದತಿಗೆ ಮನವಿ
- ನಗದುರಹಿತ ಆರೋಗ್ಯ ಕಾರ್ಡ್ ವಿತರಣೆಗೆ ಕೋರಿಕೆ

‘ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರಕಾರ್ಮಿಕರ 2,992 ಹುದ್ದೆಗಳ ಪೈಕಿ 492 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ವೇತನ ಅಡಿ ಪೌರಕಾರ್ಮಿಕರಾಗಿರುವವರು ಕೆಲಸ ಮಾಡುತ್ತಿದ್ದಾಗ ಮೃತಪಟ್ಟರೆ, ಅವರ ಅವಲಂಬಿತರಿಗೆ ₹10 ಲಕ್ಷ ಪರಿಹಾರವನ್ನು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಸಂಪನ್ಮೂಲದಿಂದ ಭರಿಸಲು ಅನುಮೋದನೆ ನೀಡಲಾಗಿದೆ’ ಎಂದರು.

ಮನವಿ: ‘ರಾಜ್ಯದಲ್ಲಿರುವ 41,373 ಪೌರ ಕಾರ್ಮಿಕರ ಪೈಕಿ 29 ಸಾವಿರ ಮಂದಿಯ ಸೇವೆ ಕಾಯಂ ಆಗಿದೆ. ಉಳಿದವರ ಸೇವೆಯನ್ನೂ ಕಾಯಂ ಮಾಡಬೇಕು. 2023ರಲ್ಲಿ 12,800 ಪೌರ ಕಾರ್ಮಿಕರ ಸೂಪರ್ ನ್ಯೂಮರರಿ ಹುದ್ದೆಗಳನ್ನು ಸರ್ಕಾರ ಮಂಜೂರು ಮಾಡಿದ್ದು, ಇವರಿಗೆ ಸೇವಾ ಭದ್ರತೆ ಇರುವುದಿಲ್ಲ. ಈ ಸೂಪರ್ ನ್ಯೂಮರರಿ ಹುದ್ದೆಗಳನ್ನು ರದ್ದುಪಡಿಸಿ ಕಾಯಂ ಹುದ್ದೆ ಸೃಜಿಸಬೇಕು’ ಎಂದು ಪೌರ ಕಾರ್ಮಿಕ ಸಂಘಟನೆಗಳ ಪ್ರತಿನಿಧಿಗಳು ಬೇಡಿಕೆ ಇರಿಸಿದರು.

‘ಎಲ್ಲ ಮಹಾನಗರ ಪಾಲಿಕೆಗಳಲ್ಲಿ ಒಳಚರಂಡಿ ಸಹಾಯಕ ಸ್ವಚ್ಛತಾ ಕಾರ್ಮಿಕರನ್ನು ಗುತ್ತಿಗೆ ಆಧಾರದಲ್ಲಿ ನೇಮಕ ಮಾಡಲಾಗಿದ್ದು, ಅವರ ಸೇವೆಯನ್ನೂ ಕಾಯಂ ಮಾಡಬೇಕು. ನೇರ ವೇತನ ಅಡಿ ಪೌರಕಾರ್ಮಿಕರು ಮೃತಪಟ್ಟ ಸಂದರ್ಭ ಅವರ ಅವಲಂಬಿತರಿಗೆ ಅನುಕಂಪದ ಆಧಾರದಲ್ಲಿ ನೌಕರಿ, ಪರಿಹಾರ ಒದಗಿಸಬೇಕು. ಪೌರ ಕಾರ್ಮಿಕರ ಗೃಹಭಾಗ್ಯ ಯೋಜನೆಯನ್ನು ನೇರ ಪಾವತಿ ಕಾರ್ಮಿಕರು ಸೇರಿದಂತೆ ಎಲ್ಲಾ ಸ್ವಚ್ಛತಾ ಕಾರ್ಮಿಕರಿಗೂ ವಿಸ್ತರಿಸಬೇಕು. ನಗದು ರಹಿತ ಆರೋಗ್ಯ ಕಾರ್ಡ್ ನೀಡಬೇಕು’ ಎಂದು ಕೋರಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಪೌರಾಡಳಿತ ಸಚಿವ ರಹೀಂ ಖಾನ್, ಶಾಸಕ ಎ.ಎಸ್. ಪೊನ್ನಣ್ಣ, ಅಂಜುಂ ಪರ್ವೇಜ್ ಇದ್ದರು.



ಪೌರ ಕಾರ್ಮಿಕರ ಸಂಘಟನೆಗಳ ಪ್ರತಿನಿಧಿಗಳ ಜತೆಗೆ ಸಿದ್ದರಾಮಯ್ಯ ಸಭೆ ನಡೆಸಿದರು. ಸಚಿವರಾದ ಬೈರತಿ ಸುರೇಶ್, ರಹೀಂಖಾನ್ ಉಪಸ್ಥಿತರಿದ್ದರು

‘ಹೆಗಲು: ಒಳಗಣ್ಣು ತೆರೆಸುವ ಕೃತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ದಶಕಗಳಿಂದ ಶಿಕ್ಷಣ ತಜ್ಞ ಎಂ.ಕೆ.ಶ್ರೀಧರ್ ಅವರ ಸಹಾಯಕ, ಒಡನಾಡಿಯಾಗಿರುವ ನರಸಿಂಹ ಅವರ ಬದುಕಿನ ಮಾನವೀಯ ಪಯಣವನ್ನು ತೆರೆದಿಡುವ ‘ಹೆಗಲು’ ಪುಸ್ತಕ ಭಾನುವಾರ ನಗರದಲ್ಲಿ ಜನಾರ್ಪಣೆಗೊಂಡಿತು.

ಕೃತಿ ಬಿಡುಗಡೆ ಮಾಡಿದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ.ವೆಂಕಟೇಶ್ ಮಾತನಾಡಿ, ‘ಭಾವಸ್ಪರ್ಶಿಯಾಗಿ ರೂಪುಗೊಂಡಿರುವ ಕೃತಿಯಿದು. ಸೇವೆಯಲ್ಲಿ ತೊಡಗಿಕೊಂಡವರ ಸಾತ್ವಿಕ ಸ್ವಭಾವವನ್ನು ಒಳಗಣ್ಣಿನ ರೀತಿ ತೆರೆದಿಡುವ ಕಥನ ಓದುತ್ತಾ ಹೋದರೆ ಕಣ್ಣಾಲಿಗಳು ತೇವಗೊಳ್ಳುತ್ತವೆ’ ಎಂದು ಹೇಳಿದರು.

ನಾಯಕರು, ಅಧಿಕಾರದಲ್ಲಿರುವವರ ಕಣ್ಣು ತೆರೆಸುವ ಕಾಯಕವನ್ನು ನರಸಿಂಹ ಮಾಡಿಕೊಂಡು ಬಂದಿದ್ದಾರೆ. ಮಾನವೀಯ ಅಂತಃಕರಣ ಇನ್ನೂ ಬದುಕಿದೆ ಎನ್ನುವುದಕ್ಕೆ ಇದಕ್ಕಿಂತ ಉದಾಹರಣೆ ಬೇಕಿಲ್ಲ. ದೊಡ್ಡ ಕಟ್ಟಡಗಳು, ರಸ್ತೆಗಳಿಗಿಂತ ಪರಸ್ಪರ ಅನುಕಂಪ, ಅಂತಃಕರಣವನ್ನು ಜನರಲ್ಲಿ ಪುನರುತ್ಥಾನಗೊಳಿಸುವ ಅಗತ್ಯವಿದೆ ಎಂದು ನುಡಿದರು.

ನಿರ್ದೇಶಕ ಟಿ.ಎಸ್.ನಾಗಾಭರಣ ಮಾತನಾಡಿ, ‘ನರಸಿಂಹ ಅವರು ಶ್ರೀಧರ್ ಬದುಕಿನ ಭಾಗವೇ ಆಗಿದ್ದಾರೆ. ಹೆಗಲಿಗೆ ಹೆಗಲು ಕೊಟ್ಟು ನಾಲ್ಕು ದಶಕದಿಂದ ಇರುವ ಸನ್ನಿವೇಶ ನೋಡಿದರೆ ಮಾನವೀಯತೆ ಎನ್ನುವುದು ಹೇಗೆ ಜೀವಂತವಾಗಿದೆ ಎನ್ನುವುದನ್ನು ಸಾರುತ್ತದೆ. ಇಂತಹ ಮೌಲ್ಯಗಳೇ ಮನುಷ್ಯನನ್ನು ಜೀವನ್ಮುಖಿಯಾಗಿಸುತ್ತವೆ. ಸಾಮಾನ್ಯ ವ್ಯಕ್ತಿಯ ಅಸಾಮಾನ್ಯ ಸೇವೆಯ ಹಾದಿಯನ್ನು ಅಕ್ಷರದ ಮೂಲಕ ಇಲ್ಲಿ ಮನೋಜ್ಞವಾಗಿಯೇ ಕಟ್ಟಿಕೊಡಲಾಗಿದೆ’ ಎಂದು ಹೇಳಿದರು.



ನಗರದಲ್ಲಿ ಭಾನುವಾರ ‘ಬೆನಕ ಬುಕ್ಸ್ ಬ್ಯಾಂಕ್’ ಆಯೋಜಿಸಿದ್ದ ಪ್ರೊ.ಎಂ.ಕೆ. ಶ್ರೀಧರ್ ಅವರ ಒಡನಾಡಿ ನರಸಿಂಹ ಅವರ ಕಾರ್ಯದ ಬಗ್ಗೆ ‘ಹೆಗಲು’ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ (ಕುಳಿತವರು ಎಡದಿಂದ) ಶಾರದಾ, ಅಮೋಘ, ಸಮರ್ಥ್, ಸುಭಾಷ್ ಮತ್ತು ನಾಗೇಂದ್ರ ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. (ಎಡದಿಂದ ನಿಂತವರು) ಪ್ರೊ. ವಿಷ್ಣುಕಾಂತ ಎಸ್. ಚಟ್‌ಪಲ್ಲಿ, ಮಧು ಸಿಂಘಾಲ್, ಲೇಖಕಿ ಭಾರತಿ ಹೆಗಡೆ, ದತ್ತಾತ್ರೇಯ ಹೊಸಬಾಳೆ, ಟಿ.ಎಸ್. ನಾಗಾಭರಣ ಮತ್ತು ಮಲ್ಲೇಪುರಂ ಜಿ. ವೆಂಕಟೇಶ್ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

ಐವರಿಗೆ ವಿಶೇಷ ಗೌರವ

ಕಾರ್ಯಕ್ರಮದಲ್ಲಿ ಐವರನ್ನು ಗೌರವಿಸಿದ್ದು ವಿಶೇಷವಾಗಿತ್ತು. ದೃಷ್ಟಿ ದೋಷವುಳ್ಳವರ ಕುರಿತು ಪರಿಣತಿ ಪಡೆದು ಮಿತ್ರ ಜ್ಯೋತಿ ಸಂಸ್ಥೆಯಲ್ಲಿ ಸೇವಾ ನಿರತರಾಗಿರುವ ಶಾರದಾ, ಶ್ರವಣದೋಷವಿದ್ದರೂ ಉನ್ನತ ಶಿಕ್ಷಣ ಪಡೆದು ತಮ್ಮದೇ ಸಂಸ್ಥೆ ಆರಂಭಿಸಿರುವ ಅಮೋಘ ಶಾಸ್ತ್ರಿ, ಮಸ್ಕ್ಯುಲರ್ ಥೆರಪಿಸ್ಟ್ ಡಾ. ಸಮರ್ಥ್, ಅಂಗವಿಕಲರಾದರೂ ವೀಲ್‌ಚೇರ್‌ಗಳನ್ನು ರೂಪಿಸುವ ಸಲಹೆಗಾರರಾದ ಪಿ.ಸುಭಾಷ್, ಎಂ.ಕೆ.ಶ್ರೀಧರ್ ಅವರ ಸಹಾಯಕ ನಾಗೇಂದ್ರ ಅವರನ್ನು ಗೌರವಿಸಲಾಯಿತು.

ಹೈದರಾಬಾದ್‌ನಲ್ಲಿ ಭಾರಿ ಮಳೆ: ಕೊಚ್ಚಿಹೋದ ಇಬ್ಬರು

ಹೈದರಾಬಾದ್ (ಪಿಟಿಐ): ಹೈದರಾಬಾದ್‌ನಲ್ಲಿ ಭಾನುವಾರ ಸಂಜೆ ಭಾರಿ ಮಳೆ ಸುರಿದಿದೆ. ಇದರ ಪರಿಣಾಮ ನಗರದ ಹಲವು ರಸ್ತೆಗಳಲ್ಲಿ ನೀರು ನಿಂತು, ಇಬ್ಬರು ಚರಂಡಿಯಲ್ಲಿ ಕೊಚ್ಚಿಹೋಗಿದ್ದಾರೆ.

ಅಫ್ಜಲ್‌ನಗರದಲ್ಲಿ ರಾತ್ರಿ 8.30ರ ಸುಮಾರಿಗೆ ಚರಂಡಿಯಲ್ಲಿ ನೀರಿನ ಹರಿವು ಹೆಚ್ಚಾಗಿ, ಈ ದುರಂತ ಸಂಭವಿಸಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ. ಕೊಚ್ಚಿಹೋದವರ ಪತ್ತೆಗಾಗಿ ಶೋಧಕಾರ್ಯ ಮುಂದುವರಿದಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಹೇಳಿದ್ದಾರೆ. ನಗರದ ವಿವಿಧ ಬಡಾವಣೆಗಳಲ್ಲಿ 110 ಸೆಂ.ಮೀಗಿಂತ ಹೆಚ್ಚು ಮಳೆ ಸುರಿದಿದೆ. ಭಾರಿ ಮಳೆಯ ಪರಿಣಾಮ ನಗರದಲ್ಲಿ ವಿವಿಧೆಡೆ ಸಂಚಾರ ವ್ಯವಸ್ಥೆ ಅಸ್ತವ್ಯಸ್ತವಾಗಿತ್ತು.

ಹೈದರಾಬಾದ್ ರೇಸ್

ಕೋರ್ಟೆ ಮಡೆರಾ ಗೆಲ್ಲುವ ನಿರೀಕ್ಷೆ

ಎಸ್.ಮಲಕೊಂಡ ರೆಡ್ಡಿ ಮೆಮೋರಿಯಲ್ ಕಪ್ ಸೋಮವಾರದ ಹೈದರಾಬಾದ್ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೋರ್ಟೆ ಮಡೆರಾ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:55ಕ್ಕೆ ಆರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡೆಕ್ಕನ್ ರೇಂಜರ್ 8, ಫಾರ್ಚೂನ್ ಆರ್ಟ್ 7, ಸಿಟಿ ಕ್ರ್ಯೂಯ್ 1
2ನೇ ರೇಸ್: ಕ್ಯಾಲಿಸ್ಟೋಗ 6, ಡಿಯಾಬ್ಲೊ 3, ರಾಗ್ನರಾಕ್ 2
3ನೇ ರೇಸ್: ಮೌಂಟೇನ್ ಟಚ್ 2, ಮೈ ಚಾಲೆಂಜ್ 4, ಲೆಗೊ 6
4ನೇ ರೇಸ್: ಕೋರ್ಟೆ ಮಡೆರಾ 7, ಡೇಪರ್ ಲುಕ್ 1, ಬ್ಲ್ಯಾಕ್ ಡಸ್ಟ್ 2
5ನೇ ರೇಸ್: ಕಲಬಸಾಸ್ 3, ನಾಟಿ ಸೆನೊರಿಟ 8, ಹರ್ ಲೇಡಿಶಿಪ್ 9
6ನೇ ರೇಸ್: ಶಿ ಕ್ಯಾನ್ 6, ಸ್ಟಾರ್ ಫಾರೆವರ್ 9, ಟಾರ್ಚ್ ಬೇರರ್ 10

ಉತ್ತಮ ಬೆಟ್: ಮೌಂಟೇನ್ ಟಚ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
2,3,4,5,6	1,2,3	4,5,6

ಸಂಕ್ಷಿಪ್ತ ಸುದ್ದಿ

ಗಣೇಶೋತ್ಸವ: 15 ಕೆ.ಜಿ. ಲಡ್ಡು ₹5.50 ಲಕ್ಷಕ್ಕೆ ಹರಾಜು

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಸಾಮೂಹಿಕ ಗಣೇಶೋತ್ಸವ ಸಮಿತಿ ವತಿಯಿಂದ ಹತ್ತನೇ ವರ್ಷದ ಗಣೇಶೋತ್ಸವದಲ್ಲಿ 18 ಅಡಿ ಎತ್ತರದ ಗಣೇಶ ಮೂರ್ತಿಯ ಪ್ರಸಾದವಾದ 15 ಕೆ.ಜಿ. ಲಡ್ಡು ಜೊತೆಗೆ ಕಾಲು ಕೆ.ಜಿ. ಬೆಳ್ಳಿ ಗಣೇಶ ವಿಗ್ರಹವನ್ನು ಉದ್ಯಮಿ ಶ್ರೀಕಾಂತ್ ಅವರು ಹರಾಜಿನಲ್ಲಿ 5.50 ಲಕ್ಷಕ್ಕೆ ಖರೀದಿಸಿದರು.

ಮೆರವಣಿಯಲ್ಲಿ 51 ಗಣೇಶ ಮೂರ್ತಿಗಳು ಇದ್ದವು. ಕಲಾತಂಡಗಳಾದ ನಾಸಿಕ್ ಡೋಲ್, ಚೆಂಡೆ ವಾದ್ಯ, ಬ್ಯಾಂಡ್, ಡೊಳ್ಳು ಕುಣಿತ, ಗೊಂಬೆ ಕುಣಿತ ಹಾಗೂ ಕೇರಳದಿಂದ ಬಂದ ಕಲಾತಂಡಗಳು ಮೆರವಣಿಗೆಗೆ ಮೆರುಗು ನೀಡಿದವು. ಭಕ್ತರು ಕುಣಿದು ಸಂಭ್ರಮಿಸಿದರು.

ಎಂಇಐ ಆಟದ ಮೈದಾನದಿಂದ ಮೆರವಣಿಗೆ ಪ್ರಾರಂಭವಾಗಿ ಬಾಗಲಗುಂಟೆ ಮಾರಮ್ಮನ ದೇವಸ್ಥಾನ, ಹೆಸರಘಟ್ಟ ಮುಖ್ಯ ರಸ್ತೆ, ಮಲ್ಲಸಂದ್ರದ ಪೈಪ್‌ಲೈನ್, ಸೆಲೆಕ್ಷನ್ ಕಾರ್ನರ್ ಮೂಲಕ ಸಾಗಿ ದಾಸರಹಳ್ಳಿ ರಾಷ್ಟ್ರೀಯ ಹೆದ್ದಾರಿ ಮೂಲಕ ಚೊಕ್ಕಸಂದ್ರದ ಕೆರೆ ಹತ್ತಿರ ವಿಸರ್ಜಿಸಲಾಯಿತು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದ ಗೌಡ, ಶಾಸಕ ಎಸ್. ಮುನಿರಾಜು, ಉದ್ಯಮಿ ಶ್ರೀಕಾಂತ್ ಭಾಗವಹಿಸಿದ್ದರು.

ಬೆಂಗಳೂರು ಎಫ್‌ಸಿಗೆ ಗೆಲುವು

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಬೆಂಗಳೂರು ಎಫ್‌ಸಿ ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಭಾನುವಾರ 3-0 ಗೋಲುಗಳಿಂದ ಎಎಸ್‌ಸಿ ಅಂಡ್ ಸೆಂಟರ್ ತಂಡವನ್ನು ಮಣಿಸಿತು.

ದಿನದ ಇತರ ಪಂದ್ಯಗಳಲ್ಲಿ ಎಫ್‌ಸಿ ಬೆಂಗಳೂರು ಯುನೈಟೆಡ್ ತಂಡವು 1–0 ಗೋಲಿನಿಂದ ಎಂಇಜಿ ಅಂಡ್ ಸೆಂಟರ್ ಎಫ್‌ಸಿ ತಂಡವನ್ನು ಹಾಗೂ ರೆಬೆಲ್ಸ್ ಎಫ್‌ಸಿ ತಂಡವು 1–0 ಗೋಲಿನಿಂದ ಭಾರತ್ ಬೆಂಗಳೂರು ಎಫ್‌ಸಿ ತಂಡವನ್ನು ಮಣಿಸಿದವು.

‘ಡೀಪ್ ಟೆಕ್ ಸ್ಟಾರ್ಟ್‌ಅಪ್’ ಶೃಂಗಸಭೆಗೆ ಚಾಲನೆ

ಯಲಹಂಕ: ‘ನಮ್ಮ ದೇಶದಲ್ಲಿ 2 ಲಕ್ಷಕ್ಕೂ ಅಧಿಕ ಸ್ಟಾರ್ಟ್‌ಅಪ್‌ಗಳಿದ್ದರೂ ಬೆರಳೆಣಿಕೆಯಷ್ಟು ಮಾತ್ರ ಆಳವಾದ ತಂತ್ರಜ್ಞಾನವನ್ನು ಅವಲಂಬಿಸಿವೆ. ಹೀಗಾಗಿ ಸರ್ಕಾರ ಸಂಕೀರ್ಣ ತಂತ್ರಜ್ಞಾನಾಧಾರಿತ ಸ್ಟಾರ್ಟ್‌ಅಪ್‌ಗಳ ಸ್ಥಾಪನೆಗೆ ಹಲವಾರು ಯೋಜನೆಗಳನ್ನು ರೂಪಿಸಿದೆ ಎಂದು ಭಾರತೀಯ ತಂತ್ರಜ್ಞಾನ ಸಂಸ್ಥೆಯ ಅನ್ವೇಷಣಾ ಘಟಕದ (ಐಎಚ್‌ಎಫ್‌ಸಿ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಶುತೋಷ್ ದತ್ತ ಶರ್ಮ ಹೇಳಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ‘ಡೀಪ್ ಟೆಕ್ ಸ್ಟಾರ್ಟ್‌ಅಪ್-2025’ ಶೃಂಗಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

‘ಕೃಷಿ, ಆರೋಗ್ಯ, ರಕ್ಷಣಾ ವಲಯ, ವಿಪತ್ತು ನಿರ್ವಹಣೆ ಮತ್ತಿತರ ಕ್ಷೇತ್ರಗಳಲ್ಲಿ ನಮ್ಮ ಕಾರ್ಯಗಳನ್ನು ಹಗುರಗೊಳಿಸುವ ರೋಬೋಟಿಕ್ ತಂತ್ರಜ್ಞಾನದ ಸದ್ಬಳಕೆಯಾಗಬೇಕು ಎಂಬುದು ಇದರ ಉದ್ದೇಶ. ತಂತ್ರಜ್ಞಾನ ಬೋಧಿಸುವ ಶಿಕ್ಷಣ ಸಂಸ್ಥೆಗಳು, ಕೈಗಾರಿಕೆಗಳು ಹಾಗೂ ನೀತಿ ನಿರೂಪಕರು ಒಟ್ಟಾಗಿ ಮುಂದೆ ಸಾಗಬೇಕು’ ಎಂದು ಸಲಹೆ ನೀಡಿದರು.

ಮದ್ರಾಸಿನ ಭಾರತೀಯ ತಂತ್ರಜ್ಞಾನ ಸಂಸ್ಥೆಯ ಪ್ರಾಧ್ಯಾಪಕ ಅಶೋಕನ್ ಟಿ. ಮಾತನಾಡಿ, ‘ಸಂಶೋಧನೆ ಮತ್ತು ಅಭಿವೃದ್ಧಿ ಕಾರ್ಯಗಳು ಶಿಕ್ಷಣ ಸಂಸ್ಥೆ ಹಾಗೂ ಕೈಗಾರಿಕೋದ್ಯಮಿಗಳ ಸಹಯೋಗದಲ್ಲಿ ನಡೆಯಬೇಕು’ ಎಂದು ತಿಳಿಸಿದರು.

ನಿಟ್ಟೆ ಮೀನಾಕ್ಷಿ ತಾಂತ್ರಿಕ ಮಹಾವಿದ್ಯಾಲಯ ಬೆಂಬಲದಲ್ಲಿ ಸ್ಟಾರ್ಟ್‌ಅಪ್ ಉತ್ಪಾದಿಸಿದ ‘ಅರ್ಜುನ’ ನ್ಯೂರೋ ರೋಬೊ ಅನ್ನು ಬಿಡುಗಡೆಗೊಳಿಸಲಾಯಿತು. ನಿಟ್ಟೆ ಶಿಕ್ಷಣಸಂಸ್ಥೆಯ ಆಡಳಿತಾಧಿಕಾರಿ ರೋಹಿತ್ ಪೂಂಜಾ, ನಿಟ್ಟೆ ಪರಿಗಣಿತ ವಿಶ್ವವಿದ್ಯಾಲಯದ ಬೆಂಗಳೂರು ಕ್ಯಾಂಪಸ್‌ನ ಉಪಾಧ್ಯಕ್ಷ ಸಂದೀಪ್ ಶಾಸ್ತ್ರಿ, ಪ್ರಾಂಶುಪಾಲ ಎಚ್. ಸಿ. ನಾಗರಾಜ್, ರೋಬೋಟಿಕ್ಸ್ ಮತ್ತು ಆರ್ಟಿಫೀಶಿಯಲ್ ಇಂಟೆಲಿಜೆನ್ಸ್ ವಿಭಾಗದ ಮುಖ್ಯಸ್ಥ ಪ್ರಶಾಂತ್ ಎನ್. ಉಪಸ್ಥಿತರಿದ್ದರು.

‘ಪಿತೃಪ್ರಧಾನ’ ಪ್ರಶ್ನಿಸುವುದೇ ಸ್ತ್ರೀವಾದ

ಕೃತಿ ಜನಾರ್ಪಣೆ: ಲೇಖಕಿ ಎಚ್.ಎಸ್. ಶ್ರೀಮತಿ ಪ್ರತಿಪಾದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿತೃಪ್ರಧಾನ ವ್ಯವಸ್ಥೆಯನ್ನು, ಅದರ ಜ್ಞಾನ ಮೀಮಾಂಸೆಯನ್ನು ಎಲ್ಲರೂ ಪ್ರಶ್ನಿಸಬೇಕು. ಅದುವೇ ಸ್ತ್ರೀವಾದ ಎಂದು ಲೇಖಕಿ ಎಚ್.ಎಸ್. ಶ್ರೀಮತಿ ಪ್ರತಿಪಾದಿಸಿದರು.

ಆಕೃತಿ ಪುಸ್ತಕ ಮತ್ತು ಜೀರುಂಡೆ ಪುಸ್ತಕ ಪ್ರಕಾಶನಗಳು ಭಾನುವಾರ ಹಮ್ಮಿಕೊಂಡಿದ್ದ ಮೂರು ಕೃತಿಗಳ ಜನಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸ್ತ್ರೀವಾದಿ ಸಾಹಿತ್ಯ ವಿಮರ್ಶೆಯು ಸ್ತ್ರೀವಾದಿ ವಿಮರ್ಶೆಯ ಒಂದು ಭಾಗ ಅಷ್ಟೇ. ಸಾಹಿತ್ಯ ಒಂದೇ ಅಲ್ಲ, ಅರ್ಥಶಾಸ್ತ್ರ, ಸಮಾಜ ವಿಜ್ಞಾನ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲಿ ಪಿತೃಪ್ರಧಾನ ವ್ಯವಸ್ಥೆ ಹೇಗಿದೆ? ಸ್ತ್ರೀಯರನ್ನು ಹೇಗೆ ಕಾಣಲಾಗುತ್ತಿದೆ? ಎಂಬ ನೋಟ ಎಲ್ಲರಿಗೂ ಬರಬೇಕು. ಅರ್ಥಶಾಸ್ತ್ರದ ಪ್ರಮೇಯಗಳು ಏನು ಎಂಬುದಕ್ಕಿಂತ ಆ ಪ್ರಮೇಯಗಳು ಸ್ತ್ರೀಯರ ಅರ್ಥ ವ್ಯವಸ್ಥೆಯನ್ನು ಒಳಗೊಂಡಿವೆಯೇ ಎಂದು ನೋಡುವಂತಾಗಬೇಕು. ಇದೇ ರೀತಿ ಎಲ್ಲ ಕ್ಷೇತ್ರಗಳನ್ನೂ ಪರೀಕ್ಷೆಗೆ ಒಡ್ಡಬೇಕು ಎಂದು ಹೇಳಿದರು.

ಲೇಖಕ ಕೆ.ವಿ. ನಾರಾಯಣ ಮಾತನಾಡಿ, ‘ಕುವೆಂಪು ಅವರನ್ನು ಅವರ ಬರಹಗಳಿಂದ ಪ್ರತ್ಯೇಕಿಸಿ ನೋಡಲು ಸಾಧ್ಯವೇ ಎಂದು ಚಿಂತನೆ ನಡೆಸಬೇಕು. ಕುವೆಂಪು ಅವರು ಮನುಜಮತ ವಿಶ್ವಪಥ, ಸರ್ವೋದಯ ಮುಂತಾದ ಗುರಿಗಳನ್ನು ಹೇಳಿದ್ದಾರೆ. ಆದರೆ, ಈ ಗುರಿಯನ್ನು ಸಾಧಿಸುವ ದಾರಿ ಯಾವುದು ಎಂಬುದನ್ನು ಹೇಳಿಲ್ಲ. ತತ್ವ ಮತ್ತು ಪ್ರಯೋಗ ಒಟ್ಟೊಟ್ಟಿಗೆ ಸಾಗಬೇಕು. ಪ್ರಾಯೋಗಿಕ ಮತ್ತು ಸೈದ್ಧಾಂತಿಕವಾಗಿ ಒಂದಕ್ಕೊಂದು ಪೂರಕವಾಗಿರಬೇಕು’ ಎಂದು ಹೇಳಿದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಅವರು ಕೃತಿಗಳನ್ನು ಜನಾರ್ಪಣೆ ಮಾಡಿದರು. ಎಚ್.ಎಸ್.ಶ್ರೀಮತಿಯವರ ‘ಸ್ತ್ರೀವಾದಿ ಸಾಹಿತ್ಯ ವಿಮರ್ಶೆ’ ಬಗ್ಗೆ ನಾಟಕಕಾರ ಕೆ.ವೈ. ನಾರಾಯಣಸ್ವಾಮಿ ಮಾತನಾಡಿದರು. ಕೆ.ವಿ. ನಾರಾಯಣ ಅವರ ‘ಹೊಸ ಓದುಗರಿಗೆ ಕುವೆಂಪು’ ಬಗ್ಗೆ ಸಾಹಿತಿ ಓ.ಎಲ್. ನಾಗಭೂಷಣಸ್ವಾಮಿ, ‘ಕನ್ನಡ ನುಡಿ ರಚನೆ– ಕೆಲವು ನೆಲೆಗಳು’ ಬಗ್ಗೆ ಪ್ರಾಧ್ಯಾಪಕಿ ಶಶಿಕಲಾ ಎಚ್. ಮಾತನಾಡಿದರು.



ಕಾರ್ಯಕ್ರಮದಲ್ಲಿ ಶಶಿಕಲಾ ಎಚ್., ಎಚ್.ಎಸ್. ಶ್ರೀಮತಿ, ಕೆ.ವಿ. ನಾರಾಯಣ, ಅಗ್ರಹಾರ ಕೃಷ್ಣಮೂರ್ತಿ, ಓ.ಎಲ್. ನಾಗಭೂಷಣಸ್ವಾಮಿ, ಕೆ.ವೈ. ನಾರಾಯಣಸ್ವಾಮಿ ಭಾಗವಹಿಸಿದ್ದರು ಪ್ರಜಾವಾಣಿ ಚಿತ್ರ





ಚದುರಂಗ ಚತುರರು ಈ ಚೆಣ್ಣರು

ಗುಜರಾತ್‌ನ ಪುಟ್ಟ ಊರಿನ ಸರ್ಕಾರಿ ಶಾಲೆಯೊಂದು ಚೆಸ್ ಆಟದಲ್ಲಿ ದೇಶದ ಗಮನ ಸೆಳೆದಿದೆ

• ಸೂರ್ಯನಾರಾಯಣ ವಿ.

‘ಒಂದು ಮಗು, ಒಬ್ಬ ಶಿಕ್ಷಕ/ಶಿಕ್ಷಕಿ, ಒಂದು ಪುಸ್ತಕ ಮತ್ತು ಒಂದು ಲೇಖನಿ ಇಡೀ ಜಗತ್ತನ್ನೇ ಬದಲಾಯಿಸಬಹುದು’– ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಹೋರಾಡುತ್ತಿರುವ ಪಾಕಿಸ್ತಾನ ಮೂಲದ ಮಲಾಲಾ ಯೂಸುಫ್ ಝೈ ಅವರ ಮಾತಿದು.

ಗುಜರಾತ್‌ನ ಸೌಲಭ್ಯವಂಚಿತ ರತುಸಿನ್ಹ ನಾ ಮುವಾದ ಎಂಬ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯ ಮಕ್ಕಳ ವಿಚಾರದಲ್ಲಿ ಈ ಹೇಳಿಕೆ ನಿಜವಾಗುತ್ತಿದೆ. ಶಿಕ್ಷಕರೊಬ್ಬರ ಪ್ರಯತ್ನವು ಅಲ್ಲಿನ ಬಡ ಮಕ್ಕಳ ಜಗತ್ತನ್ನೇ ಬದಲಾಯಿಸುತ್ತಿದೆ. ಈ ಚೆಣ್ಣರು ಚದುರಂಗ (ಚೆಸ್) ಆಟದಲ್ಲಿ ದೊಡ್ಡ ಕನಸಿನ ಬೆನ್ನಟ್ಟಿ ಹೋಗುತ್ತಿದ್ದಾರೆ. ಇದೀಗ ಗುಜರಾತ್‌ನ ‘ಚೆಸ್ ಮಾದರಿ ಶಾಲೆ’ಯಾಗಿ ಇದು ಗುರುತಿಸಿಕೊಂಡಿದೆ. ಮಕ್ಕಳ ಚದುರಂಗ ಆಟದ ‘ನಡೆ’ಗಳು ರಾಜ್ಯ ಮಾತ್ರವಲ್ಲ ದೇಶವೇ ಆ ಊರಿನತ್ತ ತಿರುಗಿ ನೋಡುವಂತೆ ಮಾಡಿದೆ. ಇಲ್ಲಿನ ಹಲವು ಚೆಣ್ಣರು ರಾಜ್ಯ ಮಟ್ಟದ ಚೆಸ್ ಚಾಂಪಿಯನ್‌ಗಳು. ಅವರ ‘ಚೆಸ್’ ಸಾಧನೆ ಇಷ್ಟಕ್ಕೇ ನಿಂತಿಲ್ಲ. ಆರು ಮಕ್ಕಳು ‘ಫಿಡೆ’ ರ್‍ಯಾಂಕಿಂಗ್ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ಈ ಸಾಧನೆಯ ಹಿಂದಿರುವುದು ಅಲ್ಲಿನ ಗಣಿತ ಶಿಕ್ಷಕ ಸಂದೀಪ್ ಉಪಾಧ್ಯಾಯ. ಚದುರಂಗ ಆಟದ ಮೇಲೆ ಅವರಿಗಿರುವ ವಿಪರೀತ ಪ್ರೀತಿ, ಶಾಲೆಯ ಮಕ್ಕಳ ಚೆಸ್ ಕನಸಿಗೆ ರೆಕ್ಕೆ ಮೂಡುವಂತೆ ಮಾಡಿದೆ.

ಗುಜರಾತ್‌ನ ಮಹೀಸಾಗರ ಜಿಲ್ಲೆಯ ಬಾಲಸಿನೊರ್ ತಾಲ್ಲೂಕಿನಲ್ಲಿದೆ 100 ಮನೆಗಳಿರುವ ಈ ಪುಟ್ಟ ಗ್ರಾಮ. ಬಡ ಕಾರ್ಮಿಕ ಕುಟುಂಬಗಳೇ ವಾಸಿಸುವ ಈ ಗ್ರಾಮಕ್ಕೆ ಸರ್ಕಾರಿ ಬಸ್ ಸೌಲಭ್ಯದ ಭಾಗ್ಯ ಇನ್ನೂ ಸಿಕ್ಕಿಲ್ಲ. ಪೋಷಕರಿಗೆ ಚೆಸ್ ಎಂದರೆ ಏನು ಎಂಬುದೇ ಗೊತ್ತಿಲ್ಲ. ಆದರೆ ನಾಲ್ಕು ವರ್ಷಗಳಿಂದೀಚೆಗೆ ಅವರ ಮನೆಯ ಮಕ್ಕಳು ಚದುರಂಗ ಆಟದಲ್ಲಿ ಪಳಗಿದ್ದಾರೆ. ಶಾಲೆಯಲ್ಲಿ ಪಾಠ ಕೇಳುವುದರ ಜೊತೆಗೆ ತಾಲ್ಲೂಕು, ಜಿಲ್ಲಾ, ರಾಜ್ಯ ಮಟ್ಟದಲ್ಲಿ ನಡೆಯುವ ಚೆಸ್ ಟೂರ್ನಿಗಳಲ್ಲಿ ಭಾಗವಹಿಸುತ್ತಾ ಬಹುಮಾನ, ಟ್ರೋಫಿ, ಪದಕಗಳನ್ನು ಗೆದ್ದು ತರುತ್ತಿದ್ದಾರೆ.

ಸ್ವಂತ ಹಣದಿಂದ ಖರೀದಿ

ತರಬೇತಿಗೆ ಬೇಕಾದ ಚೆಸ್ ಕಿಟ್ ಖರೀದಿಗೆ ಹಣ ಕೊಡಲು ಪೋಷಕರಿಂದ ಸಾಧ್ಯವಿರಲಿಲ್ಲ. ಹಾಗಾಗಿ, ಸಂದೀಪ್ ಅವರೇ ಸ್ವಂತ ಹಣದಿಂದ ಚೆಸ್ ಬೋರ್ಡ್–ಕ್ಲಾಕ್, ಚೆಸ್‌ಗೆ ಸಂಬಂಧಿಸಿದ ಪುಸ್ತಕಗಳನ್ನು ಖರೀದಿ ಮಾಡಿ ಮಕ್ಕಳಿಗೆ ಹಂಚಿದ್ದಾರೆ. ಅಲ್ಲದೆ, ವಿದ್ಯಾರ್ಥಿಗಳ ಪ್ರಯಾಣ, ಸ್ಪರ್ಧೆಯ ನೋಂದಣಿ ವೆಚ್ಚವನ್ನೂ ಹಲವು ಬಾರಿ ತಾವೇ ಭರಿಸಿದ್ದಾರೆ. ಹಣದ ಕೊರತೆ ಬಿದ್ದಾಗ ಸಹೋದ್ಯೋಗಿಗಳು, ಸ್ನೇಹಿತರು, ಗ್ರಾಮಸ್ಥರಿಂದ ಹಣ ಸಂಗ್ರಹಿಸಿದ್ದಾರೆ.

2000ನೇ ಇಸವಿಯಿಂದ ಈ ಶಾಲೆಯಲ್ಲಿ ಕೆಲಸ ಮಾಡುತ್ತಿರುವ ಸಂದೀಪ್, ಮಕ್ಕಳಿಗೆ ಚೆಸ್ ತರಬೇತಿ ನೀಡಲು ಆರಂಭಿಸಿದ್ದು 2021ರ ನಂತರ. 2018ರಲ್ಲಿ ಶಿವ ಖೇರಾ ಅವರ ‘ನೀವೂ ಗೆಲ್ಲಬಹುದು’ (ಯೂ ಕ್ಯಾನ್ ವಿನ್) ಎಂಬ ಪುಸ್ತಕದಿಂದ ಪ್ರೇರಿತರಾದ ಅವರಿಗೆ, ಬರೀ ಪಾಠವಲ್ಲದೆ ಮಕ್ಕಳ ಉಜ್ವಲ ಭವಿಷ್ಯಕ್ಕೆ ಅನುಕೂಲವಾಗುವಂತೆ ಏನನ್ನಾದರೂ ಮಾಡಬೇಕು ಎಂಬ ಯೋಚನೆ ಬಂತು. ಬುದ್ಧಿಮತ್ತೆಗೆ ಸವಾಲು ಒಡ್ಡುವ ಚೆಸ್ ಅನ್ನೇ ಯಾಕೆ ಕಲಿಸಬಾರದು ಎಂದುಕೊಂಡರು. ಆದರೆ, ಅವರ ಯೋಜನೆ ಕಾರ್ಯರೂಪಕ್ಕೆ ಬರಬೇಕಾದರೆ ಕೋವಿಡ್ ಸಾಂಕ್ರಾಮಿಕ ಕಾಡಬೇಕಾಯಿತು. ಲಾಕ್‌ಡೌನ್ ಅವಧಿಯಲ್ಲಿ ಶಾಲೆಗಳು ಮುಚ್ಚಿದ್ದಾಗ, ಸುಮ್ಮನೆ ಮನೆಯಲ್ಲಿ ಇರುತ್ತಿದ್ದ ಮಕ್ಕಳಿಗೆ ಚೆಸ್ ತರಬೇತಿ ನೀಡಲು ಆರಂಭಿಸಿದರು. 2022ರ ಹೊತ್ತಿಗೆ ಹಲವು ಮಕ್ಕಳು ಆಟದಲ್ಲಿ ಪರಿಣತಿ ಸಾಧಿಸಿದರು. ಸ್ಪರ್ಧೆಗಳಲ್ಲಿ ಭಾಗವಹಿಸಲು ಆರಂಭಿಸಿದರು. ನಾಲ್ಕು ವರ್ಷಗಳಲ್ಲಿ ಸಂದೀಪ್ 200 ಮಕ್ಕಳಿಗೆ ತರಬೇತಿ ನೀಡಿದ್ದಾರೆ. ಶಾಲೆಯಲ್ಲಿ ಪ್ರಸ್ತುತ 138 ಮಕ್ಕಳಿದ್ದು, ಪೂರ್ವ ಪ್ರಾಥಮಿಕದಿಂದ ಹಿಡಿದು ಎಂಟನೇ ತರಗತಿವರೆಗಿನ 100 ಮಕ್ಕಳಿಗೆ ತರಬೇತಿ ನೀಡುತ್ತಿದ್ದಾರೆ.



> ಉತ್ತರಪ್ರದೇಶದ ಮಾಧೋಪಟ್ಟಿ ಎಂಬ ಗ್ರಾಮದ 45ಕ್ಕೂ ಹೆಚ್ಚು ಮಂದಿ ಐಎಎಸ್, ಐಪಿಎಸ್, ಇನ್ನಿತರ ಅಧಿಕಾರಿಗಳಾಗಿದ್ದಾರೆ. ಒಂದು ಗ್ರಾಮದಲ್ಲಿ ಇದು ಸಾಧ್ಯ ಎನ್ನುವುದಾದರೆ, ನಮಗ್ಯಾಕೆ ಗ್ರ್ಯಾಂಡ್ ಮಾಸ್ಟರ್‌ಗಳು, ಚೆಸ್ ಚಾಂಪಿಯನ್‌ಗಳನ್ನು ಹುಟ್ಟುಹಾಕಲು ಸಾಧ್ಯವಿಲ್ಲ? 50 ಗ್ರ್ಯಾಂಡ್ ಮಾಸ್ಟರ್‌ಗಳು ಮತ್ತು 10 ವಿಶ್ವ ಚಾಂಪಿಯನ್‌ಗಳನ್ನು ರೂಪಿಸಬೇಕು ಎಂಬುದು ನನ್ನ ಗುರಿ. ಇದು ದೊಡ್ಡ ಮಹತ್ವಾಕಾಂಕ್ಷೆ ಎಂದೆನಿಸಬಹುದು. ಆದರೆ ಸಾಧಿಸಲು ಖಂಡಿತ ಸಾಧ್ಯವಿದೆ.
>
> **ಸಂದೀಪ್ ಉಪಾಧ್ಯಾಯ,** ಶಿಕ್ಷಕ ಮತ್ತು ಚೆಸ್ ತರಬೇತುದಾರ

ಈ ಬಗ್ಗೆ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿದ ಸಂದೀಪ್, ‘ಶಾಲೆ ಅವಧಿಯಲ್ಲಿ ಮಕ್ಕಳಿಗೆ ಚೆಸ್ ಹೇಳಿಕೊಡುತ್ತಿಲ್ಲ. ಭಾನುವಾರ ಸೇರಿದಂತೆ ರಜಾ ದಿನಗಳಲ್ಲಿ, ತರಗತಿ ಮುಗಿದ ನಂತರ, ಬೇಸಿಗೆ ರಜಾ ಸಮಯದಲ್ಲಿ ತರಬೇತಿ ನೀಡುತ್ತಿದ್ದೇನೆ. ನಮ್ಮ ಶಾಲೆಯಲ್ಲಿ ಈಗ ಚೆಸ್ ಕೂಡ ಶಿಕ್ಷಣದ ಭಾಗವೇ ಆಗಿದೆ’ ಎಂದು ಹೇಳಿದರು.

ಸಂದೀಪ್ ಅವರ ಶ್ರಮ ಬಹುಬೇಗ ಫಲ ನೀಡಲು ಆರಂಭಿಸಿದೆ. ಗುಜರಾತ್‌ನ ಕ್ರೀಡಾ ಪ್ರಾಧಿಕಾರ ನಿರ್ವಹಿಸುವ ಜಿಲ್ಲಾ ಮಟ್ಟದ ಕ್ರೀಡಾ ಶಾಲೆಗೆ (ಡಿಎಲ್‌ಎಸ್‌ಎಸ್) 21 ವಿದ್ಯಾರ್ಥಿಗಳು ದಾಖಲಾಗಿದ್ದಾರೆ. ನಗರ ಪ್ರದೇಶದ ಕ್ರೀಡಾ ವಿದ್ಯಾರ್ಥಿಗಳೊಂದಿಗೆ ಪೈಪೋಟಿ ನಡೆಸಿ ಈ ಶಾಲೆಯ ಮಕ್ಕಳು ಪ್ರವೇಶ ಪಡೆದಿರುವುದು ಇಡೀ ಊರಿಗೆ ಹೆಮ್ಮೆ ಉಂಟು ಮಾಡಿದೆ. ಡಿಎಲ್‌ಎಸ್‌ಎಸ್‌ಗೆ ದಾಖಲಾದರೆ ದ್ವಿತೀಯ ಪಿಯುಸಿವರೆಗೆ ಶಿಕ್ಷಣದ ಜೊತೆಗೆ ಹೆಚ್ಚುವರಿ ಕ್ರೀಡಾ ತರಬೇತಿಯನ್ನೂ ಉಚಿತವಾಗಿ ನೀಡಲಾಗುತ್ತದೆ.

ನಾಲ್ಕು ವರ್ಷಗಳಲ್ಲಿ ಈ ಶಾಲೆಯ ಮಕ್ಕಳು ರಾಜ್ಯಮಟ್ಟದ 25 ಟೂರ್ನಿಗಳಲ್ಲಿ ಭಾಗವಹಿಸಿದ್ದಾರೆ. ಖೇಲ್ ಮಹಾಕುಂಭ ಸೇರಿದಂತೆ 20 ಪಂದ್ಯಾವಳಿಗಳಲ್ಲಿ ಮೊದಲ ಮೂವರು ವಿಜೇತರಲ್ಲಿ ಒಬ್ಬರಾಗಿದ್ದಾರೆ. ಹಿಂದಿನ ವರ್ಷ ರಾಜ್ಯ ಮಟ್ಟಕ್ಕೆ ಆಯ್ಕೆಯಾದ ಎಂಟು ವಿದ್ಯಾರ್ಥಿಗಳ ಪೈಕಿ ಏಳು ಮಕ್ಕಳು ಈ ಶಾಲೆಯವರು. ಈ ವರ್ಷದ ಮಾರ್ಚ್‌ನಲ್ಲಿ ಅಹಮದಾಬಾದ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಟೂರ್ನಿಯಲ್ಲಿ 9ರಿಂದ 15 ವರ್ಷದೊಳಗಿನವರ ಪಂದ್ಯಾವಳಿಗಳಲ್ಲಿ ಈ ಶಾಲೆಯ ಹೆಚ್ಚಿನ ಹೆಣ್ಣುಮಕ್ಕಳು ಪದಕಗಳಿಗೆ ಕೊರಳೊಡ್ಡಿದ್ದಾರೆ.

ಮಕ್ಕಳ ಸಾಧನೆ ಹಲವರ ಗಮನ ಸೆಳೆದಿದೆ. ಚೆಸ್ ಕ್ರೀಡಾ ಕ್ಷೇತ್ರದ ಹಲವರು ಶಾಲೆಗೆ ಭೇಟಿ ನೀಡಿದ್ದಾರೆ. ಕಂಪನಿಯೊಂದು ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ನಿಧಿಯಿಂದ 30 ಚೆಸ್‌ಬೋರ್ಡ್ ಮತ್ತು ಅಷ್ಟೇ ಸಂಖ್ಯೆಯ ಚೆಸ್ ಕ್ಲಾಕ್‌ಗಳನ್ನು ಕೊಡುಗೆಯಾಗಿ ನೀಡಿದೆ. ಲಯನ್ಸ್ ಕ್ಲಬ್‌ನಂತಹ ಸ್ಥಳೀಯ ಸಂಸ್ಥೆಗಳು ಚೆಸ್ ಟೂರ್ನಿಗಳನ್ನು ಆಯೋಜಿಸಿ ಮಕ್ಕಳನ್ನು ಪ್ರೋತ್ಸಾಹಿಸುತ್ತಿವೆ.

ಚೆಸ್ ತರಬೇತಿಯು ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಿದೆ. ಅವರ ಆತ್ಮವಿಶ್ವಾಸ ವೃದ್ಧಿಯಾಗಿದೆ. ಅವರ ಸಮಗ್ರ ಬೆಳವಣಿಗೆಗೂ ಇದು ಕಾರಣವಾಗಿದೆ. ಬೇರೆಯವರ ಮುಂದೆ ಮಾತನಾಡುವುದಕ್ಕೂ ಹೆದರುತ್ತಿದ್ದ ಮಕ್ಕಳು, ಈಗ ದಿಟ್ಟವಾಗಿ ಮಾತನಾಡುತ್ತಾರೆ. ಚೆಸ್ ಟೂರ್ನಿಗಳಲ್ಲಿ ಎದುರಾಳಿಗಳ ಮುಂದೆ ಧೈರ್ಯವಾಗಿ ಕುಳಿತು ಆಡುತ್ತಿದ್ದಾರೆ. ❖

ವಿದ್ಯಾರ್ಥಿ ವೇತನ ಕೈಪಿಡಿ

ಜೆ.ಕೆ. ಟೈರ್ ಶಿಕ್ಷಾ ಸಾರಥಿ ಸ್ಕಾಲರ್‌ಷಿಪ್

ಜೆ.ಕೆ. ಟೈರ್ & ಇಂಡಸ್ಟ್ರೀಸ್ ಲಿಮಿಟೆಡ್ ಭಾರಿ ವಾಹನ ಚಾಲಕರ ಪುತ್ರಿಯರಿಂದ ಅರ್ಜಿ ಆಹ್ವಾನಿಸಿದೆ.

ಅರ್ಹತೆ: ಸಾಮಾನ್ಯ ಅಥವಾ ವೃತ್ತಿಪರ ಪದವಿ ಅಥವಾ ಡಿಪ್ಲೊಮಾ ಕೋರ್ಸ್‌ಗಳಿಗೆ ದಾಖಲಾಗಿರುವ ಹೆಣ್ಣುಮಕ್ಕಳಾಗಿರಬೇಕು. ಅರ್ಜಿದಾರರು ತಮ್ಮ ಹಿಂದಿನ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಶೇ 55ರಷ್ಟು ಅಂಕಗಳನ್ನು ಪಡೆದಿರಬೇಕು.

ಕುಟುಂಬದ ವಾರ್ಷಿಕ ಆದಾಯ ₹ 5 ಲಕ್ಷ ಮೀರಿರಬಾರದು. ಅರ್ಜಿದಾರರು ಕರ್ನಾಟಕ, ರಾಜಸ್ಥಾನ, ಮಧ್ಯಪ್ರದೇಶ, ಉತ್ತರಾಖಂಡ ಅಥವಾ ತಮಿಳುನಾಡಿನ ನಿವಾಸಿಗಳಾಗಿರಬೇಕು.

ಆರ್ಥಿಕ ಸಹಾಯ: ವೃತ್ತಿಪರ ಪದವಿ ಕೋರ್ಸ್: ₹ 25,000,
ಸಾಮಾನ್ಯ ಪದವಿ ಕೋರ್ಸ್: ₹ 15,000,
ಡಿಪ್ಲೊಮಾ ಕೋರ್ಸ್: ₹ 15,000
ಅರ್ಜಿ ಸಲ್ಲಿಸಲು ಕೊನೇ ದಿನ: 06-10-2025
ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್
ಹೆಚ್ಚಿನ ಮಾಹಿತಿಗೆ: Short Url: www.b4s.in/praja/JKTS3

ಜೈವಿಕ ತಂತ್ರಜ್ಞಾನ ಸಂಶೋಧನೆಗೆ ವರದಾನ



• ವಾಸುದೇವ ನಾಯಕ ಕೆ.ಬಿ.ಎಲ್.

ಇಪ್ಪತ್ತೊಂದನೇ ಶತಮಾನವನ್ನು ಜ್ಞಾನ ಮತ್ತು ವಿಜ್ಞಾನದ ಶತಮಾನ ಎಂದು ಕರೆಯಲಾಗುತ್ತಿದೆ. ಇದಕ್ಕೆ ಪೂರಕವಾಗಿ, ಬಯೊಟೆಕ್ನಾಲಜಿ ಅಥವಾ ಜೈವಿಕ ತಂತ್ರಜ್ಞಾನ ಕ್ಷೇತ್ರವು ಬೆಳೆಯುತ್ತಿದೆ. ಮಾನವ ಜೀವನದ ಗುಣಮಟ್ಟ ಸುಧಾರಣೆ, ಆಹಾರ ಭದ್ರತೆ, ಆರೋಗ್ಯ ಸಂರಕ್ಷಣೆ, ಪರಿಸರ ಸಂರಕ್ಷಣೆ, ಕೈಗಾರಿಕಾ ಉತ್ಪಾದನೆಯಂತಹ ಕ್ಷೇತ್ರಗಳಲ್ಲಿ ಜೈವಿಕ ತಂತ್ರಜ್ಞಾನವು ಕ್ರಾಂತಿಯನ್ನು ಉಂಟುಮಾಡುತ್ತಿದೆ.

ಈ ತಂತ್ರಜ್ಞಾನದಲ್ಲಿನ ಸಂಶೋಧನೆ ವಿವಿಧ ದಿಕ್ಕುಗಳಲ್ಲಿ ಸಾಗುತ್ತಿದೆ. ಜೆನೆಟಿಕ್ ಎಂಜಿನಿಯರಿಂಗ್, ಮಾಲಿಕ್ಯುಲಾರ್ ಬಯಾಲಜಿ, ಅಗ್ರಿಕಲ್ಚರಲ್ ಬಯೊಟೆಕ್ನಾಲಜಿ, ಫಾರ್ಮಸ್ಯೂಟಿಕಲ್ ಬಯೊಟೆಕ್ನಾಲಜಿ, ಇಂಡಸ್ಟ್ರಿಯಲ್ ಬಯೊಪ್ರೋಸೆಸ್ ಹಾಗೂ ಎನ್‌ವಿರಾನ್‌ಮೆಂಟಲ್ ಬಯೊಟೆಕ್ನಾಲಜಿ ಪ್ರಮುಖವಾಗಿವೆ. ಉದಾಹರಣೆಗೆ, ಜೆನೆಟಿಕ್ ಎಂಜಿನಿಯರಿಂಗ್ ಮೂಲಕ ತಳಿ ಪರಿವರ್ತಿತ ಬೆಳೆಗಳು (ಜೆನೆಟಿಕಲಿ ಮಾಡಿಫೈಡ್ ಕ್ರಾಪ್ಸ್) ಅಭಿವೃದ್ಧಿಯಾಗಿದ್ದು, ಅವು ಹೆಚ್ಚಿನ ಉತ್ಪಾದನೆ, ಕೀಟ ನಿರೋಧಕತೆಗೆ ಕಾರಣವಾಗಿವೆ. ಆರೋಗ್ಯ ಕ್ಷೇತ್ರದಲ್ಲಿ, ಕೃತಕ ಇನ್ಸುಲಿನ್ ಉತ್ಪಾದನೆ, ಲಸಿಕೆಗಳ ತಯಾರಿಕೆಯು ಜೈವಿಕ ತಂತ್ರಜ್ಞಾನ ಸಂಶೋಧನೆಯ ಫಲ. ಜೆನೋಮ್ ತಿದ್ದುಪಡಿ ತಂತ್ರಜ್ಞಾನವು ವೈದ್ಯಕೀಯ ರಂಗದಲ್ಲಿ ನವೀನ ಸಂಶೋಧನೆಯ ದಿಕ್ಕನ್ನು ತೋರಿಸುತ್ತಿದೆ.

ಬಿ.ಇ/ಬಿ.ಟೆಕ್‌ನಿಂದ ಹಿಡಿದು ಸ್ನಾತಕೋತ್ತರ, ಪಿಎಚ್.ಡಿ. ಹಂತದವರೆಗೂ ವಿದ್ಯಾರ್ಥಿಗಳು ಆಳವಾದ ಸಂಶೋಧನೆಯಲ್ಲಿ ತೊಡಗಿಕೊಳ್ಳಬಹುದಾಗಿದೆ. ಪ್ರಾಜೆಕ್ಟ್ ಕಾರ್ಯ, ಪ್ರಯೋಗಾಲಯ ಸಂಶೋಧನೆ, ಕೈಗಾರಿಕಾ ತರಬೇತಿ, ಇಂಟರ್ನ್‌ಶಿಪ್‌ನಂತಹವುಗಳ ಮೂಲಕ ತಾಂತ್ರಿಕ ಕೌಶಲವನ್ನು ಪಡೆಯಬಹುದಾಗಿದೆ. ಇದರ ಜೊತೆಗೆ, ಸಮಸ್ಯೆ ಪರಿಹಾರ ಸಾಮರ್ಥ್ಯ, ತಂಡದಲ್ಲಿ ಕೆಲಸ ಮಾಡುವ ಗುಣ, ಸಂವಹನ ಕೌಶಲ, ನೈತಿಕ ಹೊಣೆಗಾರಿಕೆ ಎಲ್ಲವೂ ಸದೃಢಗೊಳ್ಳುತ್ತವೆ. ಜೊತೆಗೆ ಸಮಾಜಮುಖಿ ಕೊಡುಗೆ ನೀಡಲು ಸಹ ಸಾಧ್ಯವಾಗಿದೆ.

ಉದ್ಯೋಗಾವಕಾಶ: ದೇಶೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಅನೇಕ ಅವಕಾಶಗಳು ತೆರೆದಿವೆ.

1. **ಆರೋಗ್ಯ ಕ್ಷೇತ್ರ**– ಔಷಧ ಕಂಪನಿಗಳು, ಲಸಿಕೆ ತಯಾರಿಕಾ ಘಟಕಗಳು, ಕ್ಲಿನಿಕಲ್ ಸಂಶೋಧನಾ ಸಂಸ್ಥೆಗಳು.
2. **ಕೃಷಿ ಕ್ಷೇತ್ರ**– ಬೀಜ ಉತ್ಪಾದನಾ ಕಂಪನಿಗಳು, ಸಸ್ಯ ಸಂಶೋಧನಾ ಕೇಂದ್ರಗಳು, ಆಹಾರ ಸಂಸ್ಕರಣಾ ಕೈಗಾರಿಕೆಗಳು.
3. **ಪರಿಸರ ನಿರ್ವಹಣೆ**– ಜಲಶುದ್ಧೀಕರಣ ಘಟಕಗಳು, ತ್ಯಾಜ್ಯ ನಿರ್ವಹಣಾ ಕೈಗಾರಿಕೆಗಳು, ನವೀನ ಶಕ್ತಿಯ ತಂತ್ರಜ್ಞಾನ.
4. **ಕೈಗಾರಿಕಾ ಕ್ಷೇತ್ರ**– ಎನ್‌ಜೈಮ್ ತಯಾರಿಕೆ, ಜೈವಿಕ ಇಂಧನ, ಬಯೊಫಾರ್ಮಸ್ಯೂಟಿಕಲ್ಸ್.
5. **ಸಂಶೋಧನಾ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳು**– ಸಂಶೋಧನಾ ಸಹಾಯಕ, ಉಪನ್ಯಾಸಕ, ವಿಜ್ಞಾನಿ ಹುದ್ದೆಗಳು.
6. **ವಿದೇಶದಲ್ಲಿ ಅವಕಾಶ**– ಅಮೆರಿಕ, ಯುರೋಪ್, ಜಪಾನ್, ಸಿಂಗಪುರದಂತಹ ದೇಶಗಳಲ್ಲಿ ಸಂಶೋಧನೆ ಹಾಗೂ ಕೈಗಾರಿಕಾ ಕೆಲಸಗಳಿಗೆ ವಿದ್ಯಾರ್ಥಿಗಳು ಹೆಚ್ಚಿನ ಬೇಡಿಕೆ ಹೊಂದಿದ್ದಾರೆ. ಇದೇ ರೀತಿ, ಬಯೊಟೆಕ್ನಾಲಜಿಯಲ್ಲಿ ಸ್ಟಾರ್ಟ್–ಅಪ್ ಉದ್ದಿಮೆಗಳು ಕೂಡ ವೇಗವಾಗಿ ಬೆಳೆಯುತ್ತಿವೆ. ಆರೋಗ್ಯ ನಿರ್ಣಾಯಕ ಕಿಟ್‌ಗಳು, ಸಸ್ಯ ಆಧಾರಿತ ಉತ್ಪನ್ನಗಳು, ಜೈವಿಕ ಇಂಧನ, ಆಹಾರ ತಂತ್ರಜ್ಞಾನದಲ್ಲಿ ಯುವ ಉದ್ಯಮಿಗಳು ಹೊಸ ಹಾದಿ ತೆರೆಯುತ್ತಿದ್ದಾರೆ.

ಹೀಗಾಗಿ, ವಿಜ್ಞಾನಾಭಿರುಚಿ ಹೊಂದಿರುವ ವಿದ್ಯಾರ್ಥಿಗಳು ಬಯೊಟೆಕ್ನಾಲಜಿ ಪದವಿಯನ್ನು ಆಯ್ಕೆ ಮಾಡಿಕೊಂಡು, ದೇಶದ ಭವಿಷ್ಯ ನಿರ್ಮಾಣದಲ್ಲಿ ಕೈಜೋಡಿಸಬಹುದು.

ಲೇಖಕ: ಪ್ರಾಧ್ಯಾಪಕ, ಬಾಪೂಜಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿ–ಬಿಐಇಟಿ ದಾವಣಗೆರೆ

ದಸರಾ ರಜೆ ಯೋಚಿಸಿ ಯೋಜಿಸಿ

• ಸೋಮಲಿಂಗಪ್ಪ ಬೆಣ್ಣಿ

ಶಾಲಾ ಮಕ್ಕಳಿಗೆ ಸದ್ಯದಲ್ಲೇ ದಸರಾ ರಜೆ ಆರಂಭವಾಗಲಿದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪಠ್ಯದಷ್ಟೇ ಪಠ್ಯೇತರ ಚಟುವಟಿಕೆಗಳೂ ಮುಖ್ಯ. ಯೋಚಿಸಿ ಯೋಜಿಸಿದರೆ ರಜೆಯನ್ನು ಅರ್ಥಪೂರ್ಣವಾಗಿ ಕಳೆಯಬಹುದು. ಅದಕ್ಕಾಗಿ ಒಂದಿಷ್ಟು ಸಲಹೆಗಳು ಇಲ್ಲಿವೆ:

1. **ಕೈಬರಹ ಸುಧಾರಣೆ:** ಎಷ್ಟೇ ಆಧುನಿಕ ಸಾಧನಗಳು ಬಂದಿದ್ದರೂ ಕೈಬರಹಕ್ಕೆ ಸದಾ ಕಾಲ ಮಾನ್ಯತೆ ಇದ್ದೇ ಇರುತ್ತದೆ. ಆದ್ದರಿಂದ ಕೈಬರಹವನ್ನು ಸುಧಾರಿಸಿಕೊಳ್ಳಲು ಸಮಯವನ್ನು ಮೀಸಲಿಡಬೇಕು.

2. **ಹವ್ಯಾಸ ವೃದ್ಧಿ:** ಒಳ್ಳೆಯ ಹವ್ಯಾಸಗಳಿರುವ ವ್ಯಕ್ತಿ ಸದಾ ಸಂತೋಷದಿಂದ ಇರುತ್ತಾನೆ ಎಂದು ಹಿರಿಯರು ಹೇಳಿದ್ದಾರೆ. ಪ್ರತಿ ವಿದ್ಯಾರ್ಥಿಗೂ ಕಥೆ-ಕವನ ಬರವಣಿಗೆ, ಚಿತ್ರ ಬಿಡಿಸುವುದು, ಪೇಪರ್ ಕ್ರಾಫ್ಟ್‌ನಂತಹ ಒಂದಲ್ಲೊಂದು ಕ್ಷೇತ್ರದಲ್ಲಿ ಹವ್ಯಾಸ ಇರುತ್ತದೆ. ಸಮಯದ ಅಭಾವದಿಂದ ಅದರಲ್ಲಿ ತೊಡಗಿಸಿಕೊಳ್ಳಲು ಆಗಿರುವುದಿಲ್ಲ. ರಜೆಯಲ್ಲಿ ಇಂತಹ ಹವ್ಯಾಸಗಳನ್ನು ಪೋಷಿಸಿಕೊಂಡರೆ ತಮ್ಮ ಪ್ರತಿಭೆಯನ್ನು ಗಟ್ಟಿಗೊಳಿಸಲು ಸಾಧ್ಯವಾಗುತ್ತದೆ.

3. **ಆತ್ಮೀಯರ ಸಖ್ಯ:** ಕುಟುಂಬಸ್ಥರು, ಬಂಧುಗಳು, ಗೆಳೆಯರೊಂದಿಗೆ ಹೆಚ್ಚು ಸಮಯ ಕಳೆಯಿರಿ, ಸಂಭ್ರಮದಿಂದ ಹಬ್ಬ ಆಚರಿಸಿ.

4. **ಲಘು ಹೊರ ಸಂಚಾರ:** ನಿಸರ್ಗದೊಂದಿಗೆ ಬೆರೆಯುವುದು ಮನಸ್ಸಿಗೆ ಹಾಗೂ ದೇಹಕ್ಕೆ ಸಕಾರಾತ್ಮಕ ಶಕ್ತಿಯನ್ನು ನೀಡುತ್ತದೆ. ರಜೆಯ ಸಮಯದಲ್ಲಿ ಪೋಷಕರು ಇಂತಹ ಯೋಜನೆಗಳನ್ನು ಹಾಕಿಕೊಂಡರೆ ಮಕ್ಕಳಲ್ಲಿ ಇನ್ನಷ್ಟು ಚೈತನ್ಯ ತುಂಬಿದಂತೆ ಆಗುತ್ತದೆ.



5. **ರಕ್ಷಣಾ ಕೌಶಲ ಕೈಗೂಡಲಿ:** ಮೊಬೈಲ್, ಕಂಪ್ಯೂಟರ್‌ನ ವ್ಯಾಪಕ ಬಳಕೆಯಿಂದ ಕೆಲವು ಮೂಲಭೂತ ಕೌಶಲಗಳ ಬಗ್ಗೆ ಎಷ್ಟೋ ಮಕ್ಕಳಿಗೆ ಪರಿಚಯವೇ ಇಲ್ಲದಂತಾಗಿದೆ. ಮರ ಹತ್ತುವುದು, ಈಜಿನಂತಹ ಕೌಶಲಗಳನ್ನು ಪೋಷಕರ ನೆರವಿನಿಂದ ರೂಢಿಸಿಕೊಳ್ಳುವುದು ಉತ್ತಮ.

ಒಟ್ಟಾರೆ, ಬರೀ ಪಠ್ಯ ಹಾಗೂ ಅಂಕಗಳ ಒತ್ತಡದಿಂದ ಹೊರಬಂದು, ನಾನಾ ಬಗೆಯಲ್ಲಿ ವ್ಯಕ್ತಿತ್ವ ವಿಕಸನಕ್ಕೆ ದಾರಿ ಮಾಡಕೊಳ್ಳಬೇಕು. ರಜಾ ದಿನಗಳ ಲಭ್ಯತೆಗೆ ಅನುಗುಣವಾಗಿ, ತೀರಾ ಹೊರೆಯೆನಿಸದಂತೆ ಸೂಕ್ತ ಯೋಜನೆ ರೂಪಿಸಿಕೊಳ್ಳಬೇಕು. ಆಗ, ದಸರಾ ರಜೆಯನ್ನು ಮಕ್ಕಳು ಅರ್ಥಪೂರ್ಣವಾಗಿ ಕಳೆದಂತೆ ಆಗುತ್ತದೆ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಸಮಾಜವಿಜ್ಞಾನ

ಅಧ್ಯಾಯ – 3 ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಪರಿಣಾಮಗಳು

33) ಗವರ್ನರ್ ಜನರಲ್ ಹುದ್ದೆಯ ಪದನಾಮವನ್ನು ಬದಲಾಯಿಸಿ ‘ವೈಸ್‌ರಾಯ್’ ಎಂಬ ಪದನಾಮವನ್ನು ನೀಡಿದ್ದು ಯಾವ ಕಾಯ್ದೆ?

ಎ) 1935 ಭಾರತ ಸರ್ಕಾರದ ಕಾಯ್ದೆ
ಬಿ) ಭಾರತ ಸರ್ಕಾರದ ಕಾಯ್ದೆ – 1858
ಸಿ) 1833ರ ಚಾರ್ಟರ್ ಕಾಯ್ದೆ:
ಡಿ) 1773ರ ರೆಗ್ಯುಲೇಟಿಂಗ್ ಕಾಯ್ದೆ

ಉತ್ತರ:– ಬಿ

34) ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ಯಾರು?

ಎ) ಲಾರ್ಡ್ ಕ್ಯಾನಿಂಗ್ ಬಿ) ಲಾರ್ಡ್ ಮಿಂಟೊ
ಸಿ) ಲಾರ್ಡ್ ವಾರನ್ ಹೇಸ್ಟಿಂಗ್
ಡಿ) ಲಾರ್ಡ್ ಮೆಟ್ಕಾಫ್ ಡಿ) ಮೌಂಟ್ ಬ್ಯಾಟನ್

ಉತ್ತರ:–ಎ

35) ಭಾರತದ ಸಂವಿಧಾನ ರಚನೆ ಮುಖ್ಯವಾದ ಕಾಯ್ದೆ ಯಾವುದು?

ಎ) 1935ರ ಭಾರತ ಸರ್ಕಾರದ ಕಾಯ್ದೆ
ಬಿ) 1909 ಭಾರತೀಯ ಪರಿಷತ್ ಕಾಯ್ದೆ
ಸಿ) 1861ರ ಭಾರತೀಯ ಪರಿಷತ್ ಕಾಯ್ದೆ
ಡಿ) ಮೇಲಿನಯಾವುದೂ ಅಲ್ಲ

ಉತ್ತರ:– ಎ

ಪ್ರಶ್ನೋತ್ತರ:

ಒಂದು ವಾಕ್ಯದಲ್ಲಿ ಉತ್ತರಿಸಿ

1) ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದವನು ಯಾರು?

ಉತ್ತರ:– ಲಾರ್ಡ್ ಕಾರ್ನ್‌ವಾಲೀಸನು ನಾಗರಿಕ ಸೇವಾ ವ್ಯವಸ್ಥೆಯನ್ನು ಆಡಳಿತದಲ್ಲಿ ಜಾರಿಗೆ ತಂದನು.

2) ನಾಗರಿಕ ಸೇವೆಗೆ ಸೇರಬಯಸುವವರಿಗೆ ಶಿಕ್ಷಣವನ್ನು ನೀಡಲು ಕಾರ್ನ್‌ವಾಲೀಸನು ಕಲ್ಕತ್ತಾದಲ್ಲಿ ಫೋರ್ಟ್ ವಿಲಿಯಂ ಕಾಲೇಜನ್ನು ಸ್ಥಾಪಿಸಿದನು. ಆದರೆ ಇದಕ್ಕೆ ಯಾರು ಬೆಂಬಲ ನೀಡಲಿಲ್ಲ?

ಉತ್ತರ:– ಈಸ್ಟ್ ಇಂಡಿಯಾ ಕಂಪನಿಯ ನಿರ್ದೇಶಕರು ಇದಕ್ಕೆ ಬೆಂಬಲ ನೀಡಲಿಲ್ಲ.

3) ಯಾವ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು?

ಉತ್ತರ:– 1764ರ ಬಕ್ಸಾರ್ ಕದನದ ನಂತರ ಮೊಘಲ್ ಚಕ್ರವರ್ತಿ ಎರಡನೇ ಷಾ ಅಲಂನು ದಿವಾನಿ ಹಕ್ಕೆಂಬ ಕಂದಾಯ ವಸೂಲಾತಿ ಹಕ್ಕನ್ನು ಬ್ರಿಟಿಷರಿಗೆ ನೀಡಿದನು

4) ಯಾವ ವರ್ಷದ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು?

ಉತ್ತರ:– 1853ರ ನಂತರ ನಾಗರಿಕ ಸೇವೆಗೆ ಮಾಡುವ ಎಲ್ಲಾ ನೇಮಕಾತಿಗಳು ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೇ ಆಗಬೇಕೆಂಬ ತೀರ್ಮಾನವಾಯಿತು

5) ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವು ಯಾವುವು?

ಉತ್ತರ:– ವಾರನ್ ಹೇಸ್ಟಿಂಗ್ಸ್‌ನು ಜಾರಿಗೆ ತಂದ ಹೊಸ ಯೋಜನೆಯ ಪ್ರಕಾರ ಪ್ರತಿ ಜಿಲ್ಲೆಯು ಎರಡು ಬಗೆಯ ನ್ಯಾಯಾಲಯಗಳನ್ನು ಹೊಂದಿರಬೇಕಿತ್ತು. ಅವುಗಳೆಂದರೆ; **‘ದಿವಾನಿ ಅದಾಲತ್’** ಎಂಬ ನಾಗರಿಕ ನ್ಯಾಯಾಲಯಗಳು ಮತ್ತು **‘ಫೌಜದಾರಿ ಅದಾಲತ್’** ಎಂಬ ಅಪರಾಧ ನ್ಯಾಯಾಲಯಗಳು.

6) ಕ್ರಿಮಿನಲ್ ನ್ಯಾಯಾಲಯದಲ್ಲಿ ಎಲ್ಲರಿಗೂ ಯಾವ ಕಾನೂನು ಅನುಸಾರ ವಿಚಾರಣೆ ನಡೆಸಲಾಗುತಿತ್ತು?

ಉತ್ತರ:– ಕ್ರಿಮಿನಲ್ ನ್ಯಾಯಾಲಯದಲ್ಲಿ ಎಲ್ಲರಿಗೂ ಇಸ್ಲಾಂ ಕಾನೂನುಗಳ ಅನುಸಾರ ವಿಚಾರಣೆ ನಡೆಸಲಾಗುತ್ತಿತ್ತು.

7) ಆಂತರಿಕ ಶಾಂತಿ ಸುವ್ಯವಸ್ಥೆಯನ್ನು ಕಾಪಾಡುವ ಜವಾಬ್ದಾರಿಯನ್ನು ಹೊತ್ತಿರುವ ವರ್ಗವೇ ಪೊಲೀಸರು ಆಗಿದ್ದು ಮೊಟ್ಟಮೊದಲ ಭಾರಿಗೆ ವ್ಯವಸ್ಥಿತವಾದ ಪೊಲೀಸ್ ವಿಭಾಗವನ್ನು ಅಸ್ತಿತ್ವಕ್ಕೆ ತಂದವನು ಯಾರು?

ಉತ್ತರ:– ಲಾರ್ಡ್ ಕಾರ್ನ್ ವಾಲೀಸ್

8) ‘ಸೂಪರಿಟೆಂಡೆಂಟ್ ಆಫ್ ಪೊಲೀಸ್’ (SP) ಎನ್ನುವ ಹೊಸ ಹುದ್ದೆಯನ್ನು ಸೃಷ್ಟಿಸಿದನು. ಯಾರು?

ಉತ್ತರ:– ಲಾರ್ಡ್ ಕಾರ್ನ್ ವಾಲೀಸ್

9) ಯಾಕೆ 1770ರ ದಶಕದಲ್ಲಿ ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು?

ಉತ್ತರ:– 1770ರ ದಶಕದಲ್ಲಿ ಭೀಕರ ಕ್ಷಾಮಭೀತಿಯಿಂದ ಕಾನೂನು ಸುವ್ಯವಸ್ಥೆಯ ಸಮಸ್ಯೆ ವಿಷಮಗೊಳ್ಳತೊಡಗಿತು. ಇದರ ಪರಿಣಾಮವನ್ನು ಎದುರಿಸಲು ಇಡೀ ಪೊಲೀಸ್ ವ್ಯವಸ್ಥೆಯನ್ನು ಬ್ರಿಟಿಷ್ ಅಧಿಕಾರಿಗಳ ಅಧೀನಕ್ಕೊಳಪಡಿಸಲಾಯಿತು.

10) ಪೀಲ್ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ಯಾವ ಸಂದರ್ಭದಲ್ಲಿ ಬ್ರಿಟಿಷ್ ಸರ್ಕಾರ ರಚಿಸಿತು. ಅದರ ಶಿಫಾರಸ್ಸುಗಳ ಆಧಾರದ ಮೇಲೆ ಯಾವುದನ್ನು ಮರು ವಿನ್ಯಾಸಗೊಳಿಸಲಾಯಿತು?

ಉತ್ತರ:– 1857ರ ಘಟನೆಯ ನಂತರ ಪೀಲ್ ಎಂಬುವವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿ, ಶಿಫಾರಸ್ಸುಗಳನ್ನು ಬ್ರಿಟಿಷ್ ಸರಕಾರ ಪಡೆಯಿತು. ಈ ಶಿಫಾರಸ್ಸುಗಳ ಆಧಾರದ ಮೇಲೆ ಸೈನಿಕ ವ್ಯವಸ್ಥೆಯನ್ನು ಮರು ವಿನ್ಯಾಸಗೊಳಿಸಲಾಯಿತು

11) ಯಾವುದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.

ಉತ್ತರ:– ವಾರ್ಷಿಕವಾಗಿ ನಿರ್ದಿಷ್ಟ ಕಂದಾಯದ ಹಣವನ್ನು ಪಡೆಯಲು ಲಾರ್ಡ್ ಕಾರ್ನ್‌ವಾಲೀಸನು 1793ರಲ್ಲಿ ಬಂಗಾಳ ಮತ್ತು ಬಿಹಾರ ಪ್ರಾಂತ್ಯಗಳಲ್ಲಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೊಳಿಸಿದನು. ಇದನ್ನು ಖಾಯಂ ಜಮೀನ್ದಾರಿ ಪದ್ಧತಿ ಎಂದು ಕರೆಯಲಾಯಿತು.

12) ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ಯಾರು?

ಉತ್ತರ:– ಆರ್. ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

13) ಮಹಲವಾರಿ ಪದ್ಧತಿಯನ್ನು ಎಲ್ಲೆಲ್ಲಿ ಜಾರಿಗೆ ತಂದನು?

ಉತ್ತರ:– ಉತ್ತರ ಪ್ರದೇಶ, ಮಧ್ಯಪ್ರದೇಶದ ಅನೇಕ ಭಾಗಗಳಲ್ಲಿ, ಪಂಜಾಬ್ ಮತ್ತು ದೆಹಲಿ

14) ರೈತುವಾರಿ ಪದ್ದತಿ ಮೊದಲು ಜಾರಿಗೆ ತಂದವನು ಯಾರು ? ಮೊದಲು ಎಲ್ಲಿ ಜಾರಿಗೆ ತರಲಾಯಿತು?

ಉತ್ತರ:– ರೈತವಾರಿ ಪದ್ಧತಿಯನ್ನು ಮೊದಲಿಗೆ ಒಂದು ಪ್ರಯೋಗವಾಗಿ ಬಾರಮಹಲ್ ಪ್ರಾಂತ್ಯದಲ್ಲಿ 1792ರಲ್ಲಿ ಅಲೆಕ್ಸಾಂಡರ್ ರೀಡ್ ಎನ್ನುವವನು ಜಾರಿಗೊಳಿಸಿದನು.

15) ರೈತುವಾರಿ ಪದ್ಧತಿಯನ್ನು ಮದರಾಸು ಮತ್ತು ಮೈಸೂರು ಪ್ರಾಂತ್ಯಗಳಲ್ಲಿ 1801ರ ನಂತರ ಜಾರಿಗೊಳಿಸಿದನು ಯಾರು?

ಉತ್ತರ:– ಥಾಮಸ್ ಮನ್ರೊ

16) ಯಾವ ಪದ್ಧತಿಯಲ್ಲಿ ಭೂಮಿ ಉಳುಮೆ ಮಾಡುತ್ತಿದ್ದವನನ್ನು ಅದರ ಮಾಲೀಕನೆಂದು ಸರ್ಕಾರ ಮಾನ್ಯ ಮಾಡಿತು.?

ಉತ್ತರ:– ರೈತವಾರಿ

17) ಆಧುನಿಕ ಶಿಕ್ಷಣದ ಪ್ರಸಾರಕ್ಕೆ ಉತ್ತೇಜನ ಕೊಟ್ಟ ಮೊದಲ ಬ್ರಿಟಿಷ್ ಅಧಿಕಾರಿ ಯಾರು?

ಉತ್ತರ:– ವಾರನ್ ಹೇಸ್ಟಿಂಗ್ಸ್.

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

MATHS

DIFFERENTIABILITY

8. Differentiate w.r.t. x:

(.........Contd)

ii) $$\frac{d}{dx}\sqrt{\frac{1-x^2}{1+x^2}}=\frac{d}{dx}\left(\frac{1-x^2}{1+x^2}\right)^{1/2}$$

$$\Rightarrow \frac{1}{2}\left(\frac{1-x^2}{1+x^2}\right)^{-1/2}.\frac{d}{dx}\left(\frac{1-x^2}{1+x^2}\right)\text{(Chain Rule)}$$

$$\Rightarrow \frac{1}{2}\sqrt{\frac{1+x^2}{1-x^2}}.\left\{\frac{(1+x^2)\frac{d}{dx}(1-x^2)-(1-x^2)\frac{d}{dx}(1+x^2)}{(1+x^2)^2}\right\}$$

$$\Rightarrow \frac{1}{2}\sqrt{\frac{1+x^2}{1-x^2}}.\left\{\frac{(1+x^2)(-2x)-(1-x^2)(2x)}{(1+x^2)^2}\right\}$$

$$\Rightarrow \frac{(-2x)-(1+x^2+1-x^2)}{2\sqrt{1-x^2}(1+x^2)^{3/2}}$$

$$\Rightarrow \frac{-4x}{2\sqrt{1-x^2}(1+x^2)^{3/2}}\Rightarrow \frac{-2x}{\sqrt{1-x^2}(1+x^2)^{3/2}}.$$

iii) Let $$y=\frac{\sqrt{a+x}-\sqrt{a-x}}{\sqrt{a+x}+\sqrt{a-x}}$$

$$=\left(\frac{\sqrt{a+x}-\sqrt{a-x}}{\sqrt{a+x}+\sqrt{a-x}}\right)\left(\frac{\sqrt{a+x}-\sqrt{a-x}}{\sqrt{a+x}-\sqrt{a-x}}\right)$$

[Rationalising]

$$=\frac{\left(\sqrt{a+x}-\sqrt{a-x}\right)^2}{(a+x)-(a-x)}$$

$$=\frac{a+x+a-x-2\sqrt{a+x}\sqrt{a-x}}{2x}$$

$$=\frac{2\left(a-\sqrt{a+x}\sqrt{a-x}\right)}{2x}=\frac{a-\sqrt{a^2-x^2}}{x}$$

$$\Rightarrow \frac{d}{dx}y=\frac{d}{dx}\left\{\frac{a-\sqrt{a^2-x^2}}{x}\right\}$$

$$=\frac{x\frac{d}{dx}\left(a-\sqrt{a^2-x^2}\right)-\left(a-\sqrt{a^2-x^2}\right)\frac{d}{dx}x}{x^2}$$

$$=\frac{x\left\{-\frac{(-2x)}{2\sqrt{a^2-x^2}}\right\}-\left(a-\sqrt{a^2-x^2}\right)(1)}{x^2}$$

$$=\left\{\frac{\frac{x^2}{\sqrt{a^2-x^2}}-a+\sqrt{a^2-x^2}}{x^2}\right\}$$

$$=\frac{x^2-a\sqrt{a^2-x^2}+a^2-x^2}{x^2\sqrt{a^2-x^2}}=\frac{a\left(a-\sqrt{a^2-x^2}\right)}{x^2\sqrt{a^2-x^2}}$$

iv) Soln :– $$\frac{d}{dx}\left\{x+\sqrt{x^3-1}\right\}=\frac{d}{dx}x+\frac{d}{dx}(x^3-1)^{1/2}$$

$$\Rightarrow 1+\frac{1}{2}(x^3-1)^{-1/2}.\frac{d}{dx}(x^3-1)$$

$$\Rightarrow 1+\frac{1}{2\sqrt{x^3-1}}.(3x^2-0)$$

$$\Rightarrow 1+\frac{3x^2}{2\sqrt{x^3-1}}$$

$$\Rightarrow \frac{2\sqrt{x^3-1}+3x^2}{2\sqrt{x^3-1}}$$

v) Soln :– $$\frac{d}{dx}e^{\sin\sqrt{x}}=e^{\sin\sqrt{x}}.\frac{d}{dx}\sin\sqrt{x}$$

$$=e^{\sin\sqrt{x}}.(\cos\sqrt{x}).\frac{d}{dx}x^{1/2}$$

$$=e^{\sin\sqrt{x}}.(\cos\sqrt{x})\left(\frac{1}{2}x^{-1/2}\right)$$

$$=\frac{e^{\sin\sqrt{x}}.(\cos\sqrt{x})}{2\sqrt{x}}.$$

vi) Soln :– $$\frac{d}{dx}\log\left(x+\sqrt{a^2+x^2}\right)$$

$$=\frac{1}{x+\sqrt{a^2+x^2}}\frac{d}{dx}\left(x+\sqrt{x^2+a^2}\right)$$

$$=\frac{1}{x+\sqrt{x^2+a^2}}.\left\{1+\frac{1}{2\sqrt{x^2+a^2}}.(2x)\right\}$$

$$=\frac{1}{\left(x+\sqrt{x^2+a^2}\right)}.\left\{\frac{\sqrt{x^2+a^2}+x}{\sqrt{x^2+a^2}}\right\}$$

$$=\frac{1}{\sqrt{x^2+a^2}}$$

vii) Soln :– $$\frac{d}{dx}\frac{\sin x}{\sqrt{\cos x}}$$

$$=\frac{\sqrt{\cos x}.\cos x-\sin x\frac{d}{dx}\sqrt{\cos x}}{\cos x}$$

$$=\frac{1}{\cos x}\left[(\cos x)^{3/2}-\sin x\left(\frac{1}{2\sqrt{\cos x}}\right)(-\sin x)\right]$$

$$\Rightarrow \frac{1}{\cos x}\left[\frac{2\cos^2 x+\sin^2 x}{2\sqrt{\cos x}}\right]$$

$$\Rightarrow \frac{\cos^2 x+1}{2(\cos x)^{3/2}}.$$

9. Differentiate w.r.t. x:

i) $\frac{1}{3}\sqrt{\sec^2 x-1}$ ii) $\log\left[\tan\left(\frac{\pi}{4}+\frac{x}{2}\right)\right]$

iii) $\sin(e^x\log x)$ iv) $\frac{e^x+\log x}{\sin(3x)}$

(Contd.......)

ಸಿ.ಎಂ ಮೇಲೆ ಮುಗಿಬಿದ್ದ ಬಿಜೆಪಿಗರು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ, 'ಹಿಂದೂ ಧರ್ಮದಲ್ಲಿ ಸಮಾನತೆ ಇದ್ದಿದ್ದರೆ ಬೇರೆ ಧರ್ಮಕ್ಕೆ ಮತಾಂತರ ಏಕಾಗುತ್ತಿದ್ದರು' ಎಂಬ ಪ್ರಶ್ನೆಗೆ ರಾಜ್ಯ ಬಿಜೆಪಿ ನಾಯಕರು ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಸರ್ಕಾರವು ಹಿಂದೂ ವಿರೋಧಿಗಳು ಎಂಬುದನ್ನು ಇದು ನಿರೂಪಿಸುತ್ತದೆ ಎಂದು ಬಿ.ವೈ.ವಿಜಯೇಂದ್ರ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರೆ, ಸಿ.ಟಿ.ರವಿ ಬಹಿರಂಗ ಪತ್ರ ಬರೆದಿದ್ದಾರೆ. ಸಿದ್ದರಾಮಯ್ಯ ತಮ್ಮ ಹೇಳಿಕೆಯನ್ನು ಹಿಂಪಡೆಯಬೇಕು ಎಂದು ಆಗ್ರಹಿಸಿದ್ದಾರೆ.

'ಸರ್ಕಾರದಿಂದಲೇ ಪ್ರಚೋದನೆ'




ಬಿ.ವೈ. ವಿಜಯೇಂದ್ರ

ಹಿಂದೂ ಧರ್ಮೀಯರು ಅನ್ಯಧರ್ಮಕ್ಕೆ ಮತಾಂತರವಾಗಬೇಕು ಎಂದು ರಾಜ್ಯದ ಕಾಂಗ್ರೆಸ್ ಸರ್ಕಾರವು ಪ್ರಚೋದಿಸುತ್ತಿದೆ. ಕಾಂಗ್ರೆಸ್ ಸರ್ಕಾರವು ಈವರೆಗೆ ಹಿಂದೂ ಧರ್ಮದ ಅವಹೇಳನ, ಧಾರ್ಮಿಕ ಶ್ರದ್ಧಾ ಕೇಂದ್ರಗಳ ವಿರುದ್ಧದ ಅಪಪ್ರಚಾರಕ್ಕೆ ಕುಮ್ಮಕ್ಕು ನೀಡುತ್ತಿತ್ತು. ಈಗ ಒಂದು ಹೆಜ್ಜೆ ಮುಂದೆ ಹೋಗಿ, ಮತಾಂತರಕ್ಕೆ ಪ್ರಚೋದಿಸುತ್ತಿದೆ. ಹಿಂದುಳಿದ ವರ್ಗಗಳ ಆಯೋಗ ಪ್ರಕಟಿಸಿರುವ ಜಾತಿಗಳ ಪಟ್ಟಿಯಲ್ಲಿ, ಹಿಂದೂ ಜಾತಿಗಳ ಜತೆಗೆ 'ಕ್ರಿಶ್ಚಿಯನ್' ಎಂದು ಸೇರಿಸಿದೆ. ಈ ಪ್ರಮಾದವನ್ನು ಸರಿಪಡಿಸುವಂತೆ ಬಿಜೆಪಿ ಒತ್ತಾಯಿಸಿತ್ತು. ಅದನ್ನು ಮಾಡುವ ಬದಲಿಗೆ, ಮತಾಂತರವನ್ನು ಬೆಂಬಲಿಸುವ ಮೂಲಕ ತಾವು ಹಿಂದೂ ವಿರೋಧಿ ಎಂಬುದನ್ನು ಮತ್ತೊಮ್ಮೆ ನಿರೂಪಿಸಿದ್ದಾರೆ. ಸಾಮಾಜಿಕ ಸಮೀಕ್ಷೆಯ ಹೆಸರಿನಲ್ಲಿ ಹಿಂದೂ ಸಮಾಜವನ್ನು ಛಿದ್ರಗೊಳಿಸುವ ಹುನ್ನಾರ, ರಹಸ್ಯ ಕಾರ್ಯಸೂಚಿ ಕಾಂಗ್ರೆಸ್‌ಗೆ ಇದ್ದಂತಿದೆ.

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಸಂವಿಧಾನ ಬಾಹಿರ'



ಬಸವರಾಜ ಬೊಮ್ಮಾಯಿ

ಸಿದ್ದರಾಮಯ್ಯ ಅವರು ತಮ್ಮ ಕುರ್ಚಿ ಗಟ್ಟಿಮಾಡಿಕೊಳ್ಳಲು ಜಾತಿವಾರು ಸಮೀಕ್ಷೆ ನಡೆಸುತ್ತಿದ್ದಾರೆ. ಇದರಿಂದ ಜನರಿಗೆ ಯಾವ ಉಪಯೋಗವೂ ಇಲ್ಲ. ಸಂವಿಧಾನದಲ್ಲಿ ಆರು ಧರ್ಮಗಳನ್ನಷ್ಟೇ ಉಲ್ಲೇಖಿಸಲಾಗಿದೆ. ಸಮೀಕ್ಷೆಯಲ್ಲೂ ಅಷ್ಟೇ ಧರ್ಮಗಳ ಹೆಸರು ಇರಬೇಕಿತ್ತು. ಆದರೆ ಈ ಸರ್ಕಾರ ಮತಾಂತರಗೊಂಡ ಕ್ರೈಸ್ತರು ಎಂಬ ಹೊಸ ಕಾಲಂ ಸೃಷ್ಟಿಸಿದೆ. ಇದು ಸಂವಿಧಾನಬಾಹಿರ, ರಾಜಕೀಯ ಪ್ರೇರಿತ. ಕ್ರೈಸ್ತ ಧರ್ಮಕ್ಕೂ ಮತಾಂತರ ನಡೆದಿರುತ್ತದೆ, ಅಲ್ಲಿಂದ ಬೇರೆ ಧರ್ಮಕ್ಕೂ ಮತಾಂತರವಾಗಿರುತ್ತದೆ. ಆದರೆ ಸಿದ್ದರಾಮಯ್ಯ ಅವರು ಕ್ರೈಸ್ತ ಧರ್ಮಕ್ಕಾದ ಮತಾಂತರಕ್ಕೆ ಮಾತ್ರ ಮನ್ನಣೆ ನೀಡಿದ್ದಾರೆ. ರಾಜ್ಯದಲ್ಲಿ ಮತಾಂತರ ನಿಷೇಧ ಕಾಯ್ದೆ ಜಾರಿಯಲ್ಲಿದೆ ಎಂಬುದನ್ನು ಕಡೆಗಣಿಸಿ, ಮತಾಂತರ ಜನರ ಹಕ್ಕು ಎಂದಿದ್ದಾರೆ. ಇದು ರಾಜಕೀಯ ಪ್ರೇರಿತ.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

'ಬೊಟ್ಟು ಮಾಡುವ ನೈತಿಕತೆ ಇಲ್ಲ'



ಸಿ.ಟಿ.ರವಿ

ಹಿಂದೂ ಸಮಾಜದಲ್ಲಿ ಅಸ್ಪೃಶ್ಯತೆ, ಅಸಮಾನತೆ ಇದೆ ಎನ್ನುವ ಏಕೈಕ ಕಾರಣ ಕೊಟ್ಟು ಲಕ್ಷಾಂತರ ಸಂಖ್ಯೆಯಲ್ಲಿ ಹಿಂದೂಗಳನ್ನು ಮತಾಂತರ ಮಾಡಿ, ಏಸು ಕ್ರಿಸ್ತನ ಎದುರು ಸಮಾನವಾಗಿ ನಿಲ್ಲಿಸುತ್ತೇವೆ ಎಂದಿದ್ದರು. ಗೌರವಯುತವಾಗಿ ನಡೆಸಿಕೊಳ್ಳುತ್ತೇವೆ ಎಂದಿದ್ದರು. ಆದರೆ ಹಿಂದೂ ಸಮಾಜದೊಳಗಿರುವ ಅಷ್ಟೂ ಜಾತಿಗಳ ಹೆಸರಿನ ಹಿಂದೆ ಕ್ರೈಸ್ತ/ಕ್ರಿಶ್ಚಿಯನ್ ಎಂದು ಸೇರಿಸಿದ್ದು ಏಕೆ? ಕ್ರೈಸ್ತ ಧರ್ಮದಲ್ಲೂ ಹಿಂದೂ ಸಮಾಜಕ್ಕೆ ಸಮಾನಾಂತರವಾದ ಜಾತಿ ವ್ಯವಸ್ಥೆ ನಿರ್ಮಾಣ ಮಾಡಲು ಹೊರಟಿದ್ದೀರಾ? ಆ ಜನರು ಯಾವ ಉದ್ದೇಶದಿಂದ ಮತಾಂತರವಾದರೋ, ಆ ಉದ್ದೇಶಕ್ಕೆ ವಿರುದ್ಧವಾದ ನಿಲುವನ್ನು ಸರ್ಕಾರ ತಳೆದಿದೆ. ಇಂತಹ ಟೊಳ್ಳುವಾದ ಮುಂದಿಡುತ್ತಿರುವ ಸಿದ್ದರಾಮಯ್ಯ ಅವರಿಗೆ, ಹಿಂದೂ ಸಮಾಜದಲ್ಲಿ ಅಸಮಾನತೆ ಇದೆ ಎಂದು ಬೊಟ್ಟು ಮಾಡುವ ನೈತಿಕತೆ ಇಲ್ಲ.

ಸಿ.ಟಿ.ರವಿ, ವಿಧಾನ ಪರಿಷತ್‌ನಲ್ಲಿ ಬಿಜೆಪಿ ಸದಸ್ಯ



ಬೆಳಗಾವಿಯಲ್ಲಿ ಭಾನುವಾರ ಈದ್–ಮಿಲಾದ್ ಮೆರವಣಿಗೆ ಸಡಗರದಿಂದ ನಡೆಯಿತು –ಪ್ರಜಾವಾಣಿ ಚಿತ್ರ

ಸೌಹಾರ್ದದ ಈದ್‌ಮಿಲಾದ್ ಮೆರವಣಿಗೆ

ಸಾರ್ವಜನಿಕ ಗಣೇಶೋತ್ಸವ ಮಂಡಳಿ ಪ್ರಮುಖರೂ ಭಾಗಿ

ಪ್ರಜಾವಾಣಿ ವಾರ್ತೆ

ಬೆಳಗಾವಿ: ನಗರದಲ್ಲಿ ಭಾನುವಾರ ಸಡಗರ ಮತ್ತು ಸೌಹಾರ್ದದಿಂದ ಈದ್–ಮಿಲಾದ್ ಮೆರವಣಿಗೆ ನಡೆಯಿತು. ಮುಸ್ಲಿಮರೊಂದಿಗೆ ಹಿಂದೂಗಳೂ ಪಾಲ್ಗೊಂಡರು.

ಸೆಪ್ಟೆಂಬರ್ 5ರಂದು ಮೆರವಣಿಗೆ ನಿಗದಿ ಆಗಿತ್ತು. ಆದರೆ, ಸೆಪ್ಟೆಂಬರ್ 6ರಂದು ಸಾರ್ವಜನಿಕ ಗಣೇಶ ಮೂರ್ತಿಗಳ ವಿಸರ್ಜನೆ ಮೆರವಣಿಗೆಯಿದ್ದ ಕಾರಣ ಇದನ್ನು ಮುಂದೂಡಲಾಗಿತ್ತು.

ಮುಸ್ಲಿಂ ಮುಖಂಡರು, ಧಾರ್ಮಿಕ ಗುರುಗಳು ಅಲ್ಲದೇ ಸಾರ್ವಜನಿಕ ಗಣೇಶೋತ್ಸವ ಮಂಡಳಿಗಳ ಪ್ರಮುಖರೂ ಮೆರವಣಿಗೆಯಲ್ಲಿ ಪಾಲ್ಗೊಂಡರು.

ಮೆರವಣಿಗೆಯಲ್ಲಿ ಧ್ವಜಗಳು ರಾರಾಜಿಸಿದವು. 'ಕವ್ವಾಲಿ'ಗಳು ಅನುರಣಿಸಿದವು. ಸಂಗೀತ ವಾದ್ಯಗಳ ಅಬ್ಬರವಿತ್ತು. ವಿವಿಧ ಸಂಘಟನೆಯವರು ಬಾಳೆಹಣ್ಣು, ಐಸ್‌ಕ್ರೀಮ್, ಲಡ್ಡು, ಕುಡಿಯುವ ನೀರು ಮತ್ತು ಶರಬತ್ ವಿತರಿಸಿದರು. ಧರ್ಮಗುರು ಮುಫ್ತಿ ಮಂಜೂರ್ ಆಲಂ ಅವರು ಹಬ್ಬದ ಸಂದೇಶ ಸಾರಿದರು.

ಶಾಸಕ ಆಸಿಫ್ ಸೇಠ್, ಮಾಜಿ ಶಾಸಕ ಫಿರೋಜ್ ಸೇಠ್, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಪೊಲೀಸ್ ಕಮಿಷನರ್ ಭೂಷಣ ಬೊರಸೆ ಇತರ ಅಧಿಕಾರಿಗಳೂ ಮೆರವಣಿಗೆಯಲ್ಲಿ ಭಾಗಿಯಾಗಿದ್ದರು.

ಚಿಟಿಕೆ ಸುದ್ದಿ

ಕೃಷ್ಣ ಮಠದಲ್ಲಿ ಜನ್ಮಾಷ್ಟಮಿ ಆಚರಣೆ



ಉಡುಪಿ ಕೃಷ್ಣ ಮಠದಲ್ಲಿ ಜನ್ಮಾಷ್ಟಮಿ ನಿಮಿತ್ತ ಭಾನುವಾರ ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು ಬಾಲಗೋಪಾಲ ಅಲಂಕಾರದ ದೇವರಿಗೆ ಪೂಜೆ ನೆರವೇರಿಸಿದರು

ಉಡುಪಿ: ಉಡುಪಿಯಲ್ಲಿ ಸೌರ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸುತ್ತಿದ್ದು, ಪರ್ಯಾಯ ಪುತ್ತಿಗೆ ಮಠದ ಆಶ್ರಯದಲ್ಲಿ ಭಾನುವಾರ ದಿನವಿಡೀ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು.

ರಾಜಾಂಗಣದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳೂ ಮೇಳೈಸಿದ್ದವು. ಪರ್ಯಾಯ ಪುತ್ತಿಗೆ ಮಠದ ಸುಶ್ರೀಂದ್ರತೀರ್ಥ ಸ್ವಾಮೀಜಿ ಕೃಷ್ಣನಿಗೆ ಬಾಲಗೋಪಾಲ ಅಲಂಕಾರ ಮಾಡಿದ್ದರು. ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಶ್ರೀಪಾದರು ಮಹಾಪೂಜೆ ನಡೆಸಿದರು.

ಜನ್ಮಾಷ್ಟಮಿ ಅಂಗವಾಗಿ ನಡೆದ 'ಸ್ವಾಮಿ ಶ್ರೀ ಕೃಷ್ಣಾಯ ನಮಃ' 1008 ಬಾರಿ ಮಂತ್ರ ಪಠಣ ಕಾರ್ಯಕ್ರಮಕ್ಕೆ ಸುಗುಣೇಂದ್ರ ತೀರ್ಥ ಶ್ರೀಪಾದರು ಚಾಲನೆ ನೀಡಿದರು. ಹಬ್ಬದ ಪ್ರಯುಕ್ತ ಕೃಷ್ಣ ಮಠಕ್ಕೆ ಅಪಾರ ಸಂಖ್ಯೆಯ ಭಕ್ತರು ಭೇಟಿ ನೀಡಿದ್ದರು.

ಜಿಲ್ಲೆಯ ವಿವಿಧೆಡೆಯಿಂದ ಬಂದಿದ್ದ ಭಕ್ತರು ಬೆಳಿಗ್ಗೆಯಿಂದಲೇ ಸರದಿಯಲ್ಲಿ ನಿಂತು ದೇವರ ದರ್ಶನ ಪಡೆದು, ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಕಣ್ತುಂಬಿಕೊಂಡರು. ರಥಬೀದಿ ಹಾಗೂ ಕೃಷ್ಣಮಠವನ್ನು ಹೂವು, ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು.

ಮತದಾನಕ್ಕೆ ಬಂದ ವ್ಯಕ್ತಿ ಸಾವು

ರಾಮದುರ್ಗ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಖಾನಪೇಠೆಯ ಶ್ರೀಧನಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆಯ ಆಡಳಿತ ಮಂಡಳಿಗೆ ಭಾನುವಾರ ಇಲ್ಲಿ ನಡೆದ ಚುನಾವಣೆಗೆ ಮತದಾನ ಮಾಡಲು ಬಂದಿದ್ದ ವ್ಯಕ್ತಿಯೊಬ್ಬರು ಕುಸಿದು ಬಿದ್ದು ಮೃತಪಟ್ಟಿದ್ದಾರೆ.

ಬಾದಾಮಿ ತಾಲ್ಲೂಕಿನ ಮನ್ನೇರಿ ಗ್ರಾಮದ ಬಸನಗೌಡ ಹನುಮಂತಗೌಡ ಅಯ್ಯನಗೌಡರ (65) ಮೃತಪಟ್ಟವರು.

ಪಟ್ಟಣದ ಈರಮ್ಮ ಯಾದವಾಡ ಪದವಿ ಕಾಲೇಜಿನಲ್ಲಿ ಮತದಾನದ ಕೇಂದ್ರ ತೆರೆಯಲಾಗಿತ್ತು. ಮತದಾನ ಮಾಡಲು ಸಾಲಿನಲ್ಲಿ ನಿಂತಾಗ ಕುಸಿದು ಬಿದ್ದರು. ತಕ್ಷಣ ಅವರನ್ನು ಆಸ್ಪತ್ರೆಗೆ ಕರೆದೊಯ್ದರೂ ಬದುಕುಳಿಯಲಿಲ್ಲ.

'ರಾಜಕೀಯ ನಿವೃತ್ತಿ ಇಲ್ಲ'

ಜೀವನದಲ್ಲಿ ಹೋರಾಟ ನಿರಂತರ: ಎಚ್‌.ಡಿ. ದೇವೇಗೌಡ

ಪ್ರಜಾವಾಣಿ ವಾರ್ತೆ

ಹಾಸನ: 'ನಾನು ರಾಜಕೀಯದಿಂದ ನಿವೃತ್ತಿ ಆಗಲ್ಲ. ಈಗ ವೀಲ್‌ಚೇರ್‌ನಲ್ಲಿ ಬಂದಿದ್ದೇನೆ. ಸಂಸತ್ತಿಗೂ ವೀಲ್‌ಚೇರ್‌ನಲ್ಲಿ ಹೋಗುತ್ತೇನೆ. ಶಕ್ತಿ, ಅರ್ಹತೆ ಇದೆ. 65 ವರ್ಷಗಳ ರಾಜಕೀಯ ಜೀವನದಲ್ಲಿ ಹೋರಾಟ ಮಾಡಿದ್ದು, ಮುಂದುವರಿಸುತ್ತೇನೆ' ಎಂದು ರಾಜ್ಯಸಭೆ ಸದಸ್ಯ ಎಚ್‌.ಡಿ. ದೇವೇಗೌಡ ಹೇಳಿದರು.

ಇಲ್ಲಿ ಭಾನುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾವೇರಿ ವಿಚಾರದಲ್ಲಿ ಪ್ರಧಾನಿಗೆ ಮನವರಿಕೆ ಮಾಡುತ್ತೇನೆ. ಕರ್ನಾಟಕಕ್ಕೆ ಏನು ನಷ್ಟವಾಗಿದೆ ಎಂಬುದನ್ನು ಹೇಳುತ್ತೇನೆ' ಎಂದರು.

'ಆರು ದಶಕದ ರಾಜಕೀಯ ಅನುಭವದಲ್ಲಿ ಈ ವಿಚಾರದಲ್ಲಿ ಹಲವು ಮಾಹಿತಿ ನನಗೆ ಇದೆ. ಗೋದಾವರಿ ನೀರನ್ನು ಆಂಧ್ರಪ್ರದೇಶ-ತೆಲಂಗಾಣಕ್ಕೆ ಬಿಡುವ ನಿರ್ಣಯದ ವಿರುದ್ಧ ತಮ್ಮ ಧ್ವನಿ ಎತ್ತಿದ್ದೇನೆ. ಸರ್ಕಾರ ಸಲಹೆ ಕೊಟ್ಟರೆ ನಾನು ಸ್ವೀಕರಿಸುತ್ತೇನೆ' ಎಂದರು.



ಮೊಸಳೆಹೊಸಹಳ್ಳಿಗೆ ಭಾನುವಾರ ಭೇಟಿ ನೀಡಿದ ಎಚ್‌.ಡಿ. ದೇವೇಗೌಡ, ಸ್ಥಳೀಯರಿಂದ ಮಾಹಿತಿ ಪಡೆದರು

'ಪ್ರಧಾನಿ ನರೇಂದ್ರ ಮೋದಿ ವಿಶ್ವದ ಮಹಾನಾಯಕರು. ಮಣಿಪುರದಲ್ಲಿ ಶಾಂತಿ ನೆಲಸುವಂತೆ ಮಾಡಲು ಪ್ರಯತ್ನಿಸಿದ್ದಾರೆ. ವಿರೋಧ ಪಕ್ಷ ಟೀಕೆ ಮಾಡಿದ್ದರೂ, ನಾನು ಅವರನ್ನು ಗೌರವಿಸುತ್ತೇನೆ' ಎಂದರು.

'ಚೆನ್ನೈ-ಬೆಂಗಳೂರು ರಸ್ತೆಯ ಬಾಕಿ ಕಾಮಗಾರಿ ತ್ವರಿತ ಪೂರ್ಣಗೊಳಿಸಬೇಕಿದೆ. ಶಿರಾಡಿಘಾಟ್‌ನಲ್ಲಿ 10 ಕಿ.ಮೀ. ಸುರಂಗ ನಿರ್ಮಿಸಬೇಕೆಂದು ಒತ್ತಾಯಿಸಿದ್ದು, ಮೋದಿ, ನಿತಿನ್ ಗಡ್ಕರಿ ಅವರೊಂದಿಗೆ ಮಾತನಾಡಿದ್ದೇನೆ. ಹೈದರಾಬಾದ್-ಬೆಂಗಳೂರು ರಸ್ತೆ ಕಾಮಗಾರಿ ಕೂಡ ತ್ವರಿತಗೊಳಿಸುವಂತೆ ಬೇಡಿಕೆ ಇಟ್ಟಿರುವುದಾಗಿ ಹೇಳಿದರು. ರಾಜ್ಯಸಭಾ ಸದಸ್ಯರ ಅವಧಿ ಇನ್ನೂ 11 ತಿಂಗಳು ಇದೆ. ಅವಧಿ ಮುಗಿದ ಮೇಲೂ ಶಕ್ತಿಮೀರಿ ಹೋರಾಡುತ್ತೇನೆ. ನನ್ನ ಜೀವನದಲ್ಲಿ ಅನೇಕ ನೋವು-ಕಷ್ಟಗಳಿದ್ದರೂ, ಅಭಿವೃದ್ಧಿ ವಿಚಾರದಲ್ಲಿ ಹೋರಾಟ ಬಿಡುವುದಿಲ್ಲ' ಎಂದರು



ಯಾದಗಿರಿಯಲ್ಲಿ ಭಾನುವಾರ ನಡೆದ ರಾಜ್ಯ ಗ್ರಾಮ ಪಂಚಾಯಿತಿ ನೌಕರರ 9ನೇ ರಾಜ್ಯ ಸಮ್ಮೇಳನದಲ್ಲಿ ಆಯ್ಕೆಯಾದ ನೂತನ ಪದಾಧಿಕಾರಿಗಳು

ಕನಿಷ್ಠ ₹ 36 ಸಾವಿರ ವೇತನಕ್ಕೆ ಆಗ್ರಹ

ಪಂಚಾಯಿತಿ ನೌಕರರ ಸಂಘದ 9ನೇ ರಾಜ್ಯ ಸಮ್ಮೇಳನ

ಪ್ರಜಾವಾಣಿ ವಾರ್ತೆ

ಯಾದಗಿರಿ: 'ಗ್ರಾಮ ಪಂಚಾಯಿತಿಗಳ ಹೊರಗುತ್ತಿಗೆ ನೌಕರರನ್ನು ಸರ್ಕಾರಿ ನೌಕರರಾಗಿ ಪರಿಗಣಿಸಬೇಕು. ಅದುವರೆಗೂ ಮಾಸಿಕ ಕನಿಷ್ಠ ₹ 36 ಸಾವಿರ ವೇತನ ನೀಡಬೇಕು ಎಂದು ಗ್ರಾಮ ಪಂಚಾಯಿತಿ ನೌಕರರ ಸಂಘದ (ಸಿಐಟಿಯು ಸಂಯೋಜಿತ) 9ನೇ ರಾಜ್ಯ ಸಮ್ಮೇಳನ ಆಗ್ರಹಿಸಿ, ನಿರ್ಣಯ ಕೈಗೊಂಡಿದೆ.

ರಾಜ್ಯದ ನಾನಾ ಭಾಗದಿಂದ ಬಂದಿದ್ದ ಪ್ರತಿನಿಧಿಗಳ ಸಮ್ಮುಖದಲ್ಲಿ ಇದು ಸೇರಿದಂತೆ ಆರು ನಿರ್ಣಯ ಮಂಡಿಸಲಾಯಿತು. ಇದರೊಂದಿಗೆ ಮೂರು ದಿನದ ರಾಜ್ಯ ಸಮ್ಮೇಳನಕ್ಕೆ ಭಾನುವಾರ ತೆರೆಬಿತ್ತು.

ರಾಜ್ಯದಲ್ಲಿ ಹಿಂದುತ್ವ, ಕೋಮುವಾದ ಹಿಮ್ಮೆಟ್ಟಿಸಿ ಸೌಹಾರ್ದ, ಏಕತೆ ಉಳಿಸಬೇಕು. ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ನೀತಿಗಳನ್ನು ಹಿಮ್ಮೆಟ್ಟಿಸಬೇಕು. ಗ್ರಾಮ ಪಂಚಾಯಿತಿ ನೌಕರರಿಗೆ ಪಿಂಚಣಿ ಯೋಜನೆ ಜಾರಿ ಮಾಡಬೇಕು. ಸ್ವಚ್ಛತಾ ನೌಕರರನ್ನು ಪಂಚಾಯಿತಿ ನೌಕರರೆಂದು ಪರಿಗಣಿಸಿ ಕನಿಷ್ಠ ₹ 15 ಸಾವಿರ ವೇತನ ನೀಡಬೇಕು ಎಂಬ ನಿರ್ಣಯಗಳನ್ನು ಸರ್ಕಾರದ ಮುಂದೆ ಇರಿಸಿದರು.

ಪದಾಧಿಕಾರಿಗಳ ಆಯ್ಕೆ: ಸಂಘದ ರಾಜ್ಯ ಅಧ್ಯಕ್ಷರನ್ನಾಗಿ ಎಂ.ಬಿ.ನಾಡಗೌಡ ಅವರನ್ನು ಮುಂದುವರಿಸಲು ನಿರ್ಧರಿಸಲಾಯಿತು. ಉಪಾಧ್ಯಕ್ಷರಾಗಿ ಜಿ.ರಾಮಕೃಷ್ಣ, ಆರ್.ಎಸ್. ಬಸವರಾಜ, ಗೋಪಾಲಕೃಷ್ಣ ಹರಳಹಳ್ಳಿ, ಕೇಶವರಾವ ಕೋಲಾರ, ಮುತ್ತು ಪೂಜಾರ, ರೇಣುಕಾ ಪ್ರಸಾದ್, ಮಲಿಯಪ್ಪ, ಬಸವರಾಜ ದೊರೆ, ಪಾಪಣ್ಣ, ದಿನೇಶ್, ಹೊಳಬಸು ಮುದ್ನೂರ, ರುದ್ರಪ್ಪ ಕಂದಗಲ್, ಮಾರುತಿ ಸುಗ್ಗಾ ಹಾಗೂ ಶೋಭಾ ಪಾಂಡ್ರೆ ಅವರನ್ನು ಆಯ್ಕೆ ಮಾಡಲಾಯಿತು.

ಪ್ರಧಾನ ಕಾರ್ಯದರ್ಶಿಯಾಗಿ ಜಿ.ಎಂ. ಜೈನ್‌ಖಾನ್ ಹಾಗೂ ಕಾರ್ಯದರ್ಶಿಗಳಾಗಿ ಸಿದ್ದರಾಜು ಚಾಮರಾಜನಗರ, ಚಂದ್ರಶೇಖರ ಬಡಿಗೇರ, ನೆಲ್ಲುಡಿ ರಾಜೇಸಾಬ್, ಲಾಲ್ ಅಹಮದ್, ಪಿ.ಭರತ, ಮಲ್ಲಿಕಾರ್ಜುನ ರಾಯಚೂರು, ಮಡೆಪ್ಪ ಭಜಂತ್ರಿ, ಬಿ.ಐ. ಈಳಿಗೇರ , ರೇಖಾ, ಖಜಾಂಚಿಯಾಗಿ ಮಲ್ಲಿಕಾರ್ಜುನ ಬಳಿಚಕ್ರ ಆಯ್ಕೆಯಾದರು.

ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಒಟ್ಟು ಸಂಖ್ಯೆ 10,263ಕ್ಕೆ ಏರಿಕೆ

ವೈದ್ಯ ಕಾಲೇಜು: 600 ಹೆಚ್ಚುವರಿ ಸೀಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಸಾಲಿಗೆ (2025–26) ಕರ್ನಾಟಕದ ಸರ್ಕಾರಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ 400 ವೈದ್ಯಕೀಯ ಸೀಟುಗಳನ್ನು ಇತ್ತೀಚೆಗೆ ಮಂಜೂರು ಮಾಡಿದ್ದ ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ), ಇದೀಗ ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ ಒಟ್ಟು 600 ಸೀಟುಗಳನ್ನು ಮಂಜೂರು ಮಾಡಿದೆ.

'ರಾಜ್ಯದ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ ಮಂಜೂರು ಆಗಿರುವ ವೈದ್ಯಕೀಯ ಸೀಟುಗಳನ್ನು ಎರಡನೇ ಸುತ್ತಿನಲ್ಲಿ ಹಂಚಿಕೆ ಮಾಡಲಾಗುವುದು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ತಿಳಿಸಿದ್ದಾರೆ.


ನೀಟ್ ಫಲಿತಾಂಶದ ನಂತರ ಪ್ರಕಟಿಸಿದ್ದ ಮೊದಲ ಸುತ್ತಿನ ಸೀಟು ಹಂಚಿಕೆಯಲ್ಲಿ 9,263 ಸೀಟುಗಳು ಲಭ್ಯವಿದ್ದವು. ಹೆಚ್ಚುವರಿ ಸೀಟುಗಳ ಕಾರಣದಿಂದ ರಾಜ್ಯದಲ್ಲಿ ಲಭ್ಯವಿರುವ ವೈದ್ಯಕೀಯ ಸೀಟುಗಳ ಒಟ್ಟು ಸಂಖ್ಯೆ 10,263ಕ್ಕೆ ಏರಿಕೆ ಆಗಿದೆ.

ಕರ್ನಾಟಕವೂ ಸೇರಿದಂತೆ ದೇಶದಾದ್ಯಂತ ವಿವಿಧ ರಾಜ್ಯಗಳಲ್ಲಿರುವ ಸರ್ಕಾರಿ ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ಹೆಚ್ಚುವರಿಯಾಗಿ ಮಂಜೂರು ಮಾಡಿದ ಸೀಟುಗಳ ವಿವರವನ್ನು ಎನ್‌ಎಂಸಿ ಅಧ್ಯಕ್ಷ ಎಂ.ಕೆ. ರಮೇಶ್ ಅವರು ಪ್ರಕಟಿಸಿದ್ದಾರೆ.

ರಾಜ್ಯದ ಎಂಟು ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ತಲಾ 50 ಸೀಟುಗಳ ಹೆಚ್ಚಳಕ್ಕೆ ಮೊದಲು ಅನುಮತಿ ನೀಡಿತ್ತು. ಇದೀಗ ಪ್ರಸಕ್ತ ಸಾಲಿನಲ್ಲಿ ಆರಂಭಗೊಂಡ ಫಾರೂಕ್ ಅಕಾಡೆಮಿ ಆಫ್ ಮೆಡಿಕಲ್ ಎಜುಕೇಷನ್ ಹಾಸ್ಪಿಟಲ್ ಆ್ಯಂಡ್ ರಿಸರ್ಚ್ ಇನ್‌ಸ್ಟಿಟ್ಯೂಟ್ ಮತ್ತು ದೇವನಹಳ್ಳಿಯಲ್ಲಿರುವ ಆಕಾಶ್ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್ ಆ್ಯಂಡ್ ರಿಸರ್ಚ್ ಸೆಂಟರ್‌ಗೆ ತಲಾ 100 ಮತ್ತು ಇತರೆ ಎಂಟು ಕಾಲೇಜುಗಳಿಗೆ ತಲಾ 50 ರಂತೆ ಸೀಟು ಹೆಚ್ಚಳಕ್ಕೆ ಅನುಮತಿ ನೀಡಿದೆ.

ಬಿಜಿಎಸ್ (ನಗರೂರು), ಡಾ. ಚಂದ್ರಮ್ಮ ದಯಾನಂದ ಸಾಗರ್, ಈಸ್ಟ್ ಪಾಯಿಂಟ್, ಜೆಜಿಎಂಎಂಎಂಸಿ (ಹುಬ್ಬಳ್ಳಿ), ಪಿಇಎಸ್, ಬಿ.ಎಂ. ಪಾಟೀಲ (ವಿಜಯಪುರ), ಶ್ರೀದೇವಿ ಮತ್ತು ಸಿದ್ದಗಂಗಾ (ತುಮಕೂರು) ಈ ಎಂಟು ಖಾಸಗಿ ವೈದ್ಯಕೀಯ ಕಾಲೇಜುಗಳಿಗೆ ತಲಾ 50 ಸೀಟುಗಳನ್ನು ಹೆಚ್ಚುವರಿಯಾಗಿ ಎನ್‌ಎಂಸಿ ಮಂಜೂರು ಮಾಡಿದೆ.

ಯುಜಿ ಆಯುಷ್– ಪ್ರವೇಶಕ್ಕೆ 2 ದಿನ ಅವಕಾಶ: ಪರೀಕ್ಷಾ ಪ್ರಾಧಿಕಾರ



ಬೆಂಗಳೂರು: ಯುಜಿ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಸೀಟು ಹಂಚಿಕೆಯಾಗಿರುವ ಅಭ್ಯರ್ಥಿಗಳು ಇದೇ 16ರೊಳಗೆ ತಮಗೆ ಸೂಕ್ತ ಎನಿಸುವ ಛಾಯ್ಸ್ ಆಯ್ಕೆ ಮಾಡಿಕೊಂಡು ಕಾಲೇಜಿಗೆ ವರದಿ ಮಾಡಿಕೊಳ್ಳಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ನೀಡಿದೆ.

ಸೀಟು ಹಂಚಿಕೆಯಾಗಿರುವವರಿಗೆ ಛಾಯ್ಸ್-1, 2 ಮತ್ತು ಛಾಯ್ಸ್ -4 ಆಯ್ಕೆಗೆ ಅವಕಾಶ ನೀಡಲಾಗಿದೆ. ಇದೇ 15ರಂದು ಮಧ್ಯಾಹ್ನ 2 ರಿಂದ 16ರಂದು ಮಧ್ಯಾಹ್ನ 1ರವರೆಗೆ ಛಾಯ್ಸ್ ಆಯ್ಕೆ ಮಾಡಿಕೊಳ್ಳಬಹುದು. ಛಾಯ್ಸ್ ಆಯ್ಕೆಗೂ ಮುನ್ನ ಪೋಷಕರ ಜತೆ ಚರ್ಚಿಸಿ ತೀರ್ಮಾನಿಸಲು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಅವರು ಸಲಹೆ ನೀಡಿದ್ದಾರೆ.

ಛಾಯ್ಸ್- 1 ಮತ್ತು ಛಾಯ್ಸ್-2 ಆಯ್ಕೆ ಮಾಡಿದವರು 16ರೊಳಗೆ ಶುಲ್ಕ ಪಾವತಿಸಬೇಕು. ಛಾಯ್ಸ್-1 ಆಯ್ಕೆ ಮಾಡಿದವರು16ರೊಳಗೆ ಸೀಟು ಖಾತರಿ ಚೀಟಿ ಡೌನ್‌ಲೋಡ್ ಮಾಡಿಕೊಂಡು ಕಾಲೇಜಿಗೆ ವರದಿ ಮಾಡಿಕೊಳ್ಳಬೇಕು ಎಂದಿದ್ದಾರೆ.

'ಕಾವೇರಿ ಆರತಿ ಕಾರ್ಯಕ್ರಮ ನಿಲ್ಲಿಸಲಾಗದು'

ಪ್ರಜಾವಾಣಿ ವಾರ್ತೆ



ಮಳವಳ್ಳಿ (ಮಂಡ್ಯ ಜಿಲ್ಲೆ): 'ಕೆಆರ್‌ಎಸ್ ಜಲಾಶಯದ ಬಳಿ ಕಾವೇರಿ ಆರತಿ ಕಾರ್ಯಕ್ರಮವನ್ನು ನಿಲ್ಲಿಸಲಾಗದು' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಾಲ್ಲೂಕಿನ ಶಿವನಸಮುದ್ರ ಬಳಿ ಭಾನುವಾರ 'ಗಗನಚುಕ್ಕಿ ಜಲಪಾತೋತ್ಸವ' ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕಾವೇರಿ ಆರತಿಗೆ ವಿರೋಧ ವ್ಯಕ್ತಪಡಿಸಿ ರೈತ ಸಂಘದ ಕೆಲವರು ನ್ಯಾಯಾಲಯಕ್ಕೆ ಹೋಗಿದ್ದಾರೆ. ಆದರೆ ಪ್ರಕೃತಿ ಮಾತೆಗೆ ಪೂಜೆ, ಆರತಿ ಮಾಡುವುದನ್ನು ಯಾರಿಂದಲೂ ನಿಲ್ಲಿಸಲು ಸಾಧ್ಯವಿಲ್ಲ' ಎಂದರು.

'ಎರಡು ವರ್ಷಗಳಲ್ಲೇ ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ₹ 2ಸಾವಿರ ಕೋಟಿ ಅನುದಾನ ನೀಡಿದ್ದೇವೆ. ಇದುವರೆಗೆ ₹ 1,970 ಕೋಟಿ ಮೊತ್ತದ ಕಾಮಗಾರಿ ಮಂಜೂರಾಗಿವೆ. ಇದು ಸುಳ್ಳಾದರೆ ವಿರೋಧ ಪಕ್ಷದವರು ಬಂದು ಪರಿಶೀಲಿಸಲಿ' ಎಂದು ಸವಾಲೆಸೆದರು.

'ಮಂಡ್ಯ, ಬೆಂಗಳೂರು ದಕ್ಷಿಣ ಜಿಲ್ಲೆಗಳು ನನ್ನ ಕಣ್ಣುಗಳಿದ್ದಂತೆ. ರೈತರ ಬದುಕು ಸುಧಾರಣೆಗೆ ಹಾಗೂ ಅಭಿವೃದ್ಧಿಗೆ ಎಲ್ಲ ರೀತಿಯ ಕಾಯಕ್ರಮ ರೂಪಿಸಲು ಸರ್ಕಾರ ಬದ್ಧ' ಎಂದರು.

ದೀಪೋತ್ಸವ...

ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್



ಕಲಬುರಗಿ ಕೋಟೆ ಬಳಿ ಹಿಂದೂ ಮಹಾಗಣಪತಿ ಪ್ರತಿಷ್ಠಾಪನಾ ಸಮಿತಿ ವತಿಯಿಂದ ಭಾನುವಾರ ನಡೆದ ಲಕ್ಷ ದೀಪೋತ್ಸವದಲ್ಲಿ ಭಕ್ತರು ದೀಪ ಹಚ್ಚಿದರು

ನಿಂದನೆ: ಅರಣ್ಯ ಇಲಾಖೆ 15 ನೌಕರರ ವಿರುದ್ಧ ದೂರು

ಚಾಮರಾಜನಗರ: 'ಹುಲಿ ಸೆರೆ ಹಿಡಿಯಲು ಒತ್ತಾಯಿಸಿದ್ದಕ್ಕೆ ಅರಣ್ಯ ಇಲಾಖೆ ಸಿಬ್ಬಂದಿ ಅವಾಚ್ಯವಾಗಿ ನಿಂದಿಸಿ, ಹತ್ಯೆಗೆ ಯತ್ನಿಸಿದ್ದಾರೆ' ಎಂದು ಬೊಮ್ಮಲಾಪುರದ ಕಮಲಮ್ಮ ದೂರು ನೀಡಿದ್ದು, 15 ನೌಕರರ ವಿರುದ್ಧ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಸಿಎಫ್ ಸುರೇಶ್, ಡಿಆರ್‌ಎಫ್‌ಒಗಳಾದ ಶಿವಕುಮಾರ್, ಜ್ಞಾನಶೇಖರ್, ಕಾರ್ತಿಕ್ ಯಾದವ್, ಸಿಬ್ಬಂದಿ ಶಿವಣ್ಣ, ಸುಚಿತ್ರಾ, ಸುಬ್ರಹ್ಮಣ್ಯ, ನಾಗೇಶ, ಸೋಮು, ಪ್ರವೀಣ, ಮಣಿಕಂಠ, ವಿನಯ್ ಕುಮಾರ್, ಸಂತೋಷ, ರಾಜಪ್ಪ, ಬಸವೇಗೌಡ ವಿರುದ್ಧ ಪ್ರಕರಣ ದಾಖಲಾಗಿದೆ.

'ಹುಲಿ ಸೆರೆ ಹಿಡಿಯಲು ವಿಫಲರಾಗಿದ್ದಾರೆ' ಎಂದು ಸಿಟ್ಟಿಗೆದ್ದ ಬೊಮ್ಮಲಾಪುರ ಗ್ರಾಮದ ರೈತರು ಈಚೆಗೆ, ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಬೋನಿನೊಳಗೆ ಕೂಡಿ ಹಾಕಿ ದಿಗ್ಬಂಧನ ವಿಧಿಸಿದ್ದರು. ಈ ಸಂಬಂಧ ಬೊಮ್ಮಲಾಪುರ ಹಲವರ ವಿರುದ್ದ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣ ದಾಖಲಾಗಿತ್ತು.

ನಿಧನ ವಾರ್ತೆ

ಎನ್.ಆರ್.ನಾಯಕ



ಎನ್‌.ಆರ್. ನಾಯಕ

ಹೊನ್ನಾವರ (ಉತ್ತರ ಕನ್ನಡ ಜಿಲ್ಲೆ): ಜಾನಪದ ವಿದ್ವಾಂಸ ಎನ್.ಆರ್.ನಾಯಕ (90) ಭಾನುವಾರ ನಿಧನರಾದರು. ಅವರಿಗೆ ಪುತ್ರಿ ಮತ್ತು ಇಬ್ಬರು ಪುತ್ರರಿದ್ದಾರೆ.

ಅಂಕೋಲಾ ತಾಲ್ಲೂಕಿನ ಭಾವಿಕೇರಿಯವರಾದ ಎನ್.ಆರ್. ನಾಯಕ ಹೊನ್ನಾವರದ ಎಸ್.ಡಿ.ಎಂ. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರು, ಪ್ರಾಚಾರ್ಯರಾಗಿದ್ದರು. ಅವರಿಗೆ ಕರ್ನಾಟಕ ರಾಜ್ಯೋತ್ಸವ, ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳು ಸಂದಿವೆ.

'ಎಕ್ಸ್'ನಲ್ಲಿ ಅನುಭವ ಹಂಚಿಕೊಂಡ ಮಹಿಳೆ

ಏರ್‌ಪಾಡ್ ಪತ್ತೆಗೆ ಆಟೊ ಚಾಲಕ ನೆರವು

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 'ಫೈಂಡ್ ಮೈ' ಆ್ಯಪ್ ಮೂಲಕ ಏರ್ ಪಾಡ್ ಲೊಕೇಷನ್ ಪತ್ತೆ
- ಒಂದೂವರೆ ಗಂಟೆಯ ಆಟೊ ಸಂಚಾರ

ಬೆಂಗಳೂರು: ಆಟೊದಲ್ಲಿ ಬಿಟ್ಟು ಹೋಗಿದ್ದ ಏರ್‌ಪಾಡ್‌ಗಳನ್ನು ಚಾಲಕರೊಬ್ಬರ ನೆರವಿನೊಂದಿಗೆ ಮರಳಿ ಪಡೆಯುವಲ್ಲಿ ನಗರದ ಮಾರಾಟ ಪ್ರತಿನಿಧಿ ಪಾಲಕ್ ಮಲ್ಹೋತ್ರಾ ಅವರು ಯಶಸ್ವಿಯಾಗಿದ್ದಾರೆ.

ಏರ್ ಪಾಡ್‌ಗಳು ಕಾಣೆಯಾಗಿರುವುದು ಮಲ್ಹೋತ್ರಾ ಅವರಿಗೆ ಹಲವು ದಿನಗಳ ಬಳಿಕ ಗೊತ್ತಾಗಿದೆ. ಮೊದಲು ಜಿಮ್ ಸೆಂಟರ್‌ಗೆ ಕರೆ ಮಾಡಿ ವಿಚಾರಿಸಿದ್ದಾರೆ. ಬಳಿಕ ರ್‍ಯಾಪಿಡೊ ಸಂಸ್ಥೆ ಮೂಲಕ ಆಟೊ ಚಾಲಕನನ್ನು ಸಂಪರ್ಕಿಸಿದರೂ ಅದರ ಸುಳಿವು ಸಿಗಲಿಲ್ಲ.

ಆ್ಯಪಲ್‌ನ 'ಫೈಂಡ್ ಮೈ' ಆ್ಯಪ್ ಮೂಲಕ ಏರ್ ಪಾಡ್‌ಗಳು ಎಚ್‌ಎಸ್‌ಆರ್ ಲೇಔಟ್ ಲೊಕೇಷನ್‌ನಲ್ಲಿ ಇರುವುದನ್ನು ಮಲ್ಹೋತ್ರಾ ಪತ್ತೆ ಮಾಡಿದರು.

'ರ್‍ಯಾಪಿಡೊ ಮೂಲಕ ಆಟೊ ಬುಕ್ ಮಾಡಿ, ಚಾಲಕ ದರ್ಶನ್‌ಗೆ ನನ್ನ ಪರಿಸ್ಥಿತಿಯನ್ನು ವಿವರಿಸಿದೆ. ಆತ ಸಹಾಯ ಮಾಡಲು ಒಪ್ಪಿಕೊಂಡ. ಏರ್‌ಪಾಡ್‌ಗಳ ಸಂಕೇತಗಳನ್ನು ಆಧರಿಸಿ ಮೂರು ಸ್ಥಳಗಳಿಗೆ ಕರೆದೊಯ್ದರು' ಎಂದು ಮಲ್ಹೋತ್ರಾ 'ಪಿಟಿಐ' ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪ್ರಯಾಣಿಕರೊಬ್ಬರಿಗೆ ಏರ್‌ಪಾಡ್‌ಗಳು ಸಿಕ್ಕಿರುವುದು ಗೊತ್ತಾದ ಬಳಿಕ ಅವರನ್ನು ಪತ್ತೆ ಮಾಡಿ, ವಾಪಸ್ ನೀಡುವಂತೆ ಮನವಿ ಮಾಡಿದೆ. ಅವರು ಕೋಪಗೊಂಡು ನಿರಾಕರಿಸಿದರು. ಆಗ ದರ್ಶನ್ ಮಧ್ಯ ಪ್ರವೇಶಿಸಿ, ಪೊಲೀಸರಿಗೆ ದೂರು ನೀಡುವುದಾಗಿ ಹೇಳಿದ ಬಳಿಕ ವಾಪಸ್ ನೀಡಿದರು ಎಂದು ಹೇಳಿದ್ದಾರೆ.

ಏರ್‌ಪಾಡ್‌ಗಳನ್ನು ಪತ್ತೆ ಮಾಡಿದ ಅನುಭವವನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿರುವ ಪಾಲಕ್ ಮಲ್ಹೋತ್ರಾ, 'ದರ್ಶನ್ ಬಿ.ಕಾಂ ಪದವೀಧರನಾಗಿದ್ದು, ಎಂಬಿಎ ವ್ಯಾಸಂಗಕ್ಕಾಗಿ ಹಣ ಗಳಿಸಲು ತನ್ನ ತಂದೆಯ ಆಟೊ ಓಡಿಸುತ್ತಿದ್ದಾರೆ. ₹20 ಸಾವಿರ ಬೆಲೆಯ ಏರ್‌ಪಾಡ್‌ಗಳನ್ನು ಪತ್ತೆ ಹಚ್ಚಲು ಸುಮಾರು ಒಂದೂವರೆ ತಾಸು ಆಟೊ ಓಡಿಸಿದರು' ಎಂದು ಬರೆದುಕೊಂಡಿದ್ದಾರೆ.

'ನಾನು ಏರ್‌ಪಾಡ್‌ಗಳು ಸಿಗುವುದಿಲ್ಲ ಅಂದುಕೊಂಡು ಸುಮ್ಮನಾಗಿದ್ದೆ. ಆದರೆ, ದರ್ಶನ್ ನನಗೆ ಧೈರ್ಯ ಹೇಳಿ, ಅವುಗಳನ್ನು ಪತ್ತೆ ಮಾಡಿಕೊಡುತ್ತೇನೆ, ಚಿಂತಿಸಬೇಡಿ ಎಂದು ಭರವಸೆ ನೀಡಿದರು' ಎಂದಿದ್ದಾರೆ. ಪ್ರತಿಕ್ರಿಯಿಸಿರುವ ರ್‍ಯಾಪಿಡೊ ಸಂಸ್ಥೆ, 'ಹೃದಯಸ್ಪರ್ಶಿ ಸನ್ನಿವೇಶ ಹಂಚಿಕೊಂಡಿದಕ್ಕಾಗಿ ಧನ್ಯವಾದಗಳು. ದರ್ಶನ್ ಅವರ ಈ ಕಾರ್ಯಕ್ಕೆ ಬಹುಮಾನ ನೀಡುತ್ತೇವೆ' ಎಂದು ತಿಳಿಸಿದೆ.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆ.ಪಿ.ಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಈ ಕೆಳಕಂಡ ಕಾಮಗಾರಿಗಳಿಗಾಗಿ ಅರ್ಹ ಗುತ್ತಿಗೆದಾರರಿಂದ ಎರಡು ಹಂತದ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಛೇರಿ (ತ್ಯಾನೀನಿ–ಪೂರ್ವ) 5ನೇ ಮಹಡಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು–560009.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್ ಮೊತ್ತ / ಇ.ಎಂ.ಡಿ
ಸಂ. ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/809/2025–26		ದಿ: 12.09.2025
1.	ಪೂರ್ವ ಅರ್ಹತಾ ಮಾನದಂಡಗಳ ಅನುಮತಿಯ 28ಟಿ ನ ಜಿವಿಡಬ್ಲ್ಯೂ ಚಾಸಿಸ್ ನೋಂದಣಿಯ ಒಳಚರಂಡಿ ನೀರಿನ ರೀಸೈಕ್ಲಿಂಗ್ ಮಾಡುವ ವ್ಯವಸ್ಥೆ ಒಳಗೊಂಡ ವೆಹಿಕಲ್ ಮೌಂಟೆಡ್ ಹೈ ಕೆಪಾಸಿಟಿಯ ಸಕ್ಷನ್ ಕಮ್ ಜೆಟ್ಟಿಂಗ್ ಯಂತ್ರದ ಪೂರೈಕೆ ಮಾಡುವ ಕಾಮಗಾರಿ.	ರೂ. 422.83 ಲಕ್ಷಗಳು / ರೂ. 6.34 ಲಕ್ಷಗಳು
ಸಂ. ಬೆಂಜಮಂ/ಮುಅ(ತ್ಯಾನೀನಿ–ಪೂ)/ಉಮುಅ(ತ್ಯಾನೀನಿ–ಪೂ&ಪ)/ತಾಂಸ–1/807/2025–26		ದಿ: 12.09.2025
2.	ಸಕಾನಿಅ(ತ್ಯಾನೀನಿ–ಎನ್–ಕೆ&ಟಿ)–1 ಉಪ ವಿಭಾಗದಡಿಯಲ್ಲಿ ಬರುವ ವಿಲ್ಸನ್ ಗಾರ್ಡನ್‌ನ 9ನೇ ಕ್ರಾಸ್, ಜೆ.ಕೆ ಪುರ ಬ್ರಿಡ್ಜ್ ಬಳಿಯಲ್ಲಿ ಮೈಕ್ರೋ ಟನಲಿಂಗ್ ಉಪಯೋಗಿಸಿಕೊಂಡು ಆರ್‌ಸಿಸಿ ಎನ್‌ಪಿ–4 ದರ್ಜೆ 1600ಮೀಮಿ ವ್ಯಾಸದ ಒಳಚರಂಡಿ ಕೊಳವೆ ಮಾರ್ಗವನ್ನು ಒದಗಿಸಿ ಅಳವಡಿಸುವ ಕಾಮಗಾರಿ.	ರೂ. 405.72 ಲಕ್ಷಗಳು / ರೂ. 6.08 ಲಕ್ಷಗಳು

ಮೇಲ್ಕಂಡ ಕಾಮಗಾರಿಗಳಿಗೆ ಟೆಂಡರ್ ದಾಖಲೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 13.10.2025 ರಂದು ಸಂಜೆ 5.30 ಗಂಟೆಯವರೆಗೆ, ತಾಂತ್ರಿಕ ಟೆಂಡರ್‌ಗಳನ್ನು ತೆರೆಯುವ ದಿನಾಂಕ : 14.10.2025 ರ ಸಂಜೆ 4.00 ಗಂಟೆಗೆ.

ಸಹಿ/– ಮುಖ್ಯ ಅಭಿಯಂತರರು (ತ್ಯಾನೀನಿ–ಪೂರ್ವ)

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸುವ ಕುರಿತು ಮಾಹಿತಿಯನ್ನು https://kppp.karnataka.gov.in ಗೆ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗೆ ಕೆಳಸಹಿದಾರರ ಕಛೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

DIPR/CP/2803/Zen/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ದೊಡ್ಡದಾಗಿ ಹೊತ್ತಿ ಉರಿಯುವ ದೀಪ ಬಹಳ ಹೊತ್ತು ಬೆಳಗುವುದಿಲ್ಲ. ನಂದಾದೀಪ ಸಣ್ಣಗೆ ಮಿನುಗುತ್ತಾ, ಬೆಳಕು ನೀಡುತ್ತದೆ. -ತ.ರಾ.ಸು

ಸಂಪಾದಕೀಯ

ಪ್ರಧಾನಿ ಮೋದಿ ಮಣಿಪುರ ಭೇಟಿ ಶಾಂತಿಯ ಹಾದಿ ಇನ್ನೂ ಅಸ್ಪಷ್ಟ

ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಶನಿವಾರ ನೀಡಿದ ಭೇಟಿಯು ಬಹಳ ತಡವಾಯಿತು. ರಾಜ್ಯವು ಎರಡು ವರ್ಷಗಳಿಂದ ಸಂಘರ್ಷಕ್ಕೆ ತುತ್ತಾಗಿದೆ, ಅಲ್ಲಿ ಅಶಾಂತಿ ಮನೆ ಮಾಡಿದೆ, ಜನರ ನಡುವೆ ನಂಬಿಕೆ ಮರೆಯಾಗಿದೆ. ಇವೆಲ್ಲವುಗಳನ್ನೂ ಸರಿಪಡಿಸಲು ಮೋದಿ ಅವರ ಭೇಟಿಯಿಂದ ಹೆಚ್ಚಿನ ನೆರವು ದೊರೆತಿಲ್ಲ. ಪ್ರಧಾನಿಯೊಬ್ಬರ ಭೇಟಿಯು ಸಾಮಾನ್ಯವಾಗಿ ಯಾವುದೇ ಪರಿಹಾರ ಒದಗಿಸುವುದಿಲ್ಲ. ಆದರೆ, ಮೋದಿ ಅವರ ಈ ಭೇಟಿಯು ಪರಿಹಾರದ ಸಂದೇಶವನ್ನೂ ರವಾನಿಸಲಿಲ್ಲ. ರಾಜ್ಯದಲ್ಲಿ ಸಂಘರ್ಷ ಶುರುವಾದ 864 ದಿನಗಳ ನಂತರ ಮೋದಿ ಅವರು ಅಲ್ಲಿಗೆ ಭೇಟಿ ನೀಡಿದರು. 2023ರ ಮೇ ತಿಂಗಳಲ್ಲಿ ಅಲ್ಲಿ ಶಾಂತಿಗೆ ಭಂಗ ಉಂಟಾದ ನಂತರದಲ್ಲಿ ಸುಮಾರು 260 ಜನರ ಹತ್ಯೆಯಾಗಿದೆ, 60 ಸಾವಿರಕ್ಕೂ ಹೆಚ್ಚು ಮಂದಿ ತಮ್ಮ ಮನೆಗಳಿಂದ ಬೇರೆಡೆ ತೆರಳಿದ್ದಾರೆ. ಹೀಗಿರುವಾಗ ಇಷ್ಟು ದಿನ ಮೋದಿ ಅವರು ರಾಜ್ಯಕ್ಕೆ ಭೇಟಿ ನೀಡದೆ ಇರಲು ಕಾರಣ ಏನು ಎಂಬುದನ್ನು ತಿಳಿಸಿಲ್ಲ. ಮೋದಿ ಅವರು ತಮ್ಮ ಭಾಷಣಗಳಲ್ಲಿ ಮಣಿಪುರದ ಸ್ಥಿತಿಯ ಬಗ್ಗೆ ಉಲ್ಲೇಖ ಮಾಡಿರುವುದು ಕೂಡ ಕಡಿಮೆ. ರಾಜ್ಯದಲ್ಲಿ ಧ್ರುವೀಕೃತಗೊಂಡಿರುವ ಎರಡು ಸಮುದಾಯಗಳ ನಡುವೆ ವಿಶ್ವಾಸದ ಸೇತುವೆಯೊಂದನ್ನು ಕಟ್ಟುವ ಕುರಿತು ಅವರು ಮಾತನಾಡಿದ್ದಾರೆ. ಭವಿಷ್ಯದಲ್ಲಿ ಭರವಸೆಯ ಹೊಸ ಅರುಣೋದಯವೊಂದು ಆಗಲಿದೆ ಎಂದು ಆಶಾವಾದ ವ್ಯಕ್ತಪಡಿಸಿದ್ದಾರೆ. ರಾಜ್ಯದ ಭವಿಷ್ಯಕ್ಕಾಗಿ ಹೊಸ ದಾರಿಯೊಂದನ್ನು ತೋರಿಸುವ ಯತ್ನವನ್ನು ಅವರು ನಡೆಸಿದ್ದಾರಾದರೂ, ಆ ಹಾದಿಯು ಸ್ಪಷ್ಟವಾಗಿಲ್ಲ. ಹಾದಿಯಲ್ಲಿ ಏನೆಲ್ಲಾ ಇದೆ ಎಂಬುದೂ ಗೊತ್ತಾಗುವಂತಿಲ್ಲ.



ಸಂಘರ್ಷಕ್ಕೆ ಗುರಿಯಾಗಿರುವ ಮಣಿಪುರಕ್ಕೆ ಪ್ರಧಾನಿ ಮೋದಿ ಅವರು ನೀಡಿರುವ ಭೇಟಿಯಿಂದ ಹೆಚ್ಚಿನ ಉಪಯೋಗ ಆಗಿಲ್ಲ. ಶಾಂತಿ ಸ್ಥಾಪನೆಯ ಪ್ರಕ್ರಿಯೆಯಲ್ಲೂ ಪ್ರಗತಿಯಾಗಿಲ್ಲ.

ಕುಕಿ ಸಮುದಾಯದ ಪ್ರಾಬಲ್ಯ ಇರುವ, ಬೆಟ್ಟಗುಡ್ಡಗಳಿಂದ ಆವೃತವಾಗಿರುವ ಚುರಾಚಾಂದಪುರದಲ್ಲಿ ಪ್ರಧಾನಿಯವರು ಸಭೆಗಳನ್ನು ಉದ್ದೇಶಿಸಿ ಮಾತನಾಡಿದರು. ಹಾಗೆಯೇ ಮೈತೇಯಿ ಸಮುದಾಯದ ಪ್ರಾಬಲ್ಯವಿರುವ, ಬಯಲು ಪ್ರದೇಶವಾದ ಇಂಫಾಲದಲ್ಲಿಯೂ ಅವರು ಮಾತನಾಡಿದರು. ಶಾಂತಿಯೊಂದೇ ಮುಂದೆ ಸಾಗಲು ಇರುವ ಮಾರ್ಗ, ರಾಜ್ಯದಲ್ಲಿ ಶಾಂತಿ ನೆಲಸುವಂತೆ ಮಾಡಲು ತಮ್ಮ ನೇತೃತ್ವದ ಸರ್ಕಾರವು ಕೆಲಸ ಮುಂದುವರಿಸಲಿದೆ ಎಂದು ಹೇಳಿದರು. ಬೆಟ್ಟ-ಗುಡ್ಡಗಳು ಇರುವ ಜಿಲ್ಲೆಗಳಿಗೆ ಸಂಬಂಧಿಸಿದ ₹7,300 ಕೋಟಿ ಮೊತ್ತದ ಅಭಿವೃದ್ಧಿ ಯೋಜನೆಗಳನ್ನು ಅವರು ಉದ್ಘಾಟಿಸಿದರು. ಇಂಫಾಲದಲ್ಲಿ ಮಾಡಿದ ಭಾಷಣದಲ್ಲಿ ಅವರು, ರಾಜ್ಯದಲ್ಲಿ ನಡೆದ ಹಿಂಸಾಚಾರಗಳು ದುರದೃಷ್ಟಕರ ಎಂದರು. ಅಲ್ಲಿ ಅವರು ₹1,200 ಕೋಟಿ ಮೌಲ್ಯದ ಯೋಜನೆಗಳನ್ನು ಉದ್ಘಾಟಿಸಿದರು. ವಾಸ್ತವದಲ್ಲಿ, ಮಣಿಪುರದಲ್ಲಿ ನಡೆದ ಗಲಭೆಯು ಅಭಿವೃದ್ಧಿಗೆ ಸಂಬಂಧಿಸಿದ್ದಲ್ಲ. ಸಮಸ್ಯೆಯು ಶುರುವಾಗಿದ್ದು ಮೈತೇಯಿ ಸಮುದಾಯವು ಮೀಸಲಾತಿಯನ್ನು ಕೇಳುವುದರೊಂದಿಗೆ. ಹೀಗಾಗಿ, ಅಭಿವೃದ್ಧಿಯ ವಿಚಾರವು ಅಲ್ಲಿನ ಗಲಭೆಗಳ ಹಿಂದೆ ಪರೋಕ್ಷವಾಗಿ ಪ್ರಭಾವ ಉಂಟುಮಾಡಿರಬಹುದು. ಮೈತೇಯಿ ಸಮುದಾಯದವರಿಗೆ ಮೀಸಲಾತಿ ಕಲ್ಪಿಸುವ ಬಗ್ಗೆ ಪರಿಶೀಲನೆ ನಡೆಸಿ ಎಂದು ನ್ಯಾಯಾಲಯವೊಂದು ಹೇಳಿದ್ದನ್ನು ವಿರೋಧಿಸಿ ಕುಕಿ ಸಮುದಾಯದವರು ಪ್ರತಿಭಟನೆ ಆರಂಭಿಸಿದಾಗ ಈಗಿನ ಬಿಕ್ಕಟ್ಟು, ಹಿಂಸಾಚಾರ ಆರಂಭವಾಯಿತು. ಆದರೆ, ಈಗ ಸಮಸ್ಯೆಯು ಇತರ ಹಲವು ಆಯಾಮಗಳನ್ನೂ ಒಳಗೊಂಡಿದೆ. ಅಭಿವೃದ್ಧಿ ಯೋಜನೆಗಳನ್ನು ತೋರಿಸಿ ಸಮಸ್ಯೆಯನ್ನು ಪರಿಹರಿಸುವುದು ಈಗ ಕಷ್ಟದ ಕೆಲಸ.

ಬಂಡುಕೋರ ಗುಂಪುಗಳ ಜೊತೆಗಿನ 'ಕಾರ್ಯಾಚರಣೆಯ ಅಮಾನತು' (ಎಸ್‌ಒಒ) ಕ್ರಮಕ್ಕೆ ಮತ್ತೆ ಜೀವ ನೀಡುವುದು, 'ರಾಷ್ಟ್ರೀಯ ಹೆದ್ದಾರಿ-2'ರಲ್ಲಿ ಮುಕ್ತ ಸಂಚಾರಕ್ಕೆ ಅವಕಾಶ ಕಲ್ಪಿಸುವುದು ಸರ್ಕಾರ ಘೋಷಿಸಿದ್ದ ಎರಡು ಕ್ರಮಗಳಾಗಿದ್ದವು. ಆದರೆ ಇವುಗಳಿಗೆ ದೊಡ್ಡ ಮಟ್ಟದಲ್ಲಿ ಬೆಂಬಲ ವ್ಯಕ್ತವಾಗದ ಕಾರಣಕ್ಕೆ ಎರಡೂ ಕ್ರಮಗಳು ಮುರಿದುಬಿದ್ದವು. ಶಾಂತಿ ಪ್ರಕ್ರಿಯೆಯು ಪ್ರಗತಿ ಕಾಣಬೇಕು ಎಂದಾದರೆ ಸಂಬಂಧಪಟ್ಟ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು, ಪ್ರಜಾತಾಂತ್ರಿಕ ಸಂವಾದದ ಪ್ರಕ್ರಿಯೆಯಲ್ಲಿ ಎಲ್ಲರನ್ನೂ ಒಳಗೊಳ್ಳುವ ಕೆಲಸ ಆಗಬೇಕು. ಇದು ಮಣಿಪುರದಲ್ಲಿ ಆಗಿಲ್ಲ. ಪ್ರಧಾನಿಯವರ ಭೇಟಿಯು ಶಾಂತಿ ಪ್ರಕ್ರಿಯೆಯನ್ನು ಮುಂದಕ್ಕೆ ಒಯ್ಯುವ ಕೆಲಸ ಮಾಡಿಲ್ಲ ಎಂದು ರಾಜ್ಯದ ಎರಡೂ ಕಡೆಗಳ ಜನರಿಂದ ಅತೃಪ್ತಿ ವ್ಯಕ್ತವಾಗಿದೆ. ಮಣಿಪುರದ ಎರಡೂ ಗುಂಪುಗಳು ತಮ್ಮ ಹಟಮಾರಿ ಧೋರಣೆಯನ್ನು ಮುಂದುವರಿಸಿವೆ. ಶಾಂತಿ ಸ್ಥಾಪನೆಯ ಕಾರ್ಯದಲ್ಲಿ ಹೆಚ್ಚಿನ ಪ್ರಗತಿ ಆಗಿಲ್ಲ ಎಂಬುದನ್ನು ಇದು ತೋರಿಸುತ್ತಿದೆ.

ಕಪ್ಪು ದಿನ



ಭಾರತ ಸರ್ಕಾರ ಎಲ್ಲೆಡೆ 'ಹಿಂದಿ ದಿನ' ಆಚರಿಸುತ್ತಿದೆ. ಇಡೀ ದೇಶದಲ್ಲಿ ಹಿಂದಿ ಚೆನ್ನಾಗಿ ಹರಡಿದವರನ್ನು ಸನ್ಮಾನಿಸುತ್ತಾ, ಮುಂದೆ ಹೇಗೆ ಹರಡಬೇಕು ಎಂದು ಯೋಜಿಸುತ್ತಾ ದೇಶದ ಏಕತೆಯನ್ನು ಹೆಜ್ಜೆ ಹೆಜ್ಜೆಯಾಗಿ ನಾಶ ಮಾಡುತ್ತಿರುವ ಈ ದಿನ ಎಲ್ಲ ಭಾರತೀಯರ ಪಾಲಿಗೆ ಕಪ್ಪು ದಿನ.

ಜಿ. ಆನಂದ್, ಕನ್ನಡ ಕಾರ್ಯಕರ್ತ, 'ಎಕ್ಸ್'ನಿಂದ

ಕಿಡಿನುಡಿ



ಸಿದ್ದರಾಮಯ್ಯನವರ ರಾಜಕೀಯ ಸಿದ್ಧಾಂತ ಹಿಂದೂ ಧರ್ಮ ಹಾಗೂ ಹಿಂದೂ ಪದ್ಧತಿಗಳನ್ನು ಅವಹೇಳನ ಮಾಡುವುದು, ಇತರ ಧರ್ಮೀಯರನ್ನು ಓಲೈಸುವುದಾಗಿದೆ. ಅವರು ಸಮಾಜವಾದಿ ಅಲ್ಲ, ಭಾರತೀಯ ಸಂಸ್ಕೃತಿಯ ಪ್ರತಿಪಾದಕರೂ ಅಲ್ಲ. ಸನಾತನ ಹಿಂದೂ ಧರ್ಮ ಹಾಗೂ ಭಾರತೀಯ ಸಂಸ್ಕೃತಿಯನ್ನು ವಿರೋಧಿಸುವುದು ಅವರ ಮನಃಸ್ಥಿತಿ.

ಬಿ.ವೈ. ವಿಜಯೇಂದ್ರ, ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

25 ವರ್ಷಗಳ ಹಿಂದೆ

ಶುಕ್ರವಾರ, 15-9-2000

• ರಾಜ್ಯದಲ್ಲಿ 'ಡಾಟ್‌ನೆಟ್' ಪ್ರಯೋಗಾಲಯ

ನವದೆಹಲಿ, ಸೆಪ್ಟೆಂಬರ್ 14– ಬೆಂಗಳೂರಿನಲ್ಲಿ 'ಡಾಟ್‌ನೆಟ್' ಪ್ರಯೋಗಾಲಯವನ್ನು ಸ್ಥಾಪಿಸಲು ನಿರ್ಧರಿಸಿರುವ ಮೈಕ್ರೋಸಾಫ್ಟ್ ಕಂಪನಿಯ ಅಧ್ಯಕ್ಷ ಬಿಲ್ ಗೇಟ್ಸ್ ಅವರು, ಸರ್ಕಾರಿ ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ, ಏಕರೂಪದ ಕನ್ನಡ ಸಾಫ್ಟ್‌ವೇರ್ ರಚನೆ ಹಾಗೂ ಕೃಷಿ ಮತ್ತು ಆರೋಗ್ಯ ಕ್ಷೇತ್ರದಲ್ಲಿ ಜೈವಿಕ ತಂತ್ರಜ್ಞಾನದ ಬಳಕೆ ಕುರಿತು ಕರ್ನಾಟಕ ರಾಜ್ಯದ ಯೋಜನೆಗಳ ಬಗ್ಗೆ ತೀವ್ರ ಆಸಕ್ತಿ ವ್ಯಕ್ತಪಡಿಸಿದ್ದಾರೆ.

'ಡಾಟ್‌ನೆಟ್' ಪ್ರಯೋಗಾಲಯ ಸ್ಥಾಪನೆಯ ನಿರ್ಧಾರವನ್ನು ಮೈಕ್ರೋಸಾಫ್ಟ್ ಅಧ್ಯಕ್ಷ ಬಿಲ್ ಗೇಟ್ಸ್ ಅವರೇ ಇಂದು ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು.

• ಮಹಡಿಯಿಂದ ಹಾರಿ ಎಂಜಿನಿಯರ್ ಸಾವು

ಬೆಂಗಳೂರು, ಸೆಪ್ಟೆಂಬರ್ 14– ಕಂಪ್ಯೂಟರ್ ಎಂಜಿನಿಯರ್ ಒಬ್ಬರು ಎಂ.ಜಿ. ರಸ್ತೆಯ ರಹೇಜಾ ಟವರ್ಸ್‌ನ 12ನೇ ಮಹಡಿಯಿಂದ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಡೆದಿದೆ.

ಮೂಲತಃ ಚೆನ್ನೈನವರಾದ ಜೆ. ಸ್ವಾಮಿನಾಥನ್ (26) ಆತ್ಮಹತ್ಯೆ ಮಾಡಿಕೊಂಡಿರುವ ವ್ಯಕ್ತಿ. ಈತ ಕೋರಮಂಗಲದಲ್ಲಿರುವ ರಾಬರ್ಟ್ ಬಷ್ ಎಂಬ ಸಾಫ್ಟ್‌ವೇರ್ ಅಭಿವೃದ್ಧಿ ಸಂಸ್ಥೆಯಲ್ಲಿ ಎಂಜಿನಿಯರ್ ಆಗಿದ್ದ. ಎಚ್‌ಎಎಲ್ ಸಮೀಪದ ಶಾಸ್ತ್ರಿನಗರದಲ್ಲಿ ವಾಸವಾಗಿದ್ದ.

75 ವರ್ಷಗಳ ಹಿಂದೆ

ಶುಕ್ರವಾರ, 15-9-1950

• 13 ಬಾರಿ ಭೂಮಿ ಕಂಪಿಸಿದ ಅನುಭವ

ದಿಬ್ರುಗರ್, ಸೆಪ್ಟೆಂಬರ್ 14– ದಿಬ್ರುಗರ್ ವ್ಯಾಪ್ತಿಯಲ್ಲಿ ಇಂದು 13ಕ್ಕೂ ಹೆಚ್ಚು ಬಾರಿ ಭೂಮಿ ಕಂಪಿಸಿದ ಅನುಭವವಾಗಿದ್ದು, ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ವರದಿಯಾಗಿದೆ.

ಆದರೆ, ಭೂಮಿ ಕಂಪಿಸಿದ್ದರಿಂದ ಭಯಗೊಂಡು ಮನೆಯಿಂದ ಬಯಲು ಪ್ರದೇಶಕ್ಕೆ ಹೊರಬರುವ ವೇಳೆ ಮನೆಯಲ್ಲಿದ್ದ ಸಾಮಗ್ರಿಗಳು ಮೈಮೇಲೆ ಬಿದ್ದು ಕೆಲವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಹೇಳಲಾಗಿದೆ.

ಈ ಪ್ರದೇಶದಲ್ಲಿ ಆಗಾಗ್ಗೆ ಭೂಮಿ ಕಂಪಿಸಿದ ಅನುಭವವಾಗುತ್ತಿದೆ. ಕಳೆದ ಆಗಸ್ಟ್ 15ರಂದು ಸಂಭವಿಸಿದ ಭೂಕಂಪ ಬಳಿಕ 310 ಬಾರಿ ಭೂಮಿ ಕಂಪಿಸಿದ ಅನುಭವವಾಗಿದೆ ಎಂದು ವರದಿಯಾಗಿದೆ.

ಧರ್ಮಕಾರಣ: ಅರಾಜಕತೆಗೆ ಆಹ್ವಾನ



ವಿಶ್ಲೇಷಣೆ

ಚಂದ್ರಕಾಂತ ವಡ್ಡು

> ಧರ್ಮಕೇಂದ್ರಿತ ವಿಚಾರಧಾರೆ ರಾಜಕಾರಣದ ಪ್ರಮುಖ ಭಾಗವಾಗಿದೆ. ಸಮಾಜದ ಕಟ್ಟಕಡೆಯ ಮನುಷ್ಯನ ಹಿತಕ್ಕಿಂತಲೂ, ಸಮುದಾಯಗಳನ್ನು ವಿಭಜಿಸಿ, ಮತಬ್ಯಾಂಕ್ ಭದ್ರಪಡಿಸಿಕೊಳ್ಳುವ ರಾಜಕಾರಣ ಮುನ್ನೆಲೆಗೆ ಬಂದಿದೆ. ಈ 'ಧರ್ಮರಾಜಕಾರಣ'ದಲ್ಲಿ ಜನಸಾಮಾನ್ಯರು ಹೈರಾಣಾಗಿದ್ದಾರೆ.

ಸುದ್ದಿ ವಾಹಿನಿಯ ನಿರೂಪಕರೊಬ್ಬರು, 'ಆರೋಪಿಗಳು ಪತ್ತೆಯಾಗಿದ್ದು, ತನಿಖೆ ಮುಕ್ತಾಯ ಹಂತ ತಲುಪಿದೆ, ಬಾಕಿ ಉಳಿದಿರುವುದು ಅಪರಾಧಿಗಳಿಗೆ ಶಿಕ್ಷೆ ಪ್ರಮಾಣ ನಿರ್ಧರಿಸುವುದಷ್ಟೇ' ಎಂದು ಯಾವುದೇ ಅಂಜಿಕೆ, ಹಿಂಜರಿಕೆ, ಮುಜುಗರ ಇಲ್ಲದೇ ದೃಢವಾದ ದನಿಯಲ್ಲಿಯೇ ಘೋಷಿಸಿದರು. ಆ ಮೂಲಕ ಮಾಧ್ಯಮ ವಿಚಾರಣೆ ನಡೆಸುತ್ತಿದ್ದ 'ಸುದ್ದಿ ನ್ಯಾಯಾಲಯ' ಧರ್ಮಸ್ಥಳ ಪ್ರಕರಣದಲ್ಲಿ ಶಿಕ್ಷೆಯ ಪ್ರಮಾಣ ಕುರಿತ ತೀರ್ಪು ಕಾಯ್ದಿರಿಸಿ ಮದ್ದೂರು ಪ್ರಕರಣ ಕೈಗೆತ್ತಿಕೊಂಡಿತು. ಇದಕ್ಕೂ ಮೊದಲು ವಿಚಾರಣಾ ಪಟ್ಟಿಯಲ್ಲಿದ್ದ ದಸರಾ ಉದ್ಘಾಟನಾ ಪ್ರಕರಣವನ್ನು ವರದಿಗಾರ-ವಕೀಲರ ಕೋರಿಕೆ ಮೇರೆಗೆ ಮಧ್ಯಾಹ್ನದ ಕಲಾಪಕ್ಕೆ ಮುಂದೂಡಲಾಗಿತ್ತು!

ದೃಶ್ಯ ಮಾಧ್ಯಮ ಚಾಲ್ತಿಗೆ ಬಂದ ತರುವಾಯ 'ಮೀಡಿಯಾ ಟ್ರೈಯಲ್' ಅನ್ನುವುದು ಅಪರೂಪದ ವಿದ್ಯಮಾನವಾಗೇನೂ ಉಳಿದಿಲ್ಲ. ಆದರೆ, ಅನುಭವ ಮತ್ತು ಆದಾಯ ಆಧರಿಸಿ ಮಾಧ್ಯಮಗಳು ಈ ನಿಟ್ಟಿನಲ್ಲಿ ಆರಂಭಿಕ ಘಟ್ಟದ ಸಂಕೋಚವನ್ನು ಸಾಕಷ್ಟು ಪ್ರಮಾಣದಲ್ಲಿ ನಿವಾರಿಸಿಕೊಂಡಿರುವುದನ್ನು ಗಮನಿಸಬಹುದು. ಶುರುವಾತಿನಲ್ಲಿ ಕೆಳಹಂತದ ನ್ಯಾಯಾಲಯದ ಪಾತ್ರ ಮಾತ್ರ ನಿರ್ವಹಿಸುತ್ತಿದ್ದ ಟಿ.ವಿ ಮಾಧ್ಯಮ ಇದೀಗ ತನ್ನ ಕಾರ್ಯವ್ಯಾಪ್ತಿಯನ್ನು ಯೂಟ್ಯೂಬ್ ವಾಹಿನಿಗಳಿಗೆ ವಹಿಸಿ, ತನ್ನ ಕಾರ್ಯಭಾರವನ್ನು ಹೈಕೋರ್ಟ್ ಹಂತಕ್ಕೆ ಸ್ವಯಂ ಉನ್ನತೀಕರಿಸಿಕೊಂಡಂತೆ ತೋರುತ್ತಿದೆ.

ಸದ್ಯ ಮಾಧ್ಯಮ ನ್ಯಾಯಾಲಯದಲ್ಲಿ ಪ್ರತಿನಿತ್ಯ ನಡೆಯುತ್ತಿರುವ ಧರ್ಮಸ್ಥಳ ಪ್ರಕರಣದ ಬಿನಾಪ್ರತಿವಾದಿ (ಎಕ್ಸ್-ಪಾರ್ಟಿ) ವಿಚಾರಣೆಯ ಆರಂಭವನ್ನು ನೋಡೋಣ. 2025ರ ಜೂನ್ 22ರಂದು ಬೆಂಗಳೂರಿನ ನ್ಯಾಯವಾದಿಗಳಾದ ಓಜಸ್ವಿ ಗೌಡ ಮತ್ತು ಸಚಿನ್ ದೇಶಪಾಂಡೆ ನೀಡಿದ ಹೇಳಿಕೆ ಸಂಚಲನಕ್ಕೆ ಕಾರಣವಾಯಿತು. 1995ರಿಂದ 2014ರ ಅವಧಿಯಲ್ಲಿ ಧರ್ಮಸ್ಥಳದಲ್ಲಿ ನಡೆದ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಬಗ್ಗೆ ಮಾಹಿತಿ ನೀಡಲು ಮೃತದೇಹಗಳನ್ನು ಹೂತು ಹಾಕಿದ್ದ ವ್ಯಕ್ತಿಯೇ ಮುಂದೆ ಬಂದಿದ್ದಾನೆ ಎಂಬುದು ಆ ಹೇಳಿಕೆಯ ಸಾರಾಂಶ. ಆನಂತರ ಆ ವ್ಯಕ್ತಿ ನ್ಯಾಯಾಲಯದ ಮುಂದೆ ಹಾಜರಾಗಿ, ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 183ರ ಅಡಿಯಲ್ಲಿ ಸುದೀರ್ಘ ಹೇಳಿಕೆ ದಾಖಲಿಸಿದ. ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರು, ದಕ್ಷಿಣ ಕನ್ನಡ ಪೊಲೀಸ್ ವರಿಷ್ಠಾಧಿಕಾರಿಗೆ ಹಾಗೂ ಮುಖ್ಯಮಂತ್ರಿಗೆ ಪತ್ರ ಬರೆದರು.

ಕೊನೆಗೆ ರಾಜ್ಯ ಸರ್ಕಾರ ಜುಲೈ 19ರಂದು ಪ್ರಣವ್ ಮೊಹಂತಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡ ರಚಿಸಿತು. ಮಹಿಳಾ ಆಯೋಗದ ಪತ್ರ ಮತ್ತು ಅನಾಮಿಕನ ಪ್ರಮಾಣ ವಚನದ ಹೇಳಿಕೆ ಆಧಾರದ ಮೇಲೆ ತನಿಖೆ ನಡೆಸುವ ಆದೇಶ ಹೊರಬಿದ್ದಿರುವುದನ್ನು ವಿಶೇಷವಾಗಿ ಗಮನಿಸಬೇಕಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಹೇಳಿದಂತೆ, 'ಈ ಪ್ರದೇಶದಲ್ಲಿ ಅಸಹಜ ಸಾವುಗಳು, ಕೊಲೆ, ಅತ್ಯಾಚಾರ, ಹೀಗೆ ಗಂಭೀರ ಸ್ವರೂಪದ ಅಪರಾಧ ಪ್ರಕರಣಗಳು ನಡೆದಿರಬಹುದಾಗಿದ್ದು, ಈ ಎಲ್ಲಾ ಸಾಧ್ಯತೆಗಳನ್ನು ಪರಿಗಣಿಸಿ ಪ್ರಕರಣದ ಸಮಗ್ರ ಮತ್ತು ನಿಷ್ಪಕ್ಷಪಾತ ತನಿಖೆ ನಡೆಸುವಂತೆ ರಾಜ್ಯ ಮಹಿಳಾ ಆಯೋಗವು ರಾಜ್ಯ ಸರ್ಕಾರಕ್ಕೆ ಕೋರಿದ್ದು, ಅವರ ಕೋರಿಕೆಯ ಮೇರೆಗೆ ನಾಲ್ವರು ಐಪಿಎಸ್ ಅಧಿಕಾರಿಗಳನ್ನೊಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಿ ಆದೇಶಿಸಲಾಗಿದೆ. ವಿಶೇಷ ತನಿಖಾ ತಂಡವು ಧರ್ಮಸ್ಥಳ ಠಾಣೆಯಲ್ಲಿ ದಾಖಲಾಗಿರುವ ದೂರು ಸೇರಿದಂತೆ ಇದಕ್ಕೆ ಸಂಬಂಧಪಟ್ಟಂತೆ ರಾಜ್ಯದ ಇತರೆ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಾಗೂ ದಾಖಲಾಗುವ ಎಲ್ಲಾ ಕ್ರಿಮಿನಲ್ ಪ್ರಕರಣಗಳನ್ನು ಸಮಗ್ರ ತನಿಖೆ ನಡೆಸಿ, ವರದಿ ನೀಡಲಿದೆ'.

ಸರ್ಕಾರಿ ಆದೇಶದ ಪ್ರಕಾರ ಎಸ್.ಐ.ಟಿ.ಗೆ ನಿರ್ದಿಷ್ಟ ಕಾರ್ಯಸೂಚಿ ನೀಡಲಾಗಿದೆ ಹಾಗೂ ತಂಡಕ್ಕೆ ವಹಿಸಿದ 'ಟರ್ಮ್ಸ್ ಆಫ್ ರೆಫರೆನ್ಸ್' ಮಹಿಳಾ ಆಯೋಗದ ಅಧ್ಯಕ್ಷರ ಪತ್ರದಲ್ಲಿ ಉಲ್ಲೇಖಿಸಿದ ಅಂಶಗಳನ್ನು ಆಧರಿಸಿದೆ ಎಂಬುದು ಸುಸ್ಪಷ್ಟ. ಅದರಂತೆ ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಕೊಲೆ, ಅತ್ಯಾಚಾರ ಮತ್ತು ಅಸಹಜ ಸಾವುಗಳ ತನಿಖೆಯಲ್ಲಿ ಎಸ್.ಐ.ಟಿ. ತೊಡಗಿಕೊಂಡಿದೆ. ಈ ಮಧ್ಯೆ ಸಾಕ್ಷಿ-ದೂರುದಾರನ ಬಂಧನ, ಮಾಹಿತಿ ಹೊಂದಿದವರ, ಆರೋಪ ಮಾಡಿದವರ ವಿಸ್ತೃತ ವಿಚಾರಣೆ ನಡೆಯುತ್ತಿರುವುದು ತನಿಖೆಯ ಮುಂದುವರಿದ ಭಾಗವೇ ಆಗಿದೆ. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅವಲೋಕಿಸಿದಾಗ ಎಸ್.ಐ.ಟಿ. ತನಿಖೆಯ ಜಾಡು ಸರಿಯಾದ ದಿಕ್ಕಿನಲ್ಲಿದೆ ಎಂದು ನಂಬಲು ಕಾರಣಗಳಿವೆ. ವಸ್ತುಸ್ಥಿತಿ ಹೀಗಿರುವಾಗ 'ಮಾಧ್ಯಮ ನ್ಯಾಯಾಲಯ'ದ ವಿಚಾರಣೆ ಮಾತ್ರ ತನಿಖೆಯ, ಆರೋಪಗಳ ದಿಕ್ಕನ್ನೇ ತಿರುಗಿಸಿ, ಊಹಾತ್ಮಕ ಷಡ್ಯಂತ್ರದ ಸುತ್ತಲಿನ ಸಂಕಥನಗಳಲ್ಲಿ ಮುಳುಗಿರುವುದು ಮಾಧ್ಯಮದ ವಿಶ್ವಾಸಾರ್ಹತೆಯನ್ನು ಕಟಕಟೆಯಲ್ಲಿ ನಿಲ್ಲಿಸಿದೆ.

ಮಾಧ್ಯಮಗಳು ತಮ್ಮ ಅಜೆಂಡಾ ಮೂಲದ ಕಾರ್ಯವೈಖರಿ ಮುಖಾಂತರ ಏಕಮುಖೀ ವರ್ತನೆಯಲ್ಲಿ ನಿರತವಾಗಿರುವುದು ಸಾಮಾನ್ಯ ನೋಡುಗರ ಗ್ರಹಿಕೆಗೂ ನಿಲುಕಿಯಾಗಿದೆ. ಇನ್ನೊಂದೆಡೆ ರಾಜಕಾರಣಿಗಳ, ರಾಜಕೀಯ ಪಕ್ಷಗಳ ಅಲ್ಪಕಾಲೀನ ಲಾಭದೃಷ್ಟಿಯ ನಿಲುವು-ನಿರ್ಧಾರಗಳು, ನುಡಿ-ನಡೆಗಳು ಜನರಲ್ಲಿ ಜುಗುಪ್ಸೆ ಹುಟ್ಟಿಸುವಷ್ಟು ಕೊಳಕನ್ನು ಮೆತ್ತಿಕೊಂಡಿವೆ. ಜನಸಾಮಾನ್ಯರು ಪವಿತ್ರ ಕ್ಷೇತ್ರ ಎಂದು ದೃಢವಾಗಿ ನಂಬಿರುವ ಧರ್ಮಸ್ಥಳದಲ್ಲಿ ನಡೆದಿವೆ ಎನ್ನಲಾದ ಅನಾಚಾರಗಳ ವಿರುದ್ಧ ಎತ್ತಿದ ದನಿಯಲ್ಲಿ ಭಾರತೀಯ ಜನತಾ ಪಕ್ಷಕ್ಕೆ ಹಿಂದೂ ವಿರೋಧಿ ಷಡ್ಯಂತ್ರ ಕೇಳಿಸುತ್ತದೆ. ಅಲ್ಲಿ ನಡೆಯುತ್ತಿರುವುದು ಕೆಲವು ವ್ಯಕ್ತಿಗಳು ಎಸಗಿರುವ ನಿರ್ದಿಷ್ಟ ಅಪರಾಧ ಕೃತ್ಯಗಳ ತನಿಖೆ ಎಂಬ ಸರಳ ಸತ್ಯವನ್ನು ಮರೆಮಾಚಿ ಕ್ಷೇತ್ರದ ವಿರುದ್ಧದ ದಾಳಿ, ಸಂಚು ಎಂಬಂತೆ ಬಿಂಬಿಸುವಲ್ಲಿ ಗುಪ್ತ ಕಾರ್ಯಸೂಚಿಯಲ್ಲದೇ ಬೇರೇನಿಲ್ಲ. ಅದೇ ರೀತಿ ಮೈಸೂರು ದಸರೆಯ ಉದ್ಘಾಟನೆಗೆ ಬಾನು ಮುಷ್ತಾಕ್ ಆಯ್ಕೆ, ಮದ್ದೂರು ಗಣೇಶ ಮೆರವಣಿಗೆಯ ವಿವಾದಗಳು ಮತೀಯ ರಾಜಕಾರಣದ ಬತ್ತಳಿಕೆಯನ್ನು ಭರ್ತಿಯಾಗಿ ಇರಿಸುತ್ತಿವೆ.

ಬಿಜೆಪಿಯಂತೆ ಖಚಿತ ಮತೀಯವಾದಿ ಚಿಂತನೆ ಹೊಂದಿರದ ಕಾಂಗ್ರೆಸ್ಸು ತಕ್ಕಮಟ್ಟಿಗೆ ಸೆಕ್ಯುಲರ್ ಎಂಬ ಕಾರಣಕ್ಕೆ ವಿಚಾರವಂತರ ತತ್ಕಾಲೀನ ಅನಿವಾರ್ಯ ಆಯ್ಕೆಯಾಗಿರುವುದೇನೋ ನಿಜ. ಆದರೆ, ಆ ಪಕ್ಷದೊಳಗೂ ಈ ವಿಷಯದಲ್ಲಿ ಎಲ್ಲವೂ ನೆಟ್ಟಗಿಲ್ಲ ಎಂಬುದು ಸಾಕಷ್ಟು ಸಂದರ್ಭಗಳಲ್ಲಿ ಸಾಬೀತಾಗಿದೆ. ಕಾಂಗ್ರೆಸ್ ಪಕ್ಷದ ಕೆಲವು ನೀತಿ ನಿರ್ಧಾರಗಳು ಮುಸ್ಲಿಂ ಸಮಾಜದ ಓಲೈಕೆ ಸ್ವರೂಪದಲ್ಲಿ ಪ್ರಕಟವಾಗುವುದನ್ನು ತಕ್ಷಣದ ಬಾಹ್ಯನೋಟದಲ್ಲಿ ಕಾಣಬಹುದು. ಕಾಂಗ್ರೆಸ್ ನಾಯಕರ ಹಾವಭಾವ, ಮಾತು, ವರ್ತನೆಗಳಂತೂ ಮತ್ತೊಂದು ಬದಿಯ ಶಂಕಿತ ಮನಸ್ಸುಗಳನ್ನು ಮತ್ತಷ್ಟು ಉದ್ರೇಕಿಸುವಂತೆ ಇರುತ್ತವೆ. ಅವರ ಆಂತರಿಕ ಉದ್ದೇಶವೂ ಅದೇ ಆಗಿರಬಹುದು. ಆದರೆ, ವಾಸ್ತವದಲ್ಲಿ ಕಾಂಗ್ರೆಸ್ ಪಕ್ಷದ ಇಂಥ ಧೋರಣೆಯಿಂದ ಮುಸ್ಲಿಂ ಸಮುದಾಯಕ್ಕೆ ಒಟ್ಟಾರೆ ಆಗಿರುವ ನೆರವು ಮತ್ತು ನಷ್ಟದ ಪ್ರಮಾಣವನ್ನು ತುಲನೆಗೆ ಒಳಪಡಿಸಿದರೆ ವಿಸ್ಮಯಕಾರಿ ಫಲಿತಾಂಶ ಹೊರಬೀಳುವ ಸಾಧ್ಯತೆ ಖಂಡಿತಾ ಇದೆ.

ಸಮಾಜದ ಅವಿಭಾಜ್ಯ ಅಂಗವಾದ ಅಲ್ಪಸಂಖ್ಯಾತ ಸಮುದಾಯದ ಹಿತಾಸಕ್ತಿ ಕಾಪಾಡುವ ಸಹಜ ಹಾಗೂ ನ್ಯಾಯಯುತ ಕ್ರಮಗಳನ್ನು ವಿಶೇಷವಾಗಿ ನೋಡುವುದರಲ್ಲಿ ಮತ್ತು ತೋರಿಸುವುದರಲ್ಲಿ ನಿಜವಾದ ತೊಡಕು ಅಡಕವಾಗಿದೆ. ಓಲೈಕೆ ಮತ್ತು ತೆಗಳಿಕೆ ರಾಜಕಾರಣದ ನಡುವೆ ಸಿಲುಕಿರುವ ಮುಸ್ಲಿಂ ಜನಾಂಗವು ಸಮಾಜದ ಮುಖ್ಯವಾಹಿನಿಯಿಂದ ಪ್ರತ್ಯೇಕವಾಗಿಸುವ ಪ್ರಕ್ರಿಯೆಗೆ ಒಳಗಾಗಿದೆಯೇ ಎಂಬ ಸಂಶಯ ಸ್ವಾಭಾವಿಕವಾಗಿ ಮೂಡುತ್ತದೆ. ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತರ ಬಗೆಗಿನ ತೋರಿಕೆಯ ಓಲೈಕೆ, ಆ ಸಮುದಾಯದ ಅಸುರಕ್ಷತೆಯ ಬಳಕೆ ಹಾಗೂ ಭಾರತೀಯ ಜನತಾ ಪಕ್ಷದ ಹಿಂದೂ ಭಾವನೆಗಳ ಒಗ್ಗೂಡಿಸುವಿಕೆಯ ಪ್ರತಿಯೊಂದು ಹೆಜ್ಜೆಯ ಹಿಂದಿರುವುದು ಮತಬ್ಯಾಂಕ್ ರಾಜಕಾರಣವೇ ಹೊರತು ಯಾವ ಸಮಾಜ ಅಥವಾ ಸಮುದಾಯದ ಹಿತಾಸಕ್ತಿಯೂ ಅಲ್ಲ. ಹಾಗೆಯೇ ಮಾಧ್ಯಮಗಳ ಏಕಮುಖೀ ಜಾಗಟೆ ಸದ್ದಿನ ಮರೆಯಲ್ಲಿ ಆಶ್ರಯ ಪಡೆದಿರುವ ಉದ್ದೇಶ ಕೂಡ ಸ್ವಾರ್ಥ ಮತ್ತು ಲಾಭವೇ ಹೊರತು ಯಾರ ಉದ್ಧಾರವೂ ಆಗಿರಲಾರದು.

ಒಂದು ವ್ಯವಸ್ಥೆಯ ಅವಿಭಾಜ್ಯ ಅಂಗಗಳೇ ಸಾರ್ವಜನಿಕ ಬದುಕಿನ ಹದ ಕದಡಲು ಸರ್ವ-ಸನ್ನದ್ಧವಾಗಿರುವ ದುರಿತ ಕಾಲದಲ್ಲಿ ಹುಟ್ಟುವ ಹತಾಶೆಯ ಪ್ರಮಾಣ ಮತ್ತು ಆಕ್ರೋಶದ ದಿಕ್ಕನ್ನು ಊಹಿಸುವುದು ಕಷ್ಟ. ಆದಾಗ್ಯೂ ಇಂಥ ದುಃಸ್ಥಿತಿಗೆ ಈಡಾದ ಯಾವುದೇ ದೇಶದ ಸಾರ್ವತ್ರಿಕ ತಾಪದ ಪರಿಣಾಮದ ಸಜೀವ ನಿದರ್ಶನಕ್ಕಾಗಿ ನೆರೆಯ ಶ್ರೀಲಂಕಾ, ಬಾಂಗ್ಲಾ ಹಾಗೂ ಇದೀಗ ನೇಪಾಳ ವಿದ್ಯಮಾನಗಳನ್ನು ಪರಿಗಣಿಸಬಹುದು.

ಸೈದ್ಧಾಂತಿಕವಾಗಿ ಧರ್ಮಕೇಂದ್ರಿತ ವಿಚಾರಧಾರೆಯ ಪ್ರಭಾವಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಂಘಟನೆಗಳ ಚಟುವಟಿಕೆಗಳನ್ನು ಸುರಕ್ಷಿತ ಅಂತರದಲ್ಲಿ ಇರಿಸುವ ವಿವೇಕವನ್ನು ಸಾರ್ವಜನಿಕ ಅಭಿವ್ಯಕ್ತಿಯ ವಿವಿಧ ರೂಪಗಳು ಅಳವಡಿಸಿಕೊಳ್ಳಬೇಕಾಗಿದೆ. ರಾಜಕೀಯ ಪಕ್ಷಗಳ ಧೋರಣೆಗಳಲ್ಲಿ ಕಾಣಿಸುವ ಒಟ್ಟು ಸಮಾಜದ ದೀರ್ಘಕಾಲಿಕ ಒಳಿತು ಮತ್ತು ಕೆಡುಕನ್ನು ನಿಕಷಕ್ಕೆ ಒಳಪಡಿಸುವ ಅಗತ್ಯವೂ ಇದೆ.



ವಾಚಕರ ವಾಣಿ

ಓಲೈಕೆಗಾಗಿ ಅಸಂಬದ್ಧ ಹೇಳಿಕೆ ಸಲ್ಲ

'ಪ್ರಧಾನಿ ಮೋದಿ ಅಭಿನವ ಬಸವಣ್ಣ' (ಪ್ರ.ವಾ., ಸೆಪ್ಟೆಂಬರ್ 13) ಎಂದು ಸಂಸದ ಗೋವಿಂದ ಕಾರಜೋಳ ಹೇಳಿದ್ದಾರೆ. ಮಹಿಳಾ ಸಮಾನತೆಗಾಗಿ ಬಸವಣ್ಣ ಹೋರಾಡಿದ್ದರು. ಈಗ ಪ್ರಧಾನಿ ದಿಟ್ಟಹೆಜ್ಜೆ ಇರಿಸಿದ್ದಾರೆ ಎಂದೂ ಹೇಳಿದ್ದಾರೆ. ಬಸವಣ್ಣ ಹಾಗೂ ಮೋದಿಯವರ ವ್ಯಕ್ತಿತ್ವದಲ್ಲಿ ಅಜಗಜ ಅಂತರವಿದೆ. ಮೋದಿ ಅವರು ಆರ್‌ಎಸ್‌ಎಸ್ ಸಿದ್ಧಾಂತವನ್ನೇ ಹಾಸಿ ಹೊದ್ದು ಮಲಗುತ್ತಾರೆ. ಆ ಸಿದ್ಧಾಂತದಲ್ಲಿ ಮಹಿಳಾ ಅಸ್ತಿತ್ವ, ಸ್ವಾಭಿಮಾನಕ್ಕೆ ಎಳ್ಳಷ್ಟೂ ಸ್ಥಾನವಿಲ್ಲ. ತಮ್ಮ ನಾಯಕರ ಓಲೈಕೆಗಾಗಿ ಇಂತಹ ಕೀಳು ಅಭಿರುಚಿಯ ಹೇಳಿಕೆ ನೀಡುವುದು ಸರಿಯಲ್ಲ.

ಪ್ರೊ. ಕಾಶೀನಾಥ ಅಂಬಲಗೆ, ಬೆಂಗಳೂರು

ಶಿಕ್ಷಕರ ರಜೆಗೆ ಕುತ್ತು ತರುವುದು ಬೇಡ

ಶಿಕ್ಷಕರಿಗೆ ಕುಟುಂಬದ ಜೊತೆಗೆ ಮತ್ತು ಪ್ರವಾಸಕ್ಕೆ ಸಿಗುವ ಸಮಯವೇ ವಾರ್ಷಿಕ ಮತ್ತು ಅರ್ಧ ವಾರ್ಷಿಕ ರಜೆ. ಇತ್ತೀಚಿನ ವರ್ಷಗಳಲ್ಲಿ ಆ ರಜೆಯ ಸಮಯದಲ್ಲಿ ಬಹುತೇಕ ಶಿಕ್ಷಕರು ಹಲವು ಜವಾಬ್ದಾರಿಗಳನ್ನು ನಿಭಾಯಿಸುತ್ತಿರುತ್ತಾರೆ. ಮುಂಬರುವ ಅರ್ಧ ವಾರ್ಷಿಕ ರಜೆಯಲ್ಲಿ 1.75 ಲಕ್ಷ ಶಿಕ್ಷಕರು ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆಗೆ ನಿಯೋಜನೆಗೊಂಡಿರುವ ಬಗ್ಗೆ ವರದಿಯಾಗಿದೆ. ಸಮೀಕ್ಷೆಯು ವಸ್ತುನಿಷ್ಠ ಮತ್ತು ಪ್ರಾಮಾಣಿಕವಾಗಿ ನಡೆಯಬೇಕಾದರೆ ಶಿಕ್ಷಕರಿಂದ ಮಾತ್ರ ಸಾಧ್ಯ. ಹಾಗಾಗಿ, ಸರ್ಕಾರವು ಸಮೀಕ್ಷೆಗೆ ದುಡಿಯುವ ಶಿಕ್ಷಕರ ಬಗ್ಗೆ ಕಾಳಜಿ ತೋರಿ ಅವರಿಗೆ ಒಂದು ವಾರ ರಜೆ ನೀಡಬೇಕಿದೆ.

ಆಮೀರ್ ಅಶ್‌ಅರೀ, ಬನ್ನೂರು

ಪುಸ್ತಕ ಖರೀದಿ: ₹8 ಕೋಟಿ ಬಾಕಿ

ಐಎಎಸ್ ಅಧಿಕಾರಿಯೊಬ್ಬರು ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ಆಯುಕ್ತರಾಗಿ ಬಂದರೆ, ಗ್ರಂಥಾಲಯಗಳಲ್ಲಿ ಅತ್ಯುತ್ತಮ ಪುಸ್ತಕಗಳು ಓದುಗರಿಗೆ ಲಭ್ಯವಾಗುತ್ತವೆ; ಲೇಖಕ, ಪ್ರಕಾಶಕರ ಸಂಕಷ್ಟಕ್ಕೆ ಪರಿಹಾರ ಸಿಗುತ್ತದೆ ಎಂದು ಭಾವಿಸಿದ್ದೆವು. ಅವರು ಬಂದು ವರ್ಷ ಕಳೆದರೂ ಹಿಂದೆ ಇದ್ದ ಸಮಸ್ಯೆಗಳು ಹಾಗೆಯೇ ಮುಂದುವರಿದಿವೆ. ರಾಜಾರಾಮ್ ಮೋಹನ ರಾಯ್ ಫೌಂಡೇಷನ್, ಸಗಟು ಪುಸ್ತಕ ಖರೀದಿ, ಎಸ್‌ಸಿಎಸ್‌ಪಿ, ಟಿಎಸ್‌ಪಿ ಅಡಿ ಪುಸ್ತಕಗಳ ಖರೀದಿಯನ್ನು ಸ್ಥಗಿತಗೊಳಿಸಲಾಗಿದೆ. 2020ನೇ ಸಾಲಿನಲ್ಲಿ ಸಗಟು ಪುಸ್ತಕ ಖರೀದಿಸಿದ್ದ ಬಾಬ್ತು ಸುಮಾರು ₹8 ಕೋಟಿ ಸರ್ಕಾರದಿಂದ ಬಾಕಿ ಇದೆ. 2021ನೇ ಸಾಲಿನಿಂದ ಪುಸ್ತಕ ಖರೀದಿಯಾಗಿಲ್ಲ. ಜ್ಞಾನ ಪ್ರಸರಣ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಬರಹಗಾರರ ಮತ್ತು ಪ್ರಕಾಶಕರ ಪಾಡನ್ನು ಕೇಳುವವರು ಇಲ್ಲದಂತಾಗಿದೆ.

ನಿಡಸಾಲೆ ಪುಟ್ಟಸ್ವಾಮಯ್ಯ, ಬೆಂಗಳೂರು

ಏನಿದು 'ಇತರ ಚೇತರಿಕೆಗಳು'

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯಿತಿ ಮೂಲಕ ನೀಡುವ ರಸೀದಿಯೊಂದು ಕಣ್ಣಿಗೆ ಬಿತ್ತು. ರಸೀದಿಯ ಬಲಬದಿಗೆ ಸೇವೆ ಹೆಸರಿನ ಕಾಲಂ ಕೆಳಗಡೆ 'ಇತರ ಚೇತರಿಕೆಗಳು' ಎಂದಿದೆ. ಕೆಳಭಾಗದ 'ಸ್ವೀಕೃತಿ ವಿವರಗಳು' ಕಾಲಂನಲ್ಲಿ 'ಇತರ ಚೇತರಿಕೆಗಳು' ಅಥವಾ 'ಅದರ್ ರಿಕವರೀಸ್' ಎಂದು ಇಂಗ್ಲಿಷಿನಲ್ಲಿ ನಮೂದಾಗಿದೆ. ಇಲಾಖೆಯು ಇಲ್ಲಿ ಶಬ್ದಗಳಿಗೆ ಅರ್ಥ ಹುಡುಕಲು ಗೂಗಲ್ ಮೊರೆಹೋಗಿರುವುದು ಸ್ಪಷ್ಟ. ಸಾಮಾನ್ಯ ಅರ್ಥದಲ್ಲಿ 'ರಿಕವರಿ' ಎಂದರೆ 'ಅನಾರೋಗ್ಯದಿಂದ ಚೇತರಿಸಿಕೊಳ್ಳು' ಎಂದಾಗುತ್ತದೆ. ಇಲಾಖೆಯು ಹಳೆಯ ಬಾಕಿ ಏನಾದರೂ ಇದೆಯೇ ಎಂಬರ್ಥಕ್ಕೆ 'ವಸೂಲಾತಿ' ಪದದ ಬದಲು 'ಚೇತರಿಕೆಗಳು' ಪದ ಬಳಸಿರುವುದು ಆಶ್ಚರ್ಯ ಮೂಡಿಸಿದೆ.

ಅಶೋಕ ಚಿಕ್ಕಪರಪ್ಪಾ, ಬೆಳಗಾವಿ

ಸಮರ್ಥನೀಯ ದಾಖಲೆ ಯಾವುದು?

ರಾಜ್ಯ ಸರ್ಕಾರವು ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಘೋಷಿಸಿದೆ. ಈ ಮೀಸಲಾತಿ ಆಧಾರದಲ್ಲಿಯೇ ಹೊಸದಾಗಿ ನೇಮಕಾತಿ ಪ್ರಕ್ರಿಯೆ ಪ್ರಾರಂಭಿಸುವಂತೆಯೂ ಆದೇಶಿಸಿದೆ. ಆದರೆ, ಈಗಾಗಲೇ ಎಡಗೈ ಮತ್ತು ಬಲಗೈ ಎರಡೂ ಸಮುದಾಯದ ಬಹುತೇಕ ಜನರು ತಹಶೀಲ್ದಾರ್‌ರಿಂದ ಪಡೆದಿರುವ ಜಾತಿ ಪ್ರಮಾಣಪತ್ರಗಳಲ್ಲಿ ತಮ್ಮ ಜಾತಿ/ ಉಪ ಜಾತಿಗಳಲ್ಲಿ ಪರಿಶಿಷ್ಟ ಜಾತಿ, ಆದಿ ಕರ್ನಾಟಕ ಎಂದೇ ನಮೂದಾಗಿರುತ್ತದೆ. ಇಂತಹ ಪ್ರಕರಣಗಳಲ್ಲಿ ಶಿಕ್ಷಣ, ಉದ್ಯೋಗ ಮತ್ತು ಸರ್ಕಾರದ ಸವಲತ್ತು ಪಡೆಯಲು ಅರ್ಹ ಫಲಾನುಭವಿಗಳು 'ಪ್ರವರ್ಗ 1' ಅಥವಾ 'ಪ್ರವರ್ಗ 2'ಕ್ಕೆ ಸೇರಿದ್ದಾರೆ ಎಂದು ಸಮರ್ಥಿಸುವ ದಾಖಲೆ ಯಾವುದು ಅಥವಾ ಇದನ್ನು ನಿರ್ಧರಿಸುವ ಮಾನದಂಡ ಯಾವುದು ಎಂಬುದನ್ನು ಸರ್ಕಾರ ಸ್ಪಷ್ಟಪಡಿಸಬೇಕಿದೆ. ಇಲ್ಲವಾದರೆ ಒಳಮೀಸಲಾತಿಯ ಮೂಲ ಉದ್ದೇಶವೇ ಅರ್ಥಹೀನವಾಗುತ್ತದೆ.

ಆರ್. ಕುಮಾರ್, ಬೆಂಗಳೂರು

ಪಡಿತರ ಚೀಟಿ ಪರಿಷ್ಕರಣೆ ಅಗತ್ಯ

ಯಾದಗಿರಿ ಜಿಲ್ಲೆಯ ಗುರುಮಠಕಲ್‌ನಲ್ಲಿ ಅನ್ನಭಾಗ್ಯ ಯೋಜನೆಯ ಅಕ್ಕಿ ಅಕ್ರಮವಾಗಿ ವಿದೇಶಕ್ಕೆ ಸಾಗಣೆಯಾಗಿರುವುದು ಸಂಚಲನ ಮೂಡಿಸಿದೆ. ಬಡತನ ರೇಖೆಗಿಂತ ಕೆಳಗಿರುವ ಜನರ ಹೊಟ್ಟೆಗೆ ಸೇರಬೇಕಿದ್ದ ಪಡಿತರವು ಪ್ರಭಾವಿ ವ್ಯಕ್ತಿಗಳ ಬೊಕ್ಕಸ ತುಂಬಿಸಿರುವುದು ದುರಂತವೇ ಸರಿ.

ರಾಜ್ಯದಲ್ಲಿ ಪಡಿತರ ಅಕ್ಕಿ ಅಕ್ರಮ ಸಾಗಣೆ, ದಾಸ್ತಾನು, ಮಾರಾಟ ಪ್ರಕರಣಗಳು ಆಗಾಗ್ಗೆ ವರದಿಯಾಗುತ್ತಿವೆ. ಇದರ ತಡೆಗಟ್ಟುವಿಕೆಗೆ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು. ದಿನಸಿ ಅಂಗಡಿಗಳಿಗೆ ಪಡಿತರ ಅಕ್ಕಿಯನ್ನು ಮಾರಾಟ ಮಾಡುವವರ ಬಿಪಿಎಲ್ ಕಾರ್ಡ್ ರದ್ದುಪಡಿಸಬೇಕು. ನಕಲಿ ಕಾರ್ಡ್ ಪತ್ತೆಹಚ್ಚಲು ಪಡಿತರ ಚೀಟಿಗಳ ಪರಿಷ್ಕರಣೆಯನ್ನು ಪರಿಣಾಮಕಾರಿಯಾಗಿ ನಡೆಸಬೇಕಿದೆ. ಇಂದಿಗೂ ಬಹಳಷ್ಟು ಅರ್ಹ ಫಲಾನುಭವಿಗಳಿಗೆ ಪಡಿತರ ಚೀಟಿ ಸಿಕ್ಕಿಲ್ಲ. ಅವರಿಗೆ ಕಾರ್ಡ್ ವಿತರಿಸಲು ಕ್ರಮವಹಿಸಬೇಕು.

ಪ್ರೇರಣಾ ಪೊಳಲಿ, ಮೂಡಬಿದಿರೆ

ಚುರುಮುರಿ



ಜಗದ್ಗುರು ಪುರಾಣ

• ಸುಮಂಗಲಾ

'ಭಾರತವೇ ಈ ಭೂಲೋಕದ ಜಗದ್ಗುರು!' ಅಂತ ಬೆಕ್ಕಣ್ಣ ಬೆಳಬೆಳಗ್ಗೆಯೇ ಖುಷಿಯಿಂದ ಕುಣಿಯಿತು.

ನಾನು ಇದು ಹೇಗೆ ಸಾಧ್ಯವೆಂದು ಹೌಹಾರಿಬಿಟ್ಟೆ.

'ನೋಡಿಲ್ಲಿ' ಎಂದು 'ಪ್ರಜಾವಾಣಿ' ಪತ್ರಿಕೆಯ 'ವಿಜ್ಞಾನ ವಿಶೇಷ' ಅಂಕಣ ಬರಹವನ್ನು ಮುಖಕ್ಕೆ ಹಿಡಿಯಿತು.

'ಮಂಗ್ಯಾನಂಥವ್ನೇ... ಹೆಡ್ಡಿಂಗೂ ಪೂರ್ಣ ಓದದೇ ಕುಣೀತೀಯ. ನಾವು ಗುಜರಿ ಲೋಕದ ಜಗದ್ಗುರು ಅಂತ ಅಲ್ಲಿರೋದು!' ಎಂದು ಬೆಕ್ಕಣ್ಣನ ತಲೆ ಮೇಲೆ ಮೊಟಕಿದೆ.

ಬೆಕ್ಕಣ್ಣನ ಮುಖ ಇಂಗು ತಿಂದ ಮಂಗನಂತೆ ಆದರೂ ತೋರಗೊಡದೇ, 'ನೋಡು ಮತ್ತೆ... ನಾವು ಇಡೀ ಭೂಮಂಡಲಕ್ಕೆ ಎಂಥ ಘನವಾದ ಸೇವೆ ಕೊಡಾಕೆ ಹತ್ತೀವಿ!' ಎಂದಿತು.

'ಅಮೆರಿಕದ 11/9 ದುರಂತದಲ್ಲಿ ಬಿದ್ದ ಎಲ್ಲಾ ಕಟ್ಟಡಗಳ 950 ಟನ್ ವಿಷಕಾರಿ ತ್ಯಾಜ್ಯ ನಮ್ಮ ದೇಶಕ್ಕೆ ಬಂತು. ಎಲ್ಲಾ ಶ್ರೀಮಂತ ದೇಶಗಳ ಪ್ಲಾಸ್ಟಿಕ್ ತ್ಯಾಜ್ಯ ಇಲ್ಲಿಗೆ ಒಗೀತಾರೆ. ಹಳೇ ಹಡಗುಗಳೆಲ್ಲ ವಿಲೇವಾರಿಗೆ ಅಲಂಗ್ ಬಂದರಿಗೆ ಬರತಾವೆ. ನಾವು ಆ ದೇಶಗಳ ತಿಪ್ಪೇಗುಂಡಿ ಆಗೀವಿ, ತಿಳೀತಿಲ್ಲೋ!' ಎಂದೆ.

'ಈ ಶ್ರೀಮಂತ ದೇಶಗಳು ಪ್ಲಾಸ್ಟಿಕ್ಕು, ವಿಷಕಾರಿ ತ್ಯಾಜ್ಯ, ಹಾಳುಮೂಳುಗಳನ್ನು ನಮ್ಮ ದೇಶಕ್ಕೆ ಕಳಿಸಿ, ತಮ್ಮ ರಸ್ತೆಗಳು, ಸಮುದ್ರ ದಡ ಎಲ್ಲ ಸ್ವಚ್ಛ ಇಟಕೋತಾರೆ. ನಮ್ಮ ಕಸವೇ ನಮಗೆ ಹಾಸಲುಂಟು, ಹೊದೆಯಲುಂಟು... ಅಂತಾದ್ರಲ್ಲಿ ಬೇರೆ ದೇಶಗಳ ಕಸಾನೂ ಇಲ್ಲೇ ಸುರಿತಾರೆ' ಎಂದು ಬೆಕ್ಕಣ್ಣ ಗುರುಗುಟ್ಟಿತು.

ತುಸು ಹೊತ್ತು ಬಿಟ್ಟು, 'ಹೋಗ್ಲಿಬಿಡು, ಇವತ್ತಾರೆ ಖೀರು ಮಾಡು' ಎಂದು ಮೆತ್ತಗೆ ಉಲಿಯಿತು.

'ಇವತ್ ಯಾವ ಹಬ್ಬ ಖೀರು ಮಾಡಕ್ಕೆ?' ಎಂದೆ ಅಚ್ಚರಿಯಿಂದ.

'ಮಣಿಪುರ ಜನಾಂಗೀಯ ಘರ್ಷಣೆಯಲ್ಲಿ ಹೊತ್ತಿ ಉರೀತಾ ಎರಡು ವರ್ಷವಾತು. ನಮ್ ಜಗದ್ಗುರು ಮೋದಿ ಮಾಮಾರು ಮೊನ್ನೆ ಅಲ್ಲಿಗೆ ಹೋಗಿ ಅಭಿವೃದ್ಧಿ ಕೊಡುಗೆ ಕೊಟ್ಟು ಬಂದರು. ಅದಕ್ಕೇ!' ಎಂದು ಮುಸಿ ಮುಸಿ ನಕ್ಕಿತು.

ಸಂಗತ

ಪ್ರಜಾಪ್ರಭುತ್ವ ಉಳಿಸಿಕೊಳ್ಳದೆ ಹೋದರೆ...


'ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನ' (ಸೆ. 15) ಪ್ರಜಾಪ್ರಭುತ್ವದ ಆಶಯಗಳ ಚರ್ಚೆಗೆ ಕಾರಣವಾಗಲಿ; ಮತದಾನದ ಹಕ್ಕಿನ ಕುರಿತು ಜಾಗೃತಿ ಮೂಡಿಸಲಿ.

• ಡಾ. ಎಚ್.ಸಿ. ಮಹದೇವಪ್ಪ

'ಸಾರ್ವತ್ರಿಕ ಮತದಾನದ ಹಕ್ಕು' ನಮ್ಮ ಸ್ವಾತಂತ್ರ್ಯ ಹೋರಾಟದ ಮುಖ್ಯ ತತ್ತ್ವಗಳಲ್ಲೊಂದು. 1928ರಲ್ಲಿ ಮೋತಿಲಾಲ್ ನೆಹರೂ ವರದಿಯನ್ವಯ ಅದು ರೂಪಿತವಾಗಿತ್ತು. 1929ರಲ್ಲಿ 'ಪೂರ್ಣ ಸ್ವರಾಜ್' ಘೋಷಣೆಯಾದಾಗಲೂ ಅದನ್ನೇ ಪುನರುಚ್ಚರಿಸಲಾಗಿತ್ತು. ಸಂವಿಧಾನವು ವಯಸ್ಕರ ಮತದಾನ ತತ್ತ್ವವನ್ನು 326ನೇ ವಿಧಿಯಲ್ಲಿ ಸೇರಿಸಿತು. 21 ವರ್ಷ ದಾಟಿದ ಭಾರತದ ಪ್ರತಿಯೊಬ್ಬ ನಾಗರಿಕನಿಗೂ ಮತದಾರನಾಗಿ ನೋಂದಾಯಿಸಿಕೊಳ್ಳುವ ಹಕ್ಕು ಇದೆ ಎನ್ನುವುದನ್ನು ಅದು ಪ್ರತಿಪಾದಿಸಿತು. ಭಾರತದ ಪೌರತ್ವವು ಜನನ ಹಾಗೂ ವಾಸಸ್ಥಾನದ ಆಧಾರದ ಮೇಲೆ (ವಂಶದ ಹಿನ್ನೆಲೆ ಅಥವಾ ಜನಾಂಗದ ಆಧಾರದ ಮೇಲೆ ಅಲ್ಲ) ನಿರ್ಧಾರವಾಗುತ್ತದೆ ಎಂದು ಸಂವಿಧಾನದ 5ನೇ ವಿಧಿ ಒತ್ತಿ ಹೇಳಿದೆ. ಪೌರತ್ವ ಮುಂದುವರಿಸಿಕೊಂಡು ಹೋಗುವ ಹಾಗೂ ಅದನ್ನು ರಕ್ಷಿಸುವ ಕಾರ್ಯವನ್ನು 10ನೇ ವಿಧಿ ಮಾಡುತ್ತದೆ.

ಸ್ವಾತಂತ್ರ್ಯಾನಂತರದ ಮೊದಲ 75 ವರ್ಷಗಳಲ್ಲಿ ಭಾರತೀಯ ಜನತಂತ್ರ ವ್ಯವಸ್ಥೆಯು ಸಾಂವಿಧಾನಿಕ ಭರವಸೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ 'ಎಲ್ಲರನ್ನೂ ಒಳಗೊಳ್ಳುವ ತತ್ತ್ವ'ವನ್ನು ಅನುಸರಿಸಿತು. ಸಂವಿಧಾನದ ಆಶಯ ಈಡೇರಿಸುವುದೇ ಅದರ ಉದ್ದೇಶವಾಗಿತ್ತು.

'ಮ್ಯಾಪಿಂಗ್ ಆಫ್ ಸಿಟಿಜನ್ಸ್ ಆಫ್ ಇಂಡಿಯಾ' ಪುಸ್ತಕದಲ್ಲಿ ಅನುಪಮಾ ರಾಯ್ ಅವರು, ಎಲ್ಲರನ್ನೂ ಒಳಗೊಳ್ಳುವಿಕೆಯ ತರ್ಕ ಮತ್ತು ಮಹತ್ವದ ಕುರಿತು ಚರ್ಚಿಸಿದ್ದಾರೆ.



ಒಂದು ಭೌಗೋಳಿಕ ಪರಿಸರದಲ್ಲಿರುವ ಎಲ್ಲರನ್ನೂ ಒಳಗೊಳ್ಳುವುದು ವಿಶ್ವಮಾನವ ತತ್ತ್ವದೆಡೆಗಿನ ಹೆಜ್ಜೆಯಾಗಿದ್ದು, ಎಲ್ಲರಿಗೂ ಪೌರತ್ವ ವಿಸ್ತರಿಸುವ ಮೂಲಕ ಭಿನ್ನತೆಗಳನ್ನು ಗೌರವಿಸಿ ಪ್ರಜಾಪ್ರಭುತ್ವದ ಸತ್ವವನ್ನು ಗಟ್ಟಿಗೊಳಿಸಬೇಕೆಂದು ಅನುಪಮಾ ಹೇಳುತ್ತಾರೆ. ಇದಕ್ಕೆ ವಿರುದ್ಧವಾದ ರೀತಿಯಲ್ಲಿ ಪೌರತ್ವವನ್ನು ನಿರಾಕರಿಸುವುದು, ಪೌರತ್ವದ ಬಗ್ಗೆ ಶಂಕೆ ವ್ಯಕ್ತಪಡಿಸುವುದು ಮತ್ತು ಪೌರತ್ವವನ್ನು ಪ್ರತ್ಯೇಕಗೊಳಿಸಿ ನೋಡುವ ರೀತಿಯೂ ಜಾರಿಯಲ್ಲಿದೆ. ಹೀಗೆ ಇದ್ದ ಮಾತ್ರಕ್ಕೆ, ಈ ತರ್ಕವನ್ನು ಮತದಾನದ ಹಕ್ಕನ್ನು ಮೊಟಕುಗೊಳಿಸುವ ಮಟ್ಟಕ್ಕೆ ವಿಸ್ತರಿಸಲಾಗದು.

ಮಾನವಶಾಸ್ತ್ರಜ್ಞೆ ಮುಕುಲಿಕಾ ಬ್ಯಾನರ್ಜಿ ಅವರ, 'ವೈ ಇಂಡಿಯಾ ವೋಟ್ಸ್?' ಕೃತಿಯಲ್ಲಿ ಒಂದು ವಾದವಿದೆ: ಮತದಾನದ ಜಾತ್ಯತೀತ ರಿವಾಜು ಈಗ ಭಾರತದಲ್ಲಿ ಪರಮ ಪವಿತ್ರ ಸ್ಥಾನಮಾನವನ್ನು ಪಡೆದುಕೊಂಡಿದೆ. ಅದೀಗ ಸ್ವೀಕೃತ ಅಭಿಪ್ರಾಯವಾಗಿ ಬದಲಾಗಿದ್ದು, ಎಲ್ಲರಿಗೂ ಸಮಾನ ಮತದಾನದ ಹಕ್ಕು ಲಭಿಸಿದೆ ಎಂದವರು ಹೇಳುತ್ತಾರೆ.

ಎಲ್ಲರನ್ನೂ ಒಳಗೊಳ್ಳುವ ತತ್ತ್ವವು ಇಲ್ಲಿ ಆಕಸ್ಮಿಕವಾಗಿ ಘಟಿಸಿಲ್ಲ. ಬದಲಿಗೆ ಕಾನೂನು, ನಿಯಮ ಹಾಗೂ ಸಾಂಸ್ಥಿಕ ನಡಾವಳಿಗಳಲ್ಲಿ ಬೆರೆತುಹೋಗಿತ್ತು. ಯಾವ ಮತದಾರನನ್ನೂ ಮತದಾನದಿಂದ ಹೊರಗೆ ಇಡಬಾರದು ಎನ್ನುವುದೇ ಇವೆಲ್ಲವುಗಳ ಗುರಿಯಾಗಿತ್ತು. ಅಮೆರಿಕದಲ್ಲಿ ಹಾಗೂ ಇತರ ಕೆಲವು ದೇಶಗಳಲ್ಲಿ ಅರ್ಹ ವ್ಯಕ್ತಿಯು ಮತದಾರನಾಗಿ ನೋಂದಣಿ ಮಾಡಿಸಲು ಅರ್ಜಿ ಸಲ್ಲಿಸಬೇಕು. ಇದರಿಂದಾಗಿ, ಅಮೆರಿಕದಲ್ಲಿ ನೋಂದಾಯಿತ ಮತದಾರರು ಶೇ 74ರಷ್ಟು ಇದ್ದರೆ, ಭಾರತದಲ್ಲಿ ಶೇ 96ರಷ್ಟು ನಾಗರಿಕರಿಗೆ ಮತದಾನದ ಹಕ್ಕು ಇದೆ. ಮತದಾರರ ಪಟ್ಟಿಗೆ ಜನರು ತಾವೇ ಹೆಸರು ನೋಂದಾಯಿಸುವ ಅವಕಾಶ ನಮ್ಮಲ್ಲಿ ಇದೆಯಾದರೂ, ತಾತ್ವಿಕವಾಗಿ ಅದರ ಹೊಣೆಗಾರಿಕೆ ಚುನಾವಣಾ ಅಧಿಕಾರಿಗಳ ಮೇಲಿದೆ. ಪ್ರತಿ ವಯಸ್ಕ ನಿವಾಸಿಯನ್ನು ಸಂಪರ್ಕಿಸಿ, ಅರ್ಹರು ಮತದಾರರ ಪಟ್ಟಿಯಿಂದ ಹೊರಗೆ ಉಳಿಯದಂತೆ ಮಾಡುವುದು ಅವರ ಹೊಣೆ.

ಪೌರತ್ವ ಕುರಿತು ಒಂದು ಸಾಮಾನ್ಯ ಭಾವನೆ ಇದೆ: ವಯಸ್ಕನಂತೆ ಕಾಣುವ ಯಾವುದೇ ನಿವಾಸಿಗೂ ದೇಶದ ಪೌರತ್ವ ಸಿಗುತ್ತದೆ ಹಾಗೂ ಮತದಾರರ ಪಟ್ಟಿಗೆ ಹೆಸರು ಸೇರುತ್ತದೆ. ಯಾವುದೋ ದೂರು ಅಥವಾ ಶಂಕೆಯ ಕಾರಣದಿಂದ ಅದು ತಪ್ಪಬಹುದು ಅಷ್ಟೇ. ಒಂದು ಸಲ ಮತದಾರರ ಪಟ್ಟಿಗೆ ಹೆಸರು ಸೇರಿದರೆ, ಆಮೇಲೆ ಸಮರ್ಪಕ ಪ್ರಕ್ರಿಯೆ ಇಲ್ಲದೆ ಅದನ್ನು ತೆಗೆಯುವಂತಿಲ್ಲ. ಹೆಸರಾಂತ ಇತಿಹಾಸಕಾರ ಆರ್ನಿಟ್ ಶಾನಿ ಅವರ ಜನಪ್ರಿಯ ಕೃತಿ 'ಹೌ ಇಂಡಿಯಾ ಬಿಕೇಮ್ ಡೆಮಾಕ್ರೆಟಿಕ್' ಮತದಾರರ ಸಾರ್ವತ್ರೀಕರಣಕ್ಕೆ ಭಾರತೀಯ ಚುನಾವಣಾ ಆಯೋಗ ಏನೆಲ್ಲಾ ಅಸಾಮಾನ್ಯವಾದ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತದೆ. ಅಂಚಿನಲ್ಲಿ ಇರುವ ಜನರನ್ನು ಮತದಾರರ ಪಟ್ಟಿಗೆ ಸೇರಿಸಲು ಆಯೋಗ ಅನೇಕ ವರ್ಷಗಳಿಂದ ದಾರಿಗಳನ್ನು ಹುಡುಕುತ್ತಾ ಬಂದಿದೆ. ಅಲೆಮಾರಿ ಸಮುದಾಯಗಳು, ವಸತಿರಹಿತರು, ಲೈಂಗಿಕ ಕಾರ್ಯಕರ್ತರು, ಲಿಂಗತ್ವ ಅಲ್ಪಸಂಖ್ಯಾತರು, ಅನಾಥರು, ದಾಖಲೆಗಳಿಲ್ಲದ ನಾಗರಿಕರು ಹಾಗೂ ಅನಿವಾಸಿ ಭಾರತೀಯರಿಗೆ ಮತದಾನದ ಹಕ್ಕು ಒದಗಿಸುವ ಪ್ರಯತ್ನಗಳನ್ನು ನಡೆಸಿದೆ.

ಭಾರತದಲ್ಲಿ 'ನನ್ನ ಮತ ನನ್ನ ಹಕ್ಕು' ಎಂಬ ಘೋಷಣೆಯು ಮತದಾನದ ಹಕ್ಕಿನ ಜೊತೆಗೆ ಜನರ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಅಸ್ತಿತ್ವವನ್ನೂ ನಿರ್ಧರಿಸುತ್ತದೆ. ಧರ್ಮಾಂಧತೆ, ಮೌಢ್ಯ, ಏಕತೆಗೆ ವಿರುದ್ಧವಾದ ಸಂಗತಿಗಳು ಹಲವು ಕಾರಣಕ್ಕೆ ಹೆಚ್ಚಾಗಿ ಇರುವ ಈ ಸಂದರ್ಭದಲ್ಲಿ ಪ್ರಜಾಪ್ರಭುತ್ವದ ನೈಜ ಉದ್ದೇಶಗಳನ್ನು ಜಾರಿಗೊಳಿಸಲು ಶ್ರಮಿಸುವುದು ನಮ್ಮೆಲ್ಲರ ಕರ್ತವ್ಯ. ಈ ಕರ್ತವ್ಯವನ್ನು ಮರೆತು ಕಷ್ಟಪಟ್ಟು ಪಡೆದ ಪ್ರಜಾಪ್ರಭುತ್ವವನ್ನು ಕಳೆದುಕೊಂಡರೆ, ಬಾಬಾಸಾಹೇಬ್ ಅಂಬೇಡ್ಕರ್ ಹೇಳಿದಂತೆ ನಾವು ನಾಯಿ-ನರಿಗಳಂತೆ ಬದುಕಬೇಕಾಗುತ್ತದೆ.

ಈ ಬಾರಿಯ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವದ ದಿನದಂದು ನಾವೆಲ್ಲರೂ ನಮ್ಮ ಹಕ್ಕಿನ ಪ್ರಜ್ಞೆಯ ಜೊತೆ ಪ್ರಜಾಪ್ರಭುತ್ವದ ಆಧಾರಸ್ತಂಭಗಳನ್ನು ಕಾಪಾಡುವ ಪ್ರತಿಜ್ಞೆ ಕೈಗೊಳ್ಳೋಣ.

(ಲೇಖಕ: ಸಮಾಜ ಕಲ್ಯಾಣ ಸಚಿವ)

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಕೀಯ ಅಸ್ಥಿರತೆ ಸಾಲದ ಸುಳಿಯಲ್ಲಿ ಫ್ರಾನ್ಸ್

ಆರ್ಥಿಕ ನೀತಿ ವಿರುದ್ಧ ಆಕ್ರೋಶ • ಎರಡು ವರ್ಷದಲ್ಲಿ ಐವರು ಪ್ರಧಾನಿಗಳು

ಫ್ರಾನ್ಸ್ ಆರ್ಥಿಕತೆ: ಅಂಕಿ ಅಂಶಗಳಲ್ಲಿ

114% ಜಿಡಿಪಿ ಗಾತ್ರದಲ್ಲಿ ಸಾಲದ ಪ್ರಮಾಣ

98% 2019ರಲ್ಲಿ ಜಿಡಿಪಿ ಗಾತ್ರದಲ್ಲಿ ಸಾಲದ ಪ್ರಮಾಣ

5.8% ವಿತ್ತೀಯ ಕೊರತೆಯ ಪ್ರಮಾಣ

3.35 ಲಕ್ಷ ಕೋಟಿ ಯುರೋ (₹346 ಲಕ್ಷ ಕೋಟಿ) ಒಟ್ಟು ಸಾಲದ ಮೊತ್ತ

6,800 ಕೋಟಿ ಯುರೋ (₹7.03 ಲಕ್ಷ ಕೋಟಿ) ಈ ವರ್ಷ ಸಾಲದ ಬಡ್ಡಿ ಮೊತ್ತ

3% ಐರೋಪ್ಯ ಒಕ್ಕೂಟದ ನಿಯಮದ ಪ್ರಕಾರ, ವಿತ್ತೀಯ ಕೊರತೆಯ ಮಿತಿ

ನೇಪಾಳದ ತರುವಾಯ ಫ್ರಾನ್ಸ್‌ನಲ್ಲೂ ರಾಜಕೀಯ ಸ್ಥಿತ್ಯಂತರ ನಡೆದಿದೆ. ಫ್ರಾನ್ಸ್‌ನ ಪ್ರಧಾನಿಯಾಗಿದ್ದ ಫ್ರಾಂಕೋಯಿಸ್ ಬೈರೂ ಅವರ ಅಧಿಕಾರಾವಧಿ ಒಂಬತ್ತು ತಿಂಗಳಿಗೇ ಕೊನೆಗೊಂಡಿದೆ. ಅಧ್ಯಕ್ಷ ಇಮ್ಯಾನ್ಯುಯಲ್ ಮ್ಯಾಕ್ರನ್ ಅವರು ತಮ್ಮ ಆಪ್ತ ಸೆಬಾಸ್ಟಿಯನ್ ಲೆಕೋರ್ನು ಅವರನ್ನು ಪ್ರಧಾನಿಯನ್ನಾಗಿ ಮಾಡಿದ್ದಾರೆ. ಅವರು ಅಧ್ಯಕ್ಷರಾದ ಎರಡು ವರ್ಷಗಳಲ್ಲಿ ಐದನೇ ಪ್ರಧಾನಿ ಅಧಿಕಾರಕ್ಕೆ ಬಂದಿದ್ದು, ಯಾರೇ ಪ್ರಧಾನಿಯಾದರೂ ಆಡಳಿತ ಸುಸೂತ್ರ ಅಲ್ಲ ಎನ್ನುವಂತಾಗಿದೆ. ಜನ ನಿರಂತರವಾಗಿ ಪ್ರತಿಭಟನೆ ನಡೆಸುತ್ತಿದ್ದು, ಯಾವುದೇ ಕ್ಷಣದಲ್ಲಿ ಅವು ವಿಕೋಪಕ್ಕೆ ಹೋಗಬಹುದಾದ ಸಾಧ್ಯತೆ ಇದೆ. ಫ್ರಾನ್ಸ್ ರಾಜಕೀಯ ಅಸ್ಥಿರತೆ ಮತ್ತು ಆರ್ಥಿಕ ಸಂಕಷ್ಟದ ಸುಳಿಯಲ್ಲಿ ಸಿಲುಕಿದೆ

ಪ್ರಜಾವಾಣಿ ವಾರ್ತೆ

ಫ್ರಾನ್ಸ್‌ನಲ್ಲಿ ಜನ ಅಲ್ಲಿನ ಸರ್ಕಾರದ ವಿರುದ್ಧ ಬೀದಿಗಿಳಿದು ದೊಡ್ಡ ಮಟ್ಟದಲ್ಲಿ ಪ್ರತಿಭಟನೆಗಳನ್ನು ನಡೆಸುತ್ತಿದ್ದಾರೆ. ಸರ್ಕಾರದ ಆರ್ಥಿಕ ನೀತಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಇದರ ನಡುವೆಯೇ ನ್ಯಾಷನಲ್ ಅಸೆಂಬ್ಲಿಯಲ್ಲಿ (ಸಂಸತ್) ವಿಶ್ವಾಸಮತ ಕಳೆದುಕೊಂಡು ಪ್ರಧಾನಿ ರಾಜೀನಾಮೆ ನೀಡಿ, ಹೊಸ ಪ್ರಧಾನಿ ಗದ್ದುಗೆ ಏರಿದ್ದಾರೆ. ಈ ಎಲ್ಲ ಬೆಳವಣಿಗೆಗಳ ಕೇಂದ್ರಬಿಂದುವಾಗಿರುವುದು, ಜನರ ಸಿಟ್ಟಿಗೆ ಗುರಿಯಾಗಿರುವುದು ಅಧ್ಯಕ್ಷ ಇಮ್ಯಾನ್ಯುಯೆಲ್ ಮ್ಯಾಕ್ರನ್.

ಯುರೋಪ್‌ನ ಎರಡನೇ ಅತಿ ದೊಡ್ಡ ಆರ್ಥಿಕತೆಯಾಗಿರುವ ಫ್ರಾನ್ಸ್, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಕಾಯಂ ಸದಸ್ಯ ರಾಷ್ಟ್ರ. ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಹದಗೆಟ್ಟಿದ್ದು, ಸಾಲದ ಸುಳಿಗೆ ಸಿಲುಕಿದೆ. ಇದು ರಾಜಕೀಯ ಅಸ್ಥಿರತೆಗೂ ಕಾರಣವಾಗಿದೆ. ಉದ್ಯಮ ಪರ ನಿಲುವು ಹೊಂದಿರುವ ಮ್ಯಾಕ್ರನ್ ಅವರ ಆರ್ಥಿಕ ನೀತಿಗಳು ಜನರ ಕಣ್ಣು ಕೆಂಪಾಗಿಸಿವೆ. 'ಬ್ಲಾಕ್ ಎವರಿಥಿಂಗ್' ಧ್ಯೇಯವಾಕ್ಯದ ಅಡಿ ಬೀದಿಗಿಳಿದು ಪ್ರತಿಭಟಿಸುತ್ತಿದ್ದಾರೆ.

ಫ್ರಾನ್ಸ್ ಅಧ್ಯಕ್ಷರಾಗಿ ಮ್ಯಾಕ್ರನ್ ಅವರಿಗೆ ಇದು ಎರಡನೇ ಅವಧಿ. ಎರಡು ದಶಕಗಳಲ್ಲಿ ಎರಡನೇ ಬಾರಿಗೆ ಅಧ್ಯಕ್ಷರಾದ (2022) ಮೊದಲಿಗರು ಎನ್ನುವ ಹಿರಿಮೆಗೆ ಅವರು ಪಾತ್ರರಾಗಿದ್ದಾರೆ. ಆದರೆ ಮೊದಲ ಬಾರಿಗೆ ಬಲಪಂಥೀಯರು ಸಂಸತ್ತಿನ ದೊಡ್ಡ ಪಕ್ಷದ ಮುಖಂಡರಾದ ಮ್ಯಾಕ್ರನ್ ಅವರಿಗೆ ಪ್ರಬಲ ಪೈಪೋಟಿ ನೀಡಿದ್ದರು. ಮುಂದೆ ನಡೆದ ಸಂಸತ್ ಚುನಾವಣೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಬಾರದೇ ರಾಜಕೀಯ ಅಸ್ಥಿರತೆ ಸೃಷ್ಟಿಯಾಯಿತು.

ಅಂಥ ವಾತಾವರಣದಲ್ಲಿ ಮತ್ತು ಆರ್ಥಿಕ ಸಂಕಷ್ಟದ ಸ್ಥಿತಿಯಲ್ಲಿ ಮ್ಯಾಕ್ರನ್ ಅವರು ಮಿಷೆಲ್ ಬರ್ನಿಯರ್ ಅವರನ್ನು ಪ್ರಧಾನಿಯನ್ನಾಗಿ ಮಾಡಿದರು. ಆದರೆ, ಮೂರೇ ತಿಂಗಳಲ್ಲಿ ಅವರು ರಾಜೀನಾಮೆ ನೀಡಬೇಕಾಗಿ ಬಂತು.

ಅಲ್ಪ ಬಹುಮತದ ಸರ್ಕಾರದಲ್ಲಿ ಬಜೆಟ್ ಮತ್ತು ಮಸೂದೆಗಳಿಗೆ ಸಂಸತ್ತಿನ ಅಂಗೀಕಾರ ಪಡೆಯುವುದೇ ಸವಾಲಿನ ಕೆಲಸವಾಗಿದೆ. ಡಿಸೆಂಬರ್‌ನಲ್ಲಿ ಹುದ್ದೆಗೆ ನಿರ್ಗಮಿಸಿದ ಫ್ರಾಂಕೋಯಿಸ್ ಬೈರೂ ಅವರ ವಿಚಾರದಲ್ಲಿಯೂ ಇದೇ ಪುನರಾವರ್ತನೆಯಾಯಿತು. ಪ್ರಧಾನಿಯಾದ ಒಂಬತ್ತು ತಿಂಗಳಲ್ಲೇ ಅವರು ವಿಶ್ವಾಸಮತ ಸೋತಿದ್ದಾರೆ.

ಆರ್ಥಿಕತೆಯನ್ನು ಕಾಪಾಡಲು ಬೈರೂ ಅವರು ಹಲವು ಕ್ರಮಗಳನ್ನು ಕೈಗೊಂಡಿದ್ದರು. ಜನಕಲ್ಯಾಣ ಕಾರ್ಯಕ್ರಮಗಳು, ಆರೋಗ್ಯ ಸೇವೆಗಳು, ಪಿಂಚಣಿ ಇತ್ಯಾದಿಗಳನ್ನು ಕಡಿತ ಮಾಡಿದರು. ಈ ಮೂಲಕ ಸುಮಾರು ₹4.55 ಲಕ್ಷ ಕೋಟಿಯನ್ನು ಉಳಿಸುವುದು ಅವರ ಗುರಿಯಾಗಿತ್ತು. ಆದರೆ, ಜನ ಇದರಿಂದ ಕೆರಳಿದರು. ಅಲ್ಪ ಬಹುಮತದ ಸರ್ಕಾರದ ಪ್ರಧಾನಿಯು ಜನರ ಸವಲತ್ತುಗಳನ್ನು ಕಡಿತ ಮಾಡಲು ಮುಂದಾಗಿದ್ದರ ವಿರುದ್ಧ ವ್ಯಾಪಕ ಜನಾಕ್ರೋಶ ವ್ಯಕ್ತವಾಯಿತು. ಕಲ್ಯಾಣ ಕಾರ್ಯಕ್ರಮಗಳ ಅನುದಾನ ಕಡಿತ ಮಾಡುವುದಕ್ಕಿಂತಲೂ ಶ್ರೀಮಂತರ ಮೇಲೆ ಹೆಚ್ಚು ತೆರಿಗೆ ವಿಧಿಸಿ ಎಂದು ಕೆಲವರು ಒತ್ತಾಯಿಸಿದರು. ಆದರೂ ಬೈರೂ ಅದಕ್ಕೆ ಕಿವಿಗೊಡಲಿಲ್ಲ. ಸಂಸತ್ತಿನಲ್ಲಿ ಅವರ ವಿರುದ್ಧ ಅವಿಶ್ವಾಸ ಮಂಡಿಸಲಾಯಿತು. ಬಹುಮತ ಸಾಬೀತುಮಾಡಲಾಗದೇ ಪ್ರಧಾನಿ ಪದವಿಗೆ ರಾಜೀನಾಮೆ ನೀಡಿದರು. ಎಡಪಂಥೀಯ ಸೋಷಿಯಲಿಸ್ಟರು ಮತ್ತು ಬಲಪಂಥೀಯ ರಿಪಬ್ಲಿಕನ್ನರು ಇಬ್ಬರು ಬೈರೂ ಅವರ ನಿರ್ಗಮನಕ್ಕೆ ಕಾರಣರಾದರು.

ಹಿಂದೊಮ್ಮೆ ಬಲಪಂಥೀಯ ರಿಪಬ್ಲಿಕನ್ ಪಕ್ಷದ ಜತೆಗೆ ಗುರುತಿಸಿಕೊಂಡಿದ್ದ, ನಂತರ ಮ್ಯಾಕ್ರನ್ ಅವರ ಸೆಂಟ್ರಿಸ್ಟ್ ಪಕ್ಷ ಸೇರಿ, ಅವರ ಸರ್ಕಾರದಲ್ಲಿ ರಕ್ಷಣಾ ಸಚಿವರಾಗಿದ್ದ ಸೆಬಾಸ್ಟಿಯನ್ ಲೆಕೋರ್ನು ಫ್ರಾನ್ಸ್‌ನ ನೂತನ ಪ್ರಧಾನಿಯಾಗಿದ್ದಾರೆ. 2026ರಲ್ಲಿ ಬಜೆಟ್ ಮಂಡಿಸಬೇಕಿದ್ದು, ಅದಕ್ಕೆ ಬಹುಮತದ ಅಂಗೀಕಾರ ಪಡೆಯುವ ಸವಾಲು ಅವರ ಮುಂದಿದೆ. ಅವರ ವಿರುದ್ಧವೂ ಅವಿಶ್ವಾಸ ಮಂಡಿಸಿ, ಅವರನ್ನೂ ಕೆಳಗಿಳಿಸುವುದಾಗಿ ಎಡಪಂಥೀಯರ ಕೂಟವು ಈಗಾಗಲೇ ಹೇಳಿದೆ. ಆದರೆ, ಬಲಪಂಥೀಯರ ನ್ಯಾಷನಲ್ ರ್‍ಯಾಲಿ (ಆರ್‌ಎನ್) ಪಕ್ಷವು ಲೆಕೋರ್ನು ಅವರನ್ನು ಈ ಬಾರಿ ಬೆಂಬಲಿಸುವುದಾಗಿಯೂ ಬಜೆಟ್‌ಗಾಗಿ ಅವರೊಂದಿಗೆ ಕೆಲಸ ಮಾಡುವುದಾಗಿಯೂ ತಿಳಿಸಿದೆ.

ಈ ಎಲ್ಲ ಬೆಳವಣಿಗೆಗಳ ನಡುವೆಯೇ, ದೇಶದಲ್ಲಿ ಮ್ಯಾಕ್ರನ್ ರಾಜೀನಾಮೆ ನೀಡಬೇಕು, ಅಧ್ಯಕ್ಷರ ಚುನಾವಣೆ ನಡೆಸಬೇಕು ಎಂದು ಎಡಪಂಥೀಯರ ಕೂಟವು ಒತ್ತಾಯಿಸುತ್ತಿದೆ. ಬಲಪಂಥೀಯರ ಆರ್‌ಎನ್ ಕೂಟವು ಸಂಸತ್ತನ್ನು ವಿಸರ್ಜಿಸಿ, ಚುನಾವಣೆ ನಡೆಸಬೇಕು ಎಂದು ಪಟ್ಟು ಹಿಡಿದಿದೆ. ಇನ್ನೊಂದೆಡೆ, 2027ರವರೆಗೆ ನಾನೇ ಅಧ್ಯಕ್ಷನಾಗಿರುವೆ ಎಂದು ಮ್ಯಾಕ್ರನ್ ಪುನರುಚ್ಚರಿಸುತ್ತಲೇ ಇದ್ದಾರೆ. ಸಂಸತ್ ಚುನಾವಣೆ ಮತ್ತು ಅಧ್ಯಕ್ಷರ ಚುನಾವಣೆ ಸದ್ಯಕ್ಕೆ ಅನುಮಾನ; ಒಂದು ವೇಳೆ ಈಗ ಸಂಸತ್ ಚುನಾವಣೆ ನಡೆದರೂ ಆಗಲೂ ಯಾವುದೇ ಪಕ್ಷಕ್ಕೆ ಬಹುಮತ ಬಾರದೇ ಇರುವ ಸಾಧ್ಯತೆಯೇ ಹೆಚ್ಚು ಎನ್ನಲಾಗುತ್ತಿದೆ. ಫ್ರಾನ್ಸ್‌ನ ಆರ್ಥಿಕ ಸಂಕಷ್ಟ ಮತ್ತು ರಾಜಕೀಯ ಅಸ್ಥಿರತೆ ಕನಿಷ್ಠ ಎಂದರೂ 2027ರವರೆಗೆ– ಮುಂದಿನ ಅಧ್ಯಕ್ಷೀಯ ಚುನಾವಣೆ ನಡೆಯುವವರೆಗೆ– ಹೀಗೆಯೆ ಮುಂದುವರಿಯಲಿದೆ ಎನ್ನಲಾಗುತ್ತಿದೆ.



ಫ್ರಾನ್ಸ್‌ನ ನಾಂಟ್‌ನಲ್ಲಿ ಮ್ಯಾಕ್ರನ್ ಆಡಳಿತದ ವಿರುದ್ಧ ಜನರು ಪ್ರತಿಭಟನೆ ನಡೆಸಿದರು


ಇಮಾನ್ಯುಯೆಲ್ ಮ್ಯಾಕ್ರನ್


ಸೆಬಾಸ್ಟಿಯನ್ ಲೆಕೋರ್ನು

ಆರ್ಥಿಕ ಸಂಕಷ್ಟಕ್ಕೆ ಕಾರಣಗಳು

ಫ್ರಾನ್ಸ್ ದೊಡ್ಡ ಸಾಲದ ಸುಳಿಯಲ್ಲಿ ಸಿಲುಕಿದೆ. ದೇಶದಲ್ಲಿ ದುಡಿಯುವ ಯುವಜನರು ಕಡಿಮೆ ಇದ್ದು, ಪಿಂಚಣಿ ಪಡೆಯುವ ಹಿರಿಯರು ಹೆಚ್ಚಾಗಿದ್ದಾರೆ. ಸರ್ಕಾರಕ್ಕೆ ತೆರಿಗೆ ಕಟ್ಟುವವರು ಕಡಿಮೆ ಇದ್ದು, ಹೆಚ್ಚು ಮಂದಿ ಪಿಂಚಣಿ ಪಡೆಯುತ್ತಿದ್ದಾರೆ. ಕೋವಿಡ್ ಸಾಂಕ್ರಾಮಿಕದ ನಂತರ ಸರ್ಕಾರದ ಖರ್ಚು ಹೆಚ್ಚಾಗಿದ್ದು, ಆದಾಯ ಕಡಿಮೆ ಇದೆ. ಹೀಗಾಗಿ ತನ್ನ ಅಗತ್ಯಗಳಿಗಾಗಿ ಸಾಲ ಮಾಡುತ್ತಾ ಬಂದಿದ್ದು, ಅದೀಗ ಆರ್ಥಿಕ ಹೊರೆಯಾಗಿ ಪರಿಣಮಿಸಿದೆ. ಸಾಲದ ಬಡ್ಡಿಯಾಗಿ ಬೃಹತ್ ಮೊತ್ತವನ್ನು ವಿನಿಯೋಗಿಸಲಾಗುತ್ತಿದ್ದು, ಅದು ದೇಶದ ಸೇನೆ ಮತ್ತು ಶಿಕ್ಷಣ ಕ್ಷೇತ್ರದ ಬಜೆಟ್ ಅನುದಾನಕ್ಕೆ ಸಮನಾಗಿದೆ.

ಇತಿಹಾಸ ಪುನರಾವರ್ತನೆ

1950ರ ದಶಕದಲ್ಲಿ ನಾಲ್ಕನೇ ರಿಪಬ್ಲಿಕನ್ ಸರ್ಕಾರದ ಆಡಳಿತದ ಅವಧಿಯಲ್ಲಿ ಫ್ರಾನ್ಸ್‌ನಲ್ಲಿ ಈಗಿನ ಪರಿಸ್ಥಿತಿಯೇ ನಿರ್ಮಾಣವಾಗಿತ್ತು. ಅಲ್ಜೀರಿಯಾ ಯುದ್ಧದ ಸಮಯದಲ್ಲಿ ಈ ಬಿಕ್ಕಟ್ಟು ಸೃಷ್ಟಿಯಾಗಿತ್ತು. ಅಧಿಕಾರದಲ್ಲಿದ್ದವರ ನಡುವಣ ವೈಮನಸ್ಸು, ದಾರಿ ತಪ್ಪಿದ ಆಡಳಿತದ ಕಾರಣಕ್ಕೆ 1958ರ ಮೇ 13ರಂದು ಕ್ಷಿಪ್ರಕ್ರಾಂತಿ ನಡೆದು, ನಾಲ್ಕನೇ ರಿಪಬ್ಲಿಕನ್ ಸರ್ಕಾರ ಪತನಗೊಂಡಿತ್ತು. ನಂತರ ಚಾರ್ಲ್ಸ್ ಡಿ ಗೋಲ್ ನೇತೃತ್ವದಲ್ಲಿ ಐದನೇ ರಿಪಬ್ಲಿಕನ್ ಸರ್ಕಾರ ಅಧಿಕಾರಕ್ಕೆ ಬಂದಿತ್ತು. ದೇಶದಲ್ಲಿ ರಾಜಕೀಯ ಸ್ಥಿರತೆ ತರಲು ಹೊಸ ಸರ್ಕಾರ ಕ್ರಮಗಳನ್ನು ಕೈಗೊಂಡಿತ್ತು. ಆ ನಂತರದ ಏಳು ದಶಕಗಳಲ್ಲಿ ಫ್ರಾನ್ಸ್‌ನಲ್ಲಿ ಈ ಮಟ್ಟದ ಆರ್ಥಿಕ, ರಾಜಕೀಯ ಬಿಕ್ಕಟ್ಟು ನಿರ್ಮಾಣವಾಗಿರಲಿಲ್ಲ.

ಪ್ರಸ್ತುತ ಫ್ರಾನ್ಸ್ ರಾಜಕಾರಣವು ಮೂರು ಗುಂಪುಗಳಾಗಿ ಹೋಳಾಗಿದ್ದು, ಮೂರು ಬಣದವರು ಪರಸ್ಪರ ಎದುರಾಳಿಗಳಾಗಿ ಬದಲಾಗಿದ್ದಾರೆ. ರಾಜಕೀಯ ನಾಯಕರ ನಡುವೆ ರಾಜಿ ಮಾಡಿಕೊಳ್ಳುವ ಧೋರಣೆ ಕಾಣುತ್ತಿಲ್ಲ. ಸದಾ ಬಿಕ್ಕಟ್ಟು ಇರುವಂತೆ ನೋಡಿಕೊಳ್ಳುವುದು ನಿಯಮವೇನೋ ಎಂಬಂತಾಗಿದೆ ಎಂದು ಹೇಳುತ್ತಾರೆ ರಾಜಕೀಯ ವಿಶ್ಲೇಷಕರು.

'1958ರಲ್ಲಿ ಗೋಲ್ ಮೂಲಕ ಪರ್ಯಾಯ ವ್ಯವಸ್ಥೆ ಇತ್ತು. ದೇಶವನ್ನು ಸ್ಥಿರತೆಯತ್ತ ಕೊಂಡೊಯ್ಯಲು ಯೋಜನೆಗಳಿದ್ದವು. ಈಗ ಅವರಿಲ್ಲ. ಬದಲಿಗೆ ಘರ್ಷಣೆಗೆ ಸಜ್ಜಾಗಿರುವ ಅಧ್ಯಕ್ಷ, ವಿಭಜನೆಗೊಂಡ ಸಂಸತ್ತು ಮತ್ತು ಪರಿಸ್ಥಿತಿಯನ್ನು ನಿಭಾಯಿಸಲು ತಾನಿನ್ನೂ ಸಮರ್ಥನೆಂದು ಸಾಬೀತುಪಡಿಸಲು ಕಾಯುತ್ತಿರುವ ಗಣರಾಜ್ಯಗಳು ಮಾತ್ರ ಇವೆ' ಎಂದು ಹೇಳುತ್ತಾರೆ ವಿಶ್ಲೇಷಕರು.

ಕ್ರೆಡಿಟ್ ರೇಟಿಂಗ್ ಇಳಿಕೆ

ಫ್ರಾನ್ಸ್‌ನಲ್ಲಿ ಹೊಸ ಪ್ರಧಾನಿ ಅಧಿಕಾರ ಸ್ವೀಕರಿಸಿದ ಬೆನ್ನಿಗೇ, ಅಮೆರಿಕದ ರೇಟಿಂಗ್ ಏಜೆನ್ಸಿಯಾಗಿರುವ 'ಫಿಚ್' ದೇಶದ ಕ್ರೆಡಿಟ್ ರೇಟಿಂಗ್ ಅನ್ನು ಇಳಿಸಿದೆ. ಸಾಲವನ್ನು ಮರುಪಾವತಿ ಮಾಡುವ ಫ್ರಾನ್ಸ್‌ನ ಸಾಮರ್ಥ್ಯವನ್ನು 'ಎಎ–'ನಿಂದ 'ಎ +'ಗೆ ಕುಗ್ಗಿಸಿದೆ.

ಹದಗೆಡುತ್ತಿರುವ ಅರ್ಥವ್ಯವಸ್ಥೆಯನ್ನು ಸರಿದಾರಿಗೆ ತರಲು ತಕ್ಷಣ ಕ್ರಮ ಕೈಗೊಳ್ಳದೇ ಇದ್ದರೆ 2027ರವರೆಗೂ ದೇಶದ ಸಾಲದ ಹೊರೆ ಹೆಚ್ಚಾಗುತ್ತಲೇ ಇರಲಿದೆ ಎಂದೂ ಅದು ಎಚ್ಚರಿಸಿದೆ.

ಅಧ್ಯಕ್ಷ ಮ್ಯಾಕ್ರನ್ ನೇತೃತ್ವದ ಸರ್ಕಾರದ ಆರ್ಥಿಕ ನೀತಿಗಳು, ಹಣಕಾಸಿನ ಕೆಟ್ಟ ನಿರ್ವಹಣೆಯೇ ಇದಕ್ಕೆ ಕಾರಣ ಎಂದು ವಿರೋಧ ಪಕ್ಷಗಳು ದೂರಿವೆ.

ಆಧಾರ: ಪಿಟಿಐ, ಬಿಬಿಸಿ, ರಾಯಿಟರ್ಸ್, ಎಪಿ, ಎಎಫ್‌ಪಿ

ರಾಷ್ಟ್ರೀಯ

ದಟ್ಟಕಾಡುಗಳಲ್ಲಿ ಭೂಗತ ಬಂಕರ್‌ಗಳ ನಿರ್ಮಾಣ

ಕಾಶ್ಮೀರ: ಉಗ್ರರ ಕಾರ್ಯತಂತ್ರ ಬದಲು

ಎತ್ತರದ ಪ್ರದೇಶಗಳಲ್ಲಿನ ಕಂದಕಗಳಲ್ಲಿ ಉಗ್ರರು 1990 ಹಾಗೂ 2000ರ ನಡುವೆ ಅಡಗುತಾಣಗಳನ್ನು ನಿರ್ಮಿಸುತ್ತಿದ್ದರು. ಈಗ ಮತ್ತೆ ಅದೇ ತಂತ್ರಕ್ಕೆ ಮೊರೆ ಹೋಗುತ್ತಿದ್ದಾರೆ
ಡಿ.ಎಸ್.ಹೂಡಾ
ಲೆಫ್ಟಿನೆಂಟ್ ಜನರಲ್ (ನಿವೃತ್ತ)

ಶ್ರೀನಗರ (ಪಿಟಿಐ): ಜಮ್ಮು–ಕಾಶ್ಮೀರದ ವಿವಿಧೆಡೆ ಸ್ಥಳೀಯರ ಮನೆಗಳಲ್ಲಿ ಆಶ್ರಯ ಪಡೆದು ಭಯೋತ್ಪಾದಕ ಕೃತ್ಯಗಳನ್ನು ನಡೆಸುತ್ತಿದ್ದ ಉಗ್ರ ಸಂಘಟನೆಗಳು ಈಗ ತಮ್ಮ ಕಾರ್ಯತಂತ್ರ ಬದಲಿಸಿವೆ. ಎತ್ತರ ಪ್ರದೇಶಗಳು ಹಾಗೂ ದಟ್ಟ ಕಾಡುಗಳಲ್ಲಿ ನೆಲದಡಿ ಬಂಕರ್‌ಗಳನ್ನು ನಿರ್ಮಿಸಿ, ಉಗ್ರರು ತಮ್ಮ ಚಟುವಟಿಕೆ ಮುಂದುವರಿಸುತ್ತಿರುವುದು ಸೇನೆಗೆ ಹೊಸ ಸವಾಲಾಗಿದೆ. ಕಳೆದ ವಾರ ಕುಲ್ಗಾಮ್ ಜಿಲ್ಲೆಯಲ್ಲಿ ಭೀಕರ ಗುಂಡಿನ ಚಕಮಕಿ ನಡೆದು, ಭದ್ರತಾ ಪಡೆಗಳು ಇಬ್ಬರು ಉಗ್ರರನ್ನು ಹೊಡೆದುರುಳಿಸಿದ ವೇಳೆ, ಇದು ಗೊತ್ತಾಗಿದೆ.

ಸ್ಥಳೀಯರು ಆಶ್ರಯ ನೀಡಲು ನಿರಾಕರಿಸುತ್ತಿರುವುದೇ ಉಗ್ರರು ತಮ್ಮ ಕಾರ್ಯತಂತ್ರಗಳನ್ನು ಬದಲಿಸಲು ಮುಖ್ಯ ಕಾರಣ ಎಂದು ಸೇನೆ ಹಾಗೂ ಇತರ ಭದ್ರತಾ ಸಂಸ್ಥೆಗಳ ವಿಶ್ಲೇಷಣೆಯಾಗಿದೆ.

ಕುಲ್ಗಾಮ್ ಜಿಲ್ಲೆಯಲ್ಲಿ ಉಗ್ರರ ಬೇಟೆಯನ್ನು ತೀವ್ರಗೊಳಿಸಿದ ಭದ್ರತಾ ಪಡೆಗಳಿಗೆ ಅಚ್ಚರಿ ಕಾದಿತ್ತು. ದಟ್ಟ ಕಾಡಿನಲ್ಲಿ ದೊಡ್ಡ ಕಂದಕಗಳು ಕಂಡುಬಂದಿದ್ದವು. ಅವುಗಳಲ್ಲಿ, ದಿನಸಿ ಪದಾರ್ಥಗಳು, ಗ್ಯಾಸ್ ಸ್ಟೌಗಳು, ಪ್ರೆಷರ್ ಕುಕ್ಕರ್‌ಗಳು ಹಾಗೂ ಶಸ್ತ್ರಾಸ್ತ್ರಗಳು ಕಂಡುಬಂದವು.

'ಉಗ್ರರು ಕಾಡುಗಳಲ್ಲಿ ಇಂತಹ ನೆಲೆಗಳನ್ನು ಮಾಡುತ್ತಿರುವುದು ವ್ಯಾಪಕವಾಗುತ್ತಿದೆ. ಅದರಲ್ಲೂ, ಕುಲ್ಗಾಮ್, ಶೋಪಿಯಾನ್ ಜಿಲ್ಲೆಗಳು, ಜಮ್ಮು ಪ್ರದೇಶದ ಪೀರ್ ಪಂಜಾಲ್‌ನಲ್ಲಿರುವ ದಟ್ಟ ಕಾಡುಗಳು ಗುಪ್ತವಾಗಿ ತಮ್ಮ ಚಟುವಟಿಕೆಗಳನ್ನು ನಡೆಸಲು ಉಗ್ರರಿಗೆ ಅನುಕೂಲವಾದ ತಾಣಗಳೆನಿಸಿವೆ' ಎಂದು ಹಿರಿಯ ಭದ್ರತಾ ಅಧಿಕಾರಿಯೊಬ್ಬರು ಹೇಳುತ್ತಾರೆ.

ಅಸ್ಸಾಂ: ಒಂದೂವರೆ ತಾಸಿನಲ್ಲಿ ನಾಲ್ಕು ಬಾರಿ ಭೂಕಂಪ

ಗುವಾಹಟಿ/ ಕೋಲ್ಕತ್ತ/ ಇಂಫಾಲ್/ ಇಟಾನಗರ (ಪಿಟಿಐ): ಅಸ್ಸಾಂನಲ್ಲಿ ಒಂದೂವರೆ ತಾಸಿನಲ್ಲಿ ನಾಲ್ಕು ಬಾರಿ ಭೂಮಿಯು ಕಂಪಿಸಿದ ಪರಿಣಾಮ ಕನಿಷ್ಠ ಇಬ್ಬರು ಗಾಯಗೊಂಡಿದ್ದಾರೆ ಮತ್ತು ಹಲವು ಮನೆಗಳು ಹಾನಿಗೊಳಗಾಗಿವೆ.

ರಾಜ್ಯದಲ್ಲಿ ಭಾನುವಾರ ಸಂಜೆ 4.41ಕ್ಕೆ ಸಂಭವಿಸಿದ ಭೂಕಂಪದ ತೀವ್ರತೆಯು ರಿಕ್ಟರ್ ಮಾಪಕದಲ್ಲಿ 5.8ರಷ್ಟು ದಾಖಲಾಗಿತ್ತು. 4.58ಕ್ಕೆ ಎರಡನೇ ಬಾರಿ ಸಂಭವಿಸಿದ ಭೂಕಂಪನದ ತೀವ್ರತೆಯು 3.1ರಷ್ಟು ಮತ್ತು 5.21ಕ್ಕೆ ಮೂರನೇ ಬಾರಿಗೆ ಸಂಭವಿಸಿದ ಭೂಕಂಪದ ತೀವ್ರತೆಯು 2.9ರಷ್ಟಿತ್ತು. 6.11ಕ್ಕೆ ನಾಲ್ಕನೇ ಬಾರಿ ಸಂಭವಿಸಿದ ಭೂಕಂಪದ ತೀವ್ರತೆಯು 2.7ರಷ್ಟು ದಾಖಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಸ್ಸಾಂನ ಉದಲಗುರಿ ಮತ್ತು ಸೋನಿತ್‌ಪುರದಲ್ಲಿ ಭೂಕಂಪನದ ಕೇಂದ್ರ ಬಿಂದುಗಳು ಪತ್ತೆಯಾಗಿವೆ.

ಮಣಿಪುರ ಮತ್ತು ಅರುಣಾಚಲ ಪ್ರದೇಶ ಮತ್ತು ಪಶ್ಚಿಮ ಬಂಗಾಳದ ಕೆಲವೆಡೆಯೂ ಭೂಮಿ ಕಂಪಿಸಿದ ಅನುಭವವಾಗಿತ್ತು. ಅರುಣಾಚಲ ಪ್ರದೇಶದ ಇಟಾನಗರದ ಜನರು ಆತಂಕಗೊಂಡು ಮನೆ ಮತ್ತು ಅಂಗಡಿ ಮುಂಗಟ್ಟುಗಳಿಂದ ಹೊರಗೆ ಓಡಿ ಬಂದಿದ್ದರು.

ಪ್ರಧಾನಿ ನರೇಂದ್ರ ಮೋದಿ ಅವರು ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರೊಂದಿಗೆ ಭೂಕಂಪನಕ್ಕೆ ಸಂಬಂಧಿಸಿದಂತೆ ಮಾತುಕತೆ ನಡೆಸಿದ್ದಾರೆ. ಕೇಂದ್ರ ಸರ್ಕಾರವು ಎಲ್ಲಾ ರೀತಿಯ ನೆರವು ನೀಡುವುದಾಗಿ ಅವರು ಭರವಸೆ ನೀಡಿದ್ದಾರೆ.

ನಕಲಿ ಸುದ್ದಿಗೆ ಕಡಿವಾಣ: ತಾಂತ್ರಿಕ, ಕಾನೂನು ಪರಿಹಾರಕ್ಕೆ ಶಿಫಾರಸು

ನವದೆಹಲಿ: ಎ.ಐ ಆಧರಿಸಿದ ನಕಲಿ ಸುದ್ದಿಗಳು ಹರಡುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿರುವ ಸಂಸದೀಯ ಸಮಿತಿಯು, ತಪ್ಪು ಮಾಹಿತಿ ಹರಡುವ ವ್ಯಕ್ತಿ ಹಾಗೂ ಸಂಸ್ಥೆಗಳನ್ನು ಗುರುತಿಸಿ ಕ್ರಮ ಕೈಗೊಳ್ಳಲು ಕಾನೂನು ಹಾಗೂ ತಂತ್ರಜ್ಞಾನ ಪರಿಹಾರ ಕಂಡುಹಿಡಿಯಬೇಕು ಎಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಬಿಜೆಪಿ ಸಂಸದ ನಿಶಿಕಾಂತ್ ದುಬೆ ನೇತೃತ್ವದ ಮಾಹಿತಿ ಹಾಗೂ ತಂತ್ರಜ್ಞಾನ ಸ್ಥಾಯಿ ಸಮಿತಿಯು ತನ್ನ ಕರಡು ವರದಿಯಲ್ಲಿ, ಎ.ಐ ಆಧಾರಿತ ನಕಲಿ ಸುದ್ದಿಯನ್ನು ತಡೆಯಲು ಸಮತೋಲಿತ ವಿಧಾನ ಅಳವಡಿಕೆ, ತಪ್ಪು ಮಾಹಿತಿ ಪತ್ತೆಹಚ್ಚಲು ತಂತ್ರಜ್ಞಾನ ಅಳವಡಿಕೆ ಮಾಡಬೇಕು ಎಂದು ಶಿಫಾರಸು ಮಾಡಿದೆ. ಈ ವರದಿಯನ್ನು ಸಮಿತಿಯು ಈಗಾಗಲೇ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಸಲ್ಲಿಸಿದೆ. ಸಂಸತ್‌ನ ಮುಂದಿನ ಅಧಿವೇಶನದಲ್ಲಿ ಇದು ಮಂಡನೆಯಾಗಲಿದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಇದೇ ಸೆ.12ರಂದು ಹಾಸನದ ಮೊಸಳೆಹೊಸಳ್ಳಿಯಲ್ಲಿ ಗಣೇಶ ವಿಸರ್ಜನೆ ಮೆರವಣಿಗೆಯ ಮೇಲೆ ಟ್ರಕ್ ಹರಿದು 10 ಮಂದಿ ಮೃತಪಟ್ಟ ಘಟನೆಗೆ ಸಂಬಂಧಿಸಿದ ವಿಡಿಯೊ ಅನ್ನು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಆ ಟ್ರಕ್ ಚಾಲಕನ ಹೆಸರು ಮೊಹಮ್ಮದ್ ಫಿರೋಜ್ ಎಂದು ಕೆಲವರು ಪ್ರತಿಪಾದಿಸಿದರೆ, ಮತ್ತೆ ಕೆಲವರು, ಇದು ಇಸ್ಲಾಮಿಕ್ ಉಗ್ರವಾದಿಗಳ ದಾಳಿ ಎಂದು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಘಟನೆಯ ಬಗ್ಗೆ ಗೊರೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಅದರ ಎಫ್‌ಐಆರ್ 'ಪ್ರಜಾವಾಣಿ' ಪತ್ರಿಕೆಗೆ ಲಭ್ಯವಾಗಿದೆ. ಅದರಲ್ಲಿ ಟ್ರಕ್ ಚಾಲಕನ ಹೆಸರು ಭುವನೇಶ್ ಎಂದು ನಮೂದಾಗಿದೆ. ಜತೆಗೆ, ಹಾಸನದ ಎಸ್‌ಪಿ ಮೊಹಮ್ಮದ್ ಸುಜೀತಾ ಅವರು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದು, 'ಟ್ರಕ್ ಚಾಲಕನ ಧರ್ಮದ ಬಗ್ಗೆ ಕೋಮು ಆಯಾಮದ ಸುದ್ದಿಗಳು ಹರಿದಾಡುತ್ತಿವೆ. ಆದರೆ, ಅವು ಸುಳ್ಳು ಸುದ್ದಿಗಳಾಗಿದ್ದು, ಆರೋಪಿ ಹೆಸರು ಭುವನೇಶ್' ಎಂದು ಸ್ಪಷ್ಟೀಕರಣ ನೀಡಿದ್ದಾರೆ.

ಸಹನೆಯೇ ನಮ್ಮ ನೆಲದ ಸಂಸ್ಕೃತಿ

ನುಡಿ ಬೆಳಗು


ದಾದಾಪೀರ್ ನವಿಲೇಹಾಳ್

ಹಸಿವು ಮತ್ತು ದಣಿವುಗಳೇ ಆಕಾರ ಪಡೆದಂತಿದ್ದ ಇಳಿವಯಸ್ಸಿನ ವ್ಯಕ್ತಿಯೊಬ್ಬ ಮೂಟೆಗಳನ್ನು ತುಂಬಿದ್ದ ಟೈರ್ ಗಾಡಿಯನ್ನು ಹೊಟ್ಟೆಗಾನಿಸಿಕೊಂಡು ಎಳೆಯುತ್ತಿದ್ದಾನೆ. ಧುತ್ತನೆ ಲಾಂಗು, ಕತ್ತಿಗಳನ್ನು ಹಿಡಿದ ಪುಂಡರ ಗುಂಪೊಂದು ಅವನನ್ನು ಸುತ್ತುವರಿದು ಕೇಳುತ್ತದೆ: 'ನಿಜ ಹೇಳು, ನೀನು ಹಿಂದೂನಾ, ಮುಸ್ಲಿಮನಾ'. ಸುತ್ತ ಮುತ್ತ ಕಣ್ಣಾಡಿಸುತ್ತಾ ಈ ವ್ಯಕ್ತಿ ನಿಧಾನವಾಗಿ ಅವರ ಪ್ರಶ್ನೆಗೆ ಉತ್ತರಿಸುತ್ತಾನೆ; 'ನೀವೆಲ್ಲಾ ಹಿಂದೂಗಳಾಗಿದ್ದರೆ ನನ್ನನ್ನು ಮುಸ್ಲಿಮನೆಂದು ಭಾವಿಸಿ ಕೊಂದುಬಿಡಿ. ಅಥವಾ ನೀವೆಲ್ಲಾ ಮುಸ್ಲಿಮರಾಗಿದ್ದರೆ ನನ್ನನ್ನು ಹಿಂದೂ ಎಂದು ತಿಳಿದು ಸಾಯಿಸಿಬಿಡಿ'. ಇದನ್ನು ಕೇಳಿಸಿಕೊಂಡ ಆ ಪುಂಡರು ಏನೂ ಮಾಡದೆ ಹಿಂತಿರುಗುತ್ತಾರೆ.


ರಾಜಕುಮಾರ್ ಸಂತೋಷಿ ನಿರ್ದೇಶನದ 'ಕ್ರಾಂತಿವೀರ್' ಎಂಬ ಹಿಂದಿ ಸಿನಿಮಾದಲ್ಲಿ ಮೇಲಿನ ಸನ್ನಿವೇಶ ಬರುತ್ತದೆ. ಈ ಸಿನಿಮಾ ಸ್ವತಂತ್ರ ಭಾರತದಲ್ಲಿ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಸಾಮಾಜಿಕ ಶಕ್ತಿ ಹಾಗೂ ಜವಾಬ್ದಾರಿಯನ್ನು ನೆನಪಿಸುತ್ತಲೇ ಅವುಗಳ ಒಳಗಿನ ವೈಫಲ್ಯಗಳನ್ನು ನಾಟಕೀಯವಾಗಿ ನಿರೂಪಿಸುತ್ತದೆ. ಮೇಲಿನ ದೃಶ್ಯದಲ್ಲಿ ಕಾಣಿಸಿಕೊಳ್ಳುವ ವ್ಯಕ್ತಿಗೆ ತೀರಾ ಅಪರಿಚಿತರಾದವರು ಯಾಕೆ ತನ್ನನ್ನು ಕೊಲ್ಲಲು ಬಂದಿದ್ದಾರೆಂದು ತಿಳಿದಿಲ್ಲ. ಅಂದಂದಿನ ದುಡಿಮೆಯಿಂದಲೇ ಬದುಕುವ ಕೂಲಿಕಾರ್ಮಿಕರಿಗೆ ಧರ್ಮದ ಕುರಿತು ಆಲೋಚಿಸುವಷ್ಟು ಪುರುಸೊತ್ತು ಇರುವುದಿಲ್ಲ. ವ್ಯಕ್ತಿಗತವಾದ ಯಾವುದೇ ಸೇಡು ದ್ವೇಷ ಇಲ್ಲದ ಈ ಬಡಪಾಯಿಯನ್ನೇ ಯಾಕೆ ಕೊಲ್ಲಬೇಕು ಎಂಬುದು ಕೊಲ್ಲಲು ಬಂದವರಿಗೂ ಗೊತ್ತಿಲ್ಲ. ಕೊಲೆ ಮಾಡುವುದೊಂದೇ ಉದ್ದೇಶವಾಗಿದ್ದರೆ ನಿನ್ನ ಧರ್ಮ ಯಾವುದು ಎಂದು ಕೇಳಬೇಕಾಗಿಯೂ ಇರಲಿಲ್ಲ. ಕೊಲೆಗೆ ಒಳಗಾಗುವವನಿಗೆ ಜೀವವೊಂದನ್ನು ಬಿಟ್ಟು ಕಳೆದುಕೊಳ್ಳುವುದಕ್ಕೆ ಬೇರೇನೂ ಇಲ್ಲ. ಕೊಲ್ಲುತ್ತಾರೆ ಎಂಬುದನ್ನರಿಯದೆ ತೋರಣಕ್ಕೆ ತಂದ ತಳಿರು ಮೇಯಲು ಹೋದ ಹರಕೆಯ ಕುರಿಯೂ ಅಲ್ಲದ ಜೀವವಿದು ಕೇವಲ ಬೆಂದೊಡಲನ್ನು ಹೊರೆಯಲು ಹೋಗಿತ್ತು. ಕೊಲ್ಲುವವರಿಗೆ ಆ ಒಂದು ದಿನದ ಮೋಜಿಗೆ ಅಗತ್ಯವಾದಷ್ಟು ರೊಕ್ಕ ಸಿಕ್ಕಿತೇ ಹೊರತು ಧರ್ಮ ಕರ್ಮ ಕಟ್ಟಿಕೊಂಡು ಅವರಿಗೆ ಆಗಬೇಕಾದ್ದೇನೂ ಇಲ್ಲ. ಬಿಟ್ಟಿಯಾಗಿ ಸಿಗುವ ಪರಮಭ್ರಷ್ಟರ ಹಣಕ್ಕಾಗಿ ಯಾರ ಜೀವವನ್ನಾದರೂ ಬಲಿಗೊಡುವ ತಾವು ಬದುಕುಳಿಯುತ್ತೇವೆಯೇ ಎಂದೂ ಇವರು ಯೋಚಿಸುವುದಿಲ್ಲ.

ಬಲಿಯಾಗುವುದಕ್ಕೆ ಯಾವಾಗಲೂ ಲಭ್ಯರಿರುವ ಅಮಾಯಕರು ಮತ್ತು ಸಮಯಕ್ಕೆ ತಕ್ಕ ಹಾಗೆ ಬಳಸಿ ಬಿಸಾಕಲು ಸಿಗುವ ಕಾಲಾಳುಗಳು ಕಲುಷಿತ ಶಕ್ತಿರಾಜಕಾರಣದ ಅಸಲು ಬಂಡವಾಳ. ಧರ್ಮದ ಹೊರಹಾಸಿನಲ್ಲಿ ದ್ವೇಷದ ಬೆಂಕಿಯನ್ನು ಬಿತ್ತಿ ಬೆಳೆಯುವ ಬಲಿಷ್ಠರು ಜನಮೌಲ್ಯವನ್ನು ಮತಮೌಲ್ಯವನ್ನಾಗಿ ರೂಪಿಸುವ ವ್ಯಾಪಕ ಕ್ಷುದ್ರತೆಯ ಸ್ಥಾಪಕರಾಗಿದ್ದಾರೆ. ಧಾರ್ಮಿಕ ಹಿಂಸೆಯ ಉದ್ರೇಕಿತ ತುಣುಕುಗಳ ನಡುವೆ ಅದನ್ನು ಹಿಮ್ಮೆಟ್ಟಿಸುವ ಸಾಮರಸ್ಯದ ಹೊಂಬೆಳಕು ಎಲ್ಲೆಡೆ ಭರವಸೆ ಹುಟ್ಟಿಸುತ್ತದೆ.

ಶ್ರೀಸಾಮಾನ್ಯನ ತಿಳಿವಳಿಕೆಯ ಆಳದಲ್ಲಿನ ಧಾರಣಶಕ್ತಿ ದೊಡ್ಡ ದೊಡ್ಡ ವಿದ್ಯಾರ್ಹತೆಯ ಪ್ರಮಾಣಪತ್ರ ಹೊಂದಿದ ಮಹಾಜ್ಞಾನಿಗಳ ಬೌದ್ಧಿಕ ವಿಸ್ತಾರದಲ್ಲಿ ಕಾಣುವುದಿಲ್ಲ. ನಿನ್ನ ಧರ್ಮ ಯಾವುದು ಎಂದು ಕೇಳುವವರು ಲೌಕಿಕ ಸರಕುಭೋಗದಲ್ಲಿ ವಿಜೃಂಭಿಸುವವರೇ ಆಗಿದ್ದಾರೆ. ಅವರ ಗಂಟಲಿನಿಂದ ಧರ್ಮವನ್ನು ವಿಮುಕ್ತಗೊಳಿಸಿ ಎಲ್ಲರೆದೆಯಲ್ಲಿ ನೆಲೆಗೊಳಿಸಬೇಕಾಗಿದೆ. ಧರ್ಮರಕ್ಷಣೆಗೆ 'ದೇವರು ಸತ್ಯ' ಎನ್ನುವ ತಿಳಿವಳಿಕೆಗಿಂತ 'ಸತ್ಯವೇ ದೇವರು' ಎನ್ನುವ ವಿವೇಕದ ಅಗತ್ಯವಿದೆ. ಮನುಷ್ಯರಾಗಿ ನಾವು ಅರಿಯಬೇಕಾದ ಸತ್ಯದಲ್ಲಿ ಅಹಿಂಸೆ, ದಯೆ ಮತ್ತು ಸಹನೆಗಳು ನಡವಳಿಕೆಯ ಭಾಗವಾಗಿರಬೇಕು. ನಂತರವಷ್ಟೇ ನುಡಿಯಾಗಿ ಸ್ಫಟಿಕದ ಸಲಾಕೆಯಂತೆಯೂ ಮಾಣಿಕ್ಯದ ದೀಪ್ತಿಯೂ ಆಗಬೇಕು. ಹಾಗೆ, ನಡೆನುಡಿಯಲ್ಲಿ ಒಂದಾದ ಧರ್ಮ ತನ್ನ ರಕ್ಷಣೆಗೆ ಎಂದೂ ಕೊಲೆಗಡುಕತನವನ್ನು ಆಶ್ರಯಿಸುವುದಿಲ್ಲ. ಅನ್ಯರನ್ನು ಕೊಂದು ಉಳಿಸಿಕೊಳ್ಳಬೇಕಾದ ಧರ್ಮವಿದೆಯೇ? ಅಧರ್ಮದ ನಡೆನುಡಿಗಳನ್ನು ಕಂಡೂ ಕಾಣದಂತಿರುವ ಸಜ್ಜನರ ನಿಷ್ಕ್ರಿಯತೆ ದುರ್ಜನರ ಸಕ್ರಿಯತೆಗಿಂತ ಅಪಾಯಕಾರಿ. ಧರ್ಮದ ಹೆಸರಿನಲ್ಲಿ ನಡೆಯುವ ರಾಜಕಾರಣದ ಲಾಭಕೋರತನವನ್ನು ಮೆಟ್ಟಿನಿಲ್ಲುವ ಸೌಹಾರ್ದದ ಅಭಿವೃದ್ಧಿ ಮೀಮಾಂಸೆ ಈ ಹೊತ್ತಿನ ತುರ್ತು. ಸಹನೆಯೇ ನಮ್ಮ ನೆಲದ ಸಂಸ್ಕೃತಿಯಾಗಿದೆ. ❖

ಪದಬಂಧ 6165

ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಯಜಮಾನನ ಹುಟ್ಟುಗುಣ (4)
3.ಯತಿಗಳು ಬಳಸುವ ನೀರಿನ ಪಾತ್ರೆ (4)
5.ಒಳ್ಳೆಯ ಸ್ವಭಾವವಿದು (3)
6.ಹರಿಯುವಂಥ ವಸ್ತು (2)
8.ಸಂಕಲನ ಮಾಡುವಾಗ ಪ್ರಾರಂಭವಾದ ಜಗಳ (3)
10.ತೊಂದರೆ ಹೊಂದಿದ ವ್ಯಕ್ತಿ (3)
11.ಆಮೇಲೂ ಇಳಿಯದಿರುವ ಮತ್ತು! (3)
12.ಚಿಕ್ಕ ಮಕ್ಕಳನ್ನು ಹೀಗೆ ಸಂತೈಸು (3)
15.ರಸನದಲ್ಲಿರುವ ದ್ರವ (2)
17.ದೃಷ್ಟಿಗೆ ದೂರವಾಗಿರುವುದು (3)
18.ಯಾಗದ ಸಮಾಪ್ತಿ (4)
19.ನಿಸ್ಸಾರವಾದುದನ್ನು ಹೀಗೆನ್ನಿ (4)

ಮೇಲಿಂದ ಕೆಳಕ್ಕೆ
1.ಗಾಳಿ ಸುಳಿದಾಡಲು ಮಾಡಿರುವ ಕಿಂಡಿ (3)
2.ಬೆಳಗಿನ ಜಾವವಿದು (3)
3.ಕಲೆಸಿದ ಗೋಧಿ ಹಿಟ್ಟು (3)
7.ಬೇರೆ ಬೇರೆ ಬಣ್ಣಗಳ ಬೆರಕೆ (5)
9.ಈತ ಮೋಸಗಾರ (5)
13.ಒಳ್ಳೆಯ ದಾರಿಯಿದು (3)
14.ನಾಶವಿಲ್ಲದ ವರ್ಣ! (3)
16.ಮನ್ನಣೆ ಹೀಗೆ ಬಂದಿದೆ (2)

6164ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ತಕಲಿ 4.ಕಬ್ಬಿಗ 6.ಪ್ರತಿ 7.ಅವಗುಣ 8.ಉಡುತಡಿ 9.ಕಮ್ಮಾರ 11.ಅವರೋಹ 13.ದೇವಾಲಯ 14.ಕುಶ 15.ರಸನ 16. ವನಧಿ

ಮೇಲಿಂದ ಕೆಳಕ್ಕೆ:
2.ಕಡವರ 3.ತತಿ 4.ಕರಡು 5.ಗರಡಿ 6.ಪ್ರಣಯಕಲಹ 8.ಉತ್ತರಪ್ರದೇಶ 10.ಬಲಹೀನ 11.ಅಸುರ 12.ರೋದನ 14.ಕುಲ

ಸುಡೊಕು 6549

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		8		7			6	9
			4		2			1
	3	1		5		2		
6		4		3			5	
5	7	2	6		9			8
				2			4	
3				1			9	
		5	8		3	6		7
1				6				3

6548 ಸುಡೊಕು

9	5	3	8	6	4	7	1	2
7	4	6	1	3	2	9	5	8
8	1	2	7	5	9	6	3	4
2	8	7	6	1	5	4	9	3
3	6	4	2	9	7	1	8	5
5	9	1	4	8	3	2	7	6
6	7	5	3	4	1	8	2	9
4	2	9	5	7	8	3	6	1
1	3	8	9	2	6	5	4	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

15 ಸೆಪ್ಟೆಂಬರ್ 2025 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣನವಮಿ ಗಂ. 25-32 **ನಕ್ಷತ್ರ:** ಮೃಗಶಿರ ಗಂ. 7-32 **ಯೋಗ:** ವ್ಯತೀಪಾತ ಗಂ. 24-34 **ಕರಣ:** ವಣಿಜ ಗಂ. 14-16 ಸಿಂಹ ಮಾಸದ 29 ನೇ ದಿನ. **ಮಳೆ ನಕ್ಷತ್ರ:** ಉತ್ತರ 1 ನೇ ಪಾದ. **ರಾಹುಕಾಲ:** ಬೆಳಿಗ್ಗೆ 07-30 09-00, **ಸೂರ್ಯೋದಯ:** 06-23 **ಸೂರ್ಯಾಸ್ತ:** 06-28, **ಮುಸ್ಲಿಂ ದಿನಾಂಕ:** 22 ರಬಿಉಲ್ಲಾವಲ್, **ಅದೃಷ್ಟ ಸಂಖ್ಯೆ:** 11, 3

ಮೇಷ: ಜೀವನದಲ್ಲಿ ನಡೆದ ಕಹಿ ಘಟನೆಗಳನ್ನು ಪಾಠದ ರೂಪದಲ್ಲಿ ಮಗನಿಗೆ ಹೇಳುವ ಅನಿವಾರ್ಯತೆಯ ಸನ್ನಿವೇಶ ಎದುರಾಗುವುದು. ಮಾಡಿದ ಕೆಲಸದಿಂದ ನೈತಿಕ ಧೈರ್ಯ ಹೆಚ್ಚುವುದು.

ವೃಷಭ: ನಿರ್ದಿಷ್ಟ ಕೆಲಸಗಳನ್ನು ನಿರ್ದಿಷ್ಟ ಸಮಯದಲ್ಲಿ ಮಾಡಿ ಮುಗಿಸಿಕೊಳ್ಳುವಿರಿ. ವೈದ್ಯಕೀಯ ವೃತ್ತಿಯನ್ನು ಅನುಸರಿಸುವವರಿಗೆ ಆಯ-ವ್ಯಯ ಸಮತೋಲನದಲ್ಲಿದ್ದರೂ ಅಪವಾದದ ಭೀತಿ ಎದುರಾಗುವುದು.

ಮಿಥುನ: ಉದ್ಯೋಗದಲ್ಲಿ ಬದಲಾವಣೆಯ ಆಲೋಚನೆಯನ್ನು ಹೊಂದಿದವರು ಆ ಯೋಚನೆಯನ್ನು ಮರೆಯುವುದು ಒಳ್ಳೆಯದು. ಕೈಗಾರಿಕೆಯನ್ನು ನಡೆಸುವವರಿಗೆ ಅಧಿಕ ಖರ್ಚು ಸಂಭವಿಸಲಿದೆ.

ಕರ್ಕಾಟಕ: ಬಾಲ್ಯದ ಮುಗ್ಧತೆಯಿಂದ ತಪ್ಪಿಸಿಕೊಂಡ ಹಲವು ಅವಕಾಶಗಳನ್ನು ನೆನೆದು ಮರುಗುವಿರಿ. ಇಷ್ಟರ ತನಕ ಬಾರದೆ ಇದ್ದ ಸಂಬಂಧಿಕರ ಆಗಮನವು ಆಶ್ಚರ್ಯದ ಜತೆ ಸಂತಸವನ್ನು ತರುತ್ತದೆ. ಓದಿನಲ್ಲಿ ಏಕಾಗ್ರತೆ ಹೆಚ್ಚುವುದು.

ಸಿಂಹ: ಬದಲಾಗದೆ ಇರುವ ಕೆಲವೊಂದು ಮೊಂಡು ತೀರ್ಮಾನಗಳ ಬಗ್ಗೆ ಕುಟುಂಬದವರ ಅಸಮಾಧಾನ ವ್ಯಕ್ತವಾಗಬಹುದು. ನಿಮ್ಮ ಸಂತತಿಯವರೆ ವಿರೋಧಿಸುತ್ತಾರೆ. ಉದ್ಯೋಗದ ಗೌಪ್ಯತೆ ಬಿಟ್ಟುಕೊಡುವುದು ಸರಿಯಲ್ಲ.

ಕನ್ಯಾ: ಕೆಲಸದ ಗಡಿಬಿಡಿಯಿಂದಾಗಿ ಹಲವು ಬಾರಿ ಕೈಕಾಲುಗಳನ್ನು ಪೆಟ್ಟು ಮಾಡಿಕೊಳ್ಳುವ ಸಂಭವವಿದೆ. ಒಡನಾಡಿಗಳ ಪ್ರೀತಿ, ವಿಶ್ವಾಸ ಸಹಕಾರದಿಂದ ಕಾರ್ಯವನ್ನು ಸುಲಭದಲ್ಲಿ ಸಾಧಿಸುವಿರಿ.

ತುಲಾ: ಶಿಕ್ಷಕ ವೃತ್ತಿಯನ್ನು ಮಾಡುವವರಿಗೆ ಬೋಧನಾ ಕೆಲಸಕ್ಕಿಂತ ಮುಖ್ಯವಾಗಿ ದಾಖಲೆಯ ನಿರ್ವಹಣೆ ತಲೆಬಿಸಿ ಎನಿಸಲಿದೆ. ಸಣ್ಣ ವಿಚಾರದಲ್ಲಿ ಅಶಾಂತಿ ತೋರಿಬಂದು ದಾಂಪತ್ಯದಲ್ಲಿ ಕಿರಿಕಿರಿ ಎನಿಸುವುದು.

ವೃಶ್ಚಿಕ: ಹಲವಾರು ಕೆಲಸಗಳಲ್ಲಿ ಅಡೆತಡೆ ಉಂಟಾಗುತ್ತಿರುವುದು ದೇವರ ಹರಕೆಯನ್ನು ತೀರಿಸದ ಪ್ರಭಾವ ಇದ್ದಿರಬಹುದು. ಲಾಭದಾಯಕವೆನಿಸುವ ವ್ಯಕ್ತಿಗಳೊಂದಿಗೆ ಮಾತ್ರ ಮಾತನಾಡುವುದು ಸರಿಯಲ್ಲ.

ಧನು: ವೈದ್ಯರ ಸಲಹೆಯಂತೆ ದೇಹಾರೋಗ್ಯಕ್ಕಾಗಿ ಆಹಾರ ಸೇವನೆಯಲ್ಲಿ ಕೆಲವೊಂದು ಬದಲಾವಣೆ ಮಾಡಿಕೊಳ್ಳಬೇಕಾಗಬಹುದು. ಆಗು-ಹೋಗುಗಳನ್ನು ಪೂರ್ಣಗೊಳಿಸಲು ಹಣಕಾಸಿನ ಕೊರತೆ ಅಷ್ಟಾಗಿ ಕಾಡದು.

ಮಕರ: ಮುತ್ತು–ರತ್ನಗಳ ಆಭರಣದ ಖರೀದಿ ಮಾಡುವ ಸಂದರ್ಭದಲ್ಲಿ ಸ್ನೇಹಿತೆಯ ಅಭಿರುಚಿ ಸರಿ ಎನ್ನಿಸಬಹುದು. ನೆರೆಯವರ ಸಂಬಂಧಗಳು ಸುಧಾರಿಸುವುದು. ವನವಿಹಾರದಿಂದ ಮನಸ್ಸನ್ನು ತಿಳಿಗೊಳಿಸಬಹುದು.

ಕುಂಭ: ಸೋದರ ಮಾವನ ಸಹಾಯದಿಂದಾಗಿ ಕಟ್ಟಡ ನಿರ್ಮಾಣಕ್ಕೆ ಸಹಾಯವಾಗಬಹುದು. ದಿನಚರಿಯಲ್ಲಿ ಕೋಪ ಹಾಗೂ ಆಕ್ರಮಣಶೀಲತೆ ಎಲ್ಲರಿಗೂ ಗೋಚರವಾಗಬಹುದು. ಕೈತಪ್ಪಿ ಹೋದ ಹಣ ಪುನಃ ಕೈ ಸೇರುವುದು.

ಮೀನ: ಆರೋಗ್ಯದ ವಿಷಯದಲ್ಲಿ ಗೋಚರಕ್ಕೆ ಬಂದ ಸಮಸ್ಯೆಗಳನ್ನು ಗುರುತಿಸಿಕೊಂಡು ಅದನ್ನು ಪರಿಹರಿಸುವ ಬಗೆಯನ್ನು ಕಂಡುಹಿಡಿದರೆ ಉತ್ತಮ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಏಕಾಗ್ರತೆಯನ್ನು ಬೆಳೆಸಿಕೊಳ್ಳಿ.

ಗುಂಡಣ್ಣ



ಐ.ಟಿ. ಪೋರ್ಟಲ್‌ನಲ್ಲಿ ಸಮಸ್ಯೆ, ಹಲವರ ಅಳಲು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆದಾಯ ತೆರಿಗೆ ವಿವರ ಸಲ್ಲಿಸಲು ಸೋಮವಾರ (ಸೆಪ್ಟೆಂಬರ್ 15) ಕಡೆಯ ದಿನ. ಕಡೆಯ ದಿನದ ನಂತರ ಐ.ಟಿ ವಿವರ ಸಲ್ಲಿಸುವವರು ದಂಡ ಪಾವತಿ ಮಾಡಬೇಕಾಗುತ್ತದೆ.

ಆದರೆ ವಿವರ ಸಲ್ಲಿಸಲು ಇರುವ ಪೋರ್ಟಲ್ ಭಾನುವಾರ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲ ಎಂದು ಹಲವರು ಸಾಮಾಜಿಕ ಜಾಲತಾಣಗಳ ಮೂಲಕ ದೂರಿದ್ದಾರೆ. ಭಾನುವಾರ ರಾತ್ರಿಯ ವೇಳೆಗೆ ಈ ವಿಚಾರವಾಗಿ ಎಕ್ಸ್ ವೇದಿಕೆಯಲ್ಲಿ ಎರಡೂವರೆ ಸಾವಿರಕ್ಕೂ ಹೆಚ್ಚು ಪೋಸ್ಟ್‌ಗಳು ಬಂದಿದ್ದವು.

ಐ.ಟಿ. ವಿವರ ಸಲ್ಲಿಸಲು ಇರುವ ಕಡೆಯ ದಿನಾಂಕವನ್ನು ವಿಸ್ತರಿಸಬೇಕು ಎಂದು ಹಲವರು ಆದಾಯ ತೆರಿಗೆ ಇಲಾಖೆ ಹಾಗೂ ಕೇಂದ್ರ ಹಣಕಾಸು ಸಚಿವಾಲಯವನ್ನು ಎಕ್ಸ್ ಮೂಲಕ ಕೋರಿದ್ದಾರೆ.

ಚಲನ್ ಪಾವತಿ ಸರಿಯಾಗಿ ಆಗುತ್ತಿಲ್ಲ, ಪೋರ್ಟಲ್‌ಗೆ ಲಾಗಿನ್ ಆಗುವಲ್ಲಿ ಸಮಸ್ಯೆಗಳು ಎದುರಾಗುತ್ತಿವೆ ಎಂದು ಹಲವರು ಅಳಲು ತೋಡಿಕೊಂಡಿದ್ದಾರೆ.

7.76 ಲಕ್ಷ ಕಾರ್ಡ್‌ಗಳಿಗೆ ಕುತ್ತು

ಒಂದನೇ ಪುಟದಿಂದ...

ಕುಟುಂಬದಲ್ಲೊಬ್ಬರು ಆದಾಯ ತೆರಿಗೆ ಪಾವತಿದಾರರು, ಕಂಪನಿಗಳಲ್ಲಿ ನಿರ್ದೇಶಕರು, ನಾಲ್ಕು ಚಕ್ರಗಳ ವಾಹನ ಹೊಂದಿದವರು, ಜಿಎಸ್‌ಟಿ ನಂಬರ್ ಹೊಂದಿರುವ ಒಟ್ಟು ₹25 ಲಕ್ಷಕ್ಕಿಂತ ಹೆಚ್ಚಿನ ವಹಿವಾಟು ನಡೆಸುವವರು ಬಿಪಿಎಲ್ ಕಾರ್ಡ್ ಹೊಂದಲು ಅನರ್ಹರು. ಅಂತಹ ಶಂಕಾಸ್ಪದ ಫಲಾನುಭವಿಗಳನ್ನು ಗುರುತಿಸಿರುವ ಕೇಂದ್ರ ಸರ್ಕಾರ, ಅಂಥವರು ಹೊಂದಿರುವ ಬಿಪಿಎಲ್ ಪಡಿತರ ಚೀಟಿಗಳನ್ನು ಸೆ. 30ರ ಒಳಗೆ ರದ್ದು ಪಡಿಸುವಂತೆ ಎಲ್ಲ ರಾಜ್ಯಗಳಿಗೆ ಇತ್ತೀಚೆಗೆ ಸೂಚನೆ ನೀಡಿದೆ.

ಕೇಂದ್ರ ಸರ್ಕಾರದ ಸೂಚನೆಯ ಬೆನ್ನಲ್ಲೆ, ವಾರ್ಷಿಕ ಆದಾಯ ₹1.20 ಲಕ್ಷಕ್ಕಿಂತ ಹೆಚ್ಚಿರುವ ಫಲಾನುಭವಿಗಳು ಹೊಂದಿರುವ ಪಡಿತರಚೀಟಿಗಳನ್ನು ರದ್ದುಪಡಿಸಲು ಮುಂದಡಿ ಇಟ್ಟಿರುವ ರಾಜ್ಯ ಸರ್ಕಾರ, ತಹಶೀಲ್ದಾರ್‌ಗಳ ಮೂಲಕ ತಿಳಿವಳಿಕೆ ನೋಟಿಸ್ ನೀಡಲು ಆರಂಭಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಐದು ಗ್ಯಾರಂಟಿ ಯೋಜನೆಗಳ ಕುರಿತ ಪ್ರಗತಿ ಪರಿಶೀಲನೆ ಸಭೆಗೆ ಆಹಾರ ಇಲಾಖೆ ‘ಅನ್ನಭಾಗ್ಯ ಗ್ಯಾರಂಟಿ’ ಯೋಜನೆಯ ಸಮಗ್ರ ಮಾಹಿತಿ ನೀಡಿದೆ. ಕೇಂದ್ರ ಸರ್ಕಾರ ಗುರುತಿಸಿದ ಶಂಕಾಸ್ಪದ ಪಡಿತರ ಚೀಟಿಗಳ ವಿಧಗಳು ಹಾಗೂ ಫಲಾನುಭವಿಗಳ ಸಂಖ್ಯೆ ಮತ್ತು ರಾಜ್ಯ ಸರ್ಕಾರದ ‘ಕುಟುಂಬ ತಂತ್ರಾಂಶ’ದಿಂದ ಗುರುತಿಸಿರುವ ಅನರ್ಹ ಪಡಿತರ ಚೀಟಿಗಳ ವಿವರಗಳು ಅದರಲ್ಲಿದೆ.

‘ಕುಟುಂಬ ತಂತ್ರಾಂಶ’ವು ರಾಜ್ಯದಲ್ಲಿ ಒಟ್ಟು 13,87,651 ಬಿಪಿಎಲ್ ಪಡಿತರ ಚೀಟಿಗಳು ಅನರ್ಹವೆಂದು ಗುರುತಿಸಿದೆ. ಅದರಲ್ಲಿ 3,65,614 ಕಾರ್ಡ್‌ಗಳನ್ನು ಸರ್ಕಾರ ಅಮಾನತು, ರದ್ದು, ಎಪಿಎಲ್‌ಗೆ ಬದಲಾವಣೆ ಮಾಡಿತ್ತು. ಆದರೆ, ಈ ಕ್ರಮಕ್ಕೆ ತೀವ್ರ ಆಕ್ಷೇಪ ವ್ಯಕ್ತವಾದ ಕಾರಣ, ಆ ಪೈಕಿ 3,52,425 ಪಡಿತರ ಚೀಟಿಗಳನ್ನು ಸರ್ಕಾರದ ಆದೇಶದಂತೆ ಬಿಪಿಎಲ್ ಆಗಿ ಮರುಸ್ಥಾಪಿಸಲಾಗಿತ್ತು.

ಪ್ರತಿ ತಿಂಗಳು ₹535 ಕೋಟಿ ವೆಚ್ಚ: ‘ಅನ್ನ ಭಾಗ್ಯ’ ಗ್ಯಾರಂಟಿ ಯೋಜನೆಯಡಿ ಪ್ರತಿ ತಿಂಗಳು 4.46 ಕೋಟಿ ಫಲಾನುಭವಿಗಳಿಗೆ ಪ್ರತಿ ತಿಂಗಳು 2.15 ಲಕ್ಷ ಟನ್ ಅಕ್ಕಿ ಹಂಚಿಕೆ ಮಾಡಲಾಗುತ್ತಿದೆ. ಈ ಯೋಜನೆಯಡಿ ಪ್ರತಿ ತಿಂಗಳು ₹535 ಕೋಟಿ ವೆಚ್ಚ ಮಾಡಲಾಗುತ್ತಿದೆ ಎಂದು ಆಹಾರ ಇಲಾಖೆಯ ಮೂಲಗಳು ತಿಳಿಸಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಅಡಿಯಲ್ಲಿರುವ ಪಡಿತರಚೀಟಿಗಳಿಗೆ ಕೇಂದ್ರ ಸರ್ಕಾರದಿಂದ ಪ್ರತಿ ತಿಂಗಳು 2.17 ಲಕ್ಷ ಟನ್ ಆಹಾರಧಾನ್ಯ ಹಂಚಿಕೆ ಆಗುತ್ತಿದೆ. ರಾಜ್ಯ ಸರ್ಕಾರದ ಬಿಪಿಎಲ್ ಪಡಿತರಚೀಟಿಗಳಿಗೆ ಭಾರತೀಯ ಆಹಾರ ನಿಗಮದಿಂದ (ಎಫ್‌ಸಿಐ) ಪ್ರತಿ ತಿಂಗಳು 20 ಸಾವಿರ ಟನ್ ಆಹಾರಧಾನ್ಯ ಖರೀದಿಸಿ ಹಂಚಲಾಗುತ್ತದೆ. ಈ ಯೋಜನೆಯಡಿ ಪ್ರತಿ ತಿಂಗಳು ಅಂತ್ಯೋದಯ ಅನ್ನ ಯೋಜನೆ (ಎಎವೈ) ಮತ್ತು ಆದ್ಯತೇತರ ಕುಟುಂಬಗಳ (ಬಿಪಿಎಲ್) ಫಲಾನುಭವಿಗಳಿಗೆ ತಲಾ 5 ಕೆ.ಜಿ ಅಕ್ಕಿ ಹಂಚಿಕೆ ಮಾಡಲಾಗುತ್ತದೆ ಎಂದೂ ಮೂಲಗಳು ಹೇಳಿವೆ.

ಕೇಂದ್ರ ಸರ್ಕಾರ ಕರ್ನಾಟಕದಲ್ಲಿ ಗುರುತಿಸಿರುವ ಅನರ್ಹ ಕಾರ್ಡ್‌ಗಳು

ಶಂಕಾಸ್ಪದ ವಿಧಗಳು	ಫಲಾನುಭವಿಗಳ ಸಂಖ್ಯೆ
ವಾರ್ಷಿಕ ಆದಾಯ ₹1.20 ಲಕ್ಷಕ್ಕಿಂತ ಹೆಚ್ಚಿರುವವರು	5,80,415
ಬೇರೆ ರಾಜ್ಯದಲ್ಲಿ ಪಡಿತರಚೀಟಿ ಹೊಂದಿರುವವರು	73,859
12 ತಿಂಗಳುಗಳಿಂದ ಪಡಿತರ ಪಡೆದುಕೊಳ್ಳದವರು	40,833
ಪಿಎಂ–ಕಿಸಾನ್ ಯೋಜನೆಯಡಿ 7.5 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು	34,710
ಕಂಪನಿಗಳಲ್ಲಿ ನಿರ್ದೇಶಕರಾಗಿರುವವರು	21,402
6ರಿಂದ 12 ತಿಂಗಳವರೆಗೆ ಪಡಿತರ ಪಡೆಯದವರು	17,414
ಜಿಎಸ್‌ಟಿಎನ್ ಹೊಂದಿರುವ ₹25 ಲಕ್ಷಕ್ಕಿಂತ ಹೆಚ್ಚಿನ ವಹಿವಾಟು ನಡೆಸಿರುವವರು	2,695
100 ವರ್ಷ ದಾಟಿದ ಪಡಿತರ ಚೀಟಿದಾರರು	2,050
ಆಧಾರ್ ಪ್ರಕಾರ ಮೃತ ವ್ಯಕ್ತಿಗಳು	1,452
18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಏಕ ಸದಸ್ಯರು	793
ಕರ್ನಾಟಕ ರಾಜ್ಯದಲ್ಲಿ ಒಂದಕ್ಕಿಂತ ಹೆಚ್ಚು ಪಡಿತರ ಚೀಟಿ ಹೊಂದಿರುವವರು	430
ಸ್ವಂತ ಬಳಕೆಗಾಗಿ ನಾಲ್ಕು ಚಕ್ರಗಳ ವಾಹನ ಹೊಂದಿರುವವರು	153
ಒಟ್ಟು	7,76,206

ರಾಜ್ಯ ಸರ್ಕಾರ ‘ಕುಟುಂಬ ತಂತ್ರಾಂಶ’ದಿಂದ ಗುರುತಿಸಿದ ಅನರ್ಹ ಪಡಿತರ ಚೀಟಿಗಳು

ವಿಧಗಳು	ಅನರ್ಹ	ಅಮಾನತು, ರದ್ದು, ಎಪಿಎಲ್‌ಗೆ ಬದಲಾವಣೆ	ಸರ್ಕಾರದ ಆದೇಶದಂತೆ ಮರುಸ್ಥಾಪನೆ
6 ತಿಂಗಳಿಂದ ಪಡಿತರ ಪಡೆಯದವರು	2,75,667	2,75,498	2,74,753
ಆದಾಯ ತೆರಿಗೆದಾರರು	98,473	63,006	54,345
ವಾರ್ಷಿಕ ವರಮಾನ ₹1.20 ಲಕ್ಷಕ್ಕಿಂತ ಹೆಚ್ಚು	10,09,475	23,750	23,327
ಸರ್ಕಾರಿ ನೌಕರರು	4,036	3,360	-
ಒಟ್ಟು	13,87,651	3,65,614	3,52,425

ಹೆಚ್ಚುವರಿ ಹಣ: ಸಾಲಕ್ಕೋ, ಹೂಡಿಕೆಗೋ?

ಹಣಕಾಸು ಸಾಕ್ಷರತೆ



ರಾಜೇಶ್ ಕುಮಾರ್ ಟಿ.ಆರ್
ಚಾರ್ಟರ್ಡ್ ಅಕೌಂಟೆಂಟ್

ಮೊನ್ನೆ ಸ್ನೇಹಿತರೊಬ್ಬರು ಕರೆ ಮಾಡಿ ‘ನನಗೆ ₹5 ಲಕ್ಷ ಬೋನಸ್ ಬಂದಿದೆ. ಈ ಹಣವನ್ನು ಸಾಲದ ಬಾಬ್ತಿಗೆ ಕಟ್ಟುವುದೋ, ಇಲ್ಲ ಮ್ಯೂಚುವಲ್ ಫಂಡ್‌ನಲ್ಲಿ ತೊಡಗಿಸುವುದೋ’ ಎಂಬ ಪ್ರಶ್ನೆ ಕೇಳಿದರು. ಕೈಗೆ ದೊಡ್ಡ ಮೊತ್ತ ಬಂದಾಗ ಸಾಲ ಮಾಡಿರುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಕಾಡುವ ಪ್ರಶ್ನೆ ಇದು. ಸಾಲ ಕಟ್ಟಿದರೆ ಬಡ್ಡಿ ಹೊರೆ ಇಳಿಯುತ್ತದೆ ಎಂಬುದು ಒಂದಷ್ಟು ಮಂದಿಯ ಲೆಕ್ಕಾಚಾರವಾದರೆ, ಸಾಲ ಕಟ್ಟುವ ಬದಲು ಅದೇ ದುಡ್ಡನ್ನು ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚು ಗಳಿಸಬಹುದು ಎನ್ನುವುದು ಇನ್ನೊಂದಷ್ಟು ಜನರ ಅಂದಾಜು. ಹಾಗಾದರೆ ಕೈಗೆ ಸಿಗುವ ದೊಡ್ಡ ಮೊತ್ತದಿಂದ ಸಾಲದ ಹೊರೆ ಇಳಿಸಿಕೊಳ್ಳಬೇಕೋ, ಹೂಡಿಕೆಯತ್ತ ಗಮನಹರಿಸಬೇಕೋ?

ಸಾಲದ ಹೊರೆ ಇಳಿಸಿಕೊಳ್ಳುವುದು ಹೇಗೆ?: ₹40 ಲಕ್ಷದ ಗೃಹಸಾಲವನ್ನು ಶೇ 8.5ರ ಬಡ್ಡಿ ದರದಲ್ಲಿ 20 ವರ್ಷದ ಅವಧಿಗೆ (240 ತಿಂಗಳು) ಪಡೆದರೆ ₹40 ಲಕ್ಷ ಅಸಲಿನ ಮೊತ್ತದ ಜೊತೆಗೆ ಸುಮಾರು ₹43 ಲಕ್ಷ ಬಡ್ಡಿ ಕಟ್ಟಬೇಕಾಗುತ್ತದೆ. ಅಂದರೆ ಸಾಲದ ಮೊತ್ತಕ್ಕಿಂತ ಇಲ್ಲಿ ಬಡ್ಡಿ ಮೊತ್ತವೇ ಜಾಸ್ತಿ. ನಿಮ್ಮ ಬಳಿ ₹5 ಲಕ್ಷ ಹಣವಿದ್ದು ಅದನ್ನು ನೀವು ಗೃಹಸಾಲದ ಒಂದಿಷ್ಟು ಮೊತ್ತವನ್ನು ಮುಂಚಿತವಾಗಿ ಪಾವತಿಸಲು (ಪಾರ್ಟ್ ಪೇಮೆಂಟ್) ಬಳಸಿದರೆ ಬ್ಯಾಂಕ್ ನಿಮಗೆ ಎರಡು ಆಯ್ಕೆಗಳನ್ನು ನೀಡುತ್ತದೆ. ಒಂದನೆಯದ್ದು ನಿಮ್ಮ ಸಾಲದ ಮಾಸಿಕ ಕಂತಿನ (ಇಎಂಐ) ಮೊತ್ತ ಕಡಿಮೆ ಮಾಡಿಕೊಳ್ಳುವುದು. ಎರಡನೆಯದ್ದು ನಿಮ್ಮ ಮಾಸಿಕ ಕಂತಿನ ಮೊತ್ತವನ್ನು ಹಾಗೇ ಇಟ್ಟುಕೊಂಡು ಸಾಲ ಮರುಪಾವತಿಯ ಒಟ್ಟು ಅವಧಿಯನ್ನು ಕಡಿಮೆ ಮಾಡಿಕೊಳ್ಳುವುದು.

ಉದಾಹರಣೆಗೆ ನೀವು ಎರಡನೇ ಆಯ್ಕೆ, ಅಂದರೆ ಸಾಲ ಮರುಪಾವತಿಯ ಅವಧಿ ಕಡಿಮೆ ಮಾಡಿಕೊಳ್ಳುವುದನ್ನು ಪರಿಗಣಿಸಿದ್ದೀರಿ ಎಂದುಕೊಳ್ಳೋಣ. ಈಗ ಸಾಲ ಪಡೆದು 60 ತಿಂಗಳಾಗಿದ್ದು 61ನೇ ತಿಂಗಳಿಗೆ ನೀವು ₹5 ಲಕ್ಷವನ್ನು ಮುಂಚಿತವಾಗಿ ಪಾವತಿ (ಪಾರ್ಟ್ ಪೇಮೆಂಟ್) ಮಾಡಿದಾಗ ಸಾಲ ಮರುಪಾವತಿಯ ಮಾಸಿಕ ಕಂತಿನ ಮೊತ್ತ ಹಾಗೆಯೇ ಉಳಿಯುತ್ತದೆ. ಆದರೆ ನಿಮ್ಮ ಸಾಲ ಮರುಪಾವತಿಯ ಅವಧಿ 240 ತಿಂಗಳಿಂದ 197 ತಿಂಗಳಿಗೆ ಬರುತ್ತದೆ. ಅಂದರೆ ನಿಮ್ಮ ಸಾಲ 43 ತಿಂಗಳು ಮುಂಚಿತವಾಗಿ ತೀರುತ್ತದೆ. ಮೊದಲಿನ ಲೆಕ್ಕಾಚಾರದ ಪ್ರಕಾರ ನೀವು ₹43 ಲಕ್ಷ ಬಡ್ಡಿ ಕಟ್ಟಬೇಕಾಗುತ್ತಿತ್ತು. ಆದರೆ ಈಗ ಅವಧಿ ತಗ್ಗಿದ ಕಾರಣ ಬಡ್ಡಿ ₹33 ಲಕ್ಷಕ್ಕೆ ಕುಸಿದು ಬಿಡುತ್ತದೆ. ಅಂದರೆ ₹5 ಲಕ್ಷ ಪಾವತಿಸುವ ಮೂಲಕ ನೀವು ಬರೋಬ್ಬರಿ ₹10 ಲಕ್ಷ ಬಡ್ಡಿ ಹಣ ಉಳಿತಾಯ ಮಾಡುತ್ತೀರಿ.

ಸಾಲವನ್ನು ಬೇಗ ತೀರಿಸಿ ಗಳಿಕೆಯನ್ನೂ ಪಡೆಯುವುದು: ₹5 ಲಕ್ಷವನ್ನು ಮುಂಚಿತವಾಗಿ ಸಾಲದ ಬಾಬ್ತಿಗೆ ಕಟ್ಟಿದಾಗ ನಿಮ್ಮ ಸಾಲ 43 ತಿಂಗಳು ಮೊದಲು ಮುಗಿಯುತ್ತದೆ. ಆಗ ಪ್ರತಿ ತಿಂಗಳು ಸಾಲದ ಬಾಬ್ತಿಗೆ ಕಟ್ಟುತ್ತಿದ್ದ ₹34,712 ಮಾಸಿಕ ಕಂತನ್ನು 43 ತಿಂಗಳು ಇಂಡೆಕ್ಸ್ ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡಿ ಶೇ 10ರಷ್ಟು ಗಳಿಕೆ ಸಿಕ್ಕರೂ ಸುಮಾರು ₹18.71 ಲಕ್ಷ ನಿಮ್ಮ ಬಳಿ ಇರುತ್ತದೆ. ಅಂದರೆ 20 ವರ್ಷಗಳ ಕೊನೆಯಲ್ಲಿ ನಿಮ್ಮ ಬಳಿ ಸ್ವಂತ ಮನೆಯ ಜೊತೆಗೆ ₹18.71 ಲಕ್ಷ ಇರುತ್ತದೆ.

ಸಾಲ ತೀರಿಸುವುದಕ್ಕಿಂತ ಹೆಚ್ಚಿನ ಲಾಭ ಹೂಡಿಕೆಯಲ್ಲಿದೆಯಾ?: ನೀವು ನಿಮ್ಮ ಬಳಿ ಇರುವ ₹5 ಲಕ್ಷವನ್ನು ಸಾಲ ತೀರಿಸಲು ಬಳಸುವುದಿಲ್ಲ. ಅದನ್ನು ಶೇ 12ರಷ್ಟು ಗಳಿಕೆ ನಿರೀಕ್ಷೆಯಲ್ಲಿ ಇಂಡೆಕ್ಸ್ ಮ್ಯೂಚುವಲ್ ಫಂಡ್‌ನಲ್ಲಿ 15 ವರ್ಷ ಹೂಡಿಕೆ ಮಾಡುತ್ತೀರಿ ಎಂದುಕೊಳ್ಳಿ. ಹಾಗೆ ಮಾಡಿದಾಗ ನಿಮಗೆ ₹27.3 ಲಕ್ಷ ಗಳಿಕೆ ಸಿಗುತ್ತದೆ. ಸಾಲ ಕಟ್ಟುವುದಕ್ಕಿಂತ ಹೆಚ್ಚಿನ ಲಾಭ ಹೂಡಿಕೆಯಲ್ಲಿದೆ ಎಂದು ಮೇಲ್ನೋಟಕ್ಕೆ ನಿಮಗೆ ಅನಿಸಬಹುದು. ಆದರೆ ಹೂಡಿಕೆಯನ್ನು ಯಾವ ಹಂತದಲ್ಲಿ ನೀವು ಆರಂಭಿಸುತ್ತೀರಿ ಮತ್ತು ಯಾವ ಹಂತದಲ್ಲಿ ನಿಲ್ಲಿಸುತ್ತೀರಿ ಎನ್ನುವುದು ನಿಮ್ಮ ಗಳಿಕೆಯನ್ನು ನಿರ್ಧರಿಸುತ್ತದೆ.

ಉದಾಹರಣೆಗೆ 2008ರ ಜಾಗತಿಕ ಆರ್ಥಿಕ ಕುಸಿತದ ಸಂದರ್ಭದಲ್ಲಿ ನೀವು ಹೂಡಿಕೆ ಆರಂಭಿಸಿದ್ದರೆ ಅಥವಾ 2020ರ ಕೋವಿಡ್ ಸಂದರ್ಭದಲ್ಲಿ ಹೂಡಿಕೆ ಹಿಂಪಡೆಯಲು ಮುಂದಾಗಿದ್ದರೆ ಮ್ಯೂಚುವಲ್ ಫಂಡ್ ಹೂಡಿಕೆಯಲ್ಲಿ ಗಳಿಕೆಗಿಂತ ತಾತ್ಕಾಲಿಕ ನಷ್ಟವೇ ಹೆಚ್ಚಿರುತ್ತಿತ್ತು. ಹಾಗೆಂದ ಮಾತ್ರಕ್ಕೆ ಹೂಡಿಕೆಯಿಂದ ನಷ್ಟವೆಂದಲ್ಲ, ಸಾಲ ತೀರಿಸುವಾಗ ಇರುವ ಖಾತರಿ ಷೇರು ಮಾರುಕಟ್ಟೆ ಆಧಾರಿತ ಹೂಡಿಕೆಗಳಲ್ಲಿ ಇರುವುದಿಲ್ಲ ಎನ್ನುವುದು ಇದರ ತಾತ್ಪರ್ಯ.

ಹೂಡಿಕೆ ಮತ್ತು ಸಾಲ ಪಾವತಿಯ ಮಿಶ್ರಣವಿದ್ದರೆ ಹೇಗೆ?: ₹5 ಲಕ್ಷ ಬೋನಸ್ ಹಣ ನಿಮ್ಮ ಬಳಿ ಇದೆ ಎಂದುಕೊಳ್ಳಿ. ಹೀಗಿದ್ದಾಗ ₹2.5 ಲಕ್ಷ ಸಾಲದ ಬಾಬ್ತಿಗೆ ಮತ್ತು ₹2.5 ಲಕ್ಷವನ್ನು ಹೂಡಿಕೆಗೆ ಪರಿಗಣಿಸಬಹುದು. ಇಂತಹ ನಿರ್ಧಾರಗಳನ್ನು ಮಾಡುವಾಗ ಪ್ರಮುಖವಾಗಿ ನೀವು ಪಡೆದಿರುವ ಸಾಲದ ಮೇಲಿನ ಬಡ್ಡಿ ಎಷ್ಟಿದೆ ಎನ್ನುವುದನ್ನು ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ, ನೀವು ವೈಯಕ್ತಿಕ ಸಾಲ ಪಡೆದಿದ್ದು, ಅದರ ಬಡ್ಡಿ ಶೇ 14ರಷ್ಟಿದ್ದರೆ ನಿಮ್ಮ ಬಳಿ ಇರುವ ₹5 ಲಕ್ಷವನ್ನು ಹೂಡಿಕೆಗೆ ಮೀಸಲಿಡುವ ಬದಲು ಸಾಲ ತೀರಿಸಲು ಬಳಸುವುದು ಒಳಿತು. ನೀವು ಗೃಹ ಸಾಲ ಪಡೆದಿದ್ದು, ಅದರ ಬಡ್ಡಿ ದರ ಶೇ 8.5ರಷ್ಟಿದೆ ಎಂದು ಭಾವಿಸಿ. ಶೇ 12ರಷ್ಟು ಗಳಿಕೆ ನಿರೀಕ್ಷೆಯಲ್ಲಿ ನೀವು ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುತ್ತೀರಿ ಎಂದರೆ ನೀವು ಸಾಲ ತೀರಿಸಲು ಪೂರ್ತಿ ಹಣ ಬಳಸುವ ಬದಲು ಅರ್ಧದಷ್ಟು ಹಣವನ್ನು ಸಾಲ ತೀರಿಸಲು ಹಾಗೂ ಇನ್ನುಳಿದ ಮೊತ್ತವನ್ನು ಹೂಡಿಕೆಗೆ ಮೀಸಲಿಡಬಹುದು.

ಯಾವಾಗ ಸಾಲ ಮರುಪಾವತಿಗೆ ಆದ್ಯತೆ ಕೊಡಬೇಕು?

ನೀವು ನಿವೃತ್ತಿಗೆ ಸಮೀಪವಿದ್ದರೆ, ಹೆಚ್ಚಿನ ಬಡ್ಡಿ ದರಕ್ಕೆ ಬ್ಯಾಂಕೇತರ ಹಣಕಾಸು ಸಂಸ್ಥೆಗಳು (ಎನ್‌ಬಿಎಫ್‌ಸಿ) ಮತ್ತು ಕಿರು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆದಿದ್ದರೆ ಸಾಲ ತೀರಿಸುವುದಕ್ಕೆ ಆದ್ಯತೆ ನೀಡಬೇಕು. ಮನೆಯಲ್ಲಿ ಒಬ್ಬರೇ ದುಡಿಯುತ್ತಿದ್ದೀರಿ, ಕೆಲಸಕ್ಕೆ ಭದ್ರತೆ ಇಲ್ಲ, ಪರ್ಯಾಯ ಆದಾಯ ಮೂಲಗಳನ್ನು ಸೃಷ್ಟಿಸಿಕೊಂಡಿಲ್ಲ ಎಂದಾದರೆ ಸಾಲ ಮರುಪಾವತಿಗೆ ಒತ್ತು ನೀಡಬೇಕು. ಎಲ್ಲದಕ್ಕಿಂತ ಮಿಗಿಲಾಗಿ ಸಾಲ ತೀರಿದರೆ ನೆಮ್ಮದಿ ಅಂತ ನಿಮಗೆ ಅನಿಸಿದರೆ ಹೆಚ್ಚು ಆಲೋಚನೆ ಮಾಡದೆ ಸಾಧ್ಯವಾದಷ್ಟು ಬೇಗ ಸಾಲ ತೀರಿಸಲು ಮುಂದಾಗಬೇಕು.

ಕೇರಳದ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಒತ್ತಾಯ

‘ವರಮಾನ ನಷ್ಟ: ರಾಜ್ಯಗಳಿಗೆ ಪರಿಹಾರ ಸಿಗಲಿ’

ನವದೆಹಲಿ (ಪಿಟಿಐ): ಜಿಎಸ್‌ಟಿ ದರ ಪರಿಷ್ಕರಣೆಯಿಂದ ರಾಜ್ಯಗಳಿಗೆ ಆಗುವ ವರಮಾನ ನಷ್ಟಕ್ಕೆ ಪರಿಹಾರ ಸಿಗಬೇಕು, ಆರ್ಥಿಕ ಬೆಳವಣಿಗೆಯ ಪ್ರಯೋಜನವು ಎಲ್ಲರಿಗೂ ದೊರೆಯಬೇಕು ಎಂದು ಕೇರಳದ ಹಣಕಾಸು ಸಚಿವ ಕೆ.ಎನ್. ಬಾಲಗೋಪಾಲ್ ಹೇಳಿದ್ದಾರೆ.

ಸಾಮಾನ್ಯ ಜನರಿಗೆ ಜಿಎಸ್‌ಟಿ ದರ ಪರಿಷ್ಕರಣೆಯ ಪ್ರಯೋಜನ ವರ್ಗಾವಣೆ ಆಗಬೇಕು. ವರಮಾನ ನಷ್ಟಕ್ಕೆ ಪರಿಹಾರ ಸಿಗದಿದ್ದರೆ ರಾಜ್ಯಗಳಿಗೆ ತಮ್ಮ ಸಾಮಾಜಿಕ ಜವಾಬ್ದಾರಿಗಳನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ ಎಂದು ಸುದ್ದಿಸಂಸ್ಥೆ ಪಿಟಿಐಗೆ ನೀಡಿದ ಸಂದರ್ಶನದಲ್ಲಿ ಭಾನುವಾರ ಹೇಳಿದ್ದಾರೆ.



ಜಿಎಸ್‌ಟಿ ಪರಿಷ್ಕರಣೆಯನ್ನು ಕೇರಳ ಸ್ವಾಗತಿಸಿದೆ. ಆದರೆ, ವರಮಾನ ನಷ್ಟದ ಪರಿಹಾರ ಕುರಿತು ಆತಂಕ ವ್ಯಕ್ತಪಡಿಸಿದೆ.

ರಾಜ್ಯಗಳ ಹಿತವನ್ನು ಕಾಯುವ ಅಂಶಗಳು ಜಿಎಸ್‌ಟಿ ದರ ಇಳಿಕೆಯ ಪ್ರಕ್ರಿಯೆಯಲ್ಲಿ ಇಲ್ಲವಾದರೆ, ಭವಿಷ್ಯದಲ್ಲಿ ರಾಜ್ಯಗಳ ಹಣಕಾಸಿನ ಸ್ಥಿತಿ ಮೇಲೆ ಕೆಟ್ಟ ಪರಿಣಾಮ ಉಂಟಾಗಬಹುದು ಎಂದು ಹೇಳಿದ್ದಾರೆ.

ಜಿಎಸ್‌ಟಿ ಪರಿಷ್ಕರಣೆಯಿಂದ ತೆರಿಗೆ ಕಡಿಮೆ ಆಗಲಿದೆ. ಮುಂದಿನ ದಿನಗಳಲ್ಲಿ ಸರಕುಗಳ ದರವು ಇಳಿಯಲಿದೆ. ಇದರ ಪ್ರಯೋಜನವನ್ನು ಗ್ರಾಹಕರಿಗೆ ವರ್ಗಾಯಿಸಬೇಕು. ಆದರೆ, 2017–18ರಲ್ಲಿ ನಡೆದ ಜಿಎಸ್‌ಟಿ ಪರಿಷ್ಕರಣೆಯು ಪ್ರಯೋಜನವನ್ನು ಜನರಿಗೆ ವರ್ಗಾಯಿಸಿ-ರಲಿಲ್ಲ ಎಂದು ಅವರು ಹೇಳಿದ್ದಾರೆ.

ಜಿಎಸ್‌ಟಿ, ಮಾರಾಟ ತೆರಿಗೆ ಮತ್ತು ಮೌಲ್ಯವರ್ಧಿತ ತೆರಿಗೆಯು (ವ್ಯಾಟ್) ರಾಜ್ಯಗಳ ಪ್ರಮುಖ ವರಮಾನ ಮೂಲಗಳಾಗಿವೆ. ಕೇಂದ್ರವು ಹಲವು ವರಮಾನದ ಮೂಲಗಳನ್ನು ಹೊಂದಿದೆ. ವರಮಾನ ನಷ್ಟಕ್ಕೆ ಪರಿಹಾರ ನೀಡದಿದ್ದರೆ, ಆರೋಗ್ಯ, ಶಿಕ್ಷಣ, ಸಾರ್ವಜನಿಕ ಪಡಿತರ ವ್ಯವಸ್ಥೆಯಂತಹ (ಪಿಡಿಎಸ್) ಸಾಮಾಜಿಕ ಜವಾಬ್ದಾರಿ-ಗಳನ್ನು ರಾಜ್ಯಗಳು ಮುಂದುವರಿಸಲು ಆಗುವುದಿಲ್ಲ ಎಂದು ಹೇಳಿದ್ದಾರೆ.

ರಾಜ್ಯಗಳು ದುರ್ಬಲಗೊಂಡರೆ, ಅಭಿವೃದ್ಧಿ ಎಂದು ಹೇಳುವುದರಲ್ಲಿ ಅರ್ಥವೇನಿದೆ ಎಂದು ಹೇಳಿದ್ದಾರೆ.

ಸೆಪ್ಟೆಂಬರ್ 3ರಂದು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮಂಡಳಿಯು ನಾಲ್ಕು ಹಂತಗಳ ಜಿಎಸ್‌ಟಿಯನ್ನು (ಶೇ 5, ಶೇ 12, ಶೇ 18 ಮತ್ತು ಶೇ 28) ಎರಡು ಹಂತಗಳಿಗೆ (ಶೇ 5 ಮತ್ತು ಶೇ 18) ಇಳಿಸಿದೆ. ಹೊಸ ತೆರಿಗೆ ದರವು ಸೆಪ್ಟೆಂಬರ್ 22ರಿಂದ ಜಾರಿಗೆ ಬರಲಿದೆ.

ದರ ಸಮರ ಇಲ್ಲ: ಬ್ರಿಟಾನಿಯಾ

ಬೆಂಗಳೂರು (ಪಿಟಿಐ): ಪ್ರಮುಖ ಎಫ್‌ಎಂಸಿಜಿ ಕಂಪನಿ ಬ್ರಿಟಾನಿಯಾ ಇಂಡಸ್ಟ್ರೀಸ್ ಲಿಮಿಟೆಡ್, ತಾನು ದರ ಸಮರಕ್ಕೆ ಇಳಿಯುವುದಿಲ್ಲ ಎಂದು ಭಾನುವಾರ ತಿಳಿಸಿದೆ.

ಸ್ಥಳೀಯ ಕಂಪನಿಗಳಿಂದ ಉಂಟಾಗಿರುವ ಸ್ಪರ್ಧೆಯನ್ನು ಎದುರಿಸಲು ಸ್ಥಳೀಯ ಮಾರುಕಟ್ಟೆಯ ಕಡೆ ಗಮನ ನೀಡಲಾಗುವುದು ಎಂದು ಕಂಪನಿಯ ಉಪಾಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ವರುಣ್ ಬೆರ್ರಿ ಹೇಳಿದ್ದಾರೆ.

ಕಂಪನಿಯು, ಗುಡ್ ಡೇ, ಮ್ಯಾರಿ ಗೋಲ್ಡ್ ಮತ್ತು ಟೈಗರ್ ಬಿಸ್ಕತ್ತುಗಳನ್ನು ತಯಾರಿಸುತ್ತದೆ. ಇವುಗಳ ಬೆಲೆಯನ್ನು ಹೆಚ್ಚಿಸುವು-ದಿಲ್ಲ. ಇದು ಬ್ರ್ಯಾಂಡ್ ಹೆಸರನ್ನು ಸದೃಢಗೊಳಿಸಲಿದೆ ಮತ್ತು ದೇಶದ ಎಲ್ಲೆಡೆ ವಿತರಣೆ ಜಾಲ ಹೊಂದುವ ಮೂಲಕ ಕಡಿಮೆ ಜನಸಂಖ್ಯೆ ಹೊಂದಿರುವ ಪ್ರದೇಶದಲ್ಲೂ ಉತ್ಪನ್ನ ದೊರೆಯುವಂತೆ ಮಾಡಲಾಗುವುದು ಎಂದು ತಿಳಿಸಿದೆ.

ಲಂಡನ್: 1.5 ಲಕ್ಷ ಜನ ಭಾಗಿ; ಹಲವರಿಗೆ ಗಾಯ

ವಲಸೆ ನೀತಿ ಖಂಡಿಸಿ ಪ್ರತಿಭಟನೆ

ಲಂಡನ್ (ಎಎಫ್‌ಪಿ): ವಲಸೆ ನೀತಿಯ ವಿರುದ್ಧ ಬಲಪಂಥೀಯ ನಾಯಕ ಟಾಮಿ ರಾಬಿನ್‌ಸನ್ ನೇತೃತ್ವದಲ್ಲಿ ಶನಿವಾರ ಲಂಡನ್‌ನಲ್ಲಿ ಬೃಹತ್ ಪ್ರತಿಭಟನೆ ನಡೆಯಿತು. ಸರ್ಕಾರವು ವಲಸೆ ನೀತಿಗಳನ್ನು ಕಠಿಣಗೊಳಿಸಬೇಕು ಎಂದು ಆಗ್ರಹಿಸಿ ಪ್ರತಿಭಟನಕಾರರು ‘ಯುನೈಟ್ ದಿ ಕಿಂಗ್‌ಡಮ್’ ಹೆಸರಿನಲ್ಲಿ ನಗರದ ಪ್ರಮುಖ ರಸ್ತೆಗಳಲ್ಲಿ ಬೃಹತ್ ಮೆರವಣಿಗೆ ನಡೆಸಿ, ಬ್ರಿಟಿಷ್ ಧ್ವಜಗಳನ್ನು ಪ್ರದರ್ಶಿಸಿದರು. ಉದ್ಯಮಿ ಎಲಾನ್ ಮಸ್ಕ್ ಕೂಡ ವಿಡಿಯೊ ಕರೆ ಮಾಡಿ ಪ್ರತಿ-ಭಟನಕಾರರಿಗೆ ಸಂದೇಶ ನೀಡಿದರು.

ಬ್ರಿಟನ್‌ನಲ್ಲಿ ನಡೆದ ಇದುವರೆಗಿನ ಬಲಪಂಥೀಯ ಪ್ರತಿಭಟನೆಯಲ್ಲಿ ಅತೀ ದೊಡ್ಡದಾಗಿದ್ದು, 1.50 ಲಕ್ಷ ಮಂದಿ ಭಾಗವಹಿಸಿದ್ದರು. ಈ ವೇಳೆ, ಪೊಲೀಸರ ಜೊತೆಗೆ ಸಂಘರ್ಷಕ್ಕಿಳಿದ 25 ಮಂದಿಯನ್ನು ಬಂಧಿಸಲಾಗಿದೆ. ಜನಸಂದಣಿಯನ್ನು ನಿಯಂತ್ರಿಸುವ ವೇಳೆ 26 ಮಂದಿ ಪೊಲೀಸ್ ಅಧಿಕಾರಿಗಳು ಗಾಯಗೊಂಡಿದ್ದು, ನಾಲ್ಕು ಮಂದಿ ತೀವ್ರವಾಗಿ ಗಾಯಗೊಂಡಿದ್ದಾರೆ.

ಅಂದಾಜಿನ ಪ್ರಕಾರ, 1.10 ಲಕ್ಷದಿಂದ 1.50 ಲಕ್ಷ ಮಂದಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರು ಎಂದು ಮೆಟ್ರೊಪಾಲಿಟನ್ ಪೊಲೀಸರು ತಿಳಿಸಿದ್ದಾರೆ. ಪೊಲೀಸರ ಅಂದಾಜಿಗಿಂತಲೂ ದೊಡ್ಡ ಸಂಖ್ಯೆಯಲ್ಲಿ ಜನರು ಸೇರಿದ್ದರು ಎಂದು ಆಯೋಜಕರು ತಿಳಿಸಿದ್ದಾರೆ. ರಾಬಿನ್‌ಸನ್ ಪ್ರತಿಭಟನೆಗೆ ಪ್ರತಿಯಾಗಿ ‘ಸ್ಟ್ಯಾಂಡ್ ಅಪ್ ಟು ರೇಸಿಸಂ’ ಹೆಸರಿನಲ್ಲಿ ನಡೆದ ಪ್ರತಿಭಟನೆಯಲ್ಲಿ 5 ಸಾವಿರ ಮಂದಿ ಭಾಗಿಯಾಗಿದ್ದರು. ರಾಬಿನ್‌ಸನ್ ಕಡೆಯವರು ಮತ್ತೊಂದು ಕಡೆಯಲ್ಲಿ ನಡೆಯುತ್ತಿದ್ದ ಪ್ರತಿಭಟನಕಾರರ ಮೇಲೆ ನುಗ್ಗಲು ಪ್ರಯತ್ನಿಸಿದ ವೇಳೆ ಹಿಂಸಾಚಾರ ಸಂಭವಿಸಿತು.

ಸ್ಥಳದಲ್ಲಿ 1 ಸಾವಿರ ಪೊಲೀಸರನ್ನು ನಿಯೋಜಿಸಿದರೂ, ಗುಂಪು ಚದುರಿಸಲು ಸಾಧ್ಯವಾಗಲಿಲ್ಲ. ಕೆಲವರು ಪೊಲೀಸರತ್ತ ಬಾಟಲಿ ತೂರಿ, ದೈಹಿಕ ಹಲ್ಲೆ ನಡೆಸಿದರು.

‘ಸಾಕಷ್ಟು ಮಂದಿ ಕಾನೂನು ಪ್ರಕಾರವೇ ಪ್ರತಿಭಟನೆ ದಾಖಲಿಸಲು ಬಂದಿದ್ದರು. ಕೆಲವರು ಉದ್ದೇಶಪೂರ್ವಕವಾಗಿ ಹಿಂಸಾಚಾರ ನಡೆಸಲು ಅಲ್ಲಿಗೆ ಬಂದಿದ್ದರು’ ಎಂದು ಲಂಡನ್ ಮೆಟ್ರೊಪಾಲಿಟನ್ ಪೊಲೀಸ್ ವಿಭಾಗದ ಸಹಾಯಕ ಆಯುಕ್ತ ಮ್ಯಾಟ್ ಟ್ವಿಸ್ಟ್ ತಿಳಿಸಿದ್ದಾರೆ.

ಹಿಂಸಾತ್ಮಕ ಕೃತ್ಯ, ಹಲ್ಲೆ ಹಾಗೂ ಇತರೆ ಅಪರಾಧ ಎಸಗಿದವರನ್ನು ಬಂಧಿಸಲಾಗಿದೆ. ಸಂಘರ್ಷದ ವೇಳೆ ಅಧಿಕಾರಿಗಳ ಮೇಲೆಯೂ ಹಲ್ಲೆ ನಡೆಸಲಾಗಿದೆ.

ಪೊಲೀಸ್ ಅಧಿಕಾರಿಗಳ ಮೇಲಿನ ಹಲ್ಲೆಯನ್ನು ತೀವ್ರವಾಗಿ ಖಂಡಿಸಿರುವ ಬ್ರಿಟನ್‌ನ ಆಂತರಿಕ ಸಚಿವ ಶಬಾನಾ ಮೊಹಮ್ಮದ್, ಕ್ರಿಮಿನಲ್ ಅಪರಾಧದಲ್ಲಿ ಭಾಗಿಯಾದವರನ್ನು ಕಾನೂನು ಪ್ರಕಾರ ಶಿಕ್ಷಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.



ವಲಸೆ ನೀತಿಯ ವಿರುದ್ಧ ಬಲಪಂಥೀಯ ನಾಯಕ ಟಾಮಿ ರಾಬಿನ್‌ಸನ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಭಾಗವಹಿಸಿದ ಪ್ರತಿಭಟನಕಾರರು ಬ್ರಿಟನ್ ಧ್ವಜಗಳನ್ನು ಪ್ರದರ್ಶಿಸುವ ಮೂಲಕ ತಮ್ಮ ಬೆಂಬಲ ವ್ಯಕ್ತಪಡಿಸಿದರು–ಎಎಫ್‌ಪಿ ಚಿತ್ರ


ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		ಮೈಸೂರು:	
100 ಕ್ಕೆ	₹575	100 ಕ್ಕೆ	₹575
12 ಕ್ಕೆ	₹80		

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹375-666
ದ್ವಿತಳಿ (ಬಿ.ವಿ)	₹500-815

ಕಾರು ಸಾಲ ರದ್ದುಪಡಿಸಲು ಬ್ಯಾಂಕ್‌ಗಳಿಗೆ ಗ್ರಾಹಕರ ಮೊರೆ!



ನವದೆಹಲಿ (ಪಿಟಿಐ): ಮಂಜೂರಾದ ಕಾರು ಸಾಲ ರದ್ದುಪಡಿಸುವಂತೆ ಕೋರಿ ಬ್ಯಾಂಕುಗಳಿಗೆ ಕೋರಿಕೆ ಬರುತ್ತಿದೆ! ಜಿಎಸ್‌ಟಿ ದರವನ್ನು ಪರಿಷ್ಕರಿಸುವ ತೀರ್ಮಾನವನ್ನು ಜಿಎಸ್‌ಟಿ ಮಂಡಳಿಯು ತೆಗೆದುಕೊಂಡಿರುವ ಕಾರಣಕ್ಕೆ, ಪರಿಷ್ಕೃತ ತೆರಿಗೆ ದರ ಜಾರಿಗೆ ಬಂದ ನಂತರವೇ ಕಾರು ಖರೀದಿಸಲು ಜನ ತೀರ್ಮಾನಿಸಿರುವಂತಿದೆ.

ಕಾರುಗಳ ಮೇಲಿನ ತೆರಿಗೆ ಪ್ರಮಾಣವು ಶೇ 28ರಷ್ಟು ಇರುವುದು ಪರಿಷ್ಕೃತ ಜಿಎಸ್‌ಟಿ ದರ ಸೆಪ್ಟೆಂಬರ್ 22ರಿಂದ ಜಾರಿಗೆ ಬಂದ ನಂತರದಲ್ಲಿ ಶೇ 18ಕ್ಕೆ ತಗ್ಗಲಿದೆ. ಇದು 1,200 ಸಿ.ಸಿ.ವರೆಗಿನ ಎಂಜಿನ್ ಸಾಮರ್ಥ್ಯದ ಕಾರುಗಳಿಗೆ ಅನ್ವಯ ಆಗುತ್ತದೆ.

ಕಾರು ಸಾಲ ಮಂಜೂರಾಗಿರುವ ಹಲವು ಗ್ರಾಹಕರು ತಮ್ಮ ಬ್ಯಾಂಕ್ ಶಾಖೆಗಳನ್ನು ಸಂಪರ್ಕಿಸು-ತ್ತಿದ್ದು, ಜಿಎಸ್‌ಟಿ ದರ ಪರಿಷ್ಕರಣೆ ಜಾರಿಗೆ ಬಂದ ನಂತರದಲ್ಲಿ ಕಾರು ಖರೀದಿ ಮಾಡುವುದಾಗಿ, ಈಗ ಮಂಜೂರಾಗಿರುವ ಸಾಲವನ್ನು ರದ್ದುಪ-ಡಿಸಬೇಕು ಎಂಬುದಾಗಿ ಹೇಳುತ್ತಿದ್ದಾರೆ.

ಜಿಎಸ್‌ಟಿ ದರ ಇಳಿಕೆಯ ನಂತರ ಸಿಗುವ ಪ್ರಯೋಜನವು, ಮಂಜೂರಾಗಿರುವ ಸಾಲವನ್ನು ರದ್ದು ಮಾಡಿಸಿಕೊಳ್ಳಲು ನೀಡಬೇಕಿರುವ ಶುಲ್ಕಕ್ಕಿಂತ ಹೆಚ್ಚಾಗಿರುವ ಕಾರಣಕ್ಕೆ ಗ್ರಾಹಕರು ಈ ಕೋರಿಕೆಯನ್ನು ಬ್ಯಾಂಕುಗಳ ಮುಂದೆ ಇರಿಸುತ್ತಿದ್ದಾರೆ ಎಂದು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಅಧಿಕಾರಿಯೊಬ್ಬರು ತಿಳಿಸಿದರು.

ಹಲವು ಬ್ಯಾಂಕುಗಳು ಮುಂಗಾರಿನ ಸಂದರ್ಭದಲ್ಲಿ ವಾಹನ ಸಾಲದ ಮೇಲಿನ ಕೆಲವು ಶುಲ್ಕಗಳನ್ನು ಮನ್ನಾ ಮಾಡಿವೆ.

ಕಾರು ಮಾರಾಟ ಮಾಡುವವರು ಇನ್ವಾಯ್ಸ್ ನೀಡಿ ಆಗಿದ್ದಲ್ಲಿ, ಹಳೆಯ ಜಿಎಸ್‌ಟಿ ದರವೇ ಅನ್ವಯ ಆಗುತ್ತದೆ ಎಂದು ಪರೋಕ್ಷ ತೆರಿಗೆಗಳು ಹಾಗೂ ಸುಂಕಗಳ ಕೇಂದ್ರೀಯ ಮಂಡಳಿಯ (ಸಿಬಿಐಸಿ) ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಾರು ಡೀಲರ್‌ಗಳು ಇನ್ವಾಯ್ಸ್ ನೀಡಿಲ್ಲದಿದ್ದರೆ ಗ್ರಾಹಕರು ಪರಿಷ್ಕೃತ ಜಿಎಸ್‌ಟಿ ದರದ ಪ್ರಯೋಜನ ಪಡೆಯಬಹುದು.

ರಷ್ಯಾದ ಪ್ರಮುಖ ತೈಲ ಘಟಕ ಸ್ಫೋಟ

ಮಾಸ್ಕೊ (ರಾಯಿಟರ್ಸ್/ಎಪಿ): ಉಕ್ರೇನ್‌ನ 361 ಡ್ರೋನ್‌ಗಳು ರಷ್ಯಾದ ಮೇಲೆ ದಾಳಿ ನಡೆಸಿದ್ದು, ಅಲ್ಲಿನ ಬೃಹತ್ ತೈಲ ಸಂಸ್ಕರಣಾ ಘಟಕವೊಂದು ಹೊತ್ತಿ ಉರಿದಿದೆ.

ರಷ್ಯಾದ ತೈಲ ಸಂಸ್ಕರಣಾ ಘಟಕದ ಮೇಲೆ ದಾಳಿ ನಡೆಸಿ-ರುವುದನ್ನು ದೃಢಪಡಿಸಿರುವ ಉಕ್ರೇನ್‌ನ ಡ್ರೋನ್ ಕಮಾಂಡ್, ‘ನಮ್ಮ ದಾಳಿ ಯಶಸ್ವಿಯಾಗಿದೆ’ ಎಂದು ಹೇಳಿದ್ದಾರೆ. ‘ಕಿರಿಷಿ ಪ್ರದೇಶದಲ್ಲಿ ಶನಿವಾರ ರಾತ್ರಿ ಮೂರು ಡ್ರೋನ್‌ಗಳನ್ನು ಹೊಡೆದುರುಳಿ-ಸಲಾಗಿದೆ. ಅವುಗಳ ಅವಶೇಷಗ-ಳಿಂದಾಗಿ ಬೆಂಕಿ ಹತ್ತಿದೆ. ಯಾರಿಗೂ ಗಾಯವಾಗಿಲ್ಲ’ ಎಂದು ಪ್ರಾದೇಶಿಕ ರಾಜ್ಯಪಾಲ ಅಲೆಕ್ಸಾಂಡರ್ ಡ್ರೊಜ್‌ಡೆಂಕೊ ಅವರು ಹೇಳಿದ್ದಾರೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form



ಚಿರಸ್ಮರಣೆ

ಶ್ರೀಮತಿ ಸುಂದರಮ್ಮ 15–09–2017

ಶ್ರೀ ಕೆ. ಚಿಕ್ಕಣ್ಣ 15–05–1982

ಇಂದ
ಸುಂದರ್ ಕುಮಾರ್ (ಬಿಳಿಯಣ್ಣ) ಮತ್ತು ಕುಟುಂಬ

ಯಾಂತ್ರಿಕ ಆನೆ ಕೊಡುಗೆ

ತ್ರಿಶ್ಶೂರ್ (ಕೇರಳ): ಕೇರಳದ ಪದ್ಮನಾಭಪುರಂನ ಮಹಾವಿಷ್ಣು ಕ್ಷೇರಮ್ ದೇವಾಲಯಕ್ಕೆ ಕ್ರಿಕೆಟಿಗ ಕೆ.ಎಲ್. ರಾಹುಲ್ ಮತ್ತು ‘ಪೆಟಾ ಇಂಡಿಯಾ’ (ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಅನಿಮಲ್ಸ್) ಯಾಂತ್ರಿಕ ಆನೆಯೊಂದನ್ನು ಕೊಡುಗೆಯಾಗಿ ನೀಡಿದ್ದಾರೆ.

ಆನೆಗೆ ಪದ್ಮನಾಭಪುರಂ ಪದ್ಮನಾಭನ್ ಎಂದು ಹೆಸರಿಡಲಾಗಿದೆ ಎಂದು ಪೆಟಾ ಇಂಡಿಯಾ ತಿಳಿಸಿದೆ. ಶ್ರೀ ಕೃಷ್ಣ ಜಯಂತಿಯಂದು, ಯಾಂತ್ರಿಕ ಆನೆಯನ್ನು ಸ್ವಾಮಿ ಹರಿ ನಾರಾಯಣನ್ ಟ್ರಸ್ಟ್ ಅಧ್ಯಕ್ಷರಾದ ಸಾಯಿ ಸಂಜೀವಿನಿ ಅವರು ಅನಾವರಣಗೊಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ ಕಂಪನಿಗಳಿಗೆ Work from Home ಕೆಲಸಕ್ಕೆ ಯುವಕರು, ಯುವತಿಯರು ಬೇಕಾಗಿದ್ದಾರೆ. 18000/- 25000/- 7th, 10th, AnyDegree. 9019427194

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ರಾಜಾಜಿನಗರ 2ನೇ ಬ್ಲಾಕ್, ಬೆಂಗಳೂರು-560010 ಮಂಜುನಾಥ ಸ್ವಾಮಿ ದೇವಾಲಯಕ್ಕೆ ತಕ್ಷಣವೇ ವೇದ ಮಂತ್ರ ಜ್ಞಾನವುಳ್ಳ ಪುರೋಹಿತರ ಅವಶ್ಯಕತೆ ಇದೆ. ಸಂಪರ್ಕಿಸಿ: 9742270000 | 9880006436

Immediate requirement of a priest with good Vedic mantra knowledge for Manjunatha Swamy Temple, Rajajinagar 2nd Block, Bangalore – 560010. Contact: 9742270000 | 9880006436

Marketing & Sales

WANTED A Operation Executive for a Transport Co. in Bengaluru. Send CV at sgupta@kalayatancargo.com

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel

ಭಾರತಪರಂಪರ ದರ್ಶನ: 16.9.2025 5ದಿನ ಅಹೋಬಿಲಂ ಶ್ರೀಶೈಲ ಮಂತ್ರಾಲಯ. 4.11.2025 8ದಿನ ಚಿತ್ರಕೂಟ, ನೈಮಿಷಾರಣ್ಯ,ಸಹಿತ ಕಾಶಿಯಾತ್ರೆ. ಪ್ರಕಾಶ್ ಹೆಬ್ಬಾರ್ 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವಿಧ್ವಂಸಕ ಕೃತ್ಯಗಳಲ್ಲಿ ಭಾಗಿಯಾದವರ ವಿರುದ್ಧ ಕ್ರಮ: ಪ್ರಧಾನಿ ಸುಶೀಲಾ ಕಾರ್ಕಿ

‘ನೇಪಾಳ: ಹಿಂಸಾಚಾರ ಪೂರ್ವಯೋಜಿತ’

ಕಠ್ಮಂಡು (ಎಎಫ್‌ಪಿ): ನೇಪಾಳದಲ್ಲಿ ನಡೆದ 'ಜೆನ್‌–ಝಿ' ಹೋರಾಟದ ವೇಳೆ ಹಿಂಸಾಚಾರ ಕೃತ್ಯಗಳಲ್ಲಿ ಭಾಗಿಯಾದವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳುವುದಾಗಿ ನೂತನ ಪ್ರಧಾನಿ ಸುಶೀಲಾ ಕಾರ್ಕಿ ಅವರು ಭಾನುವಾರ ಘೋಷಿಸಿದ್ದಾರೆ.

ಸಿಂಘ ದರ್ಬಾರ್ ಸಂಕೀರ್ಣದಲ್ಲಿರುವ ನೂತನ ಗೃಹ ಕಚೇರಿಯಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ ಮಾತನಾಡಿದ ಅವರು, ‘ಸೆಪ್ಟೆಂಬರ್ 9ರಂದು ನಡೆದ ಹಿಂಸಾಚಾರವು ಪೂರ್ವ ಯೋಜಿತವಾಗಿದ್ದು, ವ್ಯವಸ್ಥಿತವಾಗಿ ಕೈಗೊಳ್ಳಲಾಗಿದೆ. ಜೆನ್‌–ಝಿ ಪ್ರತಿಭಟನಕಾರರು ಹಿಂಸಾಚಾರದ ಕೃತ್ಯಗಳಲ್ಲಿ ಭಾಗಿಯಾಗಿಲ್ಲ. ಹಿಂಸಾಚಾರಕ್ಕೆ ಕಾರಣವಾದವರಿಗೆ ಶಿಕ್ಷೆಯಾಗಬೇಕು’ ಎಂದೂ ಪ್ರತಿಪಾದಿಸಿದ್ದಾರೆ.

ಕಾರ್ಯದರ್ಶಿಗಳು, ಸರ್ಕಾರಿ ಹಿರಿಯ ಅಧಿಕಾರಿಗಳ ಜತೆಗೆ ಸಭೆ ನಡೆಸಿದ ಅವರು, ‘ಹಿಂಸಾಚಾರದಲ್ಲಿ ಪಾಲ್ಗೊಂಡು ಸಾರ್ವಜನಿಕ ಹಾಗೂ ಖಾಸಗಿ ಆಸ್ತಿಗಳಿಗೆ ನಷ್ಟ ಉಂಟು ಮಾಡಿದವರ ವಿರುದ್ಧ ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ.

ಹುತಾತ್ಮರ ಗೌರವ: ಅಧಿಕಾರಿಗಳ ಜತೆಗಿನ ಸಭೆಗೂ ಮುನ್ನ ಪ್ರಧಾನಿ ಕಾರ್ಕಿ ಅವರು ಜೆನ್‌–ಝಿ ಪ್ರತಿಭಟನೆ ವೇಳೆ ಮೃತಪಟ್ಟ ಹೋರಾಟಗಾರರ ಸಾವಿಗೆ ಸಂತಾಪ ಸೂಚಿಸಿದರು. ಇದೇ ವೇಳೆ ಮೃತರನ್ನು ಹುತಾತ್ಮರೆಂದು ಪರಿಗಣಿಸಲಾಗುವುದು ಎಂದು ಘೋಷಿಸಿದ್ದಾರೆ. ಅಲ್ಲದೇ, ಹುತಾತ್ಮರಿಗೆ 10 ಲಕ್ಷ ನೇಪಾಳಿ ರೂಪಾಯಿ (₹6.25 ಲಕ್ಷ) ಪರಿಹಾರ ನೀಡುವುದಾಗಿಯೂ ಹೇಳಿದ್ದಾರೆ.



ನೇಪಾಳದ ನೂತನ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಂಡ ಸುಶೀಲಾ ಕಾರ್ಕಿ ಅವರನ್ನು ಅಧಿಕಾರಿಗಳು ಸ್ವಾಗತಿಸಿದರು –ಪಿಟಿಐ ಚಿತ್ರ

‘6 ತಿಂಗಳ ಬಳಿಕ ಅಧಿಕಾರದಲ್ಲಿ ಇರುವುದಿಲ್ಲ’

ಪ್ರತಿಭಟನಕಾರರ ಬೇಡಿಕೆಯಂತೆ ದೇಶದಲ್ಲಿ ಭ್ರಷ್ಟಾಚಾರವನ್ನು ಕೊನೆಗೊಳಿಸುವುದಾಗಿ ಕಾರ್ಕಿ ಶಪಥ ಮಾಡಿದ್ದಾರೆ.

ದೇಶವನ್ನುದ್ದೇಶಿಸಿ ಭಾನುವಾರ ಮಾತನಾಡಿದ ಅವರು, ‘ಇಂದು ಯಾವ ಪದವಿಯಲ್ಲಿ ನಾನಿದ್ದೇನೋ, ಇದನ್ನು ಎಂದಿಗೂ ನಾನು ಬಯಸಿರಲಿಲ್ಲ. ಬೀದಿಗಿಳಿದು ಹೋರಾಡಿದ ಜನರಿಂದ ಈ ಪದವಿ ಸಿಕ್ಕಿದೆ. ಭ್ರಷ್ಟಾಚಾರ ನಿರ್ಮೂಲನೆ, ಉತ್ತಮ ಆಡಳಿತ ಹಾಗೂ ಆರ್ಥಿಕ ಸಮಾನತೆಯು ಜೆನ್‌–ಝಿ ಸಮೂಹದ ಬೇಡಿಕೆಯಾಗಿದೆ. ಈ ಬೇಡಿಕೆಗಳಿಗೆ ಅನುಸಾರವಾಗಿ ನಾವು ಕೆಲಸ ಮಾಡಲಿದ್ದೇವೆ’ ಎಂದು ವಾಗ್ದಾನ ನೀಡಿದ್ದಾರೆ.

ಅಲ್ಲದೇ, ‘ಎಂಥದ್ದೇ ಸನ್ನಿವೇಶವಿದ್ದರೂ 6 ತಿಂಗಳ ಬಳಿಕ ನಾವು ಅಧಿಕಾರದಲ್ಲಿ ಇರುವುದಿಲ್ಲ. ಈ 6 ತಿಂಗಳ ಒಳಗೇ ನಮ್ಮ ಜವಾಬ್ದಾರಿಗಳನ್ನು ಪೂರ್ಣಗೊಳಿಸಿ ಮುಂದಿನ ಸಂಸತ್ತು ಮತ್ತು ಸಚಿವರಿಗೆ ಅಧಿಕಾರ ಹಸ್ತಾಂತರಿಸಲು ಬದ್ಧರಾಗಿದ್ದೇವೆ’ ಎಂದೂ ಹೇಳಿದ್ದಾರೆ.

ಮೃತರ ಸಂಖ್ಯೆ 72ಕ್ಕೆ ಏರಿಕೆ

ನೇಪಾಳದಲ್ಲಿ ನಡೆದ ಜೆನ್‌–ಝಿ ಪ್ರತಿಭಟನೆ ವೇಳೆ ಮೃತಪಟ್ಟವರ ಸಂಖ್ಯೆ 72ಕ್ಕೆ ತಲುಪಿದೆ ಎಂದು ಆರೋಗ್ಯ ಸಚಿವಾಲಯ ಮಾಹಿತಿ ನೀಡಿದೆ. ಪ್ರತಿಭಟನೆ ವೇಳೆ ಬೆಂಕಿಗೆ ಆಹುತಿಯಾದ ಕಟ್ಟಡಗಳು, ಮಾಲ್, ಮನೆಗಳ ಅವಶೇಷಗಳ ಅಡಿಯಲ್ಲಿ ಶೋಧ ಕಾರ್ಯ ನಡೆಸಿ, ಮೃತದೇಹ ಗಳನ್ನು ಹೊರತೆಗೆಯಲಾದ ಪರಿಣಾಮ ಮೃತರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ ಎಂದು ಸಚಿವಾಲಯದ ವಕ್ತಾರ ಪ್ರಕಾಶ್ ಬುಡಥೋಕಿ ಹೇಳಿದ್ದಾರೆ.

ತಪ್ಪಿಸಿಕೊಂಡಿದ್ದ 3,700 ಕೈದಿಗಳ ಬಂಧನ

ಕಠ್ಮಂಡು (ಪಿಟಿಐ): ಸರ್ಕಾರದ ವಿರುದ್ಧ ನೇಪಾಳದಲ್ಲಿ ನಡೆದ ಹಿಂಸಾತ್ಮಕ ಪ್ರತಿಭಟನೆ ವೇಳೆ ವಿವಿಧ ಜೈಲುಗಳಿಂದ ತಪ್ಪಿಸಿ-ಕೊಂಡಿದ್ದ 3,700 ಕೈದಿಗಳನ್ನು ಮತ್ತೆ ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಕೆಲವು ಕೈದಿಗಳು ಸ್ವಯಂ ತಾವೇ ಪೊಲೀಸರಿಗೆ ಶರಣಾಗಿದ್ದಾರೆ. ಭಾರತಕ್ಕೆ ಪರಾರಿಯಾಗುತ್ತಿದ್ದ ಕೈದಿಗಳನ್ನು ಬಂಧಿಸಲು ಭಾರತೀಯ ಪೊಲೀಸರು ಸಹಾಯ ಮಾಡಿದ್ದಾರೆ ಎಂದು ತಿಳಿಸಿದ್ದಾರೆ.

ಆದರೆ, 10,320 ಕೈದಿಗಳು ಇನ್ನೂ ತಲೆಮರೆಸಿಕೊಂಡಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕು. ತಪ್ಪಿಸಿಕೊಂಡಿರುವ ಕೈದಿಗಳನ್ನು ಬಂಧಿಸಲು ನೇಪಾಳ ಸೇನೆ, ಪೊಲೀಸ್, ಸಶಸ್ತ್ರ ಪಡೆ ಕಾರ್ಯಾಚರಣೆ ಮುಂದುವರಿಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ಹೊಸ ಅವತಾರದಲ್ಲಿ ಮತ್ತೆ ಬಂದ ಅಮೂಲ್ಯ

'ಚೆಲುವಿನ ಚಿತ್ತಾರದ' ಐಖುವಾಗಿ ಜನಪ್ರಿಯವಾದ ನಟಿ ಅಮೂಲ್ಯ ಎಂಟು ವರ್ಷಗಳ ವಿರಾಮದ ಬಳಿಕ ಮತ್ತೆ ಚಿತ್ರರಂಗಕ್ಕೆ ಮರಳಿದ್ದಾರೆ. ಹೊಸ ಸಿನಿಮಾ, ಪಾತ್ರ, ಭವಿಷ್ಯದ ಕನಸುಗಳ ಕುರಿತು ಅವರು ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

ಬಾಲನಟಿಯಾಗಿ ಚಿತ್ರರಂಗ ಪ್ರವೇಶಿಸಿದವರು ಅಮೂಲ್ಯ. ಇವರು ಮೊದಲು ನಾಯಕಿಯಾಗಿ ಕಾಣಿಸಿಕೊಂಡ 'ಚೆಲುವಿನ ಚಿತ್ತಾರ' ಚಿತ್ರ ಸೂಪರ್ ಹಿಟ್. ಆಗ ಅವರಿಗೆ ಕೇವಲ ಹದಿಮೂರು ವರ್ಷ. ಈ ಕಾರಣಕ್ಕಾಗಿ ಚಿತ್ರ ಒಂದಷ್ಟು ಚರ್ಚೆಗೆ ಒಳಗಾಯಿತು. ಚಿಕ್ಕ ಮಕ್ಕಳಿಗೆ ತಪ್ಪು ಸಂದೇಶ ನೀಡುವ ಚಿತ್ರವೆಂದು ನಿರ್ದೇಶಕ ಎಸ್.ನಾರಾಯಣ್ ಹಲವರ ಟೀಕೆಗೂ ಗುರಿಯಾದರು. ಆದರೆ ಅಮೂಲ್ಯ ಮಾತ್ರ ಈ ಚಿತ್ರದಲ್ಲಿ ತಮ್ಮ ಮುಗ್ಧ ನಟನೆಯಿಂದ ಜನಪ್ರಿಯರಾದರು. ಅದಾದ ಬಳಿಕ 'ಮಳೆಯಲಿ ಜೊತೆಯಲಿ', 'ಗಜಕೇಸರಿ' ಸೇರಿದಂತೆ ಸಾಲು ಸಾಲು ಸಿನಿಮಾಗಳಲ್ಲಿ ನಾಯಕಿಯಾಗಿ ಕಾಣಿಸಿಕೊಂಡರು. ಯಶಸ್ಸು ಉತ್ತುಂಗದಲ್ಲಿದ್ದಾಗಲೇ ಮದುವೆಯಾಗಿ ಚಿತ್ರರಂಗದಿಂದ ದೂರ ಉಳಿದರು. ಗಣೇಶ್ ನಟನೆಯ 'ಮುಗುಳು ನಗೆ' ಇವರು ತೆರೆಯಲ್ಲಿ ಕಾಣಿಸಿಕೊಂಡ ಕೊನೆಯ ಚಿತ್ರ.

ಇದೀಗ ಮಂಜು ಸ್ವರಾಜ್ ನಿರ್ದೇಶನದ 'ಪೀಕಬೂ' ಚಿತ್ರದೊಂದಿಗೆ 'ಚೆಲುವಿನ ಚಿತ್ತಾರ'ದ ಚೆಲುವೆ ಮತ್ತೆ ಚಿತ್ರರಂಗದತ್ತ ಮುಖ ಮಾಡಿದ್ದಾರೆ. 'ಪಾತ್ರಕ್ಕೆ ಇನ್ನೂ ಹೆಸರು ಅಂತಿಮವಾಗಿಲ್ಲ. ಹಾಸ್ಯದ ಜತೆಗೆ ಭಾವನಾತ್ಮಕ ಪಾತ್ರ. ಅಕ್ಟೋಬರ್ 2ರಿಂದ ಚಿತ್ರೀಕರಣ ಪ್ರಾರಂಭವಾಗಲಿದೆ. ಶೀಘ್ರದಲ್ಲಿಯೇ ಚಿತ್ರದ ನಾಯಕ ಮತ್ತಿತರ ವಿವರಗಳನ್ನು ಚಿತ್ರತಂಡ ನೀಡಲಿದೆ. ಜನಪ್ರಿಯ ನಟಿಯರು ವಿರಾಮದ ಬಳಿಕ ಮಹಿಳಾ ಪ್ರಧಾನ ಚಿತ್ರಗಳೊಂದಿಗೆ ಮರಳುತ್ತಾರೆ ಎಂಬ ಭಾವನೆಯಿದೆ. ಆದರೆ ಇದು ನಾಯಕನಿಗೂ ಪ್ರಾಶಸ್ತ್ಯ ಇರುವ ಕಮರ್ಷಿಯಲ್ ಕಥೆ. ನನ್ನ ಪಾತ್ರಕ್ಕೂ ಅಷ್ಟೇ ಪ್ರಾಶಸ್ತ್ಯವಿದೆ' ಎಂದು ಮಾತು ಪ್ರಾರಂಭಿಸಿದರು ಅಮೂಲ್ಯ.

ಮಂಜು ಸ್ವರಾಜ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶಿಸುತ್ತಿದ್ದಾರೆ. ಗಣೇಶ್ ಕೆಂಚಾಂಬಾ ಬಂಡವಾಳ ಹೂಡುತ್ತಿರುವ ಈ ಚಿತ್ರದ ಟೈಟಲ್ ಟೀಸರ್ ಹಾಗೂ ಫಸ್ಟ್‌ಲುಕ್ ಪೋಸ್ಟರ್ ಬಿಡುಗಡೆಗೊಂಡಿವೆ. ಅಮೂಲ್ಯ ಹಾಸ್ಯಭರಿತ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ ಎಂಬುದು ಮೇಲ್ನೋಟಕ್ಕೆ ತಿಳಿಯುತ್ತಿದೆ. ವೀರ್ ಸಮರ್ಥ್ ಮತ್ತು ಶ್ರೀಧರ್ ಸಂಗೀತ, ಸುರೇಶ್ ಬಾಬು ಬಿ. ಛಾಯಾಚಿತ್ರಗ್ರಹಣ, ಎನ್.ಎಂ. ವಿಶ್ವ ಸಂಕಲನ ಈ ಚಿತ್ರಕ್ಕಿದೆ. ಮಂಜು ಸ್ವರಾಜ್ ಈ ಹಿಂದೆ 'ಶ್ರಾವಣಿ ಸುಬ್ರಮಣ್ಯ' ಚಿತ್ರ ನಿರ್ದೇಶಿಸಿದ್ದರು. 'ಪೀಕಬೂ' ಎಂಬುದು ಗಿಬರೀಶ್ ಭಾಷೆ. ಅಚ್ಚರಿ ಎಂಬ ಅರ್ಥ ನೀಡುತ್ತದೆ ಎಂದಿದೆ ಚಿತ್ರತಂಡ.

'ಚಿಕ್ಕ ವಯಸ್ಸಿನಲ್ಲಿಯೇ ನಟನೆಗೆ ಬಂದೆ. ಅಮ್ಮ, ಚಿತ್ರೀಕರಣ ಇಷ್ಟೇ ಪ್ರಪಂಚವಾಗಿತ್ತು. ಕಾಲೇಜು ಜೀವನವನ್ನು ಅಷ್ಟೇನು ಆನಂದಿಸಲಿಲ್ಲ. ಒಂಟಿಯಾಗಿ ತರಕಾರಿ ತರಲು ಹೋದವಳಲ್ಲ. ಹೀಗಾಗಿ ಮದುವೆ ಬಳಿಕ ನಟನೆಯಿಂದ ವಿರಾಮ ತೆಗೆದುಕೊಂಡು ಕುಟುಂಬಕ್ಕೆ ಸಮಯ ನೀಡಬೇಕು, ಪ್ರಪಂಚ ಜ್ಞಾನ ಪಡೆಯಬೇಕು ಎಂದು ಮೊದಲೆ ನಿರ್ಧರಿಸಿದ್ದೆ. ಜನಪ್ರಿಯತೆ ಉತ್ತುಂಗದಲ್ಲಿದ್ದಾಗಲೆ ನಟನೆಯಿಂದ ದೂರ ಸರಿದೆ. ಹಾಗಂತ ಪೂರ್ತಿ ನಟನೆಯಿಂದ ವಿಮುಖಳಾಗಬೇಕು ಎಂದುಕೊಂಡಿರಲಿಲ್ಲ. ಮದುವೆ ಬಳಿಕ ತುಂಬ ಅವಕಾಶಗಳು ಬಂದವು, ಸಾಕಷ್ಟು ಸಿನಿಮಾಗಳನ್ನು ತಿರಸ್ಕರಿಸಿದೆ ಎಂಬಂತೇನೂ ಇರಲಿಲ್ಲ. ಅವಕಾಶಗಳು ಬಂದಿದ್ದು ಅಷ್ಟರಲ್ಲೇ ಇತ್ತು. ಬರುತ್ತಿದ್ದ ಅವಕಾಶಗಳಲ್ಲಿ ಕಥೆ ಇಷ್ಟವಾಗುತ್ತಿರಲಿಲ್ಲ. ಹಾಸ್ಯದ ಜತೆಗೆ ಒಂದು ಗಂಭೀರ ಪಾತ್ರವನ್ನು ಎದುರು ನೋಡುತ್ತಿದ್ದೆ. 'ಪೀಕಬೂ' ಚಿತ್ರದಲ್ಲಿ ಆ ಅಂಶಗಳು ಇವೆ ಎನ್ನಿಸಿತು' ಎಂದರು.

'ನಟನೆಯಿಂದ ವಿರಾಮ ತೆಗೆದುಕೊಂಡ ಅವಧಿಯಲ್ಲಿ ಕುಟುಂಬ, ಮಕ್ಕಳಿಗೆ ಶೇಕಡ 100ರಷ್ಟು ಸಮಯ ನೀಡಿದ್ದೇನೆ. ನಟನೆಗೆ ಮರಳಿದರೆ ಅಲ್ಲಿಯೂ ಪೂರ್ತಿ ಸಮಯ ನೀಡಬೇಕು ಅಂದುಕೊಂಡಿದ್ದೆ. ಏನೂ ಅಂದುಕೊಂಡು ನಟನೆಗೆ ಬಂದಿದ್ದಲ್ಲ. ಈಗಲೂ ಹಾಗೆ. ಇದಾದ ಬಳಿಕ ಮತ್ತೇನೋ ಮಾಡುತ್ತೇನೆ, ಇಲ್ಲಿಯೇ ಮುಂದುವರಿಯುತ್ತೇನೆ ಎಂದುಕೊಂಡು ಬಂದಿಲ್ಲ. ಸಮಯದ ಜೊತೆಗೆ ಸಾಗುವವಳು' ಎಂದು ಮಾತಿಗೆ ವಿರಾಮವಿತ್ತರು.


ಅಮೂಲ್ಯ

ಕಾಂತಾರಕ್ಕೆ ದಿಲ್ಜಿತ್ ದೋಸಾಂಜ್ ಧ್ವನಿ


ದಿಲ್ಜಿತ್ ಜತೆ ಚಿತ್ರತಂಡ

ಬಹು ನಿರೀಕ್ಷಿತ 'ಕಾಂತಾರ– ಅಧ್ಯಾಯ 1' ಚಿತ್ರದ ಬಿಡುಗಡೆಗೆ ದಿನಗಣನೆ ಪ್ರಾರಂಭವಾಗಿದೆ. ಅದರ ನಡುವೆ ತಂಡದಿಂದ ಹೊಸ ಅಪ್‌ಡೇಟ್‌ಗಳು ಸಿಗುತ್ತಿವೆ. 'ಕಾಂತಾರ– ಅಧ್ಯಾಯ 1' ದೈವದ ಮೂಲವನ್ನು ಹುಡುಕಿಕೊಂಡು ಹೋಗುವ ಕಥೆಯೆಂದು ಚಿತ್ರ ಸೆಟ್ಟೇರಿದಾಗಲೇ ಬರೆದಿದ್ದೆವು. ಚಿತ್ರ ಬಿಡುಗಡೆ ಸಿದ್ಧತೆಯಲ್ಲಿರುವ ಚಿತ್ರತಂಡ ಚಿತ್ರದ ಕಥಾಸಾರವನ್ನು ಬಹಿರಂಗಪಡಿಸಿದೆ. ಇನ್ನೊಂದೆಡೆ ಪಂಜಾಬ್‌ನ ಹೆಸರಾಂತ ಗಾಯಕ ದಿಲ್ಜಿತ್ ದೋಸಾಂಜ್ 'ಕಾಂತಾರ– ಅಧ್ಯಾಯ 1' ಚಿತ್ರದ ಹಾಡಿಗೆ ಧ್ವನಿಯಾಗಿದ್ದಾರೆ.

ಇತ್ತೀಚೆಗಷ್ಟೇ ನಟ ರಿಷಬ್ ಶೆಟ್ಟಿ, ಸಂಗೀತ ನಿರ್ದೇಶಕ ಅಜನೀಶ್ ಲೋಕನಾಥ್ ದಿಲ್ಜಿತ್ ದೋಸಾಂಜ್ ಭೇಟಿ ಚಿತ್ರವನ್ನು ತಮ್ಮ ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದರು. ದಿಲ್ಜಿತ್ ದೋಸಾಂಜ್ ಚಿತ್ರದ ಮ್ಯೂಸಿಕ್ ಆಲ್ಬಂಗಾಗಿ ಹಾಡಿದ್ದಾರೆ. ಹಾಡಿನ ರೆಕಾರ್ಡಿಂಗ್ ಇತ್ತೀಚೆಗಷ್ಟೇ ನಡೆದಿದೆ.

ಹೊಂಬಾಳೆ ಫಿಲ್ಮ್ಸ್ ನಿರ್ಮಾಣದ ಚಿತ್ರ ಅ.2ರಂದು ತೆರೆ ಕಾಣಲಿದೆ. ಈಗಾಗಲೇ ವಿದೇಶಗಳಲ್ಲಿ ಟಿಕೆಟ್ ಕಾಯ್ದಿರಿಸುವಿಕೆ ಪ್ರಾರಂಭಗೊಂಡಿದ್ದು, ಅಲ್ಲಿನ ಪ್ರೇಕ್ಷಕರಿಗೆ ಕಥೆಯ ತಿರುಳನ್ನು ಚಿತ್ರ ತಂಡ ಬಿಟ್ಟುಕೊಟ್ಟಿದೆ. 'ಬನವಾಸಿಯ ಕದಂಬರೊಂದಿಗೆ ತುಳುನಾಡಿನ ದೈವದ ಕಥೆ ಪ್ರಾರಂಭವಾಗುತ್ತದೆ. ನಾಗಾ ಸಾಧುವಾಗಿ, ಸೈನಿಕನಾಗಿ ಮನುಷ್ಯ ಮತ್ತು ದೈವದ ನಡುವೆ ಸಂಪರ್ಕ ಬೆಸೆಯುವ ಪಾತ್ರದಲ್ಲಿ ರಿಷಬ್ ಶೆಟ್ಟಿ ಕಾಣಿಸಿಕೊಂಡಿದ್ದಾರೆ' ಎಂದಿದೆ ಚಿತ್ರತಂಡ.

'ಬ್ಲಡ್ ರೋಸಸ್' ಟೀಸರ್


ಧರ್ಮ ಕೀರ್ತಿರಾಜ್

ಸ್ಯಾಂಡಲ್‌ವುಡ್ ನಟ ಧರ್ಮ ಕೀರ್ತಿರಾಜ್ ತೆಲುಗಿನಲ್ಲಿಯೂ ಸಕ್ರಿಯರಾಗಿದ್ದಾರೆ. ಅವರ ನಟನೆಯ 'ಬ್ಲಡ್ ರೋಸಸ್' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಎಂ.ಗುರುರಾಜನ್ ನಿರ್ದೇಶನದ ಚಿತ್ರ ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ನಿರ್ಮಾಣಗೊಂಡಿದೆ.

'ಸಮಾಜದಲ್ಲಿ ನಡೆದಿರುವ ಹಾಗೂ ಪ್ರಸಕ್ತ ನಡೆಯುತ್ತಿರುವ ಒಂದಷ್ಟು ನೈಜ ಅಂಶಗಳನ್ನು ಹೊಂದಿರುವ ಚಿತ್ರಕಥೆ. ಕ್ರೈಂ, ಥ್ರಿಲ್ಲರ್ ಹಾಗೂ ಆ್ಯಕ್ಷನ್ ಜಾನರ್‌ನ ಚಿತ್ರವಿದು' ಎಂದಿದೆ ಚಿತ್ರತಂಡ.

ಅಪ್ಸರ ರಾಣಿ ನಾಯಕಿ. ಪೆದ್ದಪಲ್ಲಿ ರೋಹಿತ್ ಸಂಗೀತ, ಬೋಗಿರೆಡ್ಡಿ ಶಿವಕುಮಾರ್ ಛಾಯಾಗ್ರಹಣ ಚಿತ್ರಕ್ಕಿದೆ.

ಕಾದಂಬರಿ ಆಧಾರಿತ 'ಸುಳಿ'


ಚೈತ್ರಾ

ಮಹಿಳಾ ಪ್ರಧಾನ ಕಥೆಯನ್ನು ಹೊಂದಿರುವ 'ಸುಳಿ' ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಇತ್ತೀಚೆಗಷ್ಟೇ ಬಿಡುಗಡೆಗೊಂಡಿವೆ. 1970ರ ದಶಕದಲ್ಲಿ ಪ್ರಕಟವಾದ ತಮಿಳಿನ ಚಿನ್ನಪ್ಪ ಭಾರತಿ ಅವರ 'ಪವಳಾಯಿ' ಕಾದಂಬರಿ ಆಧಾರಿತ ಕಥೆ ಹೊಂದಿರುವ ಚಿತ್ರಕ್ಕೆ ಸಾಯಿರಶ್ಮಿ ಆ್ಯಕ್ಷನ್-ಕಟ್ ಹೇಳಿದ್ದಾರೆ. ಸಹಸ್ರಕೋಟಿ ಮೂವಿ ಎಂಟರ್‌ಟೈನ್ಮೆಂಟ್ ಬ್ಯಾನರಿನಲ್ಲಿ ಬೆಟ್ಟಸ್ವಾಮಿ ಗೌಡ ಬಂಡವಾಳ ಹೂಡಿ ನಿರ್ಮಿಸಿದ್ದಾರೆ.

'ಇದೊಂದು ಸಾಮಾಜಿಕ ಕಥಾಹಂದರದ ಸಿನಿಮಾ. 1980ರ ಕಾಲಘಟ್ಟದಲ್ಲಿ ಕಥೆ ನಡೆಯುತ್ತದೆ. 'ಸಾಕ್ಷಾತ್ಕಾರ' ಸಿನಿಮಾದಲ್ಲಿ ಅಣ್ಣಾವ್ರ ಪಾತ್ರದ ಮಾನವೀಯ ಮೌಲ್ಯ ಮತ್ತು ಪ್ರೀತಿಯ ಆಳದ ಬಗ್ಗೆ ಹೇಳುತ್ತಾ ನಮ್ಮ ಚಿತ್ರವು ತನ್ನ ಕಥೆಯೊಳಗೆ ನೋಡುಗರನ್ನು ಸೆಳೆದುಕೊಳ್ಳುತ್ತದೆ. ಹೆಣ್ಣಿನ ಅಂತರಂಗದ ಭಾವನೆಗಳು, ಸಾಮಾಜಿಕ ಮೌಲ್ಯಗಳು ಎಲ್ಲವನ್ನೂ ತೆರೆಮೇಲೆ ತರುವ ಪ್ರಯತ್ನ ಮಾಡಿದ್ದೇವೆ. ಮಂಡ್ಯದ ಗ್ರಾಮೀಣ ಪರಿಸರದಲ್ಲಿ ನಡೆಯುವ ಕಥೆಯಿದು' ಎಂದರು ನಿರ್ದೇಶಕಿ.

ಯುವನಟ ಸನತ್, ಚೈತ್ರಾ ಸಾಕೇಲ್, ಸಂಜನಾ ನಾಯ್ಡು, ಶಿವಕುಮಾರ್ ಆರಾಧ್ಯ, ಸೌಭಾಗ್ಯ, ಸಿದ್ಧು ಮಂಡ್ಯ, ಶಂಕರ ನಾರಾಯಣ, ಬೆಟ್ಟಸ್ವಾಮಿ ಗೌಡ ಮುಂತಾದವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ.

ಆಲಭುಜನಹಳ್ಳಿ, ನಗರಕೆರೆ, ಮಾಲಗಾರನಹಳ್ಳಿ, ಕೆ.ಎಂ. ದೊಡ್ಡಿ, ಮದ್ದೂರು ಮುಂತಾದೆಡೆ ಚಿತ್ರೀಕರಣಗೊಂಡಿದೆ. ಚಿತ್ರದ ಹಾಡುಗಳಿಗೆ ಎನ್.ರಾಜು ಸಂಗೀತ ಸಂಯೋಜಿಸಿದ್ದಾರೆ. ಅಕ್ಟೋಬರ್ ಅಂತ್ಯದೊಳಗೆ ಚಿತ್ರ ತೆರೆಗೆ ಬರಲಿದೆ.

ಚಿಟಿಕೆ ಸುದ್ದಿ

ಮಧ್ಯಂತರ ಆದೇಶ ಇಂದು ಪ್ರಕಟ

ನವದೆಹಲಿ (ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆ–2025ರ ಮೂರು ಪ್ರಮುಖ ವಿಚಾರಗಳ ಸಿಂಧುತ್ವ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಗಳ ವಾದ ಆಲಿಸಿದ್ದ ಸುಪ್ರೀಂ ಕೋರ್ಟ್ ಸೋಮವಾರ ಮಧ್ಯಂತರ ಆದೇಶ ಪ್ರಕಟಿಸಲಿದೆ. ಮೇ 22ರಂದು ಎರಡೂ ಕಡೆಗಳ ವಾದ ಆಲಿಸಿದ್ದ ಸಿಜೆಐ ಬಿ.ಆರ್. ಗವಾಯಿ ನೇತೃತ್ವದ ನ್ಯಾಯಪೀಠವು ಮಧ್ಯಂತರ ಆದೇಶವನ್ನು ಕಾಯ್ದಿರಿಸಿತ್ತು. ಈ ಕುರಿತು ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ. ವಕ್ಫ್ (ತಿದ್ದುಪಡಿ) ಕಾಯ್ದೆ 2025ರಲ್ಲಿ ಸೂಚಿಸಿರುವಂತೆ 'ಕಾನೂನು ಮೂಲಕ, ಬಳಕೆ ಮೂಲಕ ಮತ್ತು ದಾಖಲೆಪತ್ರ ಮೂಲಕ ವಕ್ಫ್' ಎಂದು ಘೋಷಿಸಿರುವ ಜಮೀನಿನ ಡಿನೋಟಿಫಿಕೇಶನ್ ಅಧಿಕಾರ ಯಾರದ್ದು ಎಂಬುದೂ ಇತ್ಯರ್ಥವಾಗಲಿದೆ.

'ಭಾರತ ನಮ್ಮ ಜೋಳ ಖರೀದಿಸುತ್ತಿಲ್ಲ'

ನ್ಯೂಯಾರ್ಕ್ (ಪಿಟಿಐ): 'ಭಾರತವು 140 ಕೋಟಿ ಜನರನ್ನು ಹೊಂದಿರುವುದಾಗಿ ಬಡಾಯಿ ಕೊಚ್ಚಿಕೊಳ್ಳುತ್ತದೆ. ಆದರೆ ಇಷ್ಟು ಜನಸಂಖ್ಯೆ ಹೊಂದಿರುವ ದೇಶ ಅಮೆರಿಕದಿಂದ ಒಂದು ಚೀಲ ಮುಸುಕಿನ ಜೋಳವನ್ನು ಏಕೆ ಖರೀದಿ ಮಾಡುವುದಿಲ್ಲ' ಎಂದು ಅಮೆರಿಕ ವಾಣಿಜ್ಯ ಕಾರ್ಯದರ್ಶಿ ಹೊವರ್ಡ್ ಲುಟ್ನಿಕ್ ಶನಿವಾರ ಪ್ರಶ್ನಿಸಿದ್ದಾರೆ.

'ಎಲ್ಲವನ್ನೂ ನಮಗೆ ಮಾರುವ ಅವರು, ನಮ್ಮಿಂದ ಮುಸುಕಿನ ಜೋಳವನ್ನೂ ಖರೀದಿಸುವುದಿಲ್ಲ ಎಂದರೆ ತಪ್ಪಲ್ಲವೇ' ಎಂದು ಅವರು ಕೇಳಿದರು.

'ನವದೆಹಲಿ ನಮ್ಮ ಎಲ್ಲ ಸರಕುಗಳಿಗೂ ಸುಂಕ ವಿಧಿಸುತ್ತದೆ. ಆ ಸುಂಕಗಳನ್ನು ಕಡಿಮೆ ಮಾಡಬೇಕು. ನಾವು ನಿಮ್ಮನ್ನು ಹೇಗೆ ನಡೆಸಿಕೊಳ್ಳುತ್ತಿದ್ದೇವೆಯೋ ನೀವೂ ಹಾಗೆ ನಡೆಸಿಕೊಳ್ಳಿ. ಇಲ್ಲದಿದ್ದರೆ ಅಮೆರಿಕದ ಜತೆ ವ್ಯಾಪಾರ ಮಾಡಲು ಕಠಿಣ ಸಮಯವನ್ನು ಎದುರಿಸಬೇಕಾಗುತ್ತದೆ. ಅದೇ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೀತಿಯೂ ಆಗಿದೆ' ಎಂದು ಅವರು ಪ್ರತಿಕ್ರಿಯಿಸಿದರು.

'ಸಹಜೀವನ ಬಳಿಕ ಮದುವೆಗೆ ನಿರಾಕರಣೆ ಅಪರಾಧವಲ್ಲ'

ಒಂದನೇ ಪುಟದಿಂದ...

'ಮದುವೆ ಮಾಡಿಕೊಳ್ಳುವ ಭರವಸೆ ಇದ್ದ ಕಾರಣವೇ ಒಪ್ಪಿತ ಸಂಬಂಧಕ್ಕೆ ಸಮ್ಮತಿಸಿದ್ದೆ ಎಂಬ ವಾದವನ್ನು ಒಪ್ಪಿಕೊಳ್ಳಲು ಸಾಧ್ಯ ಇಲ್ಲ' ಎಂದು ಸೆಪ್ಟೆಂಬರ್ 8ರಂದು ಹೊರಡಿಸಿರುವ ಆದೇಶದಲ್ಲಿ ಪೀಠ ಹೇಳಿದೆ.

ಒಪ್ಪಿತ ಸಂಬಂಧದಲ್ಲಿದ್ದ ಪುರುಷನ ವಿರುದ್ಧ ತಾನು ನೀಡಿದ್ದ ದೂರನ್ನು ಮಹೋಬಾ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿ ಕಳೆದ ವರ್ಷ ಆಗಸ್ಟ್ 17ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮಹಿಳೆ ಮೇಲ್ಮನವಿ ಸಲ್ಲಿಸಿದ್ದರು.

'ಪಾಕ್ ಜೊತೆ ಕ್ರಿಕೆಟ್ ದೇಶದ್ರೋಹ'

ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ವಿರೋಧ ಪಕ್ಷಗಳ ಟೀಕಾಪ್ರಹಾರ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದುಬೈನಲ್ಲಿ ಭಾನುವಾರ ನಡೆದ ಪಾಕಿಸ್ತಾನ ಮತ್ತು ಭಾರತ ನಡುವಿನ ಏಷ್ಯಾ ಕಪ್ ಕ್ರಿಕೆಟ್ ಪಂದ್ಯದ ವಿಚಾರ ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರದ ವಿರುದ್ಧ ಭಾನುವಾರ ಟೀಕಾಪ್ರಹಾರ ನಡೆಸಿವೆ.

'ಪಾಕ್ ವಿರುದ್ಧ ಭಾರತ ತಂಡ ಕ್ರಿಕೆಟ್ ಆಡಲು ಅವಕಾಶ ನೀಡಿರುವುದು 'ದೇಶದ್ರೋಹ' ಎಂದಿರುವ ವಿಪಕ್ಷಗಳು, 'ತನ್ನ ಆದ್ಯತೆಗಳಿಗೆ ಸಂಬಂಧಿಸಿ ಆಡಳಿತಾರೂಢ ಪಕ್ಷದ ನಿಲುವಿನಲ್ಲಿನ ಬದಲಾವಣೆಯನ್ನು ಇದು ಬಹಿರಂಗಪಡಿಸಿದೆ' ಎಂದು ವಾಗ್ದಾಳಿ ನಡೆಸಿವೆ.

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ಉಗ್ರರು ದಾಳಿ ನಡೆಸಿ 26 ಜನರನ್ನು ಹತ್ಯೆ ಮಾಡಿದ ಘಟನೆ ಬಳಿಕ, ಉಭಯ ದೇಶಗಳ ಕ್ರಿಕೆಟ್ ತಂಡಗಳು ಇದೇ ಮೊದಲ ಬಾರಿಗೆ ಮುಖಾಮುಖಿಯಾಗಿವೆ.

ಪಾಕಿಸ್ತಾನದ ವಿರುದ್ಧ ಭಾರತ ಕ್ರಿಕೆಟ್ ಆಡಬಾರದು ಎಂಬುದು ಕೆಲ ರಾಜಕೀಯ ಪಕ್ಷಗಳು ಹಾಗೂ ಕ್ರೀಡಾ ಅಭಿಮಾನಿಗಳ ಬೇಡಿಕೆಯಾಗಿದೆ. ಅಲ್ಲದೇ, ತಂಡಕ್ಕೆ ಅನುಮತಿ ನೀಡುವ ಮೂಲಕ ಬಿಸಿಸಿಐ ಹಣ ಮಾಡಲು ಯತ್ನಿಸುತ್ತಿದೆ ಎಂದೂ ಆರೋಪಿಸಿದ್ದಾರೆ.

ಆಮ್ ಆದ್ಮಿ ಪಕ್ಷ (ಎಎಪಿ) ಕೂಡ ಉಭಯ ದೇಶಗಳ ನಡುವಿನ ಕ್ರಿಕೆಟ್ ಪಂದ್ಯವನ್ನು ವಿರೋಧಿಸಿದೆ. 'ಈ ವಿಚಾರದಲ್ಲಿ ಪ್ರತಿಯೊಬ್ಬ ಭಾರತೀಯನಲ್ಲಿ ಭಾರಿ ಆಕ್ರೋಶ ಇದೆ' ಎಂದು ಎಎಪಿ ಮುಖ್ಯಸ್ಥ ಅರವಿಂದ ಕೇಜ್ರಿವಾಲ್ ಟೀಕಿಸಿದ್ದಾರೆ.

'ಕೇಂದ್ರ ಸರ್ಕಾರಕ್ಕೆ ಸಹಾನುಭೂತಿ ಮತ್ತು ಸಂವೇದನಾಶೀಲತೆ ಮುಖ್ಯವಾಗಲಿಲ್ಲ. ಅದು ಲಾಭ ಮತ್ತು ದುಂದುಗಾರಿಕೆಗೆ ಆದ್ಯತೆ ನೀಡಿದೆ' ಎಂದು ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪನಾಯಕ ಗೌರವ್ ಗೊಗೋಯಿ ಹೇಳಿದ್ದಾರೆ.


ರಕ್ತ ಮತ್ತು ನೀರು ಒಟ್ಟಿಗೆ ಹರಿಯದು, ಮಾತುಕತೆ ಮತ್ತು ಉಗ್ರವಾದ ಒಟ್ಟಿಗೆ ಸಾಗದು ಎಂದು ಪ್ರಧಾನಿ ಹೇಳಿದ್ದಾರೆ. ಹಾಗಾದರೆ, ಒಂದು ಪಂದ್ಯದಿಂದ ಬಿಸಿಸಿಐ ಗಳಿಸುವ ಹಣವೆಷ್ಟು?
ಅಸಾದುದ್ದೀನ್ ಓವೈಸಿ
ಎಐಎಂಐಎಂ ಮುಖ್ಯಸ್ಥ


ಜನರ ಯಾತನೆಗಿಂತ ಹಣ ಗಳಿಸುವುದೇ ಮುಖ್ಯ ಎಂಬುದನ್ನು ಕೇಂದ್ರ ಸರ್ಕಾರ ತೋರಿಸಿಕೊಟ್ಟಿದೆ. ಇದು ದೇಶದ ಜನರ ಭಾವನೆಗಳಿಗೆ ಮಾಡಿದ ಅವಮಾನ ಹಾಗೂ ವಂಚನೆ
ಗೌರವ್ ಗೊಗೋಯಿ
ಲೋಕಸಭೆಯಲ್ಲಿ ಕಾಂಗ್ರೆಸ್ ಉಪನಾಯಕ


ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯ ವಿರೋಧಿಸಿ ಶಿವಸೇನಾ (ಯುಬಿಟಿ) ಕಾರ್ಯಕರ್ತರು ಮುಂಬೈನಲ್ಲಿ ಭಾನುವಾರ ಪ್ರತಿಭಟಿಸಿದರು —ಎಎಫ್‌ಪಿ ಚಿತ್ರ


'ಆಪರೇಷನ್ ಸಿಂಧೂರ' ಮುಗಿದಿಲ್ಲ, ಅದು ಮುಂದುವರಿಯುತ್ತಿದೆ ಎಂದು ಮೋದಿ ಹೇಳಿದ್ದಾರೆ. ಹಾಗಾದರೆ, ಅದುಹೇಗೆ ಆಪರೇಷನ್ ಕ್ರಿಕೆಟ್ ನಡೆಯುತ್ತಿದೆ?
ಸಂಜಯ ಸಿಂಗ್
ರಾಜ್ಯಸಭೆಯಲ್ಲಿ ಎಎಪಿ ಸದನನಾಯಕ

ನಿರಾಕರಣೆ: ಈ ನಡುವೆ, ಭಾರತ ಹಾಗೂ ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯ ವಿರೋಧಿಸಿ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುವುದಕ್ಕೆ ಶಿವಸೇನಾ(ಯುಬಿಟಿ) ಕಾರ್ಯಕರ್ತರಿಗೆ ದೆಹಲಿ ಪೊಲೀಸರು ಅನುಮತಿ ನಿರಾಕರಿಸಿದರು.

'ಕಾನೂನಿಗೆ ನಾವು ಗೌರವ ಕೊಡುತ್ತೇವೆ. ಆದರೆ, ಪ್ರಜಾತಾಂತ್ರಿಕ ಮಾರ್ಗಗಳ ಮೂಲಕ ನಮ್ಮ ಕಳವಳ ವ್ಯಕ್ತಪಡಿಸುವುದನ್ನು ನಿಲ್ಲಿಸುವುದಿಲ್ಲ' ಎಂದು ಶಿವಸೇನಾ (ಯುಬಿಟಿ) ದೆಹಲಿ ಘಟಕದ ಮುಖ್ಯಸ್ಥ ಮಂಗತ್‌ರಾಮ್ ಮುಂಡೆ ಪ್ರತಿಕ್ರಿಯಿಸಿದ್ದಾರೆ.

ಸಮರ್ಥನೆ: ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರಿಕೆಟ್ ಪಂದ್ಯವನ್ನು ಕೇಂದ್ರ ಸಚಿವ ಮನೋಹರಲಾಲ್ ಖಟ್ಟರ್ ಸಮರ್ಥಿಸಿಕೊಂಡಿದ್ದಾರೆ. 'ಕ್ರಿಕೆಟ್ ಭಾವನಾತ್ಮಕ ವಿಚಾರ. ಹೀಗಾಗಿ, ಈ ವಿಷಯದಲ್ಲಿ ಬಹಳಷ್ಟು ಆಲೋಚನೆ ಬಳಿಕವಷ್ಟೆ ನಿರ್ಧಾರ ಕೈಗೊಳ್ಳಲಾಗಿದೆ' ಎಂದಿದ್ದಾರೆ.

ಎಎಪಿ ಪ್ರತಿಭಟನೆ: ಭಾರತ ಮತ್ತು ಪಾಕಿಸ್ತಾನ ನಡುವಿನ ಏಷ್ಯಾ ಕಪ್ ಕ್ರಿಕೆಟ್ ಪಂದ್ಯ ವಿರೋಧಿಸಿ ಎಎಪಿ ಮಹಿಳಾ ಕಾರ್ಯಕರ್ತರು ಇಲ್ಲಿ ಪ್ರತಿಭಟಿಸಿದರು.

'ಪಂದ್ಯವನ್ನು ಬಹಿಷ್ಕರಿಸಬೇಕಿತ್ತು'

ಪುಣೆ (ಪಿಟಿಐ): ಪಾಕಿಸ್ತಾನ ಜತೆಗಿನ ಪಂದ್ಯವನ್ನು ಭಾರತ ಬಹಿಷ್ಕರಿಸಬೇಕಾಗಿತ್ತು ಎಂದು ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ತಂದೆಯನ್ನು ಕಳೆದುಕೊಂಡ ಅಸಾವರಿ ಜಗದಾಳೆ ಅವರು ಕರೆ ನೀಡಿದ್ದಾರೆ.

ಭಯೋತ್ಪಾದಕರು ಅವರ ತಂದೆ ಮತ್ತು ಕುಟುಂಬದ ಸ್ನೇಹಿತರೊಬ್ಬರನ್ನು ಗುಂಡಿಕ್ಕಿ ಹತ್ಯೆಗೈದ ಸಂದರ್ಭದಲ್ಲಿ ಅಸಾವರಿ ಅವರು ಬೈಸರನ್ ಕಣಿವೆಯಲ್ಲಿ ನೆಲಸಿದ್ದರು. 'ಕೆಲವು ತಿಂಗಳುಗಳ ಹಿಂದೆ ನಡೆದ ಪಹಲ್ಗಾಮ್ ದಾಳಿಯಲ್ಲಿ 26 ನಾಗರಿಕರು ಹತ್ಯೆಗೀಡಾಗಿದ್ದಾರೆ. ಇಷ್ಟೆಲ್ಲಾ ನಡೆದರೂ ಬಿಸಿಸಿಐ ಈ ಪಂದ್ಯಾವಳಿ ನಡೆಸಿದ್ದು ಸರಿಯಲ್ಲ' ಎಂದು ಹೇಳಿದ್ದಾರೆ.

'ಸೇನೆಗೆ ಬೆಂಬಲ ನೀಡದ ಕಾಂಗ್ರೆಸ್'

ಒಂದನೇ ಪುಟದಿಂದ...

'ಅವರ ಯೋಜನೆ ಯಶಸ್ವಿಯಾಗಲು ಬಿಜೆಪಿ ಅವಕಾಶ ನೀಡುವುದಿಲ್ಲ. ಈ ಸವಾಲನ್ನು ಎದುರಿಸಲು ದೇಶದಾದ್ಯಂತ ಉನ್ನತ ಮಟ್ಟದ ಜನಸಂಖ್ಯಾ ಮಿಷನ್‌ಗೆ ಚಾಲನೆ ನೀಡಲಾಗಿದೆ' ಎಂದು ಪ್ರಧಾನಿ ಹೇಳಿದರು.

'ಇಂಥ ನುಸುಳುಕೋರರಿಂದ ಅಸ್ಸಾಂ ಮತ್ತು ದೇಶವನ್ನು ರಕ್ಷಿಸುತ್ತೇವೆ. ಇದಕ್ಕಾಗಿ ಎಂಥ ಹೋರಾಟಕ್ಕೂ ಸಿದ್ಧರಿದ್ದೇವೆ' ಎಂದು ಅವರು ಹೇಳಿದರು.

'ಆಪರೇಷನ್ ಸಿಂಧೂರ'ದ ವೇಳೆ ಭಾರತದ ಸೇನೆಯು ಪಾಕಿಸ್ತಾನದಲ್ಲಿ ಭಯೋತ್ಪಾದಕರ ಮೂಲ ಸೌಕರ್ಯಗಳನ್ನು ನಾಶ ಮಾಡಿತ್ತು. ಈ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ದೇಶದ ಸೇನೆಗೆ ಬೆಂಬಲ ನೀಡುವ ಬದಲಿಗೆ ಪಾಕಿಸ್ತಾನ ಪೋಷಿಸಿದ ಭಯೋತ್ಪಾದಕರನ್ನು ಬೆಂಬಲಿಸಿತ್ತು' ಎಂದು ಅವರು ದೂರಿದರು.

ಮಾತೆ ಕಾಮಾಕ್ಯದೇವಿಯ ಆಶೀರ್ವಾದ ದಿಂದಾಗಿ 'ಆಪರೇಷನ್ ಸಿಂಧೂರ' ಯಶಸ್ವಿಯಾಗಿದೆ ಎಂದು ಅವರು ವಿವರಿಸಿದರು.

ಅಸ್ಸಾಂನ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರು ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಮಾತನಾಡಿದ್ದ ವಿಡಿಯೊವೊಂದನ್ನು ಶನಿವಾರ ರಾತ್ರಿ ನನಗೆ ತೋರಿಸಿದರು. 'ಬಿಜೆಪಿಯು ಗಾಯಕರು ಮತ್ತು ನರ್ತಕರನ್ನು ಗೌರವಿಸುತ್ತಿದೆ' ಎಂದು ಆ ನಾಯಕ ಹೇಳಿದ ವಿಡಿಯೊ ಅದಾಗಿತ್ತು ಎಂದು ಮೋದಿ ವಿವರಿಸಿದರು.

2019ರಲ್ಲಿ ಬಿಜೆಪಿಯು ಸಂಗೀತ ಮಾಂತ್ರಿಕ ಭೂಪೇನ್ ಹಜಾರಿಕಾ ಅವರಿಗೆ 'ಭಾರತ ರತ್ನ' ನೀಡಿದ್ದ ಸಂದರ್ಭದಲ್ಲಿ ಕಾಂಗ್ರೆಸ್ ಅಧ್ಯಕ್ಷರು ಈ ಹೇಳಿಕೆ ನೀಡಿದ್ದರು ಎಂದು ಅವರು ತಿಳಿಸಿದರು.

'1962ರಲ್ಲಿ ಚೀನಾ ಆಕ್ರಮಣದ ವೇಳೆ ಜವಾಹರಲಾಲ್ ನೆಹರೂ ಅವರು ಅಸ್ಸಾಂ ಜನರಿಗೆ ಮಾಡಿದ ಗಾಯಗಳೇ ಇನ್ನೂ ಮಾಯವಾಗಿಲ್ಲ. ಜತೆಗೆ ನಾಡಿನ ಪ್ರಸಿದ್ಧ ಗಾಯಕ ಭೂಪೇನ್ ಹಜಾರಿಕಾ ಅವರನ್ನು ಕಾಂಗ್ರೆಸ್ ಅವಮಾನಿಸುವ ಮೂಲಕ ಗಾಯದ ಮೇಲೆ ಉಪ್ಪು ಸವರಿದೆ' ಎಂದು ಪ್ರಧಾನಿ ಟೀಕಿಸಿದರು.

'ಈ ಕುರಿತ ಕಾಂಗ್ರೆಸ್‌ನ ಟೀಕೆಗಳಿಂದ ನನಗೆ ತೀವ್ರ ನೋವಾಗಿದೆ. ಆದರೆ ಸಂಗೀತ ಮಾಂತ್ರಿಕನಿಗೆ ಭಾರತ ರತ್ನ ಘೋಷಿಸಿದ ಬಿಜೆಪಿಯ ನಡೆ ಸರಿಯೋ, ತಪ್ಪೋ ಎಂಬುದನ್ನು ಜನರು ನಿರ್ಧರಿಸುತ್ತಾರೆ' ಎಂದು ಹೇಳಿದರು.

ಕಚ್ಚಾತೈಲ ಆಮದು ತಗ್ಗಿಸಲು ಕ್ರಮ: ಪ್ರಧಾನಿ

ನುಮಾಲಿಗಢ (ಪಿಟಿಐ): ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಕಚ್ಚಾ ತೈಲ ಮತ್ತು ಅನಿಲ ಆಮದನ್ನು ಕಡಿಮೆ ಮಾಡಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಹೇಳಿದರು.

ಇದಕ್ಕೆ ಪರ್ಯಾಯವಾಗಿ ಪಳೆಯುಳಿಕೆ ಇಂಧನ ಮತ್ತು ಹಸಿರು ಇಂಧನ ಪರಿಶೋಧನೆಗೆ ಹೆಚ್ಚು ಒತ್ತು ನೀಡಲಾಗುತ್ತಿದೆ ಎಂದು ಅವರು ತಿಳಿಸಿದರು.

ನುಮಾಲಿಗಢದಲ್ಲಿ ಸುಮಾರು ₹12,000 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಯೋಜನೆಗಳ ಉದ್ಘಾಟನೆ ಮತ್ತು ಶಂಕಸ್ಥಾಪನೆ ನೆರವೇರಿಸಿದ ಬಳಿಕ ಅವರು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ವಿಶ್ವದಲ್ಲಿಯೇ ಭಾರತದ ಆರ್ಥಿಕತೆಯು ವೇಗವಾಗಿ ಬೆಳೆಯುತ್ತಿದೆ. ಆದರೆ ದೇಶವು ಕಚ್ಚಾ ತೈಲ ಮತ್ತು ಅನಿಲಕ್ಕಾಗಿ ವಿದೇಶಗಳ ಮೇಲೆ ಅವಲಂಬಿತವಾಗಿದೆ. ಅದನ್ನು ಕಡಿಮೆ ಮಾಡುವುದಕ್ಕಾಗಿ ಪರ್ಯಾಯ ಯೋಜನೆಗಳತ್ತ ಗಮನ ಹರಿಸಲಾಗುತ್ತಿದೆ ಎಂದು ಹೇಳಿದರು.

'ಹಿಂದಿ: ವಿಜ್ಞಾನದ ಭಾಷೆಯಾಗಲಿ'

ಗಾಂಧಿನಗರ (ಪಿಟಿಐ): 'ಹಿಂದಿ ಹಾಗೂ ಇತರೆ ಭಾರತೀಯ ಭಾಷೆಗಳ ನಡುವೆ ಯಾವುದೇ ಸಂಘರ್ಷವಿಲ್ಲ. ಹಿಂದಿಯು ಬಳಕೆಯ ಭಾಷೆಯಾಗಿ ಸೀಮಿತವಾಗದೆ ವಿಜ್ಞಾನ, ತಂತ್ರಜ್ಞಾನ, ನ್ಯಾಯಾಂಗ ಹಾಗೂ ಪೊಲೀಸ್ ಭಾಷೆಯಾಗಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಇಲ್ಲಿ ಭಾನುವಾರ ಆಯೋಜಿಸಿದ್ದ 5ನೇ ಅಖಿಲ ಭಾರತ ರಾಜಭಾಷಾ ಸಮ್ಮೇಳನದ ಉದ್ಘಾಟನಾ ಸಮಾರಂಭವನ್ನು ಉದ್ದೇಶಿಸಿ ಅವರು ಮಾತನಾಡಿದರು.

'ಭಾರತೀಯರು ತಮ್ಮ ಭಾಷೆಗಳನ್ನು ಸಂರಕ್ಷಿಸಬೇಕು. ಪೋಷಕರು ತಮ್ಮ ಮಕ್ಕಳೊಂದಿಗೆ ಮಾತೃಭಾಷೆಯಲ್ಲೇ ಮಾತನಾಡಬೇಕು. ಇದು ಭಾಷಾ ಬೆಳವಣಿಗೆಗೆ ಸಹಕಾರಿಯಾಗುತ್ತದೆ' ಎಂದು ಅವರು ಪ್ರತಿಪಾದಿಸಿದರು.

'ಸಮಾಜ ಸುಧಾರಕರಾದ ದಯಾನಂದ ಸರಸ್ವತಿ, ಮಹಾತ್ಮ ಗಾಂಧಿ, ಕೆ.ಎಂ.ಮುನ್ಷಿ, ಸರ್ದಾರ್ ವಲ್ಲಭಭಾಯ್ ಪಟೇಲ್ ಸೇರಿದಂತೆ ಅನೇಕರು ಹಿಂದಿ ಭಾಷೆಯನ್ನು ಒಪ್ಪಿಕೊಂಡಿದ್ದರು ಹಾಗೂ ಪ್ರಚಾರ ಮಾಡಿದ್ದರು. ಗುಜರಾತಿ ಹಾಗೂ ಹಿಂದಿ ಭಾಷೆಗಳು ಸಹಬಾಳ್ವೆ ಸಾಧಿಸಿದ್ದು, ಎರಡೂ ಭಾಷೆಗಳು ಬೆಳವಣಿಗೆ ಹೊಂದಿವೆ' ಎಂದು ಅವರು ಅಭಿಪ್ರಾಯಪಟ್ಟರು.


ಗಾಂಧಿನಗರದಲ್ಲಿ ಆಯೋಜಿಸಿದ್ದ 5ನೇ ಅಖಿಲ ಭಾರತೀಯ ರಾಜಭಾಷಾ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಅಮಿತ್ ಶಾ ಅವರು 'ರಾಜಭಾಷಾ ಗೌರವ ಪುರಸ್ಕಾರ' ಪ್ರದಾನ ಮಾಡಿದರು –ಪಿಟಿಐ ಚಿತ್ರ

'ಎಲ್ಲ ಭಾಷೆಗಳನ್ನೂ ಗೌರವಿಸಬೇಕು'

ನವದೆಹಲಿ: 'ಭಾರತೀಯ ಭಾಷೆಗಳನ್ನು ಪ್ರತಿಯೊಬ್ಬರೂ ಗೌರವಿಸಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸಲಹೆ ನೀಡಿದರು.

ಹಿಂದಿ ದಿವಸ ಅಂಗವಾಗಿ ಸಂದೇಶ ನೀಡಿದ ಅವರು, 'ಸ್ವಾವಲಂಬಿಯಾದ, ಆತ್ಮಗೌರವದಿಂದ ಕೂಡಿದ ದೇಶವು ಅಭಿವೃದ್ಧಿ ಕಡೆಗೆ ಮುನ್ನಡೆಯಬೇಕು' ಎಂದರು.

'ಹಿಮಾಲಯದಿಂದ ದಕ್ಷಿಣದ ಕಡಲತೀರದವರೆಗೆ, ಮರುಭೂಮಿಯಿಂದ ದಟ್ಟಾರಣ್ಯ ಹಾಗೂ ಹಳ್ಳಿಗಳವರೆಗೆ ಮನುಷ್ಯರಿಗೆ ಪ್ರತಿಯೊಂದು ಸನ್ನಿವೇಶದಲ್ಲೂ ಸಂಘಟಿತಗೊಳ್ಳಲು, ಸಂವಹನ ಹಾಗೂ ಅಭಿವ್ಯಕ್ತಿ ಮೂಲಕ ಒಗ್ಗೂಡಲು ಭಾಷೆಗಳು ದಾರಿ ತೋರಿಸಿವೆ' ಎಂದರು.

ರಾಹುಲ್ ವಿರುದ್ಧ ಆಯೋಗದಿಂದ ಆಕ್ಷೇಪಾರ್ಹ ಪ್ರತಿಕ್ರಿಯೆ ಸಲ್ಲ: ಮಾಜಿ ಸಿಇಸಿ ಖುರೇಷಿ

'ಮತ ಕಳ್ಳತನ: ತನಿಖೆಗೆ ಆದೇಶಿಸಬೇಕಿತ್ತು'

ನವದೆಹಲಿ(ಪಿಟಿಐ): 'ಮತ ಕಳ್ಳತನ' ಕುರಿತಂತೆ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿ ಚುನಾವಣಾ ಆಯೋಗ ತನಿಖೆಗೆ ಆದೇಶಿಸಿಬೇಕಿತ್ತು. ಬದಲಾಗಿ ಅದು ಅವರ ವಿರುದ್ಧ 'ಆಕ್ಷೇಪಾರ್ಹ ಮತ್ತು ಆಕ್ರಮಣಕಾರಿ' ಟೀಕೆಗಳನ್ನು ಮಾಡುತ್ತಿದೆ ಎಂದು ಆಯೋಗದ ಮಾಜಿ ಮುಖ್ಯ ಆಯುಕ್ತ ಎಸ್.ವೈ.ಖುರೇಷಿ ಭಾನುವಾರ ಹೇಳಿದ್ದಾರೆ.


ಖುರೇಷಿ

ಪಿಟಿಐಗೆ ನೀಡಿರುವ ಸಂದರ್ಶನದಲ್ಲಿ ಅವರು ಚುನಾವಣಾ ಆಯೋಗದ ವಿರುದ್ಧ ಟೀಕಾಪ್ರಹಾರ ಮಾಡಿದ್ದಾರೆ. ಅವರ ಕೃತಿ 'ಡೆಮಾಕ್ರಸೀಸ್ ಹಾರ್ಟ್‌ಲ್ಯಾಂಡ್' ಬಿಡುಗಡೆಯಾಗುತ್ತಿರುವ ಸಂದರ್ಭದಲ್ಲಿ ಅವರು ಈ ಸಂದರ್ಶನ ನೀಡಿದ್ದಾರೆ. ಜಗರ್ನಾಟ್ ಬುಕ್ಸ್ ಸಂಸ್ಥೆ ಈ ಪುಸ್ತಕವನ್ನು ಪ್ರಕಟಿಸಿದೆ.

ಆಯೋಗ ವಿಪಕ್ಷಗಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಆಡಳಿತ ಪಕ್ಷಗಳ ಓಲೈಕೆ ಅಗತ್ಯವಿಲ್ಲ. ನಾನು ಆಯುಕ್ತನಾಗಿದ್ದಾಗ ವಿಪಕ್ಷಗಳಿಗೇ ಆದ್ಯತೆ ನೀಡುತ್ತಿದ್ದೆ
ಎಸ್.ವೈ.ಖುರೇಷಿ, ಚುನಾವಣಾ ಆಯೋಗದ ಮಾಜಿ ಮುಖ್ಯ ಆಯುಕ್ತ

'ಮತ ಕಳ್ಳತನ ಕುರಿತು ಆರೋಪಿಸುವ ವೇಳೆ ರಾಹುಲ್ ಗಾಂಧಿ ಅವರು 'ಜಲಜನಕ ಬಾಂಬ್'ನಂತಹ ಪದ ಬಳಕೆ ಮಾಡಿದ್ದಾರೆ. ಮತ ಕಳ್ಳತನದ ಗಂಭೀರತೆಯನ್ನು ವಿವರಿಸಲು ಅವರು ಇಂತಹ ಅಲಂಕಾರಿಕ ಭಾಷೆ ಬಳಸಿದ್ದಾರೆ. ಆದರೆ, ಅವರು ಪ್ರಸ್ತಾಪಿಸಿರುವ ದೂರುಗಳ ಕುರಿತು ಸಮಗ್ರ ತನಿಖೆ ನಡೆಸುವ ಅಗತ್ಯ ಇದೆ' ಎಂದು ಖುರೇಷಿ ಹೇಳಿದ್ದಾರೆ.

'ಬಿಹಾರದಲ್ಲಿ ಚುನಾವಣಾ ಆಯೋಗ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಮಸ್ಯೆಯನ್ನು ಹುಟ್ಟುಹಾಕಿರುವ ಜೊತೆಗೆ, ಜೇನುಗೂಡಿಗೆ ಕೈಹಾಕಿದಂತಾಗಿದೆ. ಇದು ಆಯೋಗಕ್ಕೇ ಸಂಕಷ್ಟ ತಂದೊಡ್ಡಲಿದೆ' ಎಂದು ಪ್ರತಿಪಾದಿಸಿದರು.

ಪ್ರಮುಖ ಅಂಶಗಳು

- ತನ್ನ ಕಾರ್ಯವೈಖರಿ ಬಗ್ಗೆ ಟೀಕೆಗಳು ಕೇಳಿ ಬಂದಾಗ ಆಯೋಗ ಆತ್ಮಾವಲೋಕನ ಮಾಡಿಕೊಳ್ಳಬೇಕು. ತನ್ನ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ಶಕ್ತಿಗಳ ಕುರಿತು ಎಚ್ಚರ ವಹಿಸಬೇಕು
- ಈಗ ಪರಿಸ್ಥಿತಿ ಭಿನ್ನ. ತಾವು ಎತ್ತಿರುವ ಪ್ರಶ್ನೆಗಳ ವಿಚಾರವಾಗಿ ವಿರೋಧ ಪಕ್ಷಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಬೇಕಾಗಿದೆ
- ರಾಹುಲ್ ಗಾಂಧಿ ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ. ಅವರು ಕೋಟ್ಯಂತರ ಜನರನ್ನು ಪ್ರತಿನಿಧಿಸುತ್ತಾರೆ. ಅವರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡುವುದು ಚುನಾವಣಾ ಆಯೋಗಕ್ಕೆ ಶೋಭೆ ತರದು
- ರಾಹುಲ್ ಗಾಂಧಿ ಮಾಡಿರುವ ಆರೋಪಗಳ ಕುರಿತು ತನಿಖೆ ನಡೆಸಿದಾಗ ಸತ್ಯ ಹೊರಬರುತ್ತದೆ. ಆಕ್ರಮಣಕಾರಿ ಪ್ರತಿಕ್ರಿಯೆ ನೀಡುವ ಬದಲು ತನಿಖೆ ನಡೆಸಬೇಕಿತ್ತು. ಇಂತಹ ಅವಕಾಶವನ್ನು ಆಯೋಗ ಕಳೆದುಕೊಂಡಿದೆ

ಬಲಾಢ್ಯ ಭಾರತಕ್ಕೆ ಮಣಿದ ಪಾಕಿಸ್ತಾನ

ಗೆಲುವು ಭಾರತೀಯ ಸೇನೆಗೆ ಅರ್ಪಣೆ: ಸೂರ್ಯ • ಕುಲದೀಪ್ ಸ್ಪಿನ್ ಮೋಡಿ

• ಆರ್.ಕೌಶಿಕ್/ಪಿಟಿಐ



ಪಾಕಿಸ್ತಾನದ ಸಾಹಿಬ್‌ಜಾದಾ ಫರ್ಹಾನ್ ಔಟಾದಾಗ ಭಾರತದ ಆಟಗಾರರ ಸಂಭ್ರಮ ಎಎಫ್‌ಪಿ ಚಿತ್ರ

ದುಬೈ: ಭಾನುವಾರ ರಾತ್ರಿ ದುಬೈ ಅಂತರ ರಾಷ್ಟ್ರೀಯ ಕ್ರೀಡಾಂಗಣದ ಗ್ಯಾಲರಿಗಳು ನಿರೀಕ್ಷಿಸಿದಷ್ಟು ಪೂರ್ಣ ತುಂಬಿರಲಿಲ್ಲ. ಆದರೆ, ಇದರಿಂದ ಭಾರತದ ಆಟಗಾರರ ಉಲ್ಲಾಸದ ಆಟದ ಮೇಲೆ ಯಾವುದೇ ಪರಿಣಾಮ ಬೀರಲಿಲ್ಲ.

ಏಷ್ಯಾ ಕಪ್ ಟಿ20 ಟೂರ್ನಿಯಲ್ಲಿ ಪಾಕಿಸ್ತಾನ ಎದುರಿನ ಈ ಪಂದ್ಯವನ್ನು ಬಹಿಷ್ಕರಿಸುವಂತೆ ಭಾರತ ತಂಡಕ್ಕೆ ಹಲವು ಸಂಘಟನೆಗಳು ಆಗ್ರಹಿಸಿದ್ದವು. ಇದರ ನಡುವೆ ನಡೆದ ಪಂದ್ಯದಲ್ಲಿ ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು 7 ವಿಕೆಟ್‌ಗಳಿಂದ ಪಾಕಿಸ್ತಾನ ತಂಡವನ್ನು ಸದೆಬಡಿಯಿತು. ಪಂದ್ಯದಲ್ಲಿ ಇನ್ನೂ 25 ಎಸೆತಗಳು ಬಾಕಿ ಇರುವಂತೆಯೇ ಜಯಭೇರಿಯಾದ ಭಾರತ ತನ್ನ ಸಾಮರ್ಥ್ಯ ಮೆರೆಯಿತು.

ಏಷ್ಯಾ ಕಪ್ 2025

ಉಭಯ ತಂಡಗಳ ನಡುವೆ ನಡೆದ ಕಳೆದ ಎಂಟು ಪಂದ್ಯಗಳ ಪೈಕಿ ಏಳರಲ್ಲಿ ಗುರಿ ಬೆನ್ನಟ್ಟಿದ ತಂಡವೇ ಗೆದ್ದಿತ್ತು. ಆದರಿಂದಾಗಿ ಇಲ್ಲಿ ಪಾಕ್ ತಂಡದ ನಾಯಕ ಸಲ್ಮಾನ್ ಆಘಾ ಅವರು ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದರು. ಪಂದ್ಯದಲ್ಲಿ ಹೊಸ ಹಂತವಾಗಿ ಪಿಚ್‌ನಲ್ಲಿ ಚೆಂಡಿನ ಚಲನೆ ನಿಧಾನವಾಗಬಹುದು ಚಲಿಸಬಹುದು ಎಂದು ಅವರು ನಿರೀಕ್ಷಿಸಿದ್ದರು. ಆದರೆ ಇದು ಅವರಿಗೆ ತಿರುಗುಬಾಣವಾಯಿತು. ಕುಲದೀಪ್ ಯಾದವ್ ಮತ್ತು ಅಕ್ಷರ್ ಪಟೇಲ್ ಅವರಿದ್ದ ಭಾರತದ ಸ್ಪಿನ್ ವಿಭಾಗವು ಪಾಕ್ ತಂಡಕ್ಕೆ ಸಿಂಹಸ್ವಪ್ನ ವಾಯಿತು. 9 ವಿಕೆಟ್‌ಗಳಿಗೆ 127 ರನ್‌ಗಳ ಸಾಧಾರಣ ಮೊತ್ತಕ್ಕೆ ಪಾಕ್ ತಂಡವನ್ನು ನಿಯಂತ್ರಿಸಿತು.

ಟೂರ್ನಿಯ ಮೊದಲ ಪಂದ್ಯದಲ್ಲಿ ಯುಎಇ ಎದುರು ನಾಲ್ಕು ವಿಕೆಟ್ ಗಳಿಸಿದ್ದ ಕುಲದೀಪ್, ಇಲ್ಲಿ 18ಕ್ಕೆ3 ವಿಕೆಟ್ ಪಡೆದರು. ಅಕ್ಷರ್ ಪಟೇಲ್ ಅವರು ಚಾಣಾಕ್ಷತೆಯಿಂದ ಬೌಲಿಂಗ್ ಮಾಡಿದರು. ಎರಡು ವಿಕೆಟ್ ಪಡೆದು ಕುಲದೀಪ್ ಅವರಿಗೆ ಉತ್ತಮ ಜೊತೆ ನೀಡಿದರು.

ಶಾಹೀನ್ ಶಾ ಅಫ್ರಿದಿ ಅವರು 16 ಎಸೆತಗಳಲ್ಲಿ 33 ರನ್ ಗಳಿಸಿದ ಹೋರಾಟದಿಂದ ಪಾಕಿಸ್ತಾನ ಬ್ಯಾಟಿಂಗ್‌ನಲ್ಲಿ ಯಾವುದೇ ಸ್ವಾರಸ್ಯ ಇರುತ್ತಿರಲಿಲ್ಲ. ಅಫ್ರಿದಿ ಅವರು ಇನಿಂಗ್ಸ್‌ನ ಕೊನೆ ಓವರ್‌ನಲ್ಲಿ ಹಾರ್ದಿಕ್ ಪಾಂಡ್ಯ ಎಸೆತವನ್ನು ಸಿಕ್ಸರ್‌ಗೆ ಎತ್ತಿದರು. ಅದೂ ಸೇರಿದಂತೆ ಒಟ್ಟು ನಾಲ್ಕು ಸಿಕ್ಸರ್‌ಗಳನ್ನು ಅವರು ಇನಿಂಗ್ಸ್‌ನಲ್ಲಿ ಸಿಡಿಸಿದರು.

ಗುರಿ ಬೆನ್ನಟ್ಟಿದ ಭಾರತ ತಂಡದ ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರು ಅಫ್ರಿದಿ ಹಾಕಿದ ಮೊದಲ ಎಸೆತವನ್ನು ಬೌಂಡರಿಗೆ ದಾಟಿಸಿದರು. ನಂತರದ ಎಸೆತವನ್ನು ಲಾಂಗ್ ಆನ್‌ಗೆ ಸಿಕ್ಸರ್ ಎತ್ತಿದರು.

ಆದರೆ ಆಫ್‌ಸ್ಪಿನ್ನರ್ ಸೈಮ್ ಅಯೂಬ್ ಅವರ ಎಸೆತಗಳಿಗೆ ಮೊದಲು ಗಿಲ್ ಮತ್ತು ನಂತರ ಅಭಿಷೇಕ್ ಅವರು ವಿಕೆಟ್ ಒಪ್ಪಿಸಿದರು. ಈ ಹಂತದಲ್ಲಿ ಜೊತೆಗೂಡಿದ ಸೂರ್ಯಕುಮಾರ್ ಮತ್ತು ತಿಲಕ್ ವರ್ಮಾ ಅವರು ಎಚ್ಚರಿಕೆಯಿಂದ ಆಡಿ ಜಯ ಕಂಡುಕೊಂಡರು. ಇವರಿಬ್ಬರ ಅರ್ಧಶತಕದ ಜತೆಯಾಟ ತಂಡದ ಗೆಲುವಿನ ಹಾದಿ ಸುಗಮಗೊಳಿಸಿತು. ಸೂಫಿಯಾನ್ ಮುಕೀಂ ಅವರ ಎಸೆತವನ್ನು ಮಿಡ್‌ವಿಕೆಟ್ ಸಿಕ್ಸರ್ ಎತ್ತುವ ಮೂಲಕ ವಿಜಯದ ರನ್ ದಾಖಲಿಸಿದ ಸೂರ್ಯಕುಮಾರ್ ತಮ್ಮ 35ನೇ ಜನ್ಮದಿನವನ್ನೂ ಸಂಭ್ರಮಿಸಿದರು.

ಸೂರ್ಯಕುಮಾರ್ ಮತ್ತು ಶಿವಂ ದುಬೆ ಅವರು ಗೆಲುವಿನ ನಂತರ ಪಾಕ್ ಆಟಗಾರರೊಂದಿಗೆ ಸಾಂಪ್ರದಾಯಿಕ ಹಸ್ತಲಾಘವ ಮಾಡದೇ ಪೆವಿಲಿಯನ್‌ನತ್ತ ಸಾಗಿದರು. ಟಾಸ್ ಹಾಕುವ ಸಂದರ್ಭದಲ್ಲಿ ಸೂರ್ಯಕುಮಾರ್ ಹಾಗೂ ಆಘಾ ಪರಸ್ಪರ ಕೈಕುಲುಕಿರಲಿಲ್ಲ.

ಪಾಕ್ ಆರಂಭಿಕ ಬ್ಯಾಟರ್ ಅಯೂಬ್ ಯುಎಇ ವಿರುದ್ಧದ ಪಂದ್ಯದಲ್ಲಿಯೂ ವೈಫಲ್ಯ ಅನುಭವಿಸಿದ್ದರು. ಈ ಪಂದ್ಯದಲ್ಲಿಯೂ ಅವರು ಎಲ್ಲ ಕಂಡುಕೊಳ್ಳಲಿಲ್ಲ. ಹಾರ್ದಿಕ್ ಪಾಂಡ್ಯ ಹಾಕಿದ ಇನಿಂಗ್ಸ್‌ನ ಮೊದಲ ಎಸೆತದಲ್ಲಿಯೇ ಬೂಮ್ರಾಗೆ ಕ್ಯಾಚ್ ಕೊಟ್ಟು ಹೊರನಡೆದರು. ನಂತರದ ಓವರ್‌ನಲ್ಲಿ ಮೊಹಮ್ಮದ್ ಹ್ಯಾರಿಸ್ ಬೂಮ್ರಾ ಎಸೆತದಲ್ಲಿ ಔಟಾದರು. ಇದರಿಂದಾಗಿ ಪಾಕಿಸ್ತಾನ ತಂಡವು ಕೇವಲ 6 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತು.

ಈ ಹಿಂದೆ ಕೆಲವು ಪಂದ್ಯಗಳಲ್ಲಿ ಭಾರತ ತಂಡವನ್ನು ಕಾಡಿದ್ದ ಆರಂಭಿಕ ಬ್ಯಾಟರ್ ಸಾಹಿಬ್‌ಜಾದಾ ಫರ್ಹಾನ್ ಮತ್ತು ಫಖರ್ ಜಮಾನ್ ಅವರು ಇಲ್ಲಿ ಒಂದಿಷ್ಟು ಜಿಗುಟುತನ ತೋರಿಸಿದರು. ಜಮಾನ್ ಅವರು ವೇಗದ ಬೌಲರ್‌ಗಳನ್ನು ಆತ್ಮವಿಶ್ವಾಸದಿಂದ ಎದುರಿಸಿದರು. ಆದರೆ ಸ್ಪಿನ್ನರ್‌ಗಳ ಮುಂದೆ ಎಚ್ಚರಿಕೆಯಿಂದ ಆಡಿದರು. ಆದರೆ ಫರ್ಹಾನ್ ಅವರು ಬೂಮ್ರಾ ಎಸೆತಗಳಲ್ಲಿ ಎರಡು ಸಿಕ್ಸರ್ ಹೊಡೆದರೂ ಬ್ಯಾಟಿಂಗ್ ರೊಟೇಟ್ ಮಾಡುವಲ್ಲಿ ವಿಫಲರಾದರು.

ಪಾಕ್ ತಂಡವು ಏಳರಿಂದ ಹತ್ತನೇ ಓವರ್‌ಗಳ ನಡುವೆ ತಡಬಡಾಯಿಸಿತು. ಈ ಹಂತದಲ್ಲಿ ಕೇವಲ ಏಳು ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತು. ಅಕ್ಷರ್ ಅವರು ಚಾಣಾಕ್ಷತೆಯಿಂದ ತಮ್ಮ ಎಸೆತಗಳಲ್ಲಿ ವೇಗ ಏರಿಳಿತ ಮಾಡಿದ್ದು ಫಲಿಸಿತು. ಕುಲದೀಪ್ ಅವರ ಎಸೆತಗಳಿಗೆ ಬ್ಯಾಟರ್‌ಗಳ ಬಳಿ ಉತ್ತರವೇ ಇರಲಿಲ್ಲ.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 127 (ಸಾಹಿಬ್‌ಜಾದಾ ಫರ್ಹಾನ್ 40, ಶಾಹೀನ್ ಅಫ್ರಿದಿ ಔಟಾಗದೆ 33, ಜಸ್‌ಪ್ರೀತ್ ಬೂಮ್ರಾ 28ಕ್ಕೆ2, ಕುಲದೀಪ್ ಯಾದವ್ 18ಕ್ಕೆ3, ಅಕ್ಷರ್ ಪಟೇಲ್ 18ಕ್ಕೆ2) ಭಾರತ: 15.5 ಓವರ್‌ಗಳಲ್ಲಿ 3ಕ್ಕೆ131 (ಅಭಿಷೇಕ್ ಶರ್ಮಾ 31, ಸೂರ್ಯಕುಮಾರ್ ಯಾದವ್ ಔಟಾಗದೇ 47, ತಿಲಕ್ ವರ್ಮಾ 31, ಸೈಮ್ ಅಯೂಬ್ 35ಕ್ಕೆ3) ಫಲಿತಾಂಶ: ಭಾರತ ತಂಡಕ್ಕೆ 7 ವಿಕೆಟ್ ಜಯ. **ಪಂದ್ಯಶ್ರೇಷ್ಠ:** ಕುಲದೀಪ್ ಯಾದವ್.

ಹಸ್ತಲಾಘವ ಮಾಡದ ನಾಯಕರು

ದುಬೈ(ಪಿಟಿಐ): ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಮತ್ತು ಪಾಕಿಸ್ತಾನ ತಂಡದ ನಾಯಕ ಸಲ್ಮಾನ್ ಆಘಾ ಅವರು ಭಾನುವಾರ ಟಾಸ್ ಮಾಡುವ ಸಂದರ್ಭದಲ್ಲಿ ಸಾಂಪ್ರದಾಯಿಕ ಹಸ್ತಲಾಘವ ಮಾಡಲಿಲ್ಲ.

ಅಂತರರಾಷ್ಟ್ರೀಯ ಪಂದ್ಯದಲ್ಲಿ ಟಾಸ್ ಹಾಕುವ ಸಂದರ್ಭದಲ್ಲಿ ಉಭಯ ತಂಡಗಳ ನಾಯಕರು ಹಸ್ತಲಾಘವ ಮಾಡಿ, ಪರಸ್ಪರ ಶುಭಕಾಮನೆಗಳನ್ನು ಸಲ್ಲಿಸುವ ಪದ್ಧತಿ ಇದೆ. ಆದರೆ ಇಲ್ಲಿ ನಡೆಯುತ್ತಿರುವ ಏಷ್ಯಾ ಕಪ್ ಟೂರ್ನಿಯ ಪಂದ್ಯದಲ್ಲಿ ಭಾರತ ಮತ್ತು ಪಾಕ್ ತಂಡಗಳ ನಾಯಕರು ಹಸ್ತಲಾಘವ ಮಾಡಲಿಲ್ಲ. ಪರಸ್ಪರ ಮಾತನಾಡಲೂ ಇಲ್ಲ.

ಪಹಲ್ಗಾಮ್ ಭಯೋತ್ಪಾದನಾ ದಾಳಿಯ ನಂತರ ಇದೇ ಮೊದಲ ಬಾರಿಗೆ ಭಾರತ ಮತ್ತು ಪಾಕಿಸ್ತಾನ ತಂಡಗಳು ಕ್ರಿಕೆಟ್ ಪಂದ್ಯ ಆಡಿದವು.

ಗೆಲುವು ಸೇನೆಗೆ ಅರ್ಪಣೆ–ಸೂರ್ಯ: ಪಂದ್ಯ ಮುಗಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸೂರ್ಯಕುಮಾರ್ ಅವರು, ಗೆಲುವನ್ನು ಭಾರತೀಯ ಸೇನೆಗೆ ಅರ್ಪಿಸುವುದಾಗಿ ಹೇಳಿದರು. ಅಲ್ಲದೆ, ಪಹಲ್ಗಾಮ್ ಭಯೋತ್ಪಾನಾ ದಾಳಿಯ ಸಂತ್ರಸ್ತರ ಪರ ನಿಲ್ಲುವುದಾಗಿಯೂ ತಿಳಿಸಿದರು.

ಅವಕಾಶ ಸಿಕ್ಕಾಗಲೆಲ್ಲ ಯೋಧರನ್ನು ಖುಷಿಪಡಿಸಲು ಶ್ರಮಿಸುವುದಾಗಿ ಹೇಳಿದರು.

ಗೆಲುವು ಕೈಚೆಲ್ಲಿದ ಮಹಿಳೆಯರು

ಮುಲ್ಲನಪುರ (ಪಂಜಾಬ್) (ಪಿಟಿಐ): ನಾಲ್ಕು ಕ್ಯಾಚ್‌ಗಳನ್ನು ನೆಲಕ್ಕೆ ಚೆಲ್ಲಿದ ಭಾರತ ಮಹಿಳಾ ತಂಡದ ಫೀಲ್ಡರ್‌ಗಳು ಆಸ್ಟ್ರೇಲಿಯಾ ಎದುರಿನ ಏಕದಿನ ಕ್ರಿಕೆಟ್ ಪಂದ್ಯದ ಗೆಲುವನ್ನೂ ಕೈಚೆಲ್ಲಿದರು.


ಇದರಿಂದಾಗಿ ಚೆಂದದ ಅರ್ಧಶತಕಗಳನ್ನು ಗಳಿಸಿದ ಫೋಬಿ ಲಿಚ್‌ಫೀಲ್ಡ್, ಬೆತ್ ಮೂನಿ ಮತ್ತು ಅನಾಬೆಲ್ ಸದರ್ಲೆಂಡ್ ಅವರು ಆಸ್ಟ್ರೇಲಿಯಾ ತಂಡಕ್ಕೆ 8 ವಿಕೆಟ್ ಜಯದ ಕಾಣಿಕೆ ನೀಡಿದರು. ತಂಡವು ಮೂರು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಸಾಧಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡವು 44.1 ಓವರ್‌ಗಳಲ್ಲಿ 281 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಗಳಿಸಿತು.

ಅದಕ್ಕುತ್ತರವಾಗಿ ಆಸ್ಟ್ರೇಲಿಯಾ ತಂಡವು 44.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 282 ರನ್ ಗಳಿಸಿತು. ಲಿಚ್‌ಫೀಲ್ಡ್ (88; 80ಎ) ಅವರ ಎರಡು ಕ್ಯಾಚ್ ಹಾಗೂ ಮೂನಿ (ಅಜೇಯ 77; 74ಎ) ಮತ್ತು ಎಲೀಸ್ ಪೆರಿ (30 ರನ್) ಅವರ ತಲಾ ಒಂದು ಕ್ಯಾಚ್ ಅನ್ನು ಫೀಲ್ಡರ್‌ಗಳು ಕೈಚೆಲ್ಲಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್ ಗಳಲ್ಲಿ 7ಕ್ಕೆ281 (ಪ್ರತೀಕಾ ರಾವಳ್ 64, ಸ್ಮೃತಿ ಮಂದಾನ 58, ಹರ್ಲೀನ್ ಡಿಯೊಲ್ 54, ಮೇಗನ್ ಶುಟ್ 45ಕ್ಕೆ2) ಆಸ್ಟ್ರೇಲಿಯಾ: 44.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 282 (ಅಲಿಸಾ ಹೀಲಿ 27, ಫೋಬಿ ಲಿಚ್‌ಫೀಲ್ಡ್ 88, ಎಲೀಸ್ ಪೆರಿ 30, ಬೆತ್ ಮೂನಿ ಔಟಾಗದೇ 77, ಅನಾಬೆಲ್ ಸದರ್ಲೆಂಡ್ 54, ಕ್ರಾಂತಿ ಗೌಡ 55ಕ್ಕೆ1, ಸ್ನೇಹ ರಾಣಾ 51ಕ್ಕೆ1) ಫಲಿತಾಂಶ: ಆಸ್ಟ್ರೇಲಿಯಾಗೆ 8 ವಿಕೆಟ್‌ಗಳ ಜಯ.

ಅಥ್ಲೆಟಿಕ್ಸ್: ಫೈನಲ್ ಸುತ್ತಿಗೆ ಸರ್ವೇಶ್



ಟೋಕಿಯೊ (ಪಿಟಿಐ): ಮಹಾರಾಷ್ಟ್ರದ ಸರ್ವೇಶ್ ಅನಿಲ್ ಕುಶಾರೆ ಅವರು ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಹೈ ಜಂಪ್ ಸ್ಪರ್ಧೆಯಲ್ಲಿ ಭಾನುವಾರ ಫೈನಲ್ ಸುತ್ತು ಪ್ರವೇಶಿಸಿದರು.

30 ವರ್ಷದ ಕುಶಾರೆ ಅವರು 2.25 ಮೀ. ಎತ್ತರ ಜಿಗಿದು ಅಂತಿಮ ಸುತ್ತಿಗೆ ಅರ್ಹತೆ ಗಿಟ್ಟಿಸಿಕೊಂಡರು. 2023ರ ಏಷ್ಯನ್ ಚಾಂಪಿಯನ್‌ಷಿಪ್‌ನ ಬೆಳ್ಳಿ ಪದಕ ವಿಜೇತರೂ ಆಗಿರುವ ಕುಶಾರೆ ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನ 2.27 ಮೀ. ಇದೆ.

ಆದರೆ, ರಾಷ್ಟ್ರೀಯ ದಾಖಲೆ ಹೊಂದಿರುವ ಗುಲ್ವೀರ್ ಸಿಂಗ್ ಅವರು 10 ಸಾವಿರ ಮೀ. ಓಟದಲ್ಲಿ ಅಂತಿ ಸುತ್ತಿಗೆ ಪ್ರವೇಶ ಪಡೆಯುವಲ್ಲಿ ವಿಫಲರಾದರು.

ಜಂಟಿ ಅಗ್ರಸ್ಥಾನಕ್ಕೆ ಭಾರತದ ವೈಶಾಲಿ

ಐಲ್ ಆಫ್ ಮ್ಯಾನ್: ಭಾರತದ ಆರ್.ವೈಶಾಲಿ ಅವರು ಫಿಡೆ ಗ್ರ್ಯಾಂಡ್ ಸ್ವಿಸ್ ಮಹಿಳಾ ಚೆಸ್ ಟೂರ್ನಿಯ ಹತ್ತನೇ ಸುತ್ತಿನಲ್ಲಿ ಉಕ್ರೇನ್‌ನ ಮರಿಯಾ ಮುಝಿಚುಕ್ ಅವರನ್ನು ಮಣಿಸಿದರು. ಇದರೊಡನೆ ಅವರು ರಷ್ಯಾದ ಕ್ಯಾತರಿನಾ ಲಾಗ್ನೊ ಜೊತೆ ಭಾನುವಾರದ ಕೊನೆಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಇಬ್ಬರೂ ತಲಾ 7.5 ಅಂಕ ಗಳಿಸಿದ್ದಾರೆ. ಇನ್ನೊಂದು ಸುತ್ತಿನ ಆಟವಷ್ಟೇ ಉಳಿದಿದೆ.

ಓಪನ್ ವಿಭಾಗದಲ್ಲಿ ಐವರು ಮುನ್ನಡೆ ಹಂಚಿಕೊಂಡಿದ್ದಾರೆ. ಅಲಿರೇಜಾ ಫಿರೋಜ್, ಅನಿಶ್ ಗಿರಿ, ವಿನ್ಸೆಂಟ್ ಕೀಮರ್, ಮಥಾಯಸ್ ಬ್ಲೂಬಾಮ್, ಹ್ಯಾನ್ಸ್ ನೀಮನ್ ತಲಾ 7 ಅಂಕ ಗಳಿಸಿದ್ದಾರೆ. ಅರ್ಜುನ್ ಇರಿಗೇಶಿ, ವಿದಿತ್ ಗುಜರಾತಿ, ನಿಹಾಲ್ ಸರಿನ್ ತಲಾ 6.5 ಅಂಕ ಗಳಿಸಿ ಇತರ 6 ಮಂದಿ ಜೊತೆ ಎರಡನೇ ಸ್ಥಾನದಲ್ಲಿದ್ದಾರೆ.

ಚುಟುಕು ಸುದ್ದಿ

ಮಹಾರಾಷ್ಟ್ರ ತಂಡಕ್ಕೆ ಜಲಜ್ ಸಕ್ಸೇನಾ



ಪುಣೆ (ಪಿಟಿಐ): ಹಿರಿಯ ಆಲ್ ರೌಂಡರ್ ಜಲಜ್ ಸಕ್ಸೇನಾ ಅವರು 2025–26ನೇ ರಣಜಿ ಋತುವಿಗೆ ಪೂರ್ವ ಭಾವಿಯಾಗಿ ಶನಿವಾರ ಮಹಾರಾಷ್ಟ್ರ ತಂಡಕ್ಕೆ ಸೇರ್ಪಡೆಯಾದರು. ಅವರು ಕಳೆದ 9 ವರ್ಷಗಳಲ್ಲಿ ಕೇರಳ ತಂಡದ ಪರ ಆಡಿದ್ದರು.

ಬ್ಯಾಟರ್ ಮತ್ತು ಉಪಯುಕ್ತ ಸ್ಪಿನ್ನರ್ ಆಗಿರುವ 38 ವರ್ಷ ವಯಸ್ಸಿನ ಸಕ್ಸೇನಾ ಅವರು 2005–06ರಲ್ಲಿ ಮಧ್ಯಪ್ರದೇಶ ತಂಡಕ್ಕೆ ಆಡುವ ಮೂಲಕ ರಣಜಿಗೆ ಪದಾರ್ಪಣೆ ಮಾಡಿದ್ದರು. ಜಲಜ್ ಅವರು 14 ಶತಕ ಸೇರಿ 7,060 ರನ್ ಗಳೊಂದಿಗೆ, 484 ವಿಕೆಟ್ ಪಡೆದು ದೇಶಿ ಕ್ರಿಕೆಟ್‌ನಲ್ಲಿ ಹೆಸರು ಮಾಡಿದ್ದಾರೆ.

ಏಷ್ಯನ್ ಚಾಂಪಿಯನ್‌ಷಿಪ್: ಯೋಗೇಂದ್ರ ಆಯ್ಕೆ



ಮೈಸೂರು: ಇಲ್ಲಿನ ಮಾಸ್ಟರ್ಸ್ ಅಥ್ಲೀಟ್, ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಕಾರ್ಯದರ್ಶಿ ಎಂ. ಯೋಗೇಂದ್ರ ಅವರು ನ.5ರಿಂದ 9ರವರೆಗೆ ಚೆನ್ನೈನಲ್ಲಿ ನಡೆಯಲಿರುವ 23ನೇ ಏಷ್ಯನ್ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿ-ಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಅವರು 60 ವರ್ಷ ಮೇಲ್ಪಟ್ಟವರ ವಿಭಾಗದ 2 ಸಾವಿರ ಮೀಟರ್ಸ್ ಸ್ಟೀಪಲ್ ಚೇಸ್ ಸ್ಪರ್ಧೆಯಲ್ಲಿ ಓಡಲಿದ್ದಾರೆ. 46 ವರ್ಷಗಳಿಂದ ಅಥ್ಲೆಟಿಕ್ಸ್‌ನಲ್ಲಿ ದೂರದ ಓಟಗಾರರಾಗಿ ಗುರುತಿಸಿಕೊಂಡಿರುವ ಯೋಗೇಂದ್ರ, ಈವರೆಗೆ ಹಲವು ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾರತವನ್ನು ಪ್ರತಿನಿಧಿಸಿ 60ಕ್ಕೂ ಹೆಚ್ಚು ಚಿನ್ನ, 50 ಬೆಳ್ಳಿ ಹಾಗೂ 48 ಕಂಚಿನ ಪದಕಗಳನ್ನು ಗೆದ್ದಿದ್ದಾರೆ.

ಜೈಸ್ಮಿನ್, ಮೀನಾಕ್ಷಿ ಚಾರಿತ್ರಿಕ ಸಾಧನೆ • ನೂಪುರ್‌ಗೆ ಬೆಳ್ಳಿ, ಪೂಜಾಗೆ ಕಂಚು

ವಿಶ್ವ ಬಾಕ್ಸಿಂಗ್: ಭಾರತಕ್ಕೆ 'ಚಿನ್ನ ಡಬಲ್'



ನೂಪುರ್ ಶೆರಾನ್ ಆಟದ ವೈಖರಿ



ಪೂಜಾರಾಣಿ (ಎಡ) ಎಮಿಲಿ ಅಸ್ಕಿತ್

ಲಿವರ್‌ಪೂಲ್ (ಪಿಟಿಐ): ಜೈಸ್ಮಿನ್ ಲಾಂಬೊರಿಯಾ (57ಕೆ.ಜಿ) ಮತ್ತು ಮೀನಾಕ್ಷಿ ಹೂಡಾ (48ಕೆ.ಜಿ) ಅವರು ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಜಯಿಸಿದರು.

ಭಾನುವಾರ ನಡೆದ ತಮ್ಮ ವಿಭಾಗದ ಬೌಟ್‌ಗಳಲ್ಲಿ ಕಠಿಣ ಪ್ರತಿಸ್ಪರ್ಧೆ ಎದುರಿಸಿದ ಅವರು ಭಾರತ ಬಾಕ್ಸಿಂಗ್ ಇತಿಹಾಸದ ಪುಟಗಳಲ್ಲಿ ತಮ್ಮ ಹೆಸರುಗಳನ್ನು ಸುವರ್ಣಾಕ್ಷರಗಳಲ್ಲಿ ದಾಖಲಿಸಿದರು.

ಪ್ಯಾರಿಸ್ ಒಲಿಂಪಿಕ್ ಕೂಟದ ಮಹಿಳೆಯರ 57 ಕೆ.ಜಿ. ವಿಭಾಗದ ಬೆಳ್ಳಿ ಪದಕ ವಿಜೇತ ಬಾಕ್ಸರ್ ಪೋಲೆಂಡ್‌ನ ಜೂಲಿಯಾ ಎಸ್‌ಝೆರೆಮೆತಾ ಅವರನ್ನು ಜೈಸ್ಮಿನ್ ಸೋಲಿಸಿದರು. ಭಾರತದ ಬಾಕ್ಸರ್ 4–1 (30-27 29-28 30-27 28-29 29-28) ರಿಂದ ಕಠಿಣ ಪೈಪೋಟಿಯೊಡ್ಡಿದ ತಮ್ಮ ಎದುರಾಳಿಯನ್ನು ಸೋಲಿಸಿದರು. ಇದರೊಂದಿಗೆ ಚಿನ್ನದ ಪದಕಕ್ಕೆ ಕೊರಳೊಡ್ಡಿದರು.

ಮಧ್ಯಾಹ್ನದ ನಂತರ ನಡೆದ 48 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಮೀನಾಕ್ಷಿ ಅವರು ಕಜಾಕಸ್ತಾನದ ನಾಝೀಂ ಕೈಝೈಬೆ ವಿರುದ್ಧ ಜಯಭೇರಿ ಬಾರಿಸಿದರು. ನಾಝೀಂ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಕಂಚಿನ ಪದಕ ಪಡೆದಿದ್ದರು.

ಇದರೊಂದಿಗೆ ಜೈಸ್ಮಿನ್ ಮತ್ತು ಮೀನಾಕ್ಷಿ ಅವರು ವಿಶ್ವ ಚಾಂಪಿಯನ್‌ಷಿಪ್ ನಲ್ಲಿ ಚಿನ್ನ ಗೆದ್ದ ಭಾರತೀಯ ಬಾಕ್ಸರ್‌ಗಳ ಯಾದಿಯಲ್ಲಿ ಸ್ಥಾನ ಪಡೆದರು. ಆರು ಸಲ ವಿಶ್ವ ಚಾಂಪಿಯನ್ ಆಗಿರುವ ಮೇರಿ ಕೋಮ್ (2002, 2005, 2006, 2008, 2010 ಮತ್ತು 2018), ಎರಡು ಬಾರಿ ಚಾಂಪಿಯನ್ ನಿಖತ್ ಜರೀನ್ (2022 ಮತ್ತು 2023), ಸರಿತಾ ದೇವಿ (2006), ಜೆನ್ನಿ ಆರ್.ಎಲ್ (2006), ಕೆ.ಸಿ. ಲೇಖಾ (2006), ನೀತು ಗಂಗಾಸ್ (2023), ಲವ್ಲಿನಾ ಬೊರ್ಗೊಹೈನ್ (2023) ಮತ್ತು ಸವಿತಿ ಬೂರಾ (2023) ಅವರ ನಂತರ ಜೈಸ್ಮಿನ್ ಮತ್ತು ಮೀನಾಕ್ಷಿ ಅವರೂ ಈ ಪಟ್ಟಿಗೆ ಸೇರ್ಪಡೆಯಾದರು. 24 ವರ್ಷದ ಜೈಸ್ಮಿನ್ ಅವರಿಗೆ ಇದು ಮೂರನೇ ವಿಶ್ವ ಚಾಂಪಿಯನ್‌ಷಿಪ್.

ಮಹಿಳೆಯರ ವಿಭಾಗದಲ್ಲಿ ಮತ್ತೆರಡು ಪದಕಗಳೂ ಭಾರತಕ್ಕೆ ಒಲಿದವು. ನೂಪುರ್ ಶೆರಾನ್ (80 ಕೆ.ಜಿ ಮೇಲ್ಪಟ್ಟು) ಮತ್ತು ಪೂಜಾರಾಣಿ (80 ಕೆ.ಜಿ) ಅವರು ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗಳಿಸಿದರು.

80 ಕೆ.ಜಿ ಮೇಲ್ಪಟ್ಟವರ ವಿಭಾಗದ ಫೈನಲ್‌ನಲ್ಲಿ ನೂಪುರ್ ಅವರು 2–3ರ ಅಲ್ಪ ಅಂತರದ ಸೋಲನ್ನು ಪೋಲೆಂಡ್‌ನ ಅಗಾತಾ ಕಾಜಾಮರಸ್ಕಾ ವಿರುದ್ಧ ಅನುಭವಿಸಿದರು. ತಾಂತ್ರಿಕ ಅಂಕಗಳೊಂದಿಗೆ ಪೋಲೆಂಡ್ ಬಾಕ್ಸರ್ ಮೇಲುಗೈ ಸಾಧಿಸಿದರು.

ಪೂಜಾ ಅವರು ಸೆಮಿಫೈನಲ್‌ನಲ್ಲಿ 1–4ರಿಂದ ಸ್ಥಳೀಯ ಫೆವರಿಟ್ ಎಮಿಲಿ ಅಸ್ಕಿತ್ ವಿರುದ್ಧ ಸೋತು ಕಂಚಿನ ಪದಕ ಪಡೆದರು.

ದಸರಾ ಕ್ರೀಡಾಕೂಟ 22ರಿಂದ

ಪ್ರಜಾವಾಣಿ ವಾರ್ತೆ

ಮೈಸೂರು: ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಆಕರ್ಷಣೆಗಳಲ್ಲಿ ಒಂದಾದ 'ಸಿ.ಎಂ. ಕಪ್'–ರಾಜ್ಯ ಮಟ್ಟದ ದಸರಾ ಕ್ರೀಡಾಕೂಟವು ಸೆ. 22ರಿಂದ 25ರವರೆಗೆ ನಗರದಲ್ಲಿ ನಡೆಯಲಿದೆ.

ಚಾಮುಂಡಿವಿಹಾರ ಕ್ರೀಡಾ ಸಮುಚ್ಚಯದಲ್ಲಿ ಅಥ್ಲೆಟಿಕ್ಸ್, ಈಜು ಹಾಗೂ ವಿವಿಧ ಒಳಾಂಗಣ ಕ್ರೀಡೆಗಳು ನಡೆಯಲಿವೆ. ಜೊತೆಗೆ ಮೈಸೂರು ವಿಶ್ವವಿದ್ಯಾಲಯದ ಸ್ಪೋರ್ಟ್ಸ್ ಪೆವಿಲಿಯನ್ ಸೇರಿದಂತೆ ವಿವಿಧ ಕ್ರೀಡಾಂಗಣಗಳಲ್ಲೂ ಸ್ಪರ್ಧೆಗಳನ್ನು ಆಯೋಜಿಸಲಾಗುತ್ತಿದೆ. ಒಟ್ಟು 27 ಕ್ರೀಡೆಗಳಲ್ಲಿ ಸ್ಪರ್ಧೆಗಳು ನಡೆಯಲಿವೆ.

ಪ್ರತಿ ವಿಭಾಗ ಮಟ್ಟದಲ್ಲಿ ಉತ್ತಮ ಸಾಧನೆ ತೋರುವ 900 ಕ್ರೀಡಾಪಟುಗಳಂತೆ ರಾಜ್ಯದ 5 ವಿಭಾಗಗಳಿಂದ 3,500 ಸ್ಪರ್ಧಿಗಳು ಸೆಣಸಲಿದ್ದಾರೆ. 22ರಂದು ಸಂಜೆ 5.30ಕ್ಕೆ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕ್ರೀಡಾಕೂಟಕ್ಕೆ ಚಾಲನೆ ನೀಡಲಿದ್ದಾರೆ.

ಕುಸ್ತಿ 22ರಿಂದ: ಸೆ. 22ರಿಂದ 28ರವರೆಗೆ ದೊಡ್ಡಕೆರೆ ಮೈದಾನದ ಡಿ. ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ದಸರಾ ಕುಸ್ತಿ ನಡೆಯಲಿದೆ.

ಏಷ್ಯಾ ಕಪ್: ಭಾರತ ರನ್ನರ್ಸ್ ಅಪ್

ಹಾಕಿ: ಚಾಂಪಿಯನ್ ಚೀನಾ ವನಿತೆಯರಿಗೆ ವಿಶ್ವಕಪ್ ಟಿಕೆಟ್



ಫೈನಲ್ ಪಂದ್ಯದಲ್ಲಿ ಭಾರತ (ನೀಲಿ) ಮತ್ತು ಚೀನಾ ಆಟಗಾರ್ತಿಯರು ಚೆಂಡಿನ ಮೇಲೆ ಹಿಡಿತ ಸಾಧಿಸಲು ಪ್ರಯತ್ನಿಸಿದರು ಹಾಕಿ ಇಂಡಿಯಾ 'ಎಕ್ಸ್' ಚಿತ್ರ

ಹಾಂಗ್‌ಝೌ, ಚೀನಾ (ಪಿಟಿಐ): ಭಾರತ ಮಹಿಳಾ ತಂಡವು ಭಾನುವಾರ ಇಲ್ಲಿ ನಡೆದ ಫೈನಲ್ ಹಣಾಹಣಿಯಲ್ಲಿ ಚೀನಾ ವಿರುದ್ಧ 1–4 ಗೋಲುಗಳಿಂದ ಪರಾಭವಗೊಂಡು, ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ರನ್ನರ್ಸ್ ಅಪ್ ಆಯಿತು.

ಈ ಸೋಲಿನೊಂದಿಗೆ ಸಲೀಮಾ ಟೆಟೆ ಬಳಗವು ಮುಂದಿನ ವರ್ಷ ಬೆಲ್ಜಿಯಂ ಮತ್ತು ನೆದರ್ಲೆಂಡ್ಸ್ ಆತಿಥ್ಯದಲ್ಲಿ ನಡೆಯುವ ವಿಶ್ವಕಪ್‌ಗೆ ನೇರ ಅರ್ಹತೆ ಪಡೆಯುವ ಸುವರ್ಣಾವಕಾಶವನ್ನು ಕಳೆದುಕೊಂಡಿತು. ಚಾಂಪಿಯನ್ ಚೀನಾ ತಂಡವು ವಿಶ್ವಕಪ್‌ಗೆ ಟಿಕೆಟ್ ಪಡೆದುಕೊಂಡಿತು.

ಗೊಂಗ್ಶು ಕೆನಾಲ್ ಸ್ಪೋರ್ಟ್ಸ್ ಪಾರ್ಕ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಅನುಭವಿ ಫಾರ್ವರ್ಡ್ ಆಟಗಾರ್ತಿ ನವನೀತ್ ಅವರು ಮೊದಲ ನಿಮಿಷದಲ್ಲೇ ಭಾರತಕ್ಕೆ ಮುನ್ನಡೆ ಒದಗಿಸಿದ್ದರು. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿ, ಆತಿಥೇಯರನ್ನು ಆರಂಭದಲ್ಲೇ ಒತ್ತಡಕ್ಕೆ ಸಿಲುಕಿಸುವ ಪ್ರಯತ್ನ ಮಾಡಿದ್ದರು.

ನಂತರದಲ್ಲಿ ಚೀನಾ ತಂಡವು ಸತತ ಮೂರು ಪೆನಾಲ್ಟಿ ಕಾರ್ನರ್‌ಗ-ಳಲ್ಲಿ ಗೋಲು ಹೊಡೆಯುವುದಕ್ಕೆ ತಡೆಯೊಡ್ಡುವಲ್ಲಿ ಯಶಸ್ವಿಯಾದ ಭಾರತದ ಆಟಗಾರ್ತಿಯರು 21ನೇ ನಿಮಿಷದವರೆಗೆ ಮುನ್ನಡೆ ಕಾಯ್ದುಕೊಂಡರು. ಆದರೆ, ನಾಲ್ಕನೇ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಜಿಕ್ಸಿಯಾ ಔ ಅವರು ಚೆಂಡನ್ನು ಗುರಿ ಸೇರಿಸಿದ್ದರಿಂದ ಉಭಯ ತಂಡಗಳ ಸ್ಕೋರ್ ಸಮಬಲಗೊಂಡಿತು.

41ನೇ ನಿಮಿಷದಲ್ಲಿ ಹಾಂಗ್ ಲಿ ಅವರು ಫೀಲ್ಡ್ ಗೋಲು ಬಾರಿಸಿ ಆತಿಥೇಯ ತಂಡಕ್ಕೆ 2–1 ಮುನ್ನಡೆ ಒದಗಿಸಿದರು. ನಂತರದಲ್ಲಿ ಮೀರಾಂಗ್ ಝೌ (51ನೇ ನಿಮಿಷ) ಮತ್ತು ಜಿಯಾಕಿ ಜಾಂಗ್ (53ನೇ ನಿ) ಗೋಲು ತಂದಿತ್ತು, ಚೀನಾ ತಂಡದ ಗೆಲುವಿನ ಅಂತರವನ್ನು ಹೆಚ್ಚಿಸಿದರು.

ಟೂರ್ನಿಯಲ್ಲಿ ಚೀನಾ ವಿರುದ್ಧ ಭಾರತಕ್ಕೆ ಇದು ಎರಡನೇ ಸೋಲಾಗಿದೆ. ಇದಕ್ಕೂ ಮುನ್ನ ಸೂಪರ್ ಫೋರ್ ಹಂತದಲ್ಲೂ 1–4 ಗೋಲುಗಳಿಂದ ಭಾರತ ಪರಾಭವಗೊಂಡಿತ್ತು.

ಜಪಾನ್‌ಗೆ ಗೆಲುವು: ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ ಹಾಲಿ ಚಾಂಪಿಯನ್ ಜಪಾನ್ ತಂಡವು 2–1 ಗೋಲುಗಳಿಂದ ದಕ್ಷಿಣ ಕೊರಿಯಾ ತಂಡವನ್ನು ಮಣಿಸಿತು. ಟೂರ್ನಿಯಲ್ಲಿ ಒಟ್ಟು ಎಂಟು ತಂಡಗಳು ಸ್ಪರ್ಧಿಸಿದ್ದವು.

ಸಿದ್ಧಾಂತ್, ಸಾಕ್ಷ್ಯಾ ಚಾಂಪಿಯನ್



ಪ್ರಶಸ್ತಿಯೊಂದಿಗೆ ಎಂ. ಸಿದ್ಧಾಂತ್ (ಎಡ), ಸಾಕ್ಷ್ಯಾ ಸಂತೋಷ್

ಬೆಂಗಳೂರು: ಕರ್ನಾಟಕದ ಎಂ. ಸಿದ್ಧಾಂತ್ ಹಾಗೂ ಸಾಕ್ಷ್ಯಾ ಸಂತೋಷ್ ಅವರು ದೆಹಲಿಯಲ್ಲಿ ನಡೆದ ರಾಷ್ಟ್ರೀಯ ರ್‍ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ 13 ವರ್ಷದೊಳಗಿನ ಬಾಲಕರ ಹಾಗೂ 11 ವರ್ಷದೊಳಗಿನ ಬಾಲಕಿಯರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ರಾಜ್ಯ ತಂಡವನ್ನು ಪ್ರತಿನಿಧಿಸಿದ್ದ ಸಿದ್ಧಾಂತ್ ಅವರು ಫೈನಲ್‌ನಲ್ಲಿ 11–3, 11–7, 7–11, 13–11ರಿಂದ ಪಶ್ಚಿಮ ಬಂಗಾಳದ ಜೆಮ್ ಮಹಾಲನಬಿಷ್ ಅವರನ್ನು ಮಣಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು.

ಸಾಕ್ಷ್ಯಾ ಅವರು 11 ವರ್ಷದೊಳಗಿನ ಬಾಲಕಿಯರ ವಿಭಾಗದ ಪ್ರಶಸ್ತಿ ಸುತ್ತಿನಲ್ಲಿ 11–5, 11–3, 11–5ರಿಂದ ಪಶ್ಚಿಮ ಬಂಗಾಳದ ದೆಬಾನ್ನ ಅರಿ ವಿರುದ್ಧ ನೇರ ಸೆಟ್‌ಗಳಲ್ಲಿ ಸುಲಭ ಜಯ ಸಾಧಿಸಿದರು.

ಕರ್ನಾಟಕದ ಮತ್ತೊಬ್ಬ ಆಟಗಾರ ಶರ್ವಿಲ್ ಕರಂಬೈಕರ ಅವರು 11 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಕಂಚಿನ ಪದಕ ಜಯಿಸಿದರು.

ಶೂಟಿಂಗ್ ವಿಶ್ವಕಪ್: ಮೇಘನಾಗೆ ಕಂಚು



ನಿಂಗ್ಬೊ (ಚೀನಾ), (ಪಿಟಿಐ): ಅನುಭವಿ ಶೂಟರ್ ಮೇಘನಾ ಸಜ್ಜನರ್ ಅವರು ಐಎಸ್‌ಎಸ್‌ಎಫ್ ವಿಶ್ವಕಪ್ ರೈಫಲ್/ ಪಿಸ್ತೂಲ್ ವಿಶ್ವಕಪ್ ನಲ್ಲಿ ಕಂಚಿನ ಪದಕ ಗೆದ್ದರು. ಭಾನುವಾರ ಮುಕ್ತಾಯವಾದ ಋತುವಿನ ಕೊನೆಯ ವಿಶ್ವಕಪ್ ಟೂರ್ನಿಯಲ್ಲಿ ಭಾರತವು ಐದನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿತು.

ಮಹಿಳೆಯರ 10 ಮೀಟರ್ ಏರ್ ರೈಫಲ್ ಸ್ಪರ್ಧೆಯಲ್ಲಿ ಕರ್ನಾಟಕದ ಮೇಘನಾ 230.0 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ವಿಶ್ವಕಪ್‌ನಲ್ಲಿ ಅವರಿಗೆ ದೊರೆತ ಚೊಚ್ಚಲ ಪದಕ ಇದಾಗಿದೆ.

ಚೀನಾದ ಉದಯೋನ್ಮುಖ ತಾರೆ ಪೆಂಗ್ ಕ್ಸಿನ್ಲು 255.3 ಅಂಕ ಸಂಪಾದಿಸಿ, ವಿಶ್ವದಾಖಲೆಯೊಂದಿಗೆ ಚಿನ್ನಕ್ಕೆ ಕೊರಳೊಡ್ಡಿದರು. ಅವರು ಸ್ವದೇಶದ ವಾಂಗ್ ಜಿಫೀ (254.8) ಅವರ ದಾಖಲೆಯನ್ನು ಮುರಿದರು. ನಾರ್ವೆಯ ಜೀನೆಟ್ ಹೆಗ್ ಡ್ಯುಸ್ಟಾಡ್ ಬೆಳ್ಳಿ ಪದಕ ಗೆದ್ದರು.

31 ವರ್ಷದ ಮೇಘನಾ (632.7) ಅವರು ಅರ್ಹತಾ ಸುತ್ತಿನಲ್ಲಿ ಏಳನೇ ಸ್ಥಾನದೊಂದಿಗೆ ಫೈನಲ್ ಪ್ರವೇಶಿಸಿದ್ದರು. ಪೆಂಗ್ (637.4) ಅಗ್ರಸ್ಥಾನ ಪಡೆದಿದ್ದರು.

ಸಾತ್ವಿಕ್– ಚಿರಾಗ್ ರನ್ನರ್ಸ್ ಅಪ್

ಹಾಂಗ್‌ಕಾಂಗ್ ಓಪನ್: ಪ್ರಶಸ್ತಿ ಹೊಸ್ತಿಲಲ್ಲಿ ಮುಗ್ಗರಿಸಿದ ಲಕ್ಷ್ಯ



ಪ್ರಶಸ್ತಿಯೊಂದಿಗೆ ಸಾತ್ವಿಕ್– ಚಿರಾಗ್ ಶೆಟ್ಟಿ ಜೋಡಿ

ಹಾಂಗ್‌ಕಾಂಗ್ (ಪಿಟಿಐ): ಭಾರತದ ಅಗ್ರ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಭಾನುವಾರ ಹಾಂಗ್‌ಕಾಂಗ್ ಓಪನ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ರನ್ನರ್ ಅಪ್‌ನೊಂದಿಗೆ ಅಭಿಯಾನ ಮುಗಿಸಿದರು. ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿಯೂ ಪ್ರಶಸ್ತಿ ಹೊಸ್ತಿಲಲ್ಲಿ ಮುಗ್ಗರಿಸಿತು.

ಎರಡು ವರ್ಷಗಳಲ್ಲಿ ಮೊದಲ ಬಾರಿ ಪ್ರಮುಖ ಟೂರ್ನಿಯೊಂದರ ಫೈನಲ್ ತಲುಪಿದ ಸೇನ್ 15-21, 12-21ರಲ್ಲಿ ನೇರ ಗೇಮ್‌ಗಳಿಂದ ಚೀನಾದ ಲಿ ಶಿ ಫೆಂಗ್ ಅವರಿಗೆ ಮಣಿದರು. ವಿಶ್ವದ 20ನೇ ಕ್ರಮಾಂಕದ ಸೇನ್, ನಾಲ್ಕನೇ ರ್‍ಯಾಂಕ್‌ನ ಆಟಗಾರನಿಗೆ ಹೆಚ್ಚಿನ ಪ್ರತಿರೋಧ ತೋರದೆ ನಿರೀಕ್ಷೆಗಿಂತ ಬೇಗನೆ ಸೋಲೊಪ್ಪಿಕೊಂಡರು.

ಸೇನ್ ಅವರು 2023ರ ಜುಲೈನಲ್ಲಿ ಕೊನೆಯ ಬಾರಿಗೆ ಸೂಪರ್ 500 ಮಟ್ಟದ ಟೂರ್ನಿ ಗೆದ್ದಿದ್ದರು. ಕಳೆದ ನವೆಂಬರ್‌ನಲ್ಲಿ ಸೈಯದ್ ಮೋದಿ ಸೂಪರ್ 300 ಟೂರ್ನಿಯ ನಂತರ ಲಕ್ಷ್ಯ ಅವರಿಗೆ ಇದು ಮೊದಲ ಫೈನಲ್ ಆಗಿತ್ತು.

24 ವರ್ಷದ ಸೇನ್ ಮೊದಲ ಗೇಮ್‌ನಲ್ಲಿ 4–0 ಮುನ್ನಡೆಯೊಂದಿಗೆ ಉತ್ತಮ ಆರಂಭ ಪಡೆದಿದ್ದರು. ನಂತರದಲ್ಲಿ ಲಯ ಕಂಡುಕೊಂಡ ಚೀನಿ ಆಟಗಾರ, ನಿಖರ ಆಟ ಪ್ರದರ್ಶಿಸಿ ಸಮಬಲ (8–8) ಸಾಧಿಸಿದರು. ಒಂದು ಹಂತದಲ್ಲಿ ಸತತ ಐದು ಅಂಕ ಗಳಿಸಿದ ಭಾರತದ ಆಟಗಾರ 14–10ರಲ್ಲಿ ಹಿಡಿತ ಸಾಧಿಸುವ ಮುನ್ಸೂಚನೆ ನೀಡಿದರು. ಆದರೆ, ಮರುಹೋರಾಟ ನಡೆಸಿದ ಫೆಂಗ್ ಮೇಲುಗೈ ಸಾಧಿಸಿದರು. ಎರಡನೇ ಗೇಮ್‌ನಲ್ಲೂ ಆರಂಭದ ಮುನ್ನಡೆ ಪಡೆದ ಸೇನ್, ನಂತರ ಅದೇ ವೇಗವನ್ನು ಕಾಯ್ದುಕೊಳ್ಳಲು ವಿಫಲವಾದರು.

ಕಳೆದ ತಿಂಗಳು ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಗೆದ್ದಿದ್ದ ಸಾತ್ವಿಕ್–ಚಿರಾಗ್ ಜೋಡಿಯು ಫೈನಲ್‌ನಲ್ಲಿ 21-19, 14-21, 17-21ರಲ್ಲಿ ಮೂರು ಸೆಟ್‌ಗಳ ಹಣಾಹಣಿಯಲ್ಲಿ ಚೀನಾದ ಲಿಯಾಂಗ್ ವೀ ಕೆಂಗ್– ವಾಂಗ್ ಚಾಂಗ್ ಅವರಿಗೆ ಶರಣಾಯಿತು. ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿದ್ದ ಭಾರತದ ಆಟಗಾರರು ನಂತರದ ಎರಡೂ ಗೇಮ್‌ಗಳಲ್ಲಿ ಲಯ ತಪ್ಪಿದರು. ಒಲಿಂಪಿಕ್ ಬೆಳ್ಳಿ ವಿಜೇತ ಜೋಡಿಯು 61 ನಿಮಿಷದಲ್ಲಿ ಈ ಪಂದ್ಯ ಗೆದ್ದುಕೊಂಡಿತು.

16 ತಿಂಗಳ ಹಿಂದೆ ಥಾಯ್ಲೆಂಡ್ ಓಪನ್ ಗೆದ್ದ ನಂತರ ಸಾತ್ವಿಕ್ ಮತ್ತು ಚಿರಾಗ್ ಜೋಡಿಗೆ ಇದು ಮೊದಲ ಫೈನಲ್ ಆಗಿತ್ತು. ಸೂಪರ್ 500 ಮಟ್ಟದ ಟೂರ್ನಿಯಲ್ಲಿ ಐದನೇ ಬಾರಿ ಪ್ರಶಸ್ತಿ ಸುತ್ತು ಪ್ರವೇಶಿಸಿದ್ದ ಭಾರತದ ಆಟಗಾರರಿಗೆ ಇದು ಮೊದಲ ಸೋಲಾಗಿದೆ. ಈ ಹಿಂದೆ ನಾಲ್ಕೂ ಫೈನಲ್‌ಗಳಲ್ಲಿ ಗೆದ್ದಿದ್ದರು.

ಈ ಋತುವಿನ ಆರು ಟೂರ್ನಿಗಳಲ್ಲಿ ಸೆಮಿಫೈನಲ್ ತಲುಪಿದ ಸಾತ್ವಿಕ್– ಚಿರಾಗ್ ಜೋಡಿಯು ಪ್ಯಾರಿಸ್‌ನಲ್ಲಿ ನಡೆದ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಇದೇ ಚೀನಿ ಆಟಗಾರರನ್ನು ಮೂರು ಗೇಮ್‌ಗಳ ಹಣಾಹಣಿಯಲ್ಲಿ ಮಣಿಸಿತ್ತು.

ದುಲೀಪ್ ಟ್ರೋಫಿ: ಅಂಕಿತ್, ಸಿದ್ಧಾರ್ಥ್ ಸೊಗಸಾದ ಬ್ಯಾಟಿಂಗ್ • ಪವಾಡದ ನಿರೀಕ್ಷೆಯಲ್ಲಿ ದಕ್ಷಿಣ ವಲಯ

ಕೇಂದ್ರ ವಲಯದ ವಿಜಯಕ್ಕೆ ಅಲ್ಪಮೊತ್ತದ ಗುರಿ

ಪ್ರಜಾವಾಣಿ ವಾರ್ತೆ



ಶತಕದ ಜೊತೆಯಾಟದಲ್ಲಿ ಭಾಗಿಯಾದ ದಕ್ಷಿಣ ವಲಯದ ಅಂಕಿತ್ ಶರ್ಮ ಮತ್ತು ಆಂಡ್ರೆ ಸಿದ್ಧಾರ್ಥ್ ಚಿತ್ರ: ಪ್ರಶಾಂತ್ ಎಚ್.ಜಿ.

ಬೆಂಗಳೂರು: ಛಲ, ತಾಳ್ಮೆ ಮತ್ತು ಏಕಾಗ್ರತೆಯ ಆಟದ ಮೂಲಕ ಅಂಕಿತ್ ಶರ್ಮಾ ಹಾಗೂ ಆ್ಯಂಡ್ರೆ ಸಿದ್ಧಾರ್ಥ್ ಅವರು ದಕ್ಷಿಣ ವಲಯದ ದುಲೀಪ್ ಟ್ರೋಫಿ ಜಯದ ಆಸೆಯನ್ನು ಜೀವಂತವಾಗಿಡುವ ಎಲ್ಲ ಪ್ರಯತ್ನಗಳನ್ನು ಭಾನುವಾರ ಮಾಡಿದರು.

ಆದರೆ ಫೈನಲ್ ಪಂದ್ಯದ ನಾಲ್ಕನೇ ದಿನದಾಟದ ಕೊನೆಯಲ್ಲಿ ಅವರೆಲ್ಲ ಪ್ರಯತ್ನಗಳೂ ನೇಪಥ್ಯಕ್ಕೆ ಸರಿದವು. ಕೇಂದ್ರ ವಲಯ ತಂಡಕ್ಕೆ 11 ವರ್ಷಗಳ ನಂತರ ಟ್ರೋಫಿ ಜಯಿಸುವ ಅವಕಾಶ ಸೃಷ್ಟಿಯಾಯಿತು. ಪಂದ್ಯದ ಕೊನೆಯ ದಿನವಾದ ಸೋಮವಾರ 65 ರನ್‌ಗಳ ಅಲ್ಪಮೊತ್ತದ ಗುರಿಯನ್ನು ಮುಟ್ಟಿದರೆ ರಜತ್ ಪಾಟೀದಾರ್ ಬಳಗವು ಟ್ರೋಫಿಗೆ ಮುತ್ತಿಡಲಿದೆ.

ಆದರೆ, 'ಕ್ರಿಕೆಟ್‌ನಲ್ಲಿ ಕೊನೆ ಕ್ಷಣದವರೆಗೂ ಏನೂ ಹೇಳಲು ಸಾಧ್ಯವಿಲ್ಲ' ಎಂಬ ಹೇಳಿಕೆಯನ್ನು ಪರಿಗಣಿಸುವುದೇ ಆದರೆ, ದಕ್ಷಿಣ ವಲಯವು ಈ ಅಲ್ಪಮೊತ್ತವನ್ನು ರಕ್ಷಿಸಿಕೊಂಡು ಕೇಂದ್ರದ ಎಲ್ಲ ವಿಕೆಟ್‌ಗಳನ್ನು (1961ರಲ್ಲಿ ಉತ್ತರ ವಲಯವು 48 ರನ್‌ಗಳಿಗೆ ಆಲೌಟ್ ಆಗಿತ್ತು. ದುಲೀಪ್ ಟ್ರೋಫಿ ಇತಿಹಾಸದಲ್ಲಿ ಅತಿ ಕಡಿಮೆ ಇನಿಂಗ್ಸ್ ಮೊತ್ತದ ಆ ದಾಖಲೆ ಈಗಲೂ ಇದೆ) ಕಬಳಿಸಬೇಕು.

ಆದರೂ ಪಂದ್ಯ ನಡೆಯುತ್ತಿರುವ ಬಿಸಿಸಿಐ ಶ್ರೇಷ್ಠತಾ ಕೇಂದ್ರದ ಮೈದಾನದ ಪಿಚ್ ಕೊನೆಯ ದಿನದಾಟದಲ್ಲಿ ಸ್ಪಿನ್ನರ್‌ಗಳಿಗೆ ಹೆಚ್ಚು ನೆರವು ನೀಡುವ ಸಾಧ್ಯತೆ ಅಲ್ಲಗಳೆಯಲಾಗದು. ಅಲ್ಲದೇ ಕಳೆದ ಮೂರು ದಿನಗಳಿಂದ ಬ್ಯಾಟರ್‌ಗಳ ಸ್ನೇಹಿಯೂ ಆಗಿತ್ತು ಈ ಅಂಗಳ. ಆದರೆ, ದಕ್ಷಿಣ ತಂಡದಲ್ಲಿ ಇರುವುದು ಅಂಕಿತ್ ಶರ್ಮಾ ಒಬ್ಬರೇ ಪರಿಣತ ಸ್ಪಿನ್ನರ್.

ಎಡಗೈ ಸ್ಪಿನ್–ಆಲ್‌ರೌಂಡರ್ ಅಂಕಿತ್ (99;169ಎ, 4X13, 6X1) ಬ್ಯಾಟಿಂಗ್‌ನಲ್ಲಿ ಮಿಂಚಿದರು. ಕೇವಲ 1 ರನ್ ಅಂತರದಲ್ಲಿ ಶತಕ ಕೈತಪ್ಪಿಸಿಕೊಂಡರು. ಆದರೆ, ಅವರು 19 ವರ್ಷದ ಆ್ಯಂಡ್ರೆ ಸಿದ್ಧಾರ್ಥ್ (ಔಟಾಗದೇ 84; 190ಎ, 4X7) ಜೊತೆಗೂಡಿ 7ನೇ ವಿಕೆಟ್ ಜೊತೆಯಾಟದಲ್ಲಿ 192 ರನ್ ಕಲೆಹಾಕಿದರು. ಇದರಿಂದಾಗಿ ದಕ್ಷಿಣ ವಲಯ ದಿನದಾಟದ ಮುಕ್ತಾಯಕ್ಕೆ 121 ಓವರ್‌ಗಳಲ್ಲಿ 426 ರನ್ ಗಳಿಸಿತು. 64 ರನ್‌ಗಳ ಮುನ್ನಡೆ ಗಳಿಸಿತು.

ಕೇಂದ್ರ ವಲಯವು ಮೊದಲ ಇನಿಂಗ್ಸ್‌ನಲ್ಲಿ 335 ರನ್‌ಗಳ ಮುನ್ನಡೆ ಗಳಿಸಿತ್ತು. ಅದಕ್ಕುತ್ತರವಾಗಿ ಶನಿವಾರ ದಿನದಾಟದ ಕೊನೆಗೆ ದಕ್ಷಿಣ ತಂಡವು ಎರಡು ವಿಕೆಟ್‌ಗಳಿಗೆ 129 ರನ್ ಗಳಿಸಿತ್ತು. ಭಾನುವಾರ ಆಟ ಮುಂದುವರಿಸಿದ ತಂಡಕ್ಕೆ ಕನ್ನಡಿಗ ಆರ್. ಸ್ಮರಣ್ (67; 118ಎ) ಮತ್ತು ರಿಕಿ ಭುಯ್ (45; 85ಎ) ಮೂರನೇ ವಿಕೆಟ್ ಜೊತೆಯಾಟದಲ್ಲಿ 85 ರನ್ ಸೇರಿಸಿದರು. ಅಕ್ಷಯ್ ವಾಡಕರ್ ಅವರು ಕ್ಯಾಚ್ ಕೈಚೆಲ್ಲಿದ್ದರಿಂದ ಸ್ಮರಣ್ ಅವರಿಗೆ ಜೀವದಾನ ಲಭಿಸಿತು.

ವೇಗಿ ದೀಪಕ್ ಚಾಹರ್ ಅವರು ರಿಕಿ ವಿಕೆಟ್ ಗಳಿಸಿ ಜೊತೆಯಾಟ ಮುರಿದರು. ಮೊಹಮ್ಮದ್ ಅಜರುದ್ದೀನ್ (27; 40ಎ) ಅವರಿಗೂ ಎರಡು ಜೀವದಾನ ದೊರೆತವು. ಆದರೆ ಅವರು ಹೆಚ್ಚು ಹೊತ್ತು ಆಡದಂತೆ ಕುಮಾರ್ ಕಾರ್ತಿಕೇಯ (110ಕ್ಕೆ4) ನೋಡಿಕೊಂಡರು. ಕುಮಾರ್ ಅವರು ನಂತರ ಸ್ಮರಣ್ ವಿಕೆಟ್ ಕೂಡ ಗಳಿಸಿದರು. ನಂತರದ ಅವಧಿಯಲ್ಲಿ ಸಿದ್ಧಾರ್ಥ್ ಮತ್ತು ಅಂಕಿತ್ ಅವರು ಸೊಗಸಾದ ಬ್ಯಾಟಿಂಗ್ ಮಾಡಿದರು. ಆದರೆ 99 ರನ್ ಗಳಿಸಿದ್ದ ಅಂಕಿತ್ ಕುಮಾರ್, ಕಾರ್ತಿಕೇಯ ಅವರ ಎಸೆತದ ತಿರುವನ್ನು ತಪ್ಪಾಗಿ ಅಂದಾಜಿಸಿ ಹೊಡೆತ ಪ್ರಯೋಗಿಸಿದರು. ರಜತ್ ಪಾಟೀದಾರ್ ಕ್ಯಾಚ್ ಪಡೆದರು. ಅದರ ನಂತರ ಸಾರಾಂಶ್ ಜೈನ್ (130ಕ್ಕೆ3) ಮತ್ತು ಕುಮಾರ ಸ್ಪಿನ್ ಮೋಡಿಗೆ ಉಳಿದ ಬ್ಯಾಟರ್‌ಗಳೂ ಬೇಗನೆ ವಿಕೆಟ್ ಒಪ್ಪಿಸಿದರು. ಇದರಿಂದಾಗಿ ಕೇಂದ್ರ ತಂಡಕ್ಕೆ ದೊಡ್ಡ ಗುರಿಯನ್ನೊಡ್ಡುವ ದಕ್ಷಿಣದ ಯೋಜನೆ ಕೈಗೂಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ದಕ್ಷಿಣ ವಲಯ: 63 ಓವರ್‌ಗಳಲ್ಲಿ 149. ಕೇಂದ್ರ ವಲಯ: 145.1 ಓವರ್‌ಗಳಲ್ಲಿ 511. ಎರಡನೇ ಇನಿಂಗ್ಸ್: ದಕ್ಷಿಣ ವಲಯ: 121 ಓವರ್‌ಗಳಲ್ಲಿ 426 (ಆರ್. ಸ್ಮರಣ್ 67, ಆ್ಯಂಡ್ರೆ ಸಿದ್ಧಾರ್ಥ್ ಬ್ಯಾಟಿಂಗ್ 84, ಅಂಕಿತ್ ಶರ್ಮಾ 99, ಕುಮಾರ್ ಕಾರ್ತಿಕೇಯ 110ಕ್ಕೆ4, ಸಾರಾಂಶ್ ಜೈನ್ 130ಕ್ಕೆ3, ದೀಪಕ್ ಚಾಹರ್ 74ಕ್ಕೆ1, ಕುಲದೀಪ್ ಸೇನ್ 60ಕ್ಕೆ1) ಕೇಂದ್ರ ವಲಯಕ್ಕೆ 65 ರನ್ ಗೆಲುವಿನ ಗುರಿ.